ಪ್ರಾಚೀನ ಗದ್ಯಸಾಹಿತ್ಯಮಾಲೆ : ೭

ಕರ್ನಾಟಕ ಸರ್ಕಾರ

ತಿರುಮಲಾರ್ಯ ವಿರಚಿತ

ಚಿಕ್ಕದೇವರಾಯ ವಂಶಾವಳಿ

ಪ್ರಧಾನ ಸಂಪಾದಕರು : ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು : ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು : ಹೆಚ್. ಎಂ. ನಾಗರಾಜರಾವ್

ಕನ್ನಡ ಪುಸ್ತಕ ಪ್ರಾಧಿಕಾರ

ತಿರುಮಲಾರ್ಯ ವಿರಚಿತ

ಚಿಕ್ಕದೇವರಾಯ ವಂಶಾವಳಿ

ಪ್ರಾಚೀನ ಗದ್ಯಸಾಹಿತ್ಯಮಾಲೆ : ೭

ತಿರುಮಲಾರ್ಯ ವಿರಚಿತ

ಚಿಕ್ಕದೇವರಾಯ ವಂಶಾವಳಿ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಹೆಚ್.ಎಂ. ನಾಗರಾಜರಾವ್

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಬೆಂಗಳೂರು-೫೬೦ ೦೦೨.

Chikkadevaraya Vamshavali – An Ancient Kannada Prose - classic by Tarumalarya
Edited by H.M. Nagarajarao
Published by B.H. Mallikarjuna
Administrative Officer, Kannada Pustaka Pradhikara,
Kannada Bhavana. J.C. Road, Bangalore-560 002.

First Impression	2012
Pages	xxxvi + 148 = 184
Copies	1000
Price	₹ 100/-

■

ಮೊದಲ ಮುದ್ರಣ	:	೨೦೧೨
ಪುಟಗಳು	:	xxxvi + ೧೪೮ = ೧೮೪
ಪ್ರತಿಗಳು	:	೧೦೦೦
ಬೆಲೆ	:	₹ ೧೦೦/-

ಸಂಪಾದಕರು :
ಹೆಚ್.ಎಂ. ನಾಗರಾಜರಾವ್

ಪ್ರಕಾಶಕರು
ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨.

*

ಸಲಹಾಮಂಡಳಿ

■

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಡಾ. ಸಿ.ಪಿ. ಕೃಷ್ಣಕುಮಾರ್

ಡಾ. ಕೆ. ಮರಳಸಿದ್ದಪ್ಪ

ಪ್ರೊ. ಸುಧಾಕರ

ಡಾ. ಕೆ.ಆರ್. ಗಣೇಶ್

ಪ್ರೊ. ಸಿ.ವಿ. ಕೆರಿಮನಿ

ಎ.ಕೆ. ರಾಮೇಶ್ವರ

ಆಡಳಿತಾಧಿಕಾರಿಗಳು

ಬಿ.ಹೆಚ್. ಮಲ್ಲಿಕಾರ್ಜುನ

*

ಪ್ರಾಚೀನ ಗದ್ಯಸಾಹಿತ್ಯಮಾಲೆಯ ಕೃತಿಗಳು

■

ಕೃತಿ ಶೀರ್ಷಿಕೆ	ಸಂಪಾದಕರು
೧. ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)	: ಡಾ. ಶಾಂತಿನಾಥ ದಿಬ್ಬದ
೨. ಚಾವುಂಡರಾಯ ಪುರಾಣಂ	: ಡಾ. ಎಂ.ಎ. ಜಯಚಂದ್ರ
೩. ಕರ್ಣಾಟಕ ಪಂಚತಂತ್ರಂ	: ಡಾ. ಪಿ.ವಿ. ನಾರಾಯಣ
೪. ಧರ್ಮಾಮೃತಂ	: ಶ್ರೀ ಶುಭಚಂದ್ರ
೫. ಕನ್ನಡ ಶರಣರ ಕಥೆಗಳು	: ಡಾ. ಎಂ.ಎಂ. ಕಲಬುರ್ಗಿ
೬ ವಿವೇಕ ಚಿಂತಾಮಣಿ	: ಶ್ರೀ ಜಿ.ಎ. ಶಿವಲಿಂಗಯ್ಯ
೭ ಚಿಕ್ಕದೇವರಾಯ ವಂಶಾವಳಿ	: ಶ್ರೀ ಹೆಚ್.ಎಂ. ನಾಗರಾಜರಾವ್
೮. ಮುದ್ರಾಮಂಜೂಷವು	: ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯. ರಾಜಾವಳಿ ಕಥೆ	: ಡಾ. ರಾಮೇಗೌಡ
೧೦. ರಾಮಾಶ್ವಮೇಧಂ	: ಡಾ. ಗಾಯತ್ರಿ ನಾವಡ

■

*

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ಮಾಲಿಕೆಯ ಸಂಪಾದನ ಸಮಿತಿಯ ಸದಸ್ಯರಾದ ಡಾ. ಸಿ.ಪಿ. ಕೃಷ್ಣಕುಮಾರ್ ಡಾ. ಕೆ. ಮರುಳಸಿದ್ಧಪ್ಪ, ಡಾ. ಕೆ.ಆರ್. ಗಣೇಶ್, ಶ್ರೀ ಸುಧಾಕರ, ಪ್ರೊ. ಸಿ.ವಿ. ಕೆರಿಮನಿ, ಶ್ರೀ ಎ.ಕೆ. ರಾಮೇಶ್ವರ, ಇವರಿಗೆ ಕೃತಜ್ಞತೆಗಳು. ಈ ಮಾಲೆಯಲ್ಲಿ ಹತ್ತು ಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸರುಗಳಿಗೆ ಆಭಾರಿಯಾಗಿದ್ದೇನೆ.

ಈ ಮಾಲೆಯನ್ನು ಹೊರತರುವಲ್ಲಿ ಆಸಕ್ತಿ ವಹಿಸಿದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ, ನನ್ನ ಆಪ್ತ ಕಾರ್ಯದರ್ಶಿಯಾದ ಶ್ರೀ ಕೆ. ಮುಕುಂದನ್ ಹಾಗೂ ಪ್ರಾಧಿಕಾರದ ಎಲ್ಲ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು. ಕನ್ನಡ ವಾಚಕವೃಂದ ನಮ್ಮ ಈ ಪ್ರಯತ್ನವನ್ನು ತುಂಬುಹೃದಯದಿಂದ ಸ್ವಾಗತಿಸುತ್ತದೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

*

ಗೌರವ ಸಂಪಾದಕರ ಮಾತು

ಡಾ. ಎಂ.ಎಂ. ಕಲಬುರ್ಗಿ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕೆ ಪ್ರಧಾನ ಪಟ್ಟ; ಗದ್ಯಕ್ಕೆ ಗೌಣಸ್ಥಾನ. ವಸ್ತು ಸ್ಥಿತಿ ಹೀಗಿರುವಾಗ, ಹೆಚ್ಚಿನದಾಗಿ ಆಧುನಿಕ ವಿದ್ವಾಂಸರು ಪ್ರಾಚೀನ ಪದ್ಯಸಾಹಿತ್ಯಕ್ಕೆ ಆಕರ್ಷಿತರಾಗಿ, ಅಂದಿನ ಗದ್ಯ ಸಾಹಿತ್ಯದ ಪ್ರಕಟನೆ– ಅಧ್ಯಯನಗಳನ್ನು ಅವಗಣಿಸುತ್ತ ಬಂದರು. ಇದರಿಂದಾಗಿ ಮೂಲೆಗೆ ಸರಿದಿರುವ ಈ ಸಾಹಿತ್ಯಪ್ರಕಾರವನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರ 'ಪ್ರಾಚೀನ ಗದ್ಯ ಸಾಹಿತ್ಯ ಮಾಲೆ' ಹೆಸರಿನ ಯೋಜನೆಯನ್ನು ಕೈಗೆತ್ತಿಕೊಂಡು, ಹತ್ತು ಮುಖ್ಯಕೃತಿಗಳನ್ನು ಪ್ರಕಟಿಸುತ್ತಿದೆ.

ಭಾವನೆ, ಚಿಂತನೆಗಳು ಭಾಷೆಯ ಮೂಲಕ ತಮ್ಮ ಸೆರೆ ಬಿಡಿಸಿಕೊಳ್ಳುವ ಸಂದರ್ಭದಲ್ಲಿ ಅವಲಂಬಿಸುವ ಮುಖ್ಯ ಮಾರ್ಗಗಳು ಎರಡು: ಗದ್ಯ ಮತ್ತು ಪದ್ಯ. ಗದ್ಯಕ್ಕೆ ಲಯ ಕೂಡಿದರೆ ಪದ್ಯವಾಗುತ್ತದೆ. ಆಗ ಅದಕ್ಕೆ ಒಂದು ಬಗೆಯ ಹೆಚ್ಚಿನ ಸೌಂದರ್ಯ ಪ್ರಾಪ್ತವಾಗುತ್ತದೆ. ಹೀಗೆ ಒದಗಿ ಬರುವ ಲಯಸೌಂದರ್ಯದ ಸವಲತ್ತು ಬಳಸಿಕೊಂಡು ಪದ್ಯವು ಕವಿತ್ವದ ಕೊರತೆಯನ್ನು ತುಂಬಿಕೊಳ್ಳುತ್ತದೆ ಎಂಬ ವಾದವನ್ನು ಮಂಡಿಸಿ, 'ಗದ್ಯಂ ಕವೀನಾಂ ನಿಕಷಂ ವದಂತಿ' ಅಂದರೆ ಗದ್ಯವೇ ಕವಿಯ ಸಾಹಿತ್ಯದ ನಿಜವಾದ ಒರೆಗಲ್ಲು ಎಂದು ಗದ್ಯಕವಿಗಳು ಸಾರುತ್ತ ಬಂದಿದ್ದಾರೆ. ಇದು, ಈ ಸಾಹಿತ್ಯ ಪ್ರಕಾರದ ಸೃಜನಕ್ರಿಯೆಯು ಒಂದು ಆಹ್ವಾನವೆಂಬುದನ್ನು ಸೂಚಿಸಿದರೆ, ಕನ್ನಡದ ಮುದ್ದಣನ 'ಗದ್ಯಂ ಹೃದ್ಯಂ ಪದ್ಯಂ ವಧ್ಯಂ' ಎಂಬ ಮಾತು ಅದರ ಶ್ರೇಷ್ಠತೆಯನ್ನು ಸಾರುತ್ತದೆ.

ಗದ್ಯವೇ ಇರಲಿ, ಪದ್ಯವೇ ಇರಲಿ, ಕವಿಯ ಕೈಯಲ್ಲಿ ಸಾಹಿತ್ಯವಾಗುವುದರಲ್ಲಿ ಅದರ ಸಾರ್ಥಕತೆ ಇರುತ್ತದೆ. ಇಂಥ ಸಾರ್ಥಕತೆಯನ್ನು ಭಾಷೆಯ ಸಂಕ್ಷೇಪೀಕರಣ ಕಲೆಯಾದ ಪದ್ಯದಲ್ಲಿ ಸಾಧಿಸುವುದು ಸುಲಭ, ವಿಶದೀಕರಣ ಕಲೆಯಾದ ಗದ್ಯದಲ್ಲಿ ಸಾಧಿಸುವುದು ಕಷ್ಟ. ಹೀಗಿದ್ದೂ ಪ್ರಾಚೀನ ಕನ್ನಡದ ಕೆಲವು ಕವಿಗಳು ಇದನ್ನು ಆಹ್ವಾನವಾಗಿ ಸ್ವೀಕರಿಸಿ ಜಯಶಾಲಿಯಾಗಿದ್ದಾರೆ.

ಒಂದು ರಚನೆ ಅಭಿವ್ಯಕ್ತಿ (Expression)ಯೆಂದೂ, ನಿರೂಪಣೆ (Narration)ಯೆಂದೂ ಎರಡು ರೀತಿಯಲ್ಲಿ ಪ್ರಕಟವಾಗುತ್ತದೆ. ನಮ್ಮ ನೆನಪಿನಲ್ಲುಳಿಯುವ ಕವಿಯೊಬ್ಬನ ಗದ್ಯದ ಸಾಲು ಇಲ್ಲವೆ ಪದ್ಯದ ಸಾಲುಗಳೇ ಅಭಿವ್ಯಕ್ತಿ. ಅದು ತನ್ನ ಸೃಜನಶೀಲ ಗುಣದಿಂದಾಗಿ ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತದೆ. ಇಂಥ ಸುಂದರ ಅಭಿವ್ಯಕ್ತಿತ್ವವನ್ನೊಳಗೊಂಡ ಮತ್ತು ಐತಿಹಾಸಿಕ ಕಾರಣದಿಂದಾಗಿ ಮಹತ್ವವೆನಿಸುವ ಪ್ರಾಚೀನ ಕನ್ನಡ ಕೃತಿಗಳ ಪ್ರಕಟನ ಯೋಜನೆಯಿದು.

ದಂಡಿಯ ಸಂಸ್ಕೃತ ಕಾವ್ಯಾದರ್ಶವು ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ (ನಾಟಕ)ವೆಂದು ಮೂರು ಬಗೆಯಾಗಿ ವರ್ಗೀಕರಿಸಿದೆ. ಇದರ ಆದರ್ಶದಲ್ಲಿ ಆಕಾರ ಪಡೆದ ಕನ್ನಡ ಕವಿರಾಜಮಾರ್ಗವು ಪದ್ಯ, ಗದ್ಯಕಥಾ ಎಂದು ಎರಡು ಬಗೆಯಾಗಿ ವರ್ಗೀಕರಿಸುತ್ತದೆ. ಬಹುಶಃ ಅಂದು ಮಿಶ್ರ(ನಾಟಕ)ವು ಸಂಸ್ಕೃತದಲ್ಲಿ ದೃಶ್ಯ ಪಾತಳಿಯಿಂದ ವಾಚನಪಾತಳಿಗೆ ಇಳಿದಿದ್ದರೆ, ಕನ್ನಡದಲ್ಲಿ ಅದು ಇನ್ನೂ ದೃಶ್ಯಪಾತಳಿಯಲ್ಲಿ ವ್ಯವಹರಿಸುತ್ತಲಿದ್ದುದೇ ಹೀಗೆ ಹೇಳಲು ಕಾರಣವಾಗಿರಬೇಕು. ಅದೇನೇ ಇರಲಿ, 'ಅಗಣಿತ ಗುಣ ಗದ್ಯಪದ್ಯಗಳ ಮಿಶ್ರಾರೂಪದ 'ಗದ್ಯಕಥಾ'

ಹೆಸರಿನ ಗದ್ಯಪ್ರಕಾರವನ್ನು ಕನ್ನಡದಲ್ಲಿ ಚಿರಂತನಾಚಾರ್ಯರು ರಚಿಸಿರುವರು" ಎಂದು ಕವಿರಾಜಮಾರ್ಗದಲ್ಲಿ ಹೇಳಲಾಗಿದೆ. ಇದು ಚಂಪೂವನ್ನು ಸೂಚಿಸುವುದೆಂದು ಕೆಲವರು ಹೇಳುವವರಾದರೂ ಗದ್ಯಪ್ರಧಾನ ಪದ್ಯಗೌಣವಾಗಿರುವ ಆರಾಧನಾ ಕರ್ಣಾಟ ಟೀಕಾ(ವಡ್ಡಾರಾಧನೆ)ದಂಥ ಕೃತಿಗಳನ್ನು ಸೂಚಿಸುವುದೆಂದು ಬಹುಜನ ವಿದ್ವಾಂಸರು ಒಪ್ಪಿದ್ದಾರೆ.

ಸಂಸ್ಕೃತ ಆಲಂಕಾರಿಕ ಭಾಮಹನು ಗದ್ಯವನ್ನು ಆಖ್ಯಾಯಿಕಾ, ಕಥಾ ಎಂದು ವರ್ಗೀಕರಿಸುತ್ತ, ಆಖ್ಯಾಯಿಕಾ ಸಂಸ್ಕೃತದಲ್ಲಿ, ಕಥಾ ಎಲ್ಲ ಭಾಷೆಗಳಲ್ಲಿರಬಹುದೆಂದು ಹೇಳುತ್ತಾನೆ. ಮುಂದುವರಿದು ದಂಡಿಯು ಈ ಕಥೆಯಲ್ಲಿ ಆರ್ಯಾ ಮುಂತಾದ ವೃತ್ತಗಳು ಪ್ರವೇಶ ಪಡೆಯುವವೆಂದು ತಿಳಿಸುತ್ತಾನೆ. ಕವಿರಾಜಮಾರ್ಗಕಾರ ತಿಳಿಸುವ 'ಗದ್ಯಕಥಾ' ಇಲ್ಲಿಯ 'ಕಥಾ' ಪ್ರಕಾರವೇ ಆಗಿದೆ. ಈ 'ಗದ್ಯಕಥೆ'ಯು ಬಾಣ ಕಾದಂಬರಿಯಂತೆ ಅಖಂಡವೂ ಬೃಹತ್ಕಥೆಯಂತೆ ಬಿಡಿ ಕಥಾಕೋಶವೂ ಆಗಿರಬಹುದಾಗಿದೆ. ಮುಂದುವರಿದು ಕವಿರಾಜಮಾರ್ಗಕಾರನು ಗದ್ಯಕಥೆಯು ಸಕಲಕಲಾಭೂಯಿಷ್ಠವಾಗಿರಬೇಕು, ಉತ್ಕೃಷ್ಟ ಭಾಷಾಶೈಲಿಯಲ್ಲಿ ಎರಕಗೊಂಡಿರಬೇಕು, ಲೌಕಿಕ ಮತ್ತು ಪಾರಮಾರ್ಥಿಕ ವರ್ಣನಾನಿರ್ಣಿಕ್ತವಾಗಿರಬೇಕು, 'ಪ್ರಕಟತರ ವಸ್ತು'ವನ್ನೊಳಗೊಂಡಿರಬೇಕೆಂದು ಹೇಳುತ್ತಾನೆ.

ಒಟ್ಟಿನಲ್ಲಿ, ಪ್ರಾಚೀನ ಕರ್ನಾಟಕದ 'ಗದ್ಯಕಥಾ'ಪ್ರಕಾರದ ಲಕ್ಷಣವನ್ನು ಹೀಗೆ ಹೇಳಬಹುದು. ೧. ಗದ್ಯ ಪ್ರಧಾನ, ಪದ್ಯ ಗೌಣಪ್ರಮಾಣದಲ್ಲಿರುತ್ತದೆ. ೨. ಅಖಂಡ ಕಥೆ, ಇಲ್ಲವೆ ಬಿಡಿ ಕಥಾಗುಚ್ಛ ರೂಪದಲ್ಲಿರುತ್ತದೆ. ೩. ಸಕಲಕಲಾಭೂಯಿಷ್ಠವೂ ಉತ್ಕೃಷ್ಟ ಭಾಷಾಶೈಲಿಯದೂ, ಲೌಕಿಕ ಪಾರಮಾರ್ಥಿಕ ವರ್ಣನಾ ನಿರ್ಣಿಕ್ತವೂ ಪ್ರಕಟತರ ವಸ್ತುವನ್ನೊಳಗೊಂಡುದೂ ಆಗಿರುತ್ತದೆ. ೪. ಇನ್ನೂ ಒಂದು ಲಕ್ಷಣವೆಂದರೆ ಈ ಗದ್ಯವನ್ನು 'ಕಥಾ' ಎಂದು ಕರೆದಿರುವುದರಿಂದ 'ಕಥಾ ಪುರಾಣಸಂಬದ್ಧಾ' ಎಂಬ ವ್ಯಾಖ್ಯೆಯ ಪ್ರಕಾರ ಇದು, ಲೌಕಿಕ(ಚರಿತ್ರೆ) ವಸ್ತುವನ್ನಲ್ಲ, ಪೌರಾಣಿಕ ವಸ್ತುವನ್ನೊಳಗೊಂಡಿರುತ್ತದೆ.

ಇಂಥ ಲಕ್ಷಣದ ಕೃತಿಗಳನ್ನು ಕನ್ನಡದಲ್ಲಿ ಬರೆದವರು ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರೆಂದು ಕವಿರಾಜಮಾರ್ಗ ಹೇಳುವುದಾದರೂ ಇವರ ಒಂದೂ 'ಗದ್ಯಕಥಾ' ಲಭ್ಯವಿಲ್ಲ. ಇವರಲ್ಲಿ ದುರ್ವಿನೀತನು ಬಹುಶಃ ಗಂಗ ಅರಸನಾಗಿದ್ದು, ಶಾಸನಗಳಲ್ಲಿ ಇವನು ರಚಿಸಿರುವನೆಂದು ಹೇಳಲಾಗಿರುವ ಕಿರಾತಾರ್ಜುನೀಯದ ೧೫ನೆಯ ಸರ್ಗಕ್ಕೆ ಟೀಕೆ, ಶಬ್ದಾವತಾರಗಳನ್ನು ಹೊರತುಪಡಿಸಿ, ಬೃಹತ್ಕಥೆ(ವಡ್ಡಕಥೆ)ಯೇ ಗದ್ಯಕಥೆಗೆ ಉದಾಹರಣೆಯಾಗಿರಬೇಕೆನಿಸುತ್ತದೆ. ಇದು ಗುಣಾಢ್ಯನ ಪೈಶಾಚಿಭಾಷಾಕೃತಿಯ ದಾಕ್ಷಿಣಾತ್ಯಪಾಠವೆಂದೂ, ಇದನ್ನು ಆಧರಿಸಿ ತಮಿಳಿನ ಪೆರುಂಗದೈ ಹುಟ್ಟಿದೆಯೆಂದೂ, ಇದು ಒಂದಿಷ್ಟು ಜೈನೀಯವಾಗಿದೆಯೆಂದೂ ವಿದ್ವಾಂಸರು ಭಾವಿಸಿದ್ದಾರೆ. ಈವರೆಗಿನ ವಿವರಣೆ ಕಳೆದುಹೋದ ಕನ್ನಡ ಗದ್ಯಸಾಹಿತ್ಯವನ್ನು ಕುರಿತುದಾಗಿದೆ.

***

ಕವಿರಾಜಮಾರ್ಗೋತ್ತರ ಕಾಲೀನ ಗದ್ಯಸಾಹಿತ್ಯದಲ್ಲಿ ಎದ್ದು ಕಾಣುವ ಕೆಳಗಿನ ಕೃತಿಗಳನ್ನು ಪ್ರಸ್ತುತ ಯೋಜನೆಯ ಅಡಿಯಲ್ಲಿ ಪ್ರಕಟಣೆಗೆ ಆಯ್ದುಕೊಳ್ಳಲಾಗಿದೆ.

೧.	ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)	: ಡಾ. ಶಾಂತಿನಾಥ ದಿಬ್ಬದ
೨.	ಚಾವುಂಡರಾಯ ಪುರಾಣಂ	: ಡಾ. ಎಂ.ಎ. ಜಯಚಂದ್ರ
೩.	ಕರ್ಣಾಟಕ ಪಂಚತಂತ್ರಂ	: ಡಾ. ಪಿ.ವಿ. ನಾರಾಯಣ
೪.	ಧರ್ಮಾಮೃತಂ	: ಶ್ರೀ ಶುಭಚಂದ್ರ
೫.	ಕನ್ನಡ ಶರಣರ ಕಥೆಗಳು	: ಡಾ. ಎಂ.ಎಂ. ಕಲಬುರ್ಗಿ
೬.	ವಿವೇಕ ಚಿಂತಾಮಣಿ	: ಶ್ರೀ ಜಿ.ಎ. ಶಿವಲಿಂಗಯ್ಯ
೭	ಚಿಕ್ಕದೇವರಾಯ ವಂಶಾವಳಿ	: ಶ್ರೀ ಹೆಚ್.ಎಂ. ನಾಗರಾಜರಾವ್

೮. ಮುದ್ರಾಮಂಜೂಷವು : ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯. ರಾಜಾವಳಿ ಕಥೆ : ಡಾ. ರಾಮೇಗೌಡ
೧೦. ರಾಮಾಶ್ವಮೇಧಂ : ಡಾ. ಗಾಯತ್ರಿ ನಾವಡ

ಇವುಗಳಲ್ಲಿ ಮೊದಲಿನ ನಾಲ್ಕು ಹಳಗನ್ನಡಕ್ಕೆ, ಆಮೇಲಿನವು ನಡುಗನ್ನಡ-ನಡುಗನ್ನಡೋತ್ತರಕ್ಕೆ ಸಂಬಂಧಿಸಿವೆ. ಪ್ರಾಚೀನ ಪದ್ಯಸಾಹಿತ್ಯದಲ್ಲಿ ಕಾಣಸಿಗದ ಹಳಗನ್ನಡ-ನಡುಗನ್ನಡ-ನಡುಗನ್ನಡೋತ್ತರ ಪ್ರಾಚೀನ ಭಾಷಾವಿಕಾಸದ ಸ್ಪಷ್ಟ ಹೆಜ್ಜೆ ಗುರುತುಗಳು ಈ ಗದ್ಯಸಾಹಿತ್ಯದಲ್ಲಿ ಕಾಣುತ್ತಲಿರುವುದು ವಿಶೇಷ. ಹೀಗಾಗಿ ಪ್ರಾಚೀನ ಕನ್ನಡ ಭಾಷಾ ಚರಿತ್ರೆಯನ್ನು ಬರೆಯುವಲ್ಲಿ ಪದ್ಯಕೃತಿಗಳಿಗಿಂತ ಗದ್ಯಕೃತಿಗಳೇ ಹೆಚ್ಚು ನೆರವಾಗುತ್ತವೆ. ಇಲ್ಲಿಯ ಆರಾಧನಾ ಕರ್ಣಾಟಟೀಕಾ, ಕರ್ಣಾಟ ಪಂಚತಂತ್ರ, ಧರ್ಮಾಮೃತಗಳನ್ನು ಕಥಾಕೋಶಗಳೆಂದು; ಕನ್ನಡ ಶರಣರ ಕಥೆಗಳು, ಚಿಕ್ಕದೇವರಾಯವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಚರಿತ್ರೆಗಳೆಂದು; ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ, ರಾಮಾಶ್ವಮೇಧಗಳನ್ನು ಪುರಾಣಗಳೆಂದು; ವಿವೇಕ ಚಿಂತಾಮಣಿಯನ್ನು ಜ್ಞಾನಕೋಶವೆಂದು ಕರೆಯಬಹುದಾಗಿದೆ. ಹೀಗೆ ಈ ಮಾಲೆಯ ಕೃತಿಗಳು ವೈವಿಧ್ಯಪೂರ್ಣ ವಿಷಯಗಳನ್ನೊಳಗೊಂಡಿವೆ. ಗದ್ಯಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಆರಾಧನಾ ಕರ್ಣಾಟಟೀಕಾ, ಕನ್ನಡ ಶರಣರ ಕಥೆಗಳು, ರಾಮಾಶ್ವಮೇಧ ವಿಶಿಷ್ಟ ಗದ್ಯ ಚಹರೆಯನ್ನು ಹೊಂದಿವೆ.

***

"ವಡ್ಡಾರಾಧನೆಯೆಂಬುದು ಕೃತಿಯ ಹೆಸರಲ್ಲ, ಶಿವಕೋಟ್ಯಾಚಾರ್ಯನೆಂಬುದು ಕವಿಯ ಹೆಸರಲ್ಲ" ಎಂದು ಹೇಳುತ್ತ, ಈ ಕೃತಿನಾಮ ಆರಾಧನಾ ಕರ್ಣಾಟಟೀಕಾ, ಕವಿನಾಮ ಭ್ರಾಜಿಷ್ಣು ಎಂದು ೧೯೭೦ರಲ್ಲಿಯೇ ನಾನು ಹೇಳಿದ್ದ ಮಾತು, ಇಂದು ಹೊಸ ಆಧಾರ ಲಭಿಸಿ ನಿಜವಾಗುತ್ತಲಿರುವುದರಿಂದ 'ಆರಾಧನಾ ಕರ್ಣಾಟಟೀಕಾ' ಎಂಬ ಹೊಸ ಶೀರ್ಷಿಕೆಯನ್ನು - ಭ್ರಾಜಿಷ್ಣುವೆಂಬ ಹೊಸ ಕವಿನಾಮವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಈ ಬಗೆಯ ಟೀಕಾರಚನೆ ಕವಿರಾಜಮಾರ್ಗಪೂರ್ವಸಾಹಿತ್ಯದ ಲಕ್ಷಣವಾಗಿರುವುದರಿಂದ, ಇದರ ಕಾಲ ಅಷ್ಟು ಹಿಂದೆ ಇರಬಹುದಾದರೂ, ಕ್ರಿ.ಶ. ೯೫೦ ಎಂದು ವಿದ್ವಾಂಸರು ಭಾವಿಸಿದ್ದಾರೆ. ದೇಶೀಯ ಗದ್ಯಶೈಲಿ, ಮನೋಜ್ಞ ಕಥನಕಲೆ, ವಿಶಿಷ್ಟ ಕಥಾತಂತ್ರ, ಸಾಂಸ್ಕೃತಿಕ ಜೀವನಪ್ರಜ್ಞೆ ಇತ್ಯಾದಿಗಳಿಂದಾಗಿ ಇದು ಕನ್ನಡದ ಸರ್ವಶ್ರೇಷ್ಠ ಕಥಾಕೋಶವೆನಿಸಿದೆ. ಈ ಗದ್ಯದ ಒಡಲಲ್ಲಿ ಆಗಾಗ ಉದ್ಧೃತ ಪ್ರಾಕೃತ, ಸಂಸ್ಕೃತ ಪದ್ಯಗಳು ಕಂಡುಬರುತ್ತವೆ. ಅಲ್ಲಲ್ಲಿ ತೋರುವ ವೈದಿಕ - ಜೈನ ಘರ್ಷಣೆಗಳು ಆ ಕಾಲದ ಧಾರ್ಮಿಕ ಸಂಘರ್ಷವನ್ನು ಸೂಚಿಸುತ್ತವೆ. ಜೈನ ಶ್ರಾವಕವರ್ಗ ಮತ್ತು ಮುನಿವರ್ಗ, ರಾಜವರ್ಗ, ಜೈನೇತರ ಸಾಮಾಜಿಕ ವರ್ಗಗಳಿಂದಾಗಿ ಇಲ್ಲಿ ಸಾಮುದಾಯಿಕ ಬದುಕು ದಟ್ಟವಾಗಿ ಮೂಡಿ, ಇದು ಒಂದು ಮಹತ್ವದ ಸಾಂಸ್ಕೃತಿಕ ಕೃತಿಯ ಆಕಾರ ಪಡೆದಿದೆ.

ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ (೯೭೮) ಜೈನ ೬೩ ಶಲಾಕಾಪುರುಷರನ್ನು ಕುರಿತ ಕೃತಿ. ಜಿನಸೇನ ಗುಣಭದ್ರದ ಸಂಸ್ಕೃತ ಮಹಾಪುರಾಣವನ್ನಾಧರಿಸಿ ಹುಟ್ಟಿದ ಇದರ ಕರ್ತೃ ಗಂಗಮಂತ್ರಿ ಚಾವುಂಡರಾಯ. ಈ ಕೃತಿಯ ಗದ್ಯ ಮಾರ್ಗೀಯ ಶೈಲಿಯದು. ಮಧ್ಯ ಮಧ್ಯ ಪ್ರಾಕೃತ, ಸಂಸ್ಕೃತ ಉದ್ಧೃತಿಗಳಿವೆ. ವಡ್ಡಾರಾಧನೆ ಬಿಡಿ ಕಥಾಕಕೋಶವಾಗಿದ್ದರೆ ಇದು ಬಿಡಿಯಲ್ಲಿಯೂ ಅಖಂಡತೆಯನ್ನೊಳಗೊಂಡ ಕೃತಿಯಾಗಿದೆ. ಹೀಗಿದ್ದೂ ಇದರ ಅಖಂಡ ಶಿಲ್ಪಕ್ಕೆ ಅಲ್ಲಲ್ಲಿ ಸಮನ್ವಯದ ಚ್ಯುತಿ ಬಂದಿವೆ.

ದುರ್ಗಸಿಂಹನ ಕರ್ಣಾಟ ಪಂಚತಂತ್ರ ಅನುಪಲಬ್ಧ ವಸುಭಾಗಭಟ್ಟನ ಸಂಸ್ಕೃತ ಕಥಾಪರಂಪರೆಗೆ ಸಂಬಂಧಿಸಿದೆ. ಮೂಲತಃ ಪಂಚತಂತ್ರ ವೈದಿಕ ಕಥಾಕೋಶವಾಗಿದ್ದರೂ, ಇದರಲ್ಲಿ ಜೈನೀಯ ಅಂಶಗಳಿರುವುದು ವಿಶೇಷ. ಮಾರ್ಗೀಯ ಕೃತಿಯಾಗಿದರೂ ಸೊಗಸಾದ

ಕಥಾಶೈಲಿ, ದೇಶೀ ಒಲವುಗಳನ್ನೊಳಗೊಂಡಿದೆ. ೪೫೮ ಕನ್ನಡ ಪದ್ಯಗಳಲ್ಲಿ ೨೦೪ರಷ್ಟು ಕಂದಗಳಿವೆ. ಮಿಕ್ಕವುಗಳಲ್ಲಿ ಅಕ್ಷರವೃತ್ತದ ಜೊತೆ ಪಡ್ಡಳಿ, ಅಕ್ಕರ, ಪಿರಿಯಕ್ಕರ, ತ್ರಿಪದಿಗಳೆಂಬ ದೇಶೀ ಬಂಧಗಳಿರುವುದೂ ಒಂದು ವಿಶೇಷ. ಮುಖ್ಯವಾಗಿ ರಾಜನೀತಿ ಗ್ರಂಥವಾಗಿರುವುದರಿಂದ ರಾಜ್ಯಾಡಳಿತಕ್ಕೆ ಹೆಚ್ಚು ಅವಕಾಶ ನೀಡಿದ್ದರೂ, ಸಂಸಾರ –ಸಮಾಜ ಸಂಬಂಧಿ ವೈವಿಧ್ಯಮಯ ಜೀವನ ಚಿತ್ರಗಳೂ ಇಲ್ಲಿ ಎಡೆಪಡೆದಿವೆ.

ಕನ್ನಡ ಗದ್ಯಪರಂಪರೆಯಲ್ಲಿ ವಡ್ಡಾರಾಧನೆಯನ್ನು ಬಿಟ್ಟರೆ ಒಂದಿಷ್ಟು ಭಿನ್ನ ರೀತಿಯ ಜೈನಕಥಾಕೋಶವೆನಿಸಿದೆ, ನಯಸೇನನ (೧೧೧೨) ಧರ್ಮಾಮೃತ. ೧೪ ಆಶ್ವಾಸಗಳಲ್ಲಿ ೧೪ ಕಥೆಗಳನ್ನೊಳಗೊಂಡ ಈ ಕೃತಿ ಮಾರ್ಗೀಯವಾಗಿದ್ದರೂ ದೇಶೀಯ ಒಲವು ಅಧಿಕವಾಗಿದೆ. ಹೀಗಾಗಿ ನಾಣ್ನುಡಿಯ ಬಳಕೆಯಲ್ಲಿ, ಇದಕ್ಕಿಂತ ವೆಗ್ಗಳವಾಗಿ ಬಳಸಿರುವ ಉಪಮೆಗಳಲ್ಲಿ ಇವನ ವಿಶೇಷತೆ ಅಡಗಿದೆ. ಮಾಲೋಪಮೆಯೆಂದು ಹೇಳುವಷ್ಟರ ಮಟ್ಟಿಗೆ ಅವು ಮಾಲೆಮಾಲೆಯಾಗಿ ಬರುವುದರಿಂದ ವಿದ್ವಾಂಸರು ಇವನನ್ನು ಉಪಮಾಲಂಪಟನೆಂದು ಕರೆದುದು ಸೂಕ್ತವಾಗಿದೆ. ಇದಕ್ಕೆ ಕಳಸವಿಟ್ಟಂತೆ ವಿಡಂಬನೆ ಈ ಕೃತಿಯ ವೈಶಿಷ್ಟ್ಯವಾಗಿದ್ದು, ವೈದಿಕ ಬೌದ್ಧಗಳ ದೋಷವನ್ನು ಎತ್ತಿ ಹೇಳುವಲ್ಲಿ ಇದು ಸಾರ್ಥಕತೆ ಪಡೆದಿದೆ. ಇವೆಲ್ಲ ಮೇಳವಿಸುವಲ್ಲಿ ಅವನ ವೈವಿಧ್ಯಪೂರ್ಣ ಜೀವನಾನುಭವ ಅಚ್ಚರಿ ಹುಟ್ಟಿಸುತ್ತದೆ. ದುರ್ಗಸಿಂಹನಂತೆ ಮಾರ್ಗೀಯ ಕವಿಯಾಗಿದ್ದರೂ ಅವನಿಗಿಂತ ಹೆಚ್ಚು ಜಾನಪದೀಯವಾಗಿ ಕಾಣುತ್ತಾನೆ.

'ಕನ್ನಡ ಶರಣರ ಕಥೆಗಳು' ಹೆಸರೇ ಸೂಚಿಸುವಂತೆ ಕರ್ನಾಟಕಕ್ಕೆ ಸಂಬಂಧಿಸಿದ, ಗದ್ಯ – ಪದ್ಯ ಮಿಶ್ರಿತ ರೂಪದ ರಗಳೆಗೆ ವಸ್ತುವಾಗಿರುವ, ಶರಣರ ಕೃತಿಗಳನ್ನೊಳಗೊಂಡಿದೆ. ಶರಣರ ವಚನಗಳ ಗದ್ಯವನ್ನು ಶುದ್ಧಸಾಹಿತ್ಯಕ್ಕೆ ಅಳವಡಿಸಿದ ನಡುಗನ್ನಡ ಸಾಹಿತ್ಯದ ಆದಿಕವಿಯಾಗಿದ್ದಾನೆ, ಹರಿಹರ (೧೩ನೆಯ ಶತಮಾನ). ಭಕ್ತಿಕೇಂದ್ರಿತ ಆಶಯ, ಸ್ಥಳೀಯ ಶರಣಚರಿತ್ರೆನಿಷ್ಠ ವಸ್ತು, ರಗಳೆ ಸಾಹಿತ್ಯಪ್ರಕಾರ, ನಡುಗನ್ನಡ ಭಾಷೆ ಇತ್ಯಾದಿ ಹೊಸ ಉಪಕರಣಗಳನ್ನು ಶೋಧಿಸಿ, ಸೃಜನಶೀಲತೆಯಲ್ಲಿ ಎರಕಹೊಯ್ದವನೀತ. ಭಾಷೆಯ ಲಾಲಿತ್ಯ, ಶೈಲಿಯ ಉತ್ಸಾಹ, ಲಯಬದ್ಧವಾಕ್ಯ, ವೈವಿಧ್ಯಪೂರ್ಣ ಕಲ್ಪನೆ ಮೊದಲಾದವುಗಳಿಂದಾಗಿ ಇವನ ಗದ್ಯಕ್ಕೆ ಈ ಮೊದಲು ಕನ್ನಡದಲ್ಲಿಲ್ಲದ ಹೊಸ ಸೊಬಗು ಪ್ರಾಪ್ತವಾಗಿದೆ. ವಡ್ಡಾರಾಧನೆಯನ್ನು ಬಿಟ್ಟರೆ ಕನ್ನಡ ಗದ್ಯವನ್ನು ಹೊಸ ಬಗೆಯಲ್ಲಿ ಹದಗೊಳಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಒಂದು ಸ್ಥಲ ಗದ್ಯ, ಒಂದು ಸ್ಥಲ ರಗಳೆಯೆಂಬ ಯೋಜನೆಯಲ್ಲಿ ರಗಳೆಯೇ ಗದ್ಯವಾದ, ಗದ್ಯವೇ ರಗಳೆಯಾದ ಅನುಭವ ಓದುಗನಿಗೆ ಉಂಟಾಗುತ್ತದೆ. ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ, ಕನ್ನಡ ಸಾಹಿತ್ಯದ ಪ್ರಥಮ ಭಾವಗೀತ ಕವಿಯಾಗಿರುವ ಈತ, ಕನ್ನಡ ಸಾಹಿತ್ಯದ ಪ್ರಥಮ ಸಂತಕವಿ. ಹೀಗಾಗಿ ಇವನ ಬರೆಹ ಮನೋಪಾತಳಿಗೆ ನಿಲ್ಲದೆ, ಆತ್ಮಪಾತಳಿಯಲ್ಲಿ ವಿಹರಿಸುತ್ತದೆ, ವಿರಮಿಸುತ್ತದೆ.

ನಿಜಗುಣಶಿವಯೋಗಿ ಶೈವದಲ್ಲಿಯೇ ಶಾಂತಪರಂಪರೆಗೆ ಸಂಬಂಧಿಸಿರಬಹುದಾಗಿದ್ದು (೧೫ ಶತಮಾನ), ಕವಿತ್ವ – ಅನುಭಾವಗಳ ಸಂಗಮವಾಗಿರುವ ಇವನ 'ವಿವೇಕ ಚಿಂತಾಮಣಿ' ವಿಶ್ವಕೋಶ ಪ್ರಕಾರದ ಗದ್ಯಕೃತಿ. ಈ ಹಿಂದಿನ ಗದ್ಯಕೃತಿಗಳು ಕವಿತ್ವವನ್ನೊಳಗೊಂಡಿದ್ದರೆ, ಇದರಲ್ಲಿ ಶಾಸ್ತ್ರಯೋಗ್ಯ ನಿರೂಪಣಾಗದ್ಯ ನೆಲೆ ಪಡೆದಿದೆ. ಈ ಗುಣದಿಂದಾಗಿ ಈ ಗದ್ಯಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. ವಿಶ್ವಕೋಶವರ್ಗದ ಇದು ಸಹಜವಾಗಿಯೇ ಬದುಕಿನ ವಿವಿಧ ಆಯಾಮಗಳ ಜ್ಞಾನಸಂಪತ್ತನ್ನೊಳಗೊಂಡಿದೆ.

ಮೈಸೂರು ಒಡೆಯರ ಕಾಲದಲ್ಲಿ ಪದ್ಯ ಹಿಂದು ಬಿದ್ದು, ಗದ್ಯ ವಿಪುಲ ಪ್ರಮಾಣದಲ್ಲಿ ಬೆಳೆಯಿತು. ಪಾಂಡಿತ್ಯ ಪ್ರದರ್ಶನದ ಹಂಬಲ, ನಡುಗನ್ನಡ – ಹೊಸಗನ್ನಡ ಮಿಶ್ರಶೈಲಿಗಳಿಂದಾಗಿ ಒಂದು ಬಗೆಯ ಮಧ್ಯಮ ಗುಣಮಟ್ಟದ ಸಾಹಿತ್ಯ ಈ ಕಾಲದಲ್ಲಿ ಹುಟ್ಟಿತು. ಇದಕ್ಕೆ ನಿದರ್ಶನವೆನಿಸುವ ಚಿಕದೇವರಾಯ ವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು

೮. ಮುದ್ರಾಮಂಜೂಷವು : ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯. ರಾಜಾವಳಿ ಕಥೆ : ಡಾ. ರಾಮೇಗೌಡ
೧೦. ರಾಮಾಶ್ವಮೇಧಂ : ಡಾ. ಗಾಯತ್ರಿ ನಾವಡ

ಇವುಗಳಲ್ಲಿ ಮೊದಲಿನ ನಾಲ್ಕು ಹಳಗನ್ನಡಕ್ಕೆ, ಆಮೇಲಿನವು ನಡುಗನ್ನಡ-ನಡುಗನ್ನಡೋತ್ತರಕ್ಕೆ ಸಂಬಂಧಿಸಿವೆ. ಪ್ರಾಚೀನ ಪದ್ಯಸಾಹಿತ್ಯದಲ್ಲಿ ಕಾಣಸಿಗದ ಹಳಗನ್ನಡ-ನಡುಗನ್ನಡ-ನಡುಗನ್ನಡೋತ್ತರ ಪ್ರಾಚೀನ ಭಾಷಾವಿಕಾಸದ ಸ್ಪಷ್ಟ ಹೆಜ್ಜೆ ಗುರುತುಗಳು ಈ ಗದ್ಯಸಾಹಿತ್ಯದಲ್ಲಿ ಕಾಣುತ್ತಲಿರುವುದು ವಿಶೇಷ. ಹೀಗಾಗಿ ಪ್ರಾಚೀನ ಕನ್ನಡ ಭಾಷಾ ಚರಿತ್ರೆಯನ್ನು ಬರೆಯುವಲ್ಲಿ ಪದ್ಯಕೃತಿಗಳಿಗಿಂತ ಗದ್ಯಕೃತಿಗಳೇ ಹೆಚ್ಚು ನೆರವಾಗುತ್ತವೆ. ಇಲ್ಲಿಯ ಆರಾಧನಾ ಕರ್ಣಾಟಟೀಕಾ, ಕರ್ಣಾಟ ಪಂಚತಂತ್ರ, ಧರ್ಮಾಮೃತಗಳನ್ನು ಕಥಾಕೋಶಗಳೆಂದು; ಕನ್ನಡ ಶರಣರ ಕಥೆಗಳು, ಚಿಕ್ಕದೇವರಾಯವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಚರಿತ್ರೆಗಳೆಂದು; ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ, ರಾಮಾಶ್ವಮೇಧಗಳನ್ನು ಪುರಾಣಗಳೆಂದು; ವಿವೇಕ ಚಿಂತಾಮಣಿಯನ್ನು ಜ್ಞಾನಕೋಶವೆಂದು ಕರೆಯಬಹುದಾಗಿದೆ. ಹೀಗೆ ಈ ಮಾಲೆಯ ಕೃತಿಗಳು ವೈವಿಧ್ಯಪೂರ್ಣ ವಿಷಯಗಳನ್ನೊಳಗೊಂಡಿವೆ. ಗದ್ಯಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಆರಾಧನಾ ಕರ್ಣಾಟಟೀಕಾ, ಕನ್ನಡ ಶರಣರ ಕಥೆಗಳು, ರಾಮಾಶ್ವಮೇಧ ವಿಶಿಷ್ಟ ಗದ್ಯ ಚಹರೆಯನ್ನು ಹೊಂದಿವೆ.

***

"ವಡ್ಡಾರಾಧನೆಯೆಂಬುದು ಕೃತಿಯ ಹೆಸರಲ್ಲ, ಶಿವಕೋಟ್ಯಾಚಾರ್ಯನೆಂಬುದು ಕವಿಯ ಹೆಸರಲ್ಲ" ಎಂದು ಹೇಳುತ್ತ, ಈ ಕೃತಿನಾಮ ಆರಾಧನಾ ಕರ್ಣಾಟಟೀಕಾ, ಕವಿನಾಮ ಭ್ರಾಜಿಷ್ಣು ಎಂದು ೧೯೭೦ರಲ್ಲಿಯೇ ನಾನು ಹೇಳಿದ್ದ ಮಾತು, ಇಂದು ಹೊಸ ಆಧಾರ ಲಭಿಸಿ ನಿಜವಾಗುತ್ತಲಿರುವುದರಿಂದ 'ಆರಾಧನಾ ಕರ್ಣಾಟಟೀಕಾ' ಎಂಬ ಹೊಸ ಶೀರ್ಷಿಕೆಯನ್ನು – ಭ್ರಾಜಿಷ್ಣುವೆಂಬ ಹೊಸ ಕವಿನಾಮವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಈ ಬಗೆಯ ಟೀಕಾರಚನೆ ಕವಿರಾಜಮಾರ್ಗಪೂರ್ವಸಾಹಿತ್ಯದ ಲಕ್ಷಣವಾಗಿರುವುದರಿಂದ, ಇದರ ಕಾಲ ಅಷ್ಟು ಹಿಂದೆ ಇರಬಹುದಾದರೂ, ಕ್ರಿ.ಶ. ೯೪೦ ಎಂದು ವಿದ್ವಾಂಸರು ಭಾವಿಸಿದ್ದಾರೆ. ದೇಶೀಯ ಗದ್ಯಶೈಲಿ, ಮನೋಜ್ಞ ಕಥನಕಲೆ, ವಿಶಿಷ್ಟ ಕಥಾತಂತ್ರ, ಸಾಂಸ್ಕೃತಿಕ ಜೀವನಪ್ರಜ್ಞೆ ಇತ್ಯಾದಿಗಳಿಂದಾಗಿ ಇದು ಕನ್ನಡದ ಸರ್ವಶ್ರೇಷ್ಠ ಕಥಾಕೋಶವೆನಿಸಿದೆ. ಈ ಗದ್ಯದ ಒಡಲಲ್ಲಿ ಆಗಾಗ ಉದ್ಧೃತ ಪ್ರಾಕೃತ, ಸಂಸ್ಕೃತ ಪದ್ಯಗಳು ಕಂಡುಬರುತ್ತವೆ. ಅಲ್ಲಲ್ಲಿ ತೋರುವ ವೈದಿಕ – ಜೈನ ಘರ್ಷಣೆಗಳು ಆ ಕಾಲದ ಧಾರ್ಮಿಕ ಸಂಘರ್ಷವನ್ನು ಸೂಚಿಸುತ್ತವೆ. ಜೈನ ಶ್ರಾವಕವರ್ಗ ಮತ್ತು ಮುನಿವರ್ಗ, ರಾಜವರ್ಗ, ಜೈನೇತರ ಸಾಮಾಜಿಕ ವರ್ಗಗಳಿಂದಾಗಿ ಇಲ್ಲಿ ಸಾಮುದಾಯಿಕ ಬದುಕು ದಟ್ಟವಾಗಿ ಮೂಡಿ, ಇದು ಒಂದು ಮಹತ್ವದ ಸಾಂಸ್ಕೃತಿಕ ಕೃತಿಯ ಆಕಾರ ಪಡೆದಿದೆ.

ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ (೯೭೮) ಜೈನ ೬೩ ಶಲಾಕಾಪುರುಷರನ್ನು ಕುರಿತ ಕೃತಿ. ಜಿನಸೇನ ಗುಣಭದ್ರರ ಸಂಸ್ಕೃತ ಮಹಾಪುರಾಣವನ್ನಾಧರಿಸಿ ಹುಟ್ಟಿದ ಇದರ ಕರ್ತೃ ಗಂಗಮಂತ್ರಿ ಚಾವುಂಡರಾಯ. ಈ ಕೃತಿಯ ಗದ್ಯ ಮಾರ್ಗೀಯ ಶೈಲಿಯದು. ಮಧ್ಯ ಮಧ್ಯ ಪ್ರಾಕೃತ, ಸಂಸ್ಕೃತ ಉದ್ಧೃತಿಗಳಿವೆ. ವಡ್ಡಾರಾಧನೆ ಬಿಡಿ ಕಥಾಕಕೋಶವಾಗಿದ್ದರೆ ಇದು ಬಿಡಿಯಲ್ಲಿಯೂ ಅಖಂಡತೆಯನ್ನೊಳಗೊಂಡ ಕೃತಿಯಾಗಿದೆ. ಹೀಗಿದ್ದೂ ಇದರ ಅಖಂಡ ಶಿಲ್ಪಕ್ಕೆ ಅಲ್ಲಲ್ಲಿ ಸಮನ್ವಯದ ಚ್ಯುತಿ ಬಂದಿವೆ.

ದುರ್ಗಸಿಂಹನ ಕರ್ಣಾಟ ಪಂಚತಂತ್ರ ಅನುಪಲಬ್ಧ ವಸುಭಾಗಭಟ್ಟನ ಸಂಸ್ಕೃತ ಕಥಾಪರಂಪರೆಗೆ ಸಂಬಂಧಿಸಿದೆ. ಮೂಲತಃ ಪಂಚತಂತ್ರ ವೈದಿಕ ಕಥಾಕೋಶವಾಗಿದ್ದರೂ, ಇದರಲ್ಲಿ ಜೈನೀಯ ಅಂಶಗಳಿರುವುದು ವಿಶೇಷ. ಮಾರ್ಗೀಯ ಕೃತಿಯಾಗಿದ್ದರೂ ಸೊಗಸಾದ

ಕಥಾಶೈಲಿ, ದೇಶೀ ಒಲವುಗಳನ್ನೊಳಗೊಂಡಿದೆ. ೪೫೮ ಕನ್ನಡ ಪದ್ಯಗಳಲ್ಲಿ ೨೦೪ರಷ್ಟು ಕಂದಗಳಿವೆ. ಮಿಕ್ಕವುಗಳಲ್ಲಿ ಅಕ್ಷರವೃತ್ತದ ಜೊತೆ ಪಡ್ನಳಿ, ಅಕ್ಕರ, ಪಿರಿಯಕ್ಕರ, ತ್ರಿಪದಿಗಳೆಂಬ ದೇಶೀ ಬಂಧಗಳಿರುವುದೂ ಒಂದು ವಿಶೇಷ. ಮುಖ್ಯವಾಗಿ ರಾಜನೀತಿ ಗ್ರಂಥವಾಗಿರುವುದರಿಂದ ರಾಜ್ಯಾಡಳಿತಕ್ಕೆ ಹೆಚ್ಚು ಅವಕಾಶ ನೀಡಿದ್ದರೂ, ಸಂಸಾರ -ಸಮಾಜ ಸಂಬಂಧಿ ವೈವಿಧ್ಯಮಯ ಜೀವನ ಚಿತ್ರಗಳೂ ಇಲ್ಲಿ ಎಡೆಪಡೆದಿವೆ.

ಕನ್ನಡ ಗದ್ಯಪರಂಪರೆಯಲ್ಲಿ ವಡ್ಡಾರಾಧನೆಯನ್ನು ಬಿಟ್ಟರೆ ಒಂದಿಷ್ಟು ಭಿನ್ನ ರೀತಿಯ ಜೈನಕಥಾಕೋಶವೆನಿಸಿದೆ, ನಯಸೇನನ (೧೧೧೨) ಧರ್ಮಾಮೃತ. ೧೪ ಆಶ್ವಾಸಗಳಲ್ಲಿ ೧೪ ಕಥೆಗಳನ್ನೊಳಗೊಂಡ ಈ ಕೃತಿ ಮಾರ್ಗೀಯವಾಗಿದ್ದರೂ ದೇಶೀಯ ಒಲವು ಅಧಿಕವಾಗಿದೆ. ಹೀಗಾಗಿ ನಾಣ್ನುಡಿಯ ಬಳಕೆಯಲ್ಲಿ, ಇದಕ್ಕಿಂತ ವೆಗ್ಗಳವಾಗಿ ಬಳಸಿರುವ ಉಪಮೆಗಳಲ್ಲಿ ಇವನ ವಿಶೇಷತೆ ಅಡಗಿದೆ. ಮಾಲೋಪಮೆಯೆಂದು ಹೇಳುವಷ್ಟರ ಮಟ್ಟಿಗೆ ಅವು ಮಾಲೆಮಾಲೆಯಾಗಿ ಬರುವುದರಿಂದ ವಿದ್ವಾಂಸರು ಇವನನ್ನು ಉಪಮಾಲಂಪಟನೆಂದು ಕರೆದುದು ಸೂಕ್ತವಾಗಿದೆ. ಇದಕ್ಕೆ ಕಳಸವಿಟ್ಟಂತೆ ವಿಡಂಬನೆ ಈ ಕೃತಿಯ ವೈಶಿಷ್ಟ್ಯವಾಗಿದ್ದು, ವೈದಿಕ ಬೌದ್ಧಗಳ ದೋಷವನ್ನು ಎತ್ತಿ ಹೇಳುವಲ್ಲಿ ಇದು ಸಾರ್ಥಕತೆ ಪಡೆದಿದೆ. ಇವೆಲ್ಲ ಮೇಳವಿಸುವಲ್ಲಿ ಅವನ ವೈವಿಧ್ಯಪೂರ್ಣ ಜೀವನಾನುಭವ ಅಚ್ಚರಿ ಹುಟ್ಟಿಸುತ್ತದೆ. ದುರ್ಗಸಿಂಹನಂತೆ ಮಾರ್ಗೀಯ ಕವಿಯಾಗಿದ್ದರೂ ಅವನಿಗಿಂತ ಹೆಚ್ಚು ಜಾನಪದೀಯವಾಗಿ ಕಾಣುತ್ತಾನೆ.

'ಕನ್ನಡ ಶರಣರ ಕಥೆಗಳು' ಹೆಸರೇ ಸೂಚಿಸುವಂತೆ ಕರ್ನಾಟಕಕ್ಕೆ ಸಂಬಂಧಿಸಿದ, ಗದ್ಯ – ಪದ್ಯ ಮಿಶ್ರಿತ ರೂಪದ ರಗಳೆಗೆ ವಸ್ತುವಾಗಿರುವ, ಶರಣರ ಕೃತಿಗಳನ್ನೊಳಗೊಂಡಿದೆ. ಶರಣರ ವಚನಗಳ ಗದ್ಯವನ್ನು ಶುದ್ಧಸಾಹಿತ್ಯಕ್ಕೆ ಅಳವಡಿಸಿದ ನಡುಗನ್ನಡ ಸಾಹಿತ್ಯದ ಆದಿಕವಿಯಾಗಿದ್ದಾನೆ, ಹರಿಹರ (೧೩ನೆಯ ಶತಮಾನ). ಭಕ್ತಿಕೇಂದ್ರಿತ ಆಶಯ, ಸ್ಥಳೀಯ ಶರಣಚರಿತ್ರೆನಿಷ್ಠ ವಸ್ತು, ರಗಳೆ ಸಾಹಿತ್ಯಪ್ರಕಾರ, ನಡುಗನ್ನಡ ಭಾಷೆ ಇತ್ಯಾದಿ ಹೊಸ ಉಪಕರಣಗಳನ್ನು ಶೋಧಿಸಿ, ಸೃಜನಶೀಲತೆಯಲ್ಲಿ ಎರಕಹೊಯ್ದವನೀತ. ಭಾಷೆಯ ಲಾಲಿತ್ಯ, ಶೈಲಿಯ ಉತ್ಸಾಹ, ಲಯಬದ್ಧವಾಕ್ಯ, ವೈವಿಧ್ಯಪೂರ್ಣ ಕಲ್ಪನೆ ಮೊದಲಾದವುಗಳಿಂದಾಗಿ ಇವನ ಗದ್ಯಕ್ಕೆ ಈ ಮೊದಲು ಕನ್ನಡದಲ್ಲಿಲ್ಲದ ಹೊಸ ಸೊಬಗು ಪ್ರಾಪ್ತವಾಗಿದೆ. ವಡ್ಡಾರಾಧನೆಯನ್ನು ಬಿಟ್ಟರೆ ಕನ್ನಡ ಗದ್ಯವನ್ನು ಹೊಸ ಬಗೆಯಲ್ಲಿ ಹದಗೊಳಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಒಂದು ಸ್ಥಲ ಗದ್ಯ, ಒಂದು ಸ್ಥಲ ರಗಳೆಯೆಂಬ ಯೋಜನೆಯಲ್ಲಿ ರಗಳೆಯೇ ಗದ್ಯವಾದ, ಗದ್ಯವೇ ರಗಳೆಯಾದ ಅನುಭವ ಓದುಗನಿಗೆ ಉಂಟಾಗುತ್ತದೆ. ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ, ಕನ್ನಡ ಸಾಹಿತ್ಯದ ಪ್ರಥಮ ಭಾವಗೀತ ಕವಿಯಾಗಿರುವ ಈತ, ಕನ್ನಡ ಸಾಹಿತ್ಯದ ಪ್ರಥಮ ಸಂತಕವಿ. ಹೀಗಾಗಿ ಇವನ ಬರೆಹ ಮನೋಪಾತಳಿಗೆ ನಿಲ್ಲದೆ, ಆತ್ಮಪಾತಳಿಯಲ್ಲಿ ವಿಹರಿಸುತ್ತದೆ, ವಿರಮಿಸುತ್ತದೆ.

ನಿಜಗುಣಶಿವಯೋಗಿ ಶೈವದಲ್ಲಿಯೇ ಶಾಂತಪರಂಪರೆಗೆ ಸಂಬಂಧಿಸಿರಬಹುದಾಗಿದ್ದು (೧೫ ಶತಮಾನ), ಕವಿತ್ವ – ಅನುಭಾವಗಳ ಸಂಗಮವಾಗಿರುವ ಇವನ 'ವಿವೇಕ ಚಿಂತಾಮಣಿ' ವಿಶ್ವಕೋಶ ಪ್ರಕಾರದ ಗದ್ಯಕೃತಿ. ಈ ಹಿಂದಿನ ಗದ್ಯಕೃತಿಗಳು ಕವಿತ್ವವನ್ನೊಳಗೊಂಡಿದ್ದರೆ, ಇದರಲ್ಲಿ ಶಾಸ್ತ್ರಯೋಗ್ಯ ನಿರೂಪಣಾಗದ್ಯ ನೆಲೆ ಪಡೆದಿದೆ. ಈ ಗುಣದಿಂದಾಗಿ ಈ ಗದ್ಯಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. ವಿಶ್ವಕೋಶವರ್ಗದ ಇದು ಸಹಜವಾಗಿಯೇ ಬದುಕಿನ ವಿವಿಧ ಆಯಾಮಗಳ ಜ್ಞಾನಸಂಪತ್ತನ್ನೊಳಗೊಂಡಿದೆ.

ಮೈಸೂರು ಒಡೆಯರ ಕಾಲದಲ್ಲಿ ಪದ್ಯ ಹಿಂದು ಬಿದ್ದು, ಗದ್ಯ ವಿಪುಲ ಪ್ರಮಾಣದಲ್ಲಿ ಬೆಳೆಯಿತು. ಪಾಂಡಿತ್ಯ ಪ್ರದರ್ಶನದ ಹಂಬಲ, ನಡುಗನ್ನಡ – ಹೊಸಗನ್ನಡ ಮಿಶ್ರಶೈಲಿಗಳಿಂದಾಗಿ ಒಂದು ಬಗೆಯ ಮಧ್ಯಮ ಗುಣಮಟ್ಟದ ಸಾಹಿತ್ಯ ಈ ಕಾಲದಲ್ಲಿ ಹುಟ್ಟಿತು. ಇದಕ್ಕೆ ನಿದರ್ಶನವೆನಿಸುವ ಚಿಕದೇವರಾಯ ವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು

ಇಲ್ಲಿ ಒಟ್ಟಿಗೆ ಪರಿಶೀಲಿಸಬಹುದು. ಚಿಕದೇವರಾಯ ವಂಶಾವಳಿಯ ಕರ್ತೃ ತಿರುಮಲಾರ್ಯ (೧೬೪೫-೧೭೦೬) ಮೈಸೂರು ಚಿಕದೇವರಾಯನ ಸಚಿವ. ಧಾರ್ಮಿಕ ಮುಖವಾಡದಲ್ಲಿ ತಮಿಳುನಾಡಿನಿಂದ ಕರ್ನಾಟಕವನ್ನು ಪ್ರವೇಶಿಸಿದ ಶ್ರೀವೈಷ್ಣವರು, ಈ ಹೊತ್ತಿಗೆ ರಾಜಕೀಯವಾಗಿಯೂ ಪ್ರಬಲರಾಗಿ, ತಮ್ಮ ಶ್ರೀವೈಷ್ಣವ ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಲು ಆರಂಭಮಾಡಿದ ಕಾಲಘಟ್ಟದ ಕೃತಿಯಿದು. ಅನ್ಯರಾಜ್ಯದಿಂದ ಬಂದ ಇವರಿಗೆ ಒಂದು ಕಡೆ ತಮ್ಮ ಧರ್ಮಪ್ರಚಾರವೂ, ಇನ್ನೊಂದು ಕಡೆ ರಾಜನ ಪ್ರೀತಿಸಂಪಾದನೆಯೂ ಅಗತ್ಯವಾಗಿದ್ದ ಕಾರಣ, ತಮ್ಮ ಧಾರ್ಮಿಕ ಕೃತಿಗಳೊಂದಿಗೆ ರಾಜಸ್ತುತಿ ಕಾವ್ಯಗಳನ್ನೂ ಬರೆದರು. ಈ ಮನೋಧರ್ಮ ಕಾರಣವಾಗಿ ಈ ಗದ್ಯಕೃತಿಯಲ್ಲಿ ರಾಜವಂಶಾವಳಿ, ಶ್ರೀವೈಷ್ಣವಧರ್ಮ ಪ್ರಶಂಸೆಯೊಂದಿಗೆ ಇವನ ವಂಶಾವಳಿಯೂ ಸೇರಿಕೊಂಡಿದೆ. ಸಮಕಾಲೀನತೆಗಿಂತ ಪ್ರಾಚೀನತೆಯ ಒಲವು ಈ ಗದ್ಯದ ಲಕ್ಷಣವಾಗಿದೆ.

ದೇವಚಂದ್ರನ (೧೭೭೦-೧೮೪೧) ರಾಜಾವಳಿ ಕಥೆ ಮೆಕೆಂಝಿಯ ಸೂಚನೆಯಂತೆ ರಚಿಸಿದ ಕೃತಿಯಾಗಿದೆ. ಸಮಕಾಲೀನ ಮುಖ್ಯ ಘಟನೆಗಳನ್ನು, ಅವುಗಳ ಇತಿಹಾಸವನ್ನು ತುಂಬ ವಿವರವಾಗಿ ಬಿಂಬಿಸುವ ಇದು ಚರಿತ್ರೆ, ಪುರಾಣ, ದಂತಕಥೆಗಳ ಮಿಶ್ರಣವಾಗಿದ್ದು, ಮೌಖಿಕ ಇತಿಹಾಸದ ಸ್ವರೂಪ ಪಡೆದಿದೆ. ಜೈನಪರ ಧೋರಣೆಯ ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನು ಒಳಗೊಂಡ ಇದರ ಗದ್ಯಶೈಲಿ ಆಧುನಿಕತೆಯತ್ತ ಮುಖಮಾಡಿದೆ.

ನಂದವಂಶೀಯರ ಮಂತ್ರಿಯಾದ ರಾಕ್ಷಸನನ್ನು ಮೌರ್ಯವಂಶೀಯರ ಮಂತ್ರಿ ಚಾಣಕ್ಯನು ಒಲಿಸಿಕೊಂಡ ಕಥೆಯನ್ನು 'ಮುದ್ರಾಮಂಜೂಷ' ಹೆಸರಿನಿಂದ ರಚಿಸಿದವ, ಕೆಂಪುನಾರಾಯಣ (೧೮ನೆಯ ಶತಮಾನ). ಉತ್ತರ ಭಾರತದ ಐತಿಹಾಸಿಕ ವಸ್ತುವನ್ನು ಸಮಕಾಲೀನ ಗ್ರಂಥಸ್ಥ ಗದ್ಯದಲ್ಲಿ ಎರಕಹೊಯ್ದಿದ್ದು, ಶೈಲಿಯಲ್ಲಿ ಹಳಗನ್ನಡ-ಹೊಸಗನ್ನಡಗಳ ಮಿಶ್ರಣ ಎದ್ದುಕಾಣುತ್ತದೆ.

ಮೈಸೂರು ಅರಸರ ಕಾಲದ ಗ್ರಂಥಸ್ಥ ಅರೆಬೆಂದ ಗದ್ಯಕ್ಕೆ ಭಿನ್ನವಾಗಿ ನಿಲ್ಲುತ್ತದೆ, ಮುದ್ದಣನ ರಾಮಾಶ್ವಮೇಧ ಗದ್ಯ. "ಗದ್ಯಂ ಹೃದ್ಯಂ" ಎನ್ನುತ್ತ ಅವನು ಆಧುನಿಕ ಸಾಹಿತ್ಯದ, ಅದರಲ್ಲಿಯೂ ಗದ್ಯಸಾಹಿತ್ಯದ ಬಾಗಿಲನ್ನೇ ತೆರೆದನು. ಮೋಡ ಮುಸುಕಿದ ವಾತಾವರಣದಿಂದ ಆರಂಭವಾಗಿರುವ ಈ ಕೃತಿ, ಆ ಕಾಲದ ಕನ್ನಡದ ಮೇಲೆ ಮುಸುಕಿದ್ದ ಕತ್ತಲೆಯನ್ನು ಸಂಕೇತಿಸುತ್ತದೆ. ಇಂಥ ಸಂದರ್ಭದಲ್ಲಿ ಕಲ್ಪಿತ ಪಾತ್ರವಾಗಿ ಬರುವ ಹೆಂಡತಿ ಹೊಸ ಭಾಷೆ, ಹೊಸ ವಸ್ತು, ಹೊಸ ಬಗೆಯ ನಿರೂಪಣೆ ಇತ್ಯಾದಿಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳಿಂದ ಮುಂದುವರಿಯುವ ಇದು, ಆಧುನಿಕ ಗದ್ಯಯುಗಕ್ಕೆ ನಾಂದಿ ಹಾಡಿದೆ. ಆದುದರಿಂದ ಮುದ್ದಣನನ್ನು ನವೋದಯದ ಮುಂಗೋಳಿಯೆಂದು ಕರೆದುದು ನ್ಯಾಯವಾಗಿದೆ.

ಹೀಗೆ ಒಂದು ಸಾವಿರ ವರ್ಷದ ಗದ್ಯ ಸಾಹಿತ್ಯೇತಿಹಾಸದಲ್ಲಿ ಮೈಲಿಗಲ್ಲು ಎನಿಸಿದ ೧೦ ಕೃತಿಗಳು ಒಂದು ಮಾಲೆಯಡಿಯಲ್ಲಿ ಈಗ ಪ್ರಕಟವಾಗುತ್ತಲಿವೆ. ಇವು ಒಂದರ್ಥದಲ್ಲಿ ನಮ್ಮ ಗದ್ಯ ಸಾಗಿಬಂದ ಹಾದಿಯನ್ನು ತಿಳಿಸುವ ಕೈಮರಗಳಾಗಿವೆ.

ಕೃತಜ್ಞತೆಗಳು :

ಸಂಪಾದಕನಾಗಿ ಈ ಯೋಜನೆಯನ್ನು ಪೂರೈಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೂ, ಕನ್ನಡದ ಮೇಲಿನ ಪ್ರೀತಿಯಿಂದ ಈ ಗದ್ಯಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸ ಮಿತ್ರರಿಗೂ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಎಚ್. ಮಲ್ಲಿಕಾರ್ಜುನ ಅವರಿಗೂ, ಸಲಹಾ ಸಮಿತಿಯ

ಸಂಪಾದಕರ ಮಾತು

ಇತಿಹಾಸವೆಂಬುದು ಆಕರಗಳನ್ನು ಆಧರಿಸಿ ಮಾಡಿದ ಗತಕಾಲದ ಘಟನೆಗಳ ನಿರೂಪಣೆಯಾಗಿದೆ. ಈ ಆಕರಗಳು ಸ್ಥೂಲವಾಗಿ ಎರಡು ಬಗೆಯವು : ಲಿಖಿತ ಹಾಗೂ ಅಲಿಖಿತ. ಲಿಖಿತ ಆಕರಗಳಲ್ಲಿ ಸಾಹಿತ್ಯಕ ಕೃತಿಗಳು ಸೇರುತ್ತವೆ.

ಸಾಹಿತ್ಯಕ ಕೃತಿಗಳ ಪ್ರಧಾನ ಆಶಯ ಮತ್ತು ಉದ್ದೇಶ ಇತಿಹಾಸವಲ್ಲ. ಹಾಗಾಗಿ ಅವುಗಳಲ್ಲಿ ಇತಿಹಾಸದ ಅಂಶಗಳನ್ನು ಅನ್ವೇಷಿಸಿ ಆರಿಸಿಕೊಳ್ಳಬೇಕು. ಅಲ್ಲಿ ಹೆಚ್ಚಾಗಿ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸ ರಚನೆಗೆ ನೆರವಾಗುವ ಅಂಶಗಳು ದೊರೆಯುತ್ತವೆ; ರಾಜಕೀಯ ಘಟನೆಗಳ ವಿವರಗಳು ಇರುವುದಿಲ್ಲ.

ಸಾಹಿತ್ಯಕ ಕೃತಿಗಳ ಪ್ರಕಾರದಲ್ಲಿ ಚಾರಿತ್ರಿಕ ಕಾವ್ಯಗಳಿವೆ, ನಿಜ. ಆದರೆ ಅವು ಬಹುಮಟ್ಟಿಗೆ ರಾಜಾಸ್ಥಾನದ ಸಾಹಿತ್ಯ. ಆಶ್ರಯದಾತನ ವಂಶದ ಹಿರಿಮೆಯ ಪ್ರಶಂಸೆ, ಅವನ ಸಾಹಸ ಸಾಧನೆಗಳ ವೈಭವೀಕರಣ – ಇವೇ ಅದರ ಜೀವಾಳ. ಇವುಗಳ ಅಧ್ಯಯನವನ್ನು ಹೆಚ್ಚು ವಸ್ತುನಿಷ್ಠವಾಗಿ ಮಾಡಬೇಕಾಗುತ್ತದೆ.

ಭಾರತೀಯರಿಗೆ ಇತಿಹಾಸಪ್ರಜ್ಞೆ ಇಲ್ಲವೆಂಬುದು ಪಾಶ್ಚಾತ್ಯ ವಿದ್ವಾಂಸರ ಆರೋಪ. ಇದು ಪೂರ್ಣಸತ್ಯವಲ್ಲ. ಭಾರತೀಯರು ಜೀವನದ ಬಗ್ಗೆ ಹೊಂದಿದ ಧೋರಣೆ ವಿಭಿನ್ನ. ಹಾಗಿದ್ದರೂ ನೂರಾರು ವಿದ್ವಾಂಸರ ಸತತ ಪರಿಶ್ರಮದ ಫಲವಾಗಿ ನಮ್ಮ ದೇಶದ ಇತಿಹಾಸ ಪುನರ್ ರಚಿತವಾಗಿದೆ.

ಕನ್ನಡ ಕಾವ್ಯಗಳಲ್ಲಿ ಕೂಡ ಇತಿಹಾಸದ ಅಂಶಗಳನ್ನು ಗುರುತಿಸುವ ಪ್ರಯತ್ನ ನಡೆದುಕೊಂಡುಬಂದಿದೆ. ಡಾ. ರಾಗೌ ಅವರ 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಎಂಬುದು ಗಮನಾರ್ಹ ಕೃತಿ. ಕನ್ನಡದ ಚಾರಿತ್ರಿಕ ಕೃತಿಗಳಲ್ಲಿ 'ಚಿಕದೇವರಾಯ ವಂಶಾವಳಿ'ಗೆ ವಿಶಿಷ್ಟ ಸ್ಥಾನವಿದೆ.

ಕನ್ನಡ ಪುಸ್ತಕ ಪ್ರಾಧಿಕಾರದ ಕನ್ನಡ ಮಹಾಕಾವ್ಯಮಾಲೆಯಡಿಯಲ್ಲಿ **ಪ್ರಾಚೀನ ಗದ್ಯ ಸಾಹಿತ್ಯಮಾಲೆಗೆ** ತಿರುಮಲಾರ್ಯ ಕವಿಯ 'ಚಿಕದೇವರಾಯ ವಂಶಾವಳಿ'ಯನ್ನು ಸಂಪಾದಿಸಿಕೊಡುವ ಜವಾಬ್ದಾರಿಯನ್ನು ನನಗೆ ವಹಿಸಿಕೊಟ್ಟ

ಹಿರಿಯ ಸಂಶೋಧಕ ಪ್ರೊ. ಎಂ. ಎಂ. ಕಲ್ಬುರ್ಗಿ ಅವರಿಗೆ, ಹಸ್ತಪ್ರತಿಗಳನ್ನು ನೋಡಲು ಅನುವು ಮಾಡಿಕೊಟ್ಟ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಕೆ. ಎನ್. ಗಂಗಾನಾಯಕ್ ಅವರಿಗೆ, ಹಸ್ತಪ್ರತಿವಿಭಾಗದ ಹಿರಿಯ ಸಂಶೋಧಕಿ ಡಾ. ಭಾನುಮತಿ ರಾಮಣ್ಣ ಅವರಿಗೆ, ನೆರವು ನೀಡಿದ ಪ್ರೊ. ಟಿ. ವಿ. ವೆಂಕಟಾಚಲಶಾಸ್ತ್ರೀ, ಪ್ರೊ. ಎಚ್. ಎಸ್. ಹರಿಶಂಕರ್ ಹಾಗೂ ಶ್ರೀಮತಿ ಕೃಷ್ಣವೇಣಿ ಅವರಿಗೆ, ಡಿಟಿಪಿ ಕಾರ್ಯವನ್ನು ಮಾಡಿಕೊಟ್ಟ ಶ್ರೀಮತಿ ರಮ್ಯಪ್ರಸಾದ್, ಶ್ರೀ ಎಂ. ಡಿ. ನಟರಾಜ್ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರದ ಕ್ರಿಯಾಶೀಲ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಮತ್ತು ಆಡಳಿತಾಧಿಕಾರಿಗಳಾದ ಶ್ರೀ ಬಲವಂತರಾವ್ ಪಾಟೀಲ್ ಅವರಿಗೆ ನನ್ನ ಧನ್ಯವಾದಗಳು.

ತಿರುಮಲಾರ್ಯ ವಿರಚಿತ ಚಿಕದೇವರಾಜವಂಶಾವಳಿಯ ಗದ್ಯಾನುವಾದವನ್ನು ಮ.ಬಾ. ಭೋಯಿ ಅವರು ಅತ್ಯುತ್ತಮ ರೀತಿಯಲ್ಲಿ ಮಾಡಿದ್ದಾರೆ. ಟಿಪ್ಪಣಿ ಮತ್ತು ಕಠಿಣ ಪದಕೋಶಗಳನ್ನು ನೀಡಿದ್ದಾರೆ. ಅದನ್ನು ಇಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳೊಡನೆ ಬಳಸಿಕೊಂಡಿದ್ದೇನೆ. ಈ ಗದ್ಯಾನುವಾದಕ್ಕೆ ನಾನು ವಿಶೇಷವಾಗಿ ಋಣಿಯಾಗಿರುವೆ.

ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲ ಗೆಳೆಯರಿಗೂ ನನ್ನ ಹೃದಯಪೂರ್ವಕ ವಂದನೆಗಳು.

೦೩. ೦೩. ೨೦೧೧ **ಎಚ್. ಎಂ. ನಾಗರಾಜರಾವ್**
ಮೈಸೂರು

ಪ್ರಸ್ತಾವನೆ

ಎಚ್. ಎಂ. ನಾಗರಾಜರಾವ್

ಮೈಸೂರು ಒಡೆಯರ ಇತಿಹಾಸದಲ್ಲಿ ಕ್ರಿ. ಶ. ೧೬೭೨ ರಿಂದ ೧೭೦೪ರ ವರೆಗೆ ಆಳಿದ ಚಿಕ್ಕದೇವರಾಜ ಒಡೆಯನಿಗೆ ಗಣನೀಯ ಸ್ಥಾನವಿದೆ. ಈ ಕಾಲದಲ್ಲಿ ಕೂಡ ರಾಜಕೀಯವಾಗಿ ಕದನ ಕಲಹಗಳು ಇದ್ದುವಾದರೂ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಪ್ರೋತ್ಸಾಹಕ ಪರಿಸರವಿತ್ತು. ಸ್ವತಃ ಕವಿಯೂ ಕವಿಪೋಷಕನೂ ಆಗಿದ್ದ ಚಿಕ್ಕದೇವರಾಜ ಒಡೆಯನ ಕಾಲವನ್ನು ಕನ್ನಡ ಸಾಹಿತ್ಯದ ಉತ್ಕರ್ಷಕಾಲವೆಂದು ಬಣ್ಣಿಸಲಾಗಿದೆ. "ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಸಿಂಗರಾರ್ಯ, ತಿಮ್ಮಕವಿ, ಮಲ್ಲಿಕಾರ್ಜುನ, ವೇಣುಗೋಪಾಲ ವರಪ್ರಸಾದ, ಚಿದಾನಂದ ಮೊದಲಾದ ಕವಿಗಳಿಗೆ ಇವನ ಕಾಲದಲ್ಲಿ ದೊರೆತ ಆಶ್ರಯ ಅನೇಕಕಾವ್ಯಗಳ, ಶಾಸ್ತ್ರಗ್ರಂಥಗಳ ರಚನೆಗೆ ಕಾರಣವಾಯಿತು. ಚಿಕ್ಕದೇವರಾಯನ ಮಂತ್ರಿಯಾಗಿದ್ದ ತಿರುಮಲಾರ್ಯ ಅಪ್ರತಿಮವೀರಚರಿತ್ರೆ, ಚಿಕದೇವರಾಜವಂಶಾವಳಿ, ಚಿಕದೇವರಾಜವಿಜಯ ಮತ್ತು ಚಿಕದೇವರಾಜ ಶತಕಗಳನ್ನು ಬರೆದಿದ್ದಾನೆ"[1] ಇವುಗಳಲ್ಲಿ ಚಿಕದೇವರಾಜಶತಕ ಉಪಲಬ್ಧವಿಲ್ಲ.

ಕವಿ–ಕಾಲ ವಿಚಾರ

ತಿರುಮಲಾರ್ಯ ಕೌಶಿಕಗೋತ್ರಕ್ಕೆ ಸೇರಿದವನು. ತಂದೆ ಅಳಸಿಂಗರಾರ್ಯ ಹಾಗೂ ತಾಯಿ ಸಿಂಗಮ್ಮ, ಕಂಠೀರವ ನರಸರಾಜನ ಪ್ರಧಾನ ಅಪ್ಪಾಜಯ್ಯನ ಮಗಳು. ಈತ ಶ್ರೀವೈಷ್ಣವ ಧರ್ಮಾನುಯಾಯಿ. ಸುಮಾರು ಕ್ರಿ. ಶ. ೧೬೪೫ ರಲ್ಲಿ ಶ್ರೀರಂಗಪಟ್ಟಣದಲ್ಲಿ ಜನಿಸಿ ಕ್ರಿ. ಶ. ೧೭೦೬ ರಲ್ಲಿ ಮೃತನಾದನೆಂದು ತಿಳಿದುಬರುತ್ತದೆ. ಚಿಕದೇವರಾಯನ ಸಮಕಾಲೀನ. ಈರ್ವರ ನಡುವೆ ತುಂಬ ಅನ್ಯೋನ್ಯತೆ ಇತ್ತು. ದೊರೆಯ ಆಸ್ಥಾನದಲ್ಲಿ ಪ್ರಧಾನ ಸ್ಥಾನಮಾನ ಈತನಿಗೆ ದೊರೆತದ್ದು ಸ್ವಾಭಾವಿಕವಾಗಿತ್ತು.

---

1. ಕರ್ನಾಟಕ–ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೯, ಪು.೧೧೯೪.

ತಿರುಮಲಾರ್ಯನ ತಂದೆ ಅಳಸಿಂಗರಾರ್ಯನು ಚಿಕ್ಕದೇವರಾಜನ ತಂದೆ ದೇವರಾಜನಿಗೆ ಬಹಳ ಆತ್ಮೀಯನಾಗಿದ್ದವನು, ಆಸ್ಥಾನದಲ್ಲಿ ಪುರಾಣಿಕ ಕೂಡ. ತಂದೆಯ ಬಗ್ಗೆ ತಿರುಮಲಾರ್ಯನಿಗಿದ್ದ ಭಕ್ತಿಗೌರವಗಳನ್ನು ಆತನ ಕೃತಿಗಳು ಬಿಂಬಿಸುತ್ತವೆ.

ಕನ್ನಡದ ಮೊತ್ತಮೊದಲ ನಾಟಕ 'ಮಿತ್ರವಿಂದಾ ಗೋವಿಂದ' ವನ್ನು ರಚಿಸಿದ ಸಿಂಗರಾರ್ಯ ತಿರುಮಲಾರ್ಯನ ತಮ್ಮ. ಅಣ್ಣನ ಬಗ್ಗೆ ಅವನಿಗೆ ತುಂಬ ಅಭಿಮಾನವಿತ್ತು. ತನ್ನ ಕೃತಿಯಲ್ಲಿ ಆತ "ಪಿರಿದುಂ.... ಕರಮೀ ಸಾಹಿತ್ಯದೊಳ್ ಚಿತ್ತರಿಪ್ಪೊಡೆ ರಸಮಂ ತಿರುಮಲಾರ್ಯರ್ಗೆ ಸಲ್ಲುಂ" ಎಂದು ವಿನಯಪೂರ್ವಕವಾಗಿ ಹೇಳಿಕೊಳ್ಳುತ್ತಾನೆ.[2] ದೇವಚಂದ್ರನು (೧೭೭೦-೧೮೪೧) ತನ್ನ 'ರಾಜಾವಳೀಕಥೆ'ಯಲ್ಲಿ ತಿರುಮಲಾರ್ಯನನ್ನು ವಿದ್ಯಾವಿಶಾರದನೆಂದು ಪ್ರಶಂಸಿಸಿದ್ದಾನೆ.

ತಿರುಮಲಾರ್ಯನು ಬಾಲ್ಯದಿಂದಲೂ ಚಿಕ್ಕದೇವರಾಜನೊಂದಿಗೆ ಆಡಿ ಬೆಳೆದ ಸಮಕಾಲೀನ. ತಂದೆಯೂ ಆಸ್ಥಾನ ವಿದ್ವಾಂಸರಾಗಿದ್ದುರಿಂದ ಅರಮನೆ ಚಿರಪರಿಚಿತವಾಗಿದ್ದುದು ಸಹಜವೇ. ಈತ "ಕೆಲವು ಕಾಲ, ಮಧುರೆಯ ನಾಯಕನ ಹೆಂಡತಿ ಮಂಗಮ್ಮನ ಬಳಿಯಲ್ಲಿಯೂ ಮಂತ್ರಿಯಾಗಿದ್ದಂತೆ ತಿಳಿಯುತ್ತದೆ" ಎಂದು ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ.[3] ಈತ ತಿರುಮಲಯ್ಯಂಗಾರ್ ಎಂದೂ ಪರಿಚಿತನಂತೆ. ಅರಸನ ವಿಶೇಷ ಪ್ರೀತಿಗೆ ಪಾತ್ರನಾಗಿದ್ದನೆಂಬುದು "ಅವನೊಲ್ಮೆ ಪುಮಾಕೃತಿವೆತ್ತವೊಲೆಸೆವ ಸುಕೃತಿ ತಿರುಮಲೆಯಾರ್ಯಂ" ಎಂಬ ಮಾತಿನಿಂದ ತಿಳಿಯುತ್ತದೆ.

'ಚಿಕದೇವರಾಜನ ಆಸ್ಥಾನದ ಬೃಹಸ್ಪತಿ'[4] ಎನಿಸಿದ ತಿರುಮಲಾರ್ಯ ರಾಜಮಾನ್ಯನೂ ಪಂಡಿತಮಾನ್ಯನೂ ಆಗಿದ್ದ. ಈತ "ಶ್ರೀವೈಷ್ಣವ ಮತಾನುಯಾಯಿ

---

2 ಉದ್ಧೃತ : ಎಚ್.ಎಸ್. ಹರಿಶಂಕರ್, ತಿರುಮಲಾರ್ಯ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು-೨೦೦೨, ಪು. ೨.

3. ಆರ್. ನರಸಿಂಹಾಚಾರ್ಯ : ಕರ್ಣಾಟಕ ಕವಿಚರಿತೆ, ದ್ವಿತೀಯ ಸಂಪುಟ (ತಿದ್ದಿದ ದ್ವಿತೀಯ ಮುದ್ರಣ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೩, ಪು. ೪೭೯.

4. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೫, ಚಾಮರಾಜನಗರ ೧೧, ಕ್ರಿ.ಶ. ೧೬೭೫. ಈ ಶಾಸನದ ಕರ್ತೃ ಕೂಡ ಈತನೇ.

ಯಾಗಿದ್ದರಿಂದ ದೊರೆಗೆ ಅದರಲ್ಲಿ ಆಸಕ್ತಿಯನ್ನು ಹುಟ್ಟಿಸಿ ಉಳಿದ ಅರಸು ಮನೆತನದವರನ್ನೂ ಶ್ರೀವೈಷ್ಣವಧರ್ಮಕ್ಕೆ ಮತಾಂತರ ಹೊಂದುವಂತೆ ರಾಜನ ಮೂಲಕ ಪ್ರೇರೇಪಿಸುತ್ತಾನೆ"[5] ಅದು ಸಫಲವಾಗುವುದಿಲ್ಲವಾದರೂ ಆತ ಬಿನ್ನವಿಸಿಕೊಂಡದ್ದು ಹೀಗೆ : "ಸ್ವಾಮಿಯವರ ನಾಮತೀರ್ಥದ ವೇಳೆಯಲ್ಲಿ ಪುರೋಹಿತರು ಮುಂತಾದ ಸ್ಮಾರ್ತ ವಿದ್ವಾಂಸರುಗಳೂ ಅರಮನೆಗೆ ನಾಮವನ್ನಿಟ್ಟುಕೊಂಡು ಬರಬೇಕೆಂಬುದಾಗಿಯೂ, ಹದಿಮೂರು ಮನೆತನದ ಅರಸುಗಳು ನಾಳೆ ಪ್ರಥಮೈಕಾದಶೀ ದಿವಸ ಸ್ವಾಮಿಯವರ ಆಚಾರ್ಯರ ಕಡೆಯಿಂದಲೇ ಚಕ್ರಾಂಕನ, ಊರ್ಧ್ವಪುಂಡ್ರಧಾರಣ, ದಾಸನಾಮ, ಮೂಲಮಂತ್ರೋಪಾಸನೆ, ನಾರಾಯಣಪೂಜೆ ಎಂಬ ಪಂಚಸಂಸ್ಕಾರಗಳನ್ನೂ ಹೊಂದಿ ಅನ್ಯದೇವತಾ ಪೂಜೆಯನ್ನು ಮಾಡದೆ ವೈಷ್ಣವದೀಕ್ಷೆಯನ್ನಂಗೀಕರಿಸಿದವರೇ ಸ್ವಾಮಿಯವರ ಬಂಧುತ್ವಕ್ಕೆ ಯೋಗ್ಯರು, ಹಾಗಿಲ್ಲದವರು ಬಂಧುಗಳಾಗತಕ್ಕವರಲ್ಲ ಎಂಬುದಾಗಿಯೂ ಸ್ವಾಮಿಯವರ ಸೇವೆಯನ್ನು ಮಾಡುವ ಊಳಿಗದವರಲ್ಲಿ ಕೆಲವರು ಚಕ್ರಾಂಕನವನ್ನು ಮಾಡಿಸಿಕೊಳ್ಳುವಂತೆಯೂ ಅಪ್ಪಣೆ ಆಗಬೇಕು."[6] ಒಟ್ಟಿನಲ್ಲಿ ಹೇಳುವುದಾದರೆ ಚಿಕ್ಕದೇವರಾಜನ ಆಸ್ಥಾನದಲ್ಲಿ ತಿರುಮಲಾರ್ಯ ತುಂಬ ಪ್ರಭಾವಶಾಲಿಯಾಗಿದ್ದ.[7]

ಸಂಸ್ಕೃತ ಕೃತಿಗಳು

ತಿರುಮಲಾರ್ಯನಿಗೆ ಸಂಸ್ಕೃತಭಾಷೆಯಲ್ಲಿ ಪಾಂಡಿತ್ಯವಿತ್ತು. ವಿಶೇಷವಾಗಿ ಸ್ತೋತ್ರ ಸಾಹಿತ್ಯಕ್ಕೆ ಆತನ ಕೊಡುಗೆ ಗಮನೀಯ. ಆತ ರಚಿಸಿದ 'ಶ್ರೀಯದುಗಿರಿ ನಾರಾಯಣಸ್ತವ'ದಲ್ಲಿ ಮೇಲುಕೋಟೆಯ ಚೆಲುವನಾರಾಯಣನನ್ನು ಕುರಿತು ಎಪ್ಪತ್ತೊಂಬತ್ತು ಸ್ತುತಿಪದ್ಯಗಳಿವೆ. ಇಪ್ಪತ್ನಾಲ್ಕು ಪದ್ಯಗಳಲ್ಲಿ

---

5. ಎಚ್. ಎಸ್. ಹರಿಶಂಕರ್ : ಪೂರ್ವೋಕ್ತ, ಪು. ೨.

6. ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ ೧, ೧೯೧೬, ಪು. ೧೩೨. ಇದರ "ಎಲ್ಲರೂ ಪೂರ್ವ ಸಂಪ್ರದಾಯದ ಮೇರೆಗೆ ನಡೆದುಕೊಳ್ಳುವಂತೆ" ಮತ್ತೆ ಆದೇಶ ನೀಡಲಾಯಿತು. ಅದೇ ಪು. ೧೩೬.

7. 'ಗೀತಗೋಪಾಲ'ದಲ್ಲಿ (ಪುಟ.೫೦) 'ಕರ್ಮದ ಬೆಡಗಿಂಬ ಕಳೆಯಿರೊ ನಿಮ್ಮ । ದುರ್ಮತಿ ಧೂಳಿಯ ತೊಳೆಯಿರೊ ಹಿಗೆ ॥ ನಿರ್ಮಲ ಚಿತ್ತದಿ ನೇಮಪಿಡಿದು ನಮ್ಮ । ತಿರ್ಮಲಾರ್ಯರಂತೆ ಸ್ಥಿರವಾಗಿ ಬಾಳಿರೋ' ಎಂದು ತಿರುಮಲಾರ್ಯನ ಸ್ತುತಿ ಇದೆ. ಎಚ್.ಎಸ್. ಹರಿಶಂಕರ್, ಪೂರ್ವೋಕ್ತ, ಪು. ೩, ಅಡಿ ಟಿಪ್ಪಣಿ ೨.

ಅಲ್ಲಿನ ದೇವಿಯನ್ನು ಸ್ತುತಿಸಿರುವುದು 'ಶ್ರೀಯದುಗಿರಿನಾಯಕಿಸ್ತವ' ದಲ್ಲಿದೆ. ಶ್ರೀರಂಗಪಟ್ಟಣದ ಲಕ್ಷ್ಮೀನರಸಿಂಹಸ್ವಾಮಿಯನ್ನು ಸ್ತುತಿಸುವ ಇಪ್ಪತ್ತೊಂರು ಪದ್ಯಗಳು 'ಶ್ರೀ ಲಕ್ಷ್ಮೀನರಸಿಂಹಸ್ತವ'ದಲ್ಲಿದ್ದರೆ, ಇಪ್ಪತ್ತೈದು ಪ್ರಾರ್ಥನಾ ಪದ್ಯಗಳಿರುವ 'ಶ್ರೀ ಮಂಜುಲಕೇಶವಸ್ತವ'ವು ನಾಗಮಂಗಲದ ಸೌಮ್ಯ ಕೇಶವನನ್ನು ಕುರಿತದ್ದಾಗಿದೆ. ಹರದನಹಳ್ಳಿಯ ಅಪ್ರತಿಮರಾಜಗೋಪಾಲಸ್ವಾಮಿ ಚಿಕ್ಕದೇವರಾಜನ ಆರಾಧ್ಯದೈವ. ತಿರುಮಲಾರ್ಯ ರಚಿಸಿದ ಹದಿನೆಂಟು ಪದ್ಯಗಳಿಂದ ಕೂಡಿದ ಕೃತಿ 'ಶ್ರೀ ಅಪ್ರತಿಮ ರಾಜಗೋಪಾಲಸ್ತವ'. ಹಾಗೆಯೇ ಗೋಪಾಲನನ್ನು ಕುರಿತ 'ಶ್ರೀ ಗೋಪಾಲಸ್ತವ'ದಲ್ಲಿ ಆತ ರಚಿಸಿದ ಮೂವತ್ತೆರಡು ಪದ್ಯಗಳಿವೆ. ಕುಂಡಿಣೀ ನದೀತೀರದ (ಈಗಿನ ಗುಂಡ್ಲುಪೇಟೆಯ) ಪರವಾಸುದೇವರನ್ನು ಸ್ತುತಿಸುವ ಎಪ್ಪತ್ತು ಪದ್ಯಗಳ ರಚನೆ 'ಶ್ರೀಪರವಾಸುದೇವಸ್ತವ'. "ಶ್ರೀವೈಷ್ಣವ ಭಕ್ತಿಸಾಹಿತ್ಯದ ಚಿಕುಪಾಧ್ಯಾಯನ ಸಾಂಗತ್ಯಗಳಂತೆ ಈತನ ಸ್ತೋತ್ರಗಳು ಪ್ರಮುಖವಾದ ಸ್ಥಾನವನ್ನಲಂಕರಿಸುತ್ತವೆ"[8] ಎಂದು ಹೇಳಿರುವುದು ಯುಕ್ತವೆನಿಸುತ್ತದೆ. ತಿರುಮಲಾರ್ಯನ 'ಚಿಕದೇವರಾಜ ವಿಜಯ'ದಲ್ಲಿ 'ಶ್ರೀ ಪರವಾಸುದೇವಸ್ತವ'ದಲ್ಲಿನ ಹನ್ನೆರಡು ಪದ್ಯಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ತಿರುಮಲಾರ್ಯ ಸಂಸ್ಕೃತದಲ್ಲಿ ರಚಿಸಿದ ಇನ್ನಿತರ ಕೃತಿಗಳೆಂದರೆ 'ಶ್ರೀ ಪಶ್ಚಿಮರಂಗನಾಥಸ್ತವ' ಹಾಗೂ 'ಏಕಾದಶೀ ನಿರ್ಣಯ'.

ತಿರುಮಲಾರ್ಯನ ಮನೆ ಮಾತು ತಮಿಳಾಗಿದ್ದುದರಿಂದ ಆತ ಬಹುಮಟ್ಟಿಗೆ ತ್ರಿಭಾಷಾಪಂಡಿತನಾಗಿದ್ದಿರಬೇಕು. ಚಿಕ್ಕದೇವರಾಜನ ಹೆಸರಿನಲ್ಲಿರುವ ಕೆಲವು ಕೃತಿಗಳು ಈತನ ರಚನೆಗಳೆಂದೇ ತೋರುತ್ತದೆ.

ಚಿಕ್ಕದೇವರಾಜನ ಆಳ್ವಿಕೆಗೆ ಸೇರಿದ ಎರಡು ತಾಮ್ರಶಾಸನಗಳು ಈತನ ರಚನೆಗಳು.[9] ಈ ಕಾಲದ ಇನ್ನು ಕೆಲವು ಶಾಸನಗಳಲ್ಲಿ ಕೂಡ ಈತನ ಕೈವಾಡವನ್ನು ನಿಚ್ಚಳವಾಗಿ ಗುರುತಿಸಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕನ್ನಡ ಕೃತಿಗಳು

ತಿರುಮಲಾರ್ಯನ ಕನ್ನಡ ಕೃತಿಗಳಲ್ಲಿ ಮೂರು–ಚಿಕದೇವರಾಜ ವಿಜಯ, ಅಪ್ರತಿಮವೀರಚರಿತ ಹಾಗೂ ಚಿಕದೇವರಾಜವಂಶಾವಳಿ–ಉಪಲಬ್ಧವಾಗಿವೆ.

---

8. ಉದ್ಧೃತ, ಅದೇ, ಪು.೧೧೪, Hayavadana Rao, History of Mysore, p.428.

9. ಎಪಿಗ್ರಾಫಿಯ ಕರ್ನಾಟಕ ಪರಿಷ್ಕೃತ ಸಂಪುಟ ೫, ಮೈಸೂರು–೧೦೪, ಕಾಲ ೧೭–೦೩–೧೬೬೭, ಭಾನುವಾರ ಹಾಗೂ ಪರಿಷ್ಕೃತ ಸಂಪುಟ ೪, ಚಾಮರಾಜನಗರ–೧೧, ಕಾಲ ೨೫–೧೧–೧೬೭೫ ಗುರುವಾರ.

ಇವುಗಳಲ್ಲಿ ಅಪ್ರತಿಮ ವೀರಚರಿತೆಯು ಒಂದು ಅಲಂಕಾರ ಗ್ರಂಥ. ಇದಕ್ಕೆ ಚಂದ್ರಾಲೋಕ, ಕಾವ್ಯಪ್ರಕಾಶ ಹಾಗೂ ಮುಖ್ಯವಾಗಿ ಕುವಲಯಾನಂದ ಕೃತಿಗಳು ಆಧಾರಗ್ರಂಥಗಳಾಗಿವೆ. ಈ ಕೃತಿಯಲ್ಲಿ ನಾಲ್ಕು ಪ್ರಕರಣಗಳಿವೆ. ಮೊದಲನೆಯ ಪ್ರಕರಣದಲ್ಲಿ ಕಾವ್ಯಲಕ್ಷಣ, ಶಬ್ದಗುಣ ಅರ್ಥಗುಣಗಳನ್ನೂ, ಎರಡನೆಯದರಲ್ಲಿ ರೀತಿ, ಶಯ್ಯೆ, ಪಾಕ, ವೃತ್ತಿ, ಅನುಪ್ರಾಸಾದಿ ಶಬ್ದಾಲಂಕಾರಗಳನ್ನೂ, ಮೂರನೆಯದರಲ್ಲಿ ಉಪಮೆ ಮುಂತಾದ ಅರ್ಥಾಲಂಕಾರಗಳನ್ನೂ, ಕೊನೆಯದರಲ್ಲಿ ರಸಾಲಂಕಾರಗಳನ್ನೂ, ತಿಳಿಸಿದೆ. ದೊರೆಯ ಆದೇಶದ ಮೇರೆಗೆ ರಚಿತವಾದ ಈ ಕೃತಿಯಲ್ಲಿ ಉದಾಹರಣಾ ಪದ್ಯಗಳೆಲ್ಲವೂ ಚಿಕ್ಕದೇವರಾಜರನ್ನು ಸ್ತುತಿಸುವ, ಕವಿಯ ಸ್ವರಚನೆಗಳೇ ಆಗಿರುವುದು ವಿಶೇಷ. "ಲಕ್ಷ್ಯಪದ್ಯಗಳಲ್ಲಿಯ ವಿಷಯೈಕ್ಯದ ನಿರ್ಬಂಧದ ಮೂಲಕ ಕೆಲವು ಸಲ ಸಮರ್ಪಕವೂ ಸ್ಪಷ್ಟವೂ ಆಗಿರುವುದಿಲ್ಲ. ಅಭ್ಯಾಸಿಗಳಿಗೆ ಸುಕರವೂ ಆಗಿಲ್ಲ. ಆದರೆ ಇತಿಹಾಸಕಾವ್ಯದ ಮೇಲ್ಮೆ ಮಾತ್ರ ಅವುಗಳಲ್ಲಿ ಎದ್ದುಕಾಣುತ್ತದೆ" ಎಂದು ರಂ. ಶ್ರೀ. ಮುಗಳಿಯವರು ಅಭಿಪ್ರಾಯಪಡುತ್ತಾರೆ.[10]

'ಚಿಕದೇವರಾಜ ವಿಜಯ'ವು ಈ ಯುಗಕ್ಕೆ ಅತ್ಯಪರೂಪವಾಗಿದ್ದ ಚಂಪೂ ಕಾವ್ಯ. ಆದರೆ ಅಪೂರ್ಣ ಕೃತಿ. ವರ್ಣವೃತ್ತಗಳಲ್ಲದೆ, ತ್ರಿಪದಿ, ಸಾಂಗತ್ಯ, ಹಾಡುಗಳನ್ನು ಬಳಸಿಕೊಂಡಿರುವ ಈ ಕೃತಿಯು ಕಾವ್ಯಮಯವಾಗಿ ಮೈಸೂರು ಅರಸರ ಪೂರ್ವೇತಿಹಾಸವನ್ನು ಬಣ್ಣಿಸುತ್ತದೆ. ದೊರೆಯ ಬಾಲ್ಯ, ವಿದ್ಯಾಭ್ಯಾಸ, ಸಂಗೀತಪರಿಣತಿ ಮುಂತಾದವು ರಸಭರಿತವಾಗಿ ಮೂಡಿಬಂದಿವೆ. ಆದರೆ ಚಿಕ್ಕದೇವರಾಜನ ರಾಜ್ಯಭಾರದ ಕ್ರಮ, ಯುದ್ಧ, ಸಾಹಸ ಇತ್ಯಾದಿಗಳ ವಿವರಗಳಿಲ್ಲ. ಸಂಗೀತ ಮತ್ತು ಪ್ರಕೃತಿಗಳನ್ನು ಕುರಿತ ವರ್ಣನೆಗಳು ಮನಸೆಳೆಯುತ್ತವೆ. ಒಟ್ಟಾರೆಯಾಗಿ ರಂ. ಶ್ರೀ. ಮುಗಳಿ ಹೇಳುವಂತೆ "ಪುನರುಜ್ಜೀವನಹೊಂದಿದ ಚಂಪೂಶೈಲಿಯ ಬಿಗುವಿಗೂ ಕನ್ನಡ ಸಂಸ್ಕೃತಗಳ ಸೇರುವೆಯ ಮಿದುವಿಗೂ ಈ ಕೃತಿಯನ್ನು ನೋಡಬೇಕು".[11] ಆದರೆ "ಇತಿಹಾಸವನ್ನು ಕಾವ್ಯಮಯವಾಗಿ ವರ್ಣಿಸುವ ಗ್ರಂಥ ಇದಾದ್ದರಿಂದ, ಅನೇಕ ಸರ್ತಿ ಇತಿಹಾಸಕ್ಕೆ ನ್ಯಾಯಸಿಕ್ಕದೆ ಹೋಗುವ ಸಂಭವವಿರುತ್ತದೆ". ಈ ಗದ್ಯ ಕಾವ್ಯ ಕವಿಯ ಅತಿಶಯಭಕ್ತಿ ಗೌರವಗಳ ಪ್ರತೀಕ.[12]

---

10. ಕನ್ನಡ ಸಾಹಿತ್ಯ ಚರಿತ್ರೆ, ಪರಿಷ್ಕೃತ ಒಂಬತ್ತನೆಯ ಸಂಸ್ಕರಣ, ೧೯೯೩, ಪು. ೩೨೩

11. ಅದೇ.

12. ಡಾ. ರಾಗೌ: ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು, ಚಿತ್ರಕೂಟ, ಮೈಸೂರು, ೧೯೯೨, ಪು.೩೨೫-೨೬

ಸೋತ ಪಾಳೆಯಗಾರರ ಪಡೆ ಮತ್ತೆ ವ್ಯರ್ಥಪ್ರಯತ್ನ ಮಾಡಿತು. ಹದಿನಾಡ ನಂಜರಾಜ ತಲೆಕಳೆದುಕೊಂಡ. ತನ್ನ ದಿಗ್ವಿಜಯಗಳನ್ನು ಪೂರ್ಣಗೊಳಿಸಿದ ರಾಜನೃಪನು ನರಸರಾಜನ ಮಗ ಚಾಮರಾಜನಿಗೆ ಪಟ್ಟಕಟ್ಟಿ ಉಳಿದೆಲ್ಲ ರಾಜಕುಟುಂಬದವರು ಆತನನ್ನು ಬೆಂಬಲಿಸುವಂತೆ ಆದೇಶಿಸಿದನು. ರಾಜನೃಪನು ಮರಣಹೊಂದಿದಾಗ ಆತನ ಅಂತ್ಯಸಂಸ್ಕಾರವಾದ ಮೇಲೆ ಬೆಟ್ಟದ ಚಾಮರಾಜ ಮತ್ತು ದೇವರಾಜರು ತಮ್ಮ ಆಡಳಿತಾಧಿಕಾರವನ್ನು ಚಾಮರಾಜನಿಗೆ ನೀಡಿ ಪುಣ್ಯಕ್ಷೇತ್ರದರ್ಶನಕ್ಕೆ ಹೊರಟರು.

ಚಾಮರಾಜನ ಚರಿತ್ರೆ ಮುಂದುವರಿಯುತ್ತದೆ. ತಲಕಾಡಿನ ಪ್ರಭುವಿಗೆ ಸೇರಿದ್ದ ಮಳವಳ್ಳಿಗೆ ಮುತ್ತಿಗೆ ಹಾಕಿದ ಈತ ಎದುರಿಸಲು ಬಂದ ಜಗದೇವರಾಯನ ಪಡೆಯನ್ನೋಡಿಸಿದ. ತಲಕಾಡನ್ನು ಆಕ್ರಮಿಸಿಕೊಳ್ಳುವಾಗ ಎದುರಾದ ಘಟ್ಟಿ ಮುದಲಿಯಾರನನ್ನು ಸೋಲಿಸಿ ಕಪ್ಪಕಾಣಿಕೆಯನ್ನು ವಸೂಲಿಮಾಡಿದ. ಪಶ್ಚಿಮದಲ್ಲಿ ಪಿರಿಯಾಪಟ್ಟಣದ ಅಧಿಪನನ್ನು ಮತ್ತು ಅವನ ಸಹಾಯಕ್ಕೆ ಬಂದ ಸಿಂಗಳರಾಯನನ್ನು ಸೋಲಿಸಿದ. ಹೀಗೆಯೇ ಬೆಳ್ಳೂರು, ನರಸಿಂಹಪುರ, ಬೇಲೂರು, ಎಲೆಯೂರು ಪ್ರಭುಗಳನ್ನೂ ಅಂಕುಶರಾಯನನ್ನೂ ಪರಾಭವಗೊಳಿಸಿದ. ಇಕ್ಕೇರಿ, ಬಾಣಾವರ, ಬಸವಾಪಟ್ಟಣ ದೊರೆಗಳೊಡನೆ ಮೈತ್ರಿಯನ್ನು ಹೊಂದಿದ್ದ.

ಚಾಮರಾಜನ ತರುವಾಯ ಪಟ್ಟಕ್ಕೆ ಬಂದವನು ರಾಜನೃಪನ ಮಗನಾದ ಇಮ್ಮಡಿ ರಾಜರಸ. ಈತನನ್ನು ಹೊಗಳಿದರೂ, ಈತನ ವಿಜಯಗಳ ಪ್ರಸ್ತಾಪವಿಲ್ಲ. ಇವನ ಅನಂತರ ಪಟ್ಟಕ್ಕೆ ಬಂದವನು ಬೆಟ್ಟದ ಚಾಮರಾಜನ ಮಗನಾದ ಕಂಠೀರವ ನರಸರಾಜ.

ಬಸವಾಪಟ್ಟಣದ ಕೆಂಗೆ ಹನುಮಪ್ಪನಾಯಕ ಮತ್ತು ಇಕ್ಕೇರಿಯ ವೀರಭದ್ರನಾಯಕರ ನಡುವೆ ದ್ವೇಷವಿತ್ತು. ಬಸವಾಪಟ್ಟಣದ ಪ್ರಭುವು ಬಿಜಾಪುರದ ಸುಲ್ತಾನನ್ನು ಪ್ರೇರೇಪಿಸಿದ. ಆತನ ಸೇನಾಪತಿ ರಣದುಲ್ಲಾಖಾನನ ಸೈನ್ಯವು ಇಕ್ಕೇರಿಯನ್ನು ಸೋಲಿಸಿತು. ಗೆಲುವಿನಿಂದ ಮತ್ತೇರಿದ ರಣದುಲ್ಲಾಖಾನ್ ಸೀರ್ಯದ ದೊರೆಯನ್ನು ಕೈಸೆರೆಗೊಂಡು ಬೆಂಗಳೂರನ್ನು ಭಂಗಗೊಳಿಸಿದ. ಬೇಡವೆಂದರೂ ಕೇಳದೆ ಶ್ರೀರಂಗಪಟ್ಟಣವನ್ನು ಮುತ್ತಿದ ರಣದುಲ್ಲಾಖಾನ್ ಸೋಲೊಪ್ಪಿಕೊಳ್ಳಬೇಕಾಯಿತು. ಕಂಠೀರವನು ತುರುಕಸೈನ್ಯವನ್ನು ಸೋಲಿಸಿದ ನಂತರ ಮುಂದೆ ರಾಯದುರ್ಗ, ರಾಮಗಿರಿ, ವೀರಭದ್ರದುರ್ಗ, ಕೆಂಗೇರಿ ಮುಂತಾದ ಸ್ಥಳಗಳನ್ನು ವಶಪಡಿಸಿಕೊಂಡ. ಮಧುರೆಯ ನಾಯಕನನ್ನು ಗೆದ್ದು ಕೊಳೆಯ, ಸಾಂಬಳ್ಳಿ, ಸತ್ತ್ಯಮಂಗಲ, ದಣಾಯಕನಕೋಟೆಗಳನ್ನೂ, ಬಿಜಾಪುರ ಸುಲ್ತಾನನಿಂದ ಕಲ್ಲೂರು, ತುಯಿಗೆರೆ, ಹೆಬ್ಬೂರು, ಕಡಬಗಳನ್ನೂ ವಶಪಡಿಸಿಕೊಂಡ. ಈರೀತಿ ಕಂಠೀರವನು ತನ್ನ ರಾಜ್ಯವನ್ನು ವಿಸ್ತರಿಸಿದ.

ಕಂಠೀರವ ನರಸರಾಜನ ತರುವಾಯ ದೊಡ್ಡದೇವರಾಜ ಅಧಿಕಾರಕ್ಕೆ ಬಂದ. ಆದರೆ ಕವಿಯು ಆತನ ಸಾಧನೆಗಳನ್ನೇನೂ ವಿವರಿಸಲು ಹೋಗದೆ ಸುಮ್ಮನೆ ಆತನ ಗುಣಗಾನ ಮಾಡುತ್ತಾನಷ್ಟೇ. ಅವನ ತರುವಾಯ ಪಟ್ಟ ದಕ್ಕಿದ್ದು ಅವನ ತಮ್ಮ ದೇವರಾಜನಿಗೆ. ದೇವರಾಜನಿಗೆ ನಾಲ್ಕು ಜನ ಮಕ್ಕಳು. ಇವರಲ್ಲಿ ಒಬ್ಬನಾದ ದೊಡ್ಡದೇವರಾಜನ ಸಾಧನೆಗಳನ್ನು ಕವಿ ಬಣ್ಣಿಸುತ್ತಾನೆ. ಇತಿಹಾಸದ ಅಂಶಗಳು ಕಡಿಮೆ. ಆಳಸಿಂಗರಾರ್ಯ, ಶ್ರೀವೈಷ್ಣವ ಮತಧರ್ಮದ ವಿಷಯವಾಗಿ ತುಂಬ ವರ್ಣನೆಗಳಿವೆ. ಶ್ರೀಕೃಷ್ಣನ ಬಾಲಲೀಲೆ, ದೊಡ್ಡದೇವರಾಜನ ಪೂಜೆ, ಮಾನಸಾರಾಧನ ಪ್ರಕಾರ, ಭಗವದ್ಗೀತೆಯ ಸಾರ, ಯಾದವಾಚಲ, ಮೇಲುಕೋಟೆ ಮತ್ತು ಅಲ್ಲಿಯ ಶ್ರೀವೈಷ್ಣವರ ವರ್ಣನೆ, ದೇವಾಲಯ ಮತ್ತು ದೇವರುಗಳ ವರ್ಣನೆ– ಇತ್ಯಾದಿ ಪ್ರಸ್ತುತ ಕಾವ್ಯಕ್ಕೆ ಸಂಗತವಲ್ಲದ ವರ್ಣನೆಗಳು ತುಂಬಿತುಳುಕಿವೆ. ಚಿಕದೇವರಾಯನ ಜನನ, ಅವನಲ್ಲಿ ಗೋಚರವಾದ ಚಕ್ರವರ್ತಿ ಲಕ್ಷಣ, ಅವನ ಬಾಲಲೀಲೆ, ಪಾಂಡಿತ್ಯ, ವೀಣಾ ಪರಿಣತಿ ಇತ್ಯಾದಿ ವಿವರಗಳಿವೆ. ಯುವರಾಜ ಚಿಕದೇವರಾಜನ ವಿಜಯಯಾತ್ರೆಯ ವಿವರಗಳು ಹಠಾತ್ ನಿಂತುಹೋಗುತ್ತವೆ. ಈ ಭಾಗದಲ್ಲಿ ಇಕ್ಕೇರಿಯ ಶಿವಪ್ಪನಾಯಕನು ವೀರಭದ್ರನಾಯಕನನ್ನು ಕೊಂದು ತಾನೇ ಪಟ್ಟಕ್ಕೆ ಬಂದ ಸನ್ನಿವೇಶದ ಉಲ್ಲೇಖವಿದೆ. ಆತ ಕಳುಹಿಸಿದ ಉಡುಗೊರೆಗಳನ್ನು ಮೈಸೂರು ದೊರೆ ನಿರಾಕರಿಸುತ್ತಾನೆ.

ಪರಿಷ್ಕರಣ ವಿಚಾರ

ಚಿಕದೇವರಾಯವಂಶಾವಳಿ ಹಳಗನ್ನಡದಲ್ಲಿ ರಚಿತವಾಗಿರುವ ಗದ್ಯಕೃತಿ. ದುರ್ದೈವವಶಾತ್ ಇದು ಕೂಡ ಹಠಾತ್ತನೆ ನಿಂತುಹೋಗುತ್ತದೆ. ಈ ಕೃತಿಯನ್ನು ಮಂ. ಆ. ರಾಮಾನುಜಯ್ಯಂಗಾರ್ಯರು ಸಂಪಾದಿಸಿ ಮೊದಲು ಪ್ರಕಟಿಸಿದರು.[14] ಈ ಕೃತಿಯನ್ನೇ ಇಲ್ಲಿಯೂ ಪ್ರಮುಖ ಆಕರಗಳಲ್ಲಿ ಒಂದಾಗಿ ಸ್ವೀಕರಿಸಲಾಗಿದೆ.

---

14. ಮೊದಲು ೧೮೯೫ ರಲ್ಲಿ ಪ್ರಕಟವಾಯಿತು. ೧೯೩೩ ರಲ್ಲಿ ಮೈಸೂರಿನ ಜಿ.ಟಿ.ಎ. ಪ್ರೆಸ್ಸಿನಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿರುವ 'ತಿರುಮಲೆಯಾರ್ಯ ಮಹಾಕವಿ ಪ್ರಣೀತಂ ಚಿಕದೇವರಾಯ ವಂಶಾವಳಿ ಎಂಬ ಗದ್ಯಕಾವ್ಯಂ' ಲಭ್ಯವಿದ್ದು, ಅದನ್ನು ಗಮನಿಸಿದೆ. ಸಂಪಾದಕರು ಕೊನೆಯಲ್ಲಿ "ಈ ಕಥೆ ಮುಗಿದಿಲ್ಲವೆಂದು ತೋರುತ್ತದೆ. ನಮಗೆ ದೊರೆತ ಮಾತೃಕೆಗಳಲ್ಲಿ ಗ್ರಂಥವು ಇಷ್ಟೇ ಇದೆ" ಎಂಬ ಟಿಪ್ಪಣಿ ಇದೆ. ಅವರಿಗೆ ಎಷ್ಟು ಮಾತೃಕೆಗಳು ಲಭ್ಯವಾಗಿದ್ದವು ಹಾಗೂ ಸಂಪಾದನೆಯ ವಿಧಿವಿಧಾನಗಳು ಯಾವುವು ಎಂಬುದು ತಿಳಿಯುವುದಿಲ್ಲ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ವಿಭಾಗದಲ್ಲಿ 'ಚಿಕದೇವರಾಯ ವಂಶಾವಳಿಯ ನಾಲ್ಕು ಹಸ್ತಪ್ರತಿಗಳಿವೆ :[15] ಇವುಗಳ ಕಾಲ ೧೬೮೦ ಎಂದು ಸೂಚಿಸಿದೆ.

೧. ಸಂಖ್ಯೆ ೪೯೮ : ಕೆ. ೧೧೨ ೧೭. ೧"x ೧.೪". ೪೪–೧೧೪ ಪತ್ರ, ಆರುಪಂಕ್ತಿಗಳು. ೬೦ ಅಕ್ಷರ ಪಂಕ್ತಿಗೆ.

ಆದಿ : ನಟ್ಟನಡುವೆ ನೆಟ್ಟ ಪೊಂಗಳೆಯೊಳ್ ಕಟ್ಟಿದ ಕಾರ್ಗೋಡಗಗದ ಸರಪಣಿಯ ಕೀಲಂ ಕಳಲ್ದಿ ಪೆಡತಲೆ ಪಿಡಿರ್ದ ನೆಳದೊಯ್ದಾರು ಮರಿಯಾದಂ ತೋಳು ......

ಅಂತ್ಯ : ದ್ರೋಹಮನೆಣಿಸಿಯವನಂ .... ಶ್ರೀರಂಗನಾಯನೆನಿಸುವಂ ತನ್ನ ಬೇಲೂರ್ ಚಂದ್ರಗಿರಿ ಮುಂತಾದ ಕೋಂಟೆ ದುರ್ಗಂಗಳ್ತುರುಕರ್ಗೆ ಸೂರೆಕೊಟ್ಟು

ವಿಷಯ : ಚಿಕದೇವರಾಜನ ವಂಶ ವಿಚಾರ

ವಿಶೇಷ : ಅಸಮಗ್ರ ಪ್ರತಿ. ಗ್ರಂಥಲಿಪಿ. ಕೆಲವು ಪತ್ರಗಳ ಅಂಚು ಮುರಿದಿದೆ.

೨. ಸಂಖ್ಯೆ ೪೯೯ : ಕೆ. ೧೩.೭. ೧೩.೭"x ೧.೨". ೧–೧೩೦ ಪತ್ರ ನಾಲ್ಕು ಪಂಕ್ತಿಗಳು ; ಪಂಕ್ತಿಗೆ ೪೪ ಅಕ್ಷರಗಳು

ಆದಿ : ಶ್ರೀಮತೇರಾಮಾನುಜಾಯ ನಮಃ । ಶ್ರೀಶೈಲಾರ್ಯಗುರವೇ ನಮಃ ॥ ಸ್ವಸ್ತಿ ಸಮಸ್ತ ಭೂಮಂಡಲ ಪುಂಡರೀಕಕರ್ಣಿಕಾಯಮಾನಕನಕಾಚಲ.....

ಅಂತ್ಯ : ಪೆಣ್ಬುಲ್ಲೆಗಳುಮಂ ಕನ್ನೋಳಿಸಿ .... ಸಂಗ್ರಹಿಸಿ ವೆಡೆಯೊಳಮುಳಿಯ ದಂತುಪಾದ್ಯ ....

ವಿಷಯ : ಮೈಸೂರು ರಾಜರ ವಂಶಾವಳಿ

ವಿಶೇಷ : ಗ್ರಂಥವು ಬಹಳ ಶಿಥಿಲ. ಕೆಲವು ಗರಿಗಳು ಮುರಿದಿವೆ. ಶಕಟರೇಫದ ಪ್ರಯೋಗವಿದೆ.

---

15. ನೋಡಿ : ಮೈಸೂರು ಪ್ರಾಚ್ಯ ವಿದ್ಯಾಸಂಶೋಧನಾಲಯದ 'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ' ಪ್ರಧಾನ ಸಂಪಾದಕರು : ಹೆಚ್. ದೇವಿರಪ್ಪ, ೧೯೬೨, ದ್ವಿತೀಯ ಸಂಪುಟ, ಪು. ೧ ಮತ್ತು ೨ ಹಾಗೂ ಜಿ.ಎಸ್. ಸಣ್ಣಯ್ಯ, ಆರನೆಯ ಸಂಪುಟ, ೧೯೮೦ ಪು. ೪೯ ಮತ್ತು ೫೦. ಈ ನಾಲ್ಕೂ ಹಸ್ತಪ್ರತಿಗಳಿಗೆ ೧೬೮೦ರ ಕಾಲವನ್ನು ಸೂಚಿಸಿದೆ.

೩. ಸಂಖ್ಯೆ ೫೭ ; ಕೆ. ೮೪೩. ೮.೭"x ೧.೬". ೧೧೭ ಪತ್ರ ಐದು ಪಂಕ್ತಿಗಳು : ಕೆಲವೆಡೆ ಆರುಪಂಕ್ತಿಗಳು ; ಪಂಕ್ತಿಗೆ ೨೭ ಅಕ್ಷರ. ಗರಿ ಸಂಖ್ಯೆಯನ್ನು ನಮೂದಿಸಿರುವುದುಂಟು.

ಆದಿ : ...... ಣ ಗುಣಂಗಳುಮಂ । ಯಿಾ ಜಗಮೆಲ್ಲ ಮುವುವಸೊಡವೆಯು ....

ಅಂತ್ಯ : ..... ಸಿಯತ್ತಣಿಂದೆತ್ತಳ್ದೆತ್ತಲು ಪಂದುಯತ್ತಲುಂ .... ಸಿಕ್ಕಿದ ತುಳುವ ಕೊಂಕಣ ಕೊಡಗು ಮಲೆಯಾಳಂಗಳ ದಳಮುಮಂ ಕೊಂಡು .... ಬಲಮಂ

ವಿಷಯ : ಚಿಕ್ಕದೇವರಾಜನ ವಂಶವಿಚಾರ

ವಿಶೇಷ : ಅಸಮಗ್ರ. ಶಕಟರೇಫದ ಪ್ರಯೋಗವಿದೆ. ಶಿಥಿಲ ಪ್ರತಿ. ಕೆಲವು ಗರಿಗಳು ಮುರಿದಿವೆ. ಅಕ್ಷರಗಳು ಸುಂದರವಾಗಿವೆ.

೪. ಸಂಖ್ಯೆ ೫೮ ; ಕೆ. ೯೪೦. ೧೭ ೨"x ೧. ೩" ೨–೧೩೭ ಪತ್ರ ಐದು ಪಂಕ್ತಿಗಳು ; ಪಂಕ್ತಿಗೆ ೬೦ ಅಕ್ಷರಗಳು.

ಆದಿ : ..... ತ್ತಿರೆ ಯಿತ್ತಲೀ ರಾಮರಾಜಂ ಕೆಲವುಂ ಕಾಲಕ್ಕೆ ಧರ್ಮಮ ನೆಯ್ದಿದ

ಅಂತ್ಯ : ಚಿಂತನಕಲ್ಪದ್ರುಗಿರಿ ನಿಡುಗಲ್ಲುಂತಾದ........ ಚಿಕದೇವರಾಜರ ವಂಶಪ್ರಭಾವ ಯಾದವಗಿರಿಮಾಹಾತ್ಮ್ಯಕ್ಕೆ ಸಹಾ ಪದನು ೧೦೦೦ಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ

ವಿಷಯ : ಚಿಕ್ಕದೇವರಾಜ ಮತ್ತು ಆತನ ಪೂರ್ವಜರ ಚರಿತ್ರೆ

ವಿಶೇಷ : ಅಕ್ಷರಗಳು ಸ್ಪಷ್ಟವಾಗಿವೆ. ಬರವಣಿಗೆ ಚೆನ್ನಾಗಿದೆ. ಪತ್ರಗಳಿಗೆ ಹುಳು ಹಿಡಿದಿದೆ. ೧೩೪, ೧೩೫, ೧೩೬ ನೆಯ ಪತ್ರಗಳು ಆದಿಯಲ್ಲಿ ತ್ರುಟಿತವಾಗಿವೆ. ಕೊನೆಯ ಭಾಗದ ಪತ್ರಗಳನ್ನು ವಿಶೇಷವಾಗಿ ಹುಳು ಕೊಡೆದಿದೆ.

ಈ ಹಸ್ತಪ್ರತಿಗಳಲ್ಲಿ ಕೊನೆಯದನ್ನು (ಕೆ. ೯೪೦) ಸಂಪಾದನೆಯ ಕಾರ್ಯದಲ್ಲಿ ಪ್ರಮುಖವಾಗಿ ಬಳಸಿಕೊಳ್ಳಲಾಗಿದೆ. ಪ್ರಾರಂಭದ ಭಾಗಕ್ಕೆ ಕೆ. ೧೩೭ ನೆಯ ಹಸ್ತಪ್ರತಿಯನ್ನು ಬಳಸಿಕೊಂಡಿದೆ. ಎಲ್ಲ ಹಸ್ತಪ್ರತಿಗಳೂ ಅಸಮಗ್ರವಾಗಿವೆ. ಕೆ. ೯೪೦ರ ಕೊನೆಯಲ್ಲಿ ಬರುವ ಈ ಭಾಗ ವಿಶೇಷವಾಗಿ ಗಮನಾರ್ಹ :

"ವಿರೋಧಿಕೃತು ಸಂವತ್ಸರದ ಆಷಾಡ ಬಹುಳ ೧೦ ಯಲ್ಲು ಶ್ರೀಮತು ತಂಮ್ಮೈಯನವರಿಗೆ ತ್ರಿಸಂಧ್ಯಾಕಾಲದಲ್ಲು ಆಯುರಾರೋಗ್ಯಐಶ್ವರ್‍ಯಂಗಯಿವೃತ್ತಿರಲೆಂದು ಬರೆದುಕೊಟ್ಟ ಪುಸ್ತಕಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ ತಪ್ಪಂ ಬರದನೆಂದು ದೇವರ ಚಿತ್ತಕ್ಕೆ ಕೋಪವಾಧೀತು ದೇವರು ದಯಮಾಡಿಸ್ತ ಮಾತ್ರಿಕೆ ಪ್ರಕಾರಕ್ಕೆ ಮಾತ್ರಿಕೆಯಲ್ಲಿ ತಪ್ಪಾಗಿಯಿದರೆ ಹಿರಿಯರ ಕೈಯ ತಿಳಿಸಿಕೊಂಡು ಬರದು ಯಿಧೇನೆ ಯಿಂತಿ ಜಿಂನಹಾ".

ತಂಮ್ಮೈಯ ಯಾರು ಮತ್ತು ಲಿಪಿಕಾರನ ಹೆಸರೇನು ಎಂಬುದು ಪ್ರಶ್ನೆಗಳಾಗಿಯೇ ಉಳಿಯುತ್ತವೆ. ಈ ಹಸ್ತಪ್ರತಿಯ ಕಾಲ ಕ್ರಿ. ಶ. ೧೭೩೧, ಜುಲೈ ೧೭, ಶನಿವಾರವೆಂದು ಭಾವಿಸಬಹುದು.

ಶ್ರೀ ರಾಮಾನುಜಯ್ಯಂಗಾರ್‍ಯರಿಂದ ಸಂಪಾದಿತವಾದ ಪಾಠಕ್ಕೂ ಇಲ್ಲಿ ಪ್ರತಿ ಮಾಡಲಾದ ಪಾಠಕ್ಕೂ ಹಲವಾರು ಕಡೆ ತುಂಬ ವ್ಯತ್ಯಾಸಗಳಿವೆ. ಇಲ್ಲಿ ಮಾದರಿಗಾಗಿ ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು.

ಹಿಂದಿನ ಪಾಠ : ಪುಟ ೮ ಸಾಲು ೯–೧೦ : ಪೊಟೆಯ ಮಿಾಂಗಳುಂ ತೀರ್ವುವು ಆ

ಈಗಿನ ಪಾಠ ಪೊಳೆಯ ಮಿಾಂಗಳುಂ ಬನದ ಪಕ್ಕಿಗಳುಂ ಜಿಲ ದಿಲಿಗಳುಂ ತೀರ್ಬುವಾ

ಹಿಂದಿನ ಪಾಠ : ಪುಟ.೯೦, ಸಾಲು ೧೬ : ವನಮಾಲಿಗೆ ಧರಿಸಲ್ಕೆಂದು

ಈಗಿನ ಪಾಠ : ಬನಮಾಳಿಗೆ ಧರಿಸಲ್ಕೆಂದು

ಹಿಂದಿನ ಪಾಠ ಪುಟ ೧೨೫, ಸಾಲು ೬ : ವರ್ಣಧರ್ಮಂಗಳ ನಾಚರಿಸದೆ

ಈಗಿನ ಪಾಠ ವರ್ಣಧರ್ಮಂಗಳನಾಶ್ರಮಧರ್ಮಂಗಳನಾಚರಿಸದೆ

ಕೆಲವೆಡೆ ಹೊಸ ಸಾಲುಗಳು ಸೇರ್ಪಡೆಯಾಗಿವೆ. ಪುನರುಕ್ತಿಗಳನ್ನು ಕೈಬಿಟ್ಟಿದೆ. ಹಿಂದಿನ ಸಂಪಾದಕರು ಸಂಧಿಸಮಾಸಗಳನ್ನು ಬಿಡಿಸಿ, ಶೀರ್ಷಿಕೆ–ಉಪಶೀರ್ಷಿಕೆಗಳನ್ನು ನೀಡಿರುವರು. ಈಗಿನ ಪಾಠದಲ್ಲಿ ' ಶೀರ್ಷಿಕೆ ಉಪಶೀರ್ಷಿಕೆಗಳನ್ನು ಕೈಬಿಟ್ಟಿದ್ದರೂ ಓದುವ ಅನುಕೂಲಕ್ಕಾಗಿ ಬಹುಮಟ್ಟಿಗೆ ಸಂಧಿಸಮಾಸಗಳನ್ನು ಬಿಡಿಸಿದೆ. ಭಾಷೆಯನ್ನು ಗಮನಿಸಿ, ಶಬ್ದಗಳ ಶುದ್ಧರೂಪಗಳನ್ನು ಸಾಧ್ಯವಾದಷ್ಟೂ ನೀಡಿದೆ. ಅಧಿಕಪಾಠವನ್ನು ಕೈಬಿಟ್ಟಿದೆ. ಏಕರೂಪತೆಯ ದೃಷ್ಟಿಯಿಂದ ಇತರ ಸಂಪಾದಿತ ಕೃತಿಗಳನ್ನು ಗಮನಿಸಿದೆ. ಹಿಂದಿನ ಮುದ್ರಿತ ಕೃತಿಯಲ್ಲಿ ಪೂರ್ಣ

ಶ್ಲೋಕಗಳನ್ನು (ಉದಾಹರಣೆಗೆ ಪುಟ ೧೬) ನೀಡಿವೆ. ಇಲ್ಲೀಗ ಹಸ್ತಪ್ರತಿಯಲ್ಲಿ ಇದ್ದಷ್ಟನ್ನೇ ನೀಡಲಾಗಿದೆ. ಮುದ್ರಿತ 'ಚಿಕದೇವರಾಯವಂಶಾವಳಿ' ಯಲ್ಲಿ ಬರುವ ಐದು ಕಂದ ಪದ್ಯಗಳು (ಪುಟ ೩೨) ಇಲ್ಲಿ ಪರಿಷ್ಕೃತಗೊಂಡಿವೆ. ಈಗಿನ ಪ್ರತಿಯಲ್ಲಿ ತಿರುಮಲೆ ಎಂದು ಬಂದಿಲ್ಲ : ಹಿಂದಿನ ಮುದ್ರಿತ ಪ್ರತಿಯಲ್ಲಿ ಹಲವೆಡೆ ಹಾಗೆ ಬಂದಿದೆ. ಉಪಲಬ್ಧವಿರುವ ನಾಲ್ಕು ಹಸ್ತಪ್ರತಿಗಳನ್ನೂ ಆಮೂಲಾಗ್ರವಾಗಿ ಪರಿಶೀಲಿಸಿ ಸಾಮ್ಯ ವೈದೃಶ್ಯಗಳ ಸೂಕ್ಷ್ಮಾತಿಸೂಕ್ಷ್ಮಗಳನ್ನು ಗುರುತಿಸಿ ಸೂಚಿಸುವ ಪಂಡಿತಾವೃತ್ತಿಯ ಗ್ರಂಥ ಸಂಪಾದನೆಯ ಕಾರ್ಯವನ್ನು ನಡೆಸಲು ಸಾಧ್ಯವಾಗಿಲ್ಲವೆಂಬ ಸತ್ಯವನ್ನು ವಿನಮ್ರವಾಗಿ ಒಪ್ಪಿಕೊಳ್ಳಬೇಕಾಗುತ್ತದೆ.

ಕೃತಿವಿಚಾರ

ಉಪಲಬ್ಧವಾಗಿರುವ 'ಚಿಕದೇವರಾಯ ವಂಶಾವಳಿ'ಯಲ್ಲಿ ರಾಜ ಒಡೆಯನಿಂದ ಚಿಕ್ಕದೇವರಾಜನ ವರೆಗಿನ ಮೈಸೂರು ರಾಜವಂಶದ ಪ್ರಸಿದ್ಧ ದೊರೆಗಳ ಇತಿಹಾಸ ನಿರೂಪಿತವಾಗಿದ್ದರೂ ಕವಿಮನಸ್ಸು ಚಿಕದೇವರಾಯ ಮಯವಾಗಿ ಬಿಟ್ಟಿದೆ. ಹೀಗಾಗಿ ಈ ಕೃತಿಯಲ್ಲಿ ಕಲ್ಪನಾವಿಲಾಸ ಮೆರೆಯುತ್ತದೆ ; ಇತಿಹಾಸ ಮರೆಗೆ ಹೋಗುತ್ತದೆ. ತಿರುಮಲಾರ್ಯನಿಗೆ ಇತಿಹಾಸಕಾರನ ವಸ್ತುನಿಷ್ಠೆ, ಪ್ರಮಾಣಜ್ಞಾನ, ಖಚಿತತೆ, ಇತಿಹಾಸದ ಪ್ರಜ್ಞೆ ಇಲ್ಲ. ರಾಜನ್ನೃಪನ "ಚರಿತ್ರೆಯ ಭಾಗದಲ್ಲಿ ಕಲ್ಪನೆ, ಇತಿಹಾಸ ಎರಡೂ ಬೆರೆತಿದ್ದರೆ ದೊಡ್ಡದೇವರಾಜರ ಚರಿತ್ರೆಯಲ್ಲಿ ಕಲ್ಪನೆ ನಿರಾತಂಕವಾಗಿ ಬೆಳೆದಿದೆ. ಕೆಲವೊಮ್ಮೆ ವರ್ಣನೆಗಳಿಗೆ ಗಟ್ಟಿಯಾದ ಆಧಾರವಿಲ್ಲದೆ ಕೃತಿಶಿಲ್ಪದ ಒಟ್ಟಂದದ ಪ್ರಮಾಣ ಮೀರಿ ಅತಿರೇಕವಾಗಿದೆ ...... ಗದ್ಯಶೈಲಿ ಈ ಕೃತಿಯ ಜೀವಾಳ. ಇವನ ಗದ್ಯ ಸಂಸ್ಕೃತ ಹಾಗೂ ಕನ್ನಡಗಳೆರಡರ ಸತ್ವವನ್ನು ಹೀರಿ ಬೆಳೆದು ಪರಿಪುಷ್ಟವಾದ ವೈಯಕ್ತಿಕತೆಯಿಂದ ಕೂಡಿದೆ".[16] ಇಲ್ಲಿ ಕಾವ್ಯ ಪ್ರಧಾನ ; ಇತಿಹಾಸಕ್ಕೆ ಅನಂತರದ ಸ್ಥಾನ. ಹೀಗಾಗಿ ಇತಿಹಾಸಕ್ಕೆ ನ್ಯಾಯ ಸಿಕ್ಕದೇ ಹೋಗುವ ಸಂಭವವುಂಟು. ಕವಿಯ ನಿಜವಾದ ಉದ್ದೇಶ ಕೂಡ ಇತಿಹಾಸ ನಿರೂಪಣೆಯಲ್ಲ ; ತನ್ನ ಪ್ರಭುವಿನ ವೈಭವೀಕರಣ. ಆದ್ದರಿಂದ ಚರಿತ್ರೆ, ಮತತತ್ತ್ವ, ಕಾವ್ಯ–ಇವುಗಳ ಮುಪ್ಪುರಿಯೇ 'ಚಿಕದೇವರಾಯ ವಂಶಾವಳಿ'[17] ಎಂದು ಹೇಳುವುದು ಉಚಿತವಲ್ಲ. ಮೂರು ಬೇರೆ ಹುರಿಗಳು ವಿಷಮ ಪ್ರಮಾಣದಲ್ಲಿ ಇಲ್ಲಿ ಬೆರತಿವೆ. ಅತಿಶಯೋಕ್ತಿ ಅಧಿಕ.

---

16. ಕರ್ನಾಟಕ–ವಿಷಯ ವಿಶ್ವಕೋಶ, ದ್ವಿತೀಯಾವೃತಿ, ಪು.೧೧೪೮

17. ಸ.ಸ.ಮಾಳವಾಡ : ಚಿಕದೇವರಾಯವಂಶಾವಳಿಯ ಚರಿತ್ರಾಂಶಗಳು, ಕರ್ನಾಟಕ ವಿದ್ಯಾಲಯ ಪತ್ರಿಕೆ, ಪು.೩೨ (ಉದ್ಧೃತ, ರಂ.ಶ್ರೀ. ಮುಗಳಿ, ಪೂರ್ವೋಕ್ತ, ಪು.೩೨೪)

ರಂ. ಶ್ರೀ. ಮುಗಳಿ ಹೇಳುವಂತೆ ಚಿಕದೇವರಾಯವಂಶಾವಳಿಯ ಮುಖ್ಯ ಗುಣ ಅದರ ಗದ್ಯಶೈಲಿಯಲ್ಲಿ ಮತ್ತು ಬಿಡಿಯಾದ ವರ್ಣನೆ ಹಾಗೂ ಸಾದೃಶ್ಯಮಾಲಿಕೆಗಳಲ್ಲಿದೆ. ತಿರುಮಲಾರ್ಯನು ಮೇಲಾದ ಕವಿ ಮತ್ತು ಶೈಲಿಕಾರನೆಂಬುದು ದಿಟ. ಅವನ ವರ್ಣನೆಗಳಲ್ಲಿ "ಅಕೃತಕವಾದ ಉತ್ಸಾಹಿತವಾದ ವಿಸ್ತಾರ ವೈಭವವಿದೆ ; ವಿವರ ವಿವರದಲ್ಲಿಯೂ ನೂತನವಾದ ಕಣ್ಣಿಂದ ನೋಡುವ ಕಲ್ಪನೆಯ ಚಿರಯೌವನವಿದೆ ; ಉಚಿತವಾಗಿ ವಿಧವಿಧವಾಗಿ, ಮಾತುಹೆಣೆದು ಮುಂದುವರಿಯುವ ಅನೂನವಾಣಿಯಿದೆ. ವಿಶೇಷವಾಗಿ, ಭಕ್ತಿರಸದಲ್ಲಿ ಕವಿ ತಲ್ಲೀನನಾಗಿ ತನ್ನ ಶಕ್ತಿಯನ್ನೆಲ್ಲ ಸೂರೆಮಾಡಿರುವನು ..... ಆದರೆ ತಿರುಮಲಾರ್ಯನ ಉತ್ಪ್ರೇಕ್ಷೆ ತನ್ನ ನಾವೀನ್ಯಹಟದಿಂದ ಹೊರಟು ಕೃತ್ರಿಮವಾಗಿಯೂ ರುಕ್ಷವಾಗಿಯೂ ಸಾಧಾರಣವಾಗಿಯೂ ತೋರಿರುವುದುಂಟು".[18]

ತಿರುಮಲಾರ್ಯನ ಗದ್ಯ ಶೈಲಿಗೆ ಕೆಲವು ಉದಾಹರಣೆಗಳನ್ನು ನೋಡುವುದು ಉತ್ತಮ. ಕಂಠೀರವ ನರಸರಾಜ ಚರಿತದ ಭಾಗವಾಗಿ ಇದು ಬಂದಿದೆ.

"ಬಳಿಕ್ಕಾ ತುರುಕ ಪಡೆವಳಂ ಕಪ್ಪಿನಿಂದೆಳ್ದ ಕಾಡಾನೆಯಂತೆಯುಂ, ಪುಲಿವಾಯ್ಬುಳಿದ ಪುಲ್ಲೆಯಂತೆಯುಂ, ತಡೆಯೊಡೆದ ಪಾವಿನಂತೆಯುಂ, ಅಂಟುಗಳಿಗಳಿದ ಪಕ್ಕಿಗಳಂತೆಯುಂ, ಬಲೆಯಿಂದ ತಪ್ಪಿದ ಮೊಲದಂತೆಯುಂ, ಬಾಲಂಪರಿದ ಬಳ್ಳಿನಂತೆಯುಂ, ಕಟ್ಟು ಸಡಿಲ್ದ ಕಳ್ಳನಂತೆಯುಂ, ನಿಂದಲ್ಲಿ ನಿಲದೆ ಹಿಂದಿರಿಗಿ ನೋಡದೋಡಿ ತನ್ನ ಬೀಡಂ ಸಾರ್ದಂ." ಒಂದೆರಡು ಉಪಮೆಗಳಿಂದ ತಿರುಮಲಾರ್ಯನಿಗೆ ತೃಪ್ತಿ ಇಲ್ಲ. ಹಾಗಾಗಿ ಕೃತಿಯುದ್ದಕ್ಕೂ ಸಾಲುಸಾಲು ಉಪಮೆಗಳು ಕೃತಿಯ ಅತ್ಯಾಭರಣಗಳಾಗಿ ಕಣ್ಣಿಗೆ ರಾಚುತ್ತವೆ. ಶ್ರೀಕೃಷ್ಣನ ಬಾಲಲೀಲೆಗಳ ದೀರ್ಘವರ್ಣನೆಯ ಒಂದು ಭಾಗವಿದು. "ಪುತ್ತವೆಂಬಂಗಳದೊಳ್ ಪಂಜರದ ಕೀಲಂ ಕಟಲ್ಚಿ ಗಿಳಿಯುಂ ತಪ್ಪಿದನೆಂದುಂ. ಆಡುವೆಳೆಮಕ್ಕಳ ಕಣ್ಗೆ ಮಣಸಿಕ್ಕಿದನೆಂದುಂ. ಮಲಂಗಿದ ಪೆಣ್ಗಳ ಮೊಗಕ್ಕೆ ಮಸಿಗರೆಯಂ ಬರೆದನೆಂದುಂ. ಮುದುಪಂ ಪಾಂಪ್ಪುಪೊಯ್ವಂತೆ ಜಿಗಿದು ಗಡ್ಡ ಮೀಸೆಗಳಂ ಗಂಟಿಕ್ಕಿದನೆಂದುಂ. ಸಿಸುಗಳಾಡುವ ಪೊಡೆಚೆಂಡಂ ಕೊಂಡೊಂಬ್ಬನೆಂದುಂ. ಪೊಂಪೂಗಳಂಬುನಪಪುಸಿವನೆಂದುಂ.ಕವಡೆಗಳಂ ಕವರ್ದನೆಂದುಮಿವು ಮುಂತಾದ ಪಲವುಂ ಪೊಲ್ಲದ ನಡತೆಗಳಂ ಸೊಲ್ಲಿಪ ಜೀಡಿವನೆಗಳ ಪೆಂಡಿರ್ಗಳುಂ ತಮ್ಮೊಳ್ಗಾವೆ ನಾಣ್ಕೆ ತಲೆವಾಗಿ ಪೇಗದೆ ಮೊಗದೊಳ್ ಪೋಪಂತೆ ತಾಯ ಮಗ್ಗುಲಿನಳ್ದ

18. ಉದ್ಧೃತ, ರಂ.ಶ್ರೀ. ಮುಗಳಿ, ಪೂರ್ವೋಕ್ತ, ಪು. ೩೨೪-೨೫.

ಸಿರಿಮೊಗಂದೋಱುವ ಮುದ್ದುನಗೆಯುಮಂ..." ಇನ್ನು ಮೇಲುಕೋಟೆಯ ಶ್ರೀವೈಷ್ಣವರು ಅರಿಷಡ್ವರ್ಗವನ್ನು ಹೊಂದಿದವರಾಗಿದ್ದುದು ಹೀಗೆ :

"ಮತ್ತಮವರ್ಗೆ ವರ್ಣಾಶ್ರಮಧರ್ಮಾಚರಣದೊಳ್ಕಾಮಮುಂ. ಅದಱಿಂ ದಾನುಷಂಗಿಕಮಾಗಿ ಬರ್ಪ ತ್ರೈವರ್ಗಿಕ ಫಲದೊಳ್ ಕ್ರೋಧಮುಂ. ಅದಱಿಂದೊಗೆವ ಭಗವನ್ಮುಖೋಲ್ಲಾಸದೊಳ್ ಲೋಭಮುಂ. ತದನುಭವಜನಿತ ಪ್ರೀತಿಯೊಳ್ಮೋಹಮುಂ. ಪ್ರೀತಿಕಾರಿತ ಕೈಂಕರ್ಯಲಾಭದೊಳ್ಮದಮುಂ. ಮದಜನಿತ ಕೈಂಕರ್ಯ ವಿಘ್ನದೊಳ್ಮಾತ್ಸರ್ಯಮುಂ."

ಈ ಪರಮ ಸಾತ್ವಿಕ ಜನರಿಗೆ "ವಿಜ್ಞೆಯೆ ರಾಜ್ಯಮುಂ. ವಿನಯಮೆ ಧನಮುಂ. ವೈರಾಗ್ಯಮೆ ಭಾಗ್ಯಮುಂ. ಸ್ಮರಣೆಯೆ ಜೀರಮುಂ. ಸತ್ವಮೆ ನೆರವುಂ. ಜಿಸ್ನಾಣಮೆ ಬೆಂಬಲಮುಂ. ವಿವೇಕಮೆ ಕಾಪುಂ. ನೇಮಮೆ ಸೇಮಮುಂ ಒಳ್ಪೆ ಬಲ್ಪುಂ ಸಂತಸಮೆ ಸಾಮ್ರಾಜ್ಯಮಾಗಿರ್ಕುಂ."

ತನ್ನ ಪ್ರಭು ಚಿಕ್ಕದೇವರಾಜನ ತಾಯಿ ಅಮೃತಾಂಬೆಯ ದೌಹೃದದ ವರ್ಣನೆ : "ಸತ್ಕರ್ಮಮಂ ಗರ್ಭದೊಳ್ಪೊತ್ತ ಶ್ರುತಿಯಂತೆಯುಂ. ಜಸಮಂ ಪೊತ್ತ ರಾಜನೀತಿಯಂತೆಯುಂ. ವಿನಯಮಂ ಪೊತ್ತ ವಿಜ್ಞೆಯಂತೆಯುಂ. ನೇಸರಂ ಪೊತ್ತ ಮುಂಬಗಲಂತೆಯುಂ. ತುಂಬುವೆರೆಯಂ ಪೊತ್ತ ಪೂರ್ಣಿಮೆಯ ಸಂಜೆಯಂತೆಯುಂ ಪೊಡೆಯೊಳ್ ಶ್ರೀಮನ್ನಾರಾಯಣನಂ ಪೊತ್ತು ಪೊಗರೇಱಿದಳ್"

ತಿರುಮಲಾರ್ಯನಿಗೆ ಅತಿಶಯೋಕ್ತಿ ಸಹಜ ! ತನ್ನ ತಂದೆ ಅಳ ಸಿಂಗರಾರ್ಯರನ್ನು ಹೊಗಳುವಾಗಲೂ ಮಿತಿ ಎಂಬುದಿಲ್ಲ. ತನ್ನ ಶಕ್ತಿಸರ್ವಸ್ವವನ್ನೂ ಧಾರೆ ಎರೆದಿದ್ದಾನೆ.

"ಮತ್ತಂ ಸರಸ್ವತಿಯುಮೇಂ ಪುಣ್ಯವತಿಯೋ. ಅವಗಂ ಪ್ರಸನ್ನಮಾಗಿ ಕರುಣಾಮೃತರಸದಿಂ ತುಂಬಿ ಮಾನಸಸರೋವರಮಂ ಪೋಲ್ತಿವನ ಮೊಗದಾವರೆಯೊಳ್ ನಲಿವುತಿರ್ಕುಂ. ಈ ಯೆಡೆಯೊಳ್ ಧರ್ಮಂ ನಾಲ್ಕುಂ ಚರಣಂಗಳಿಂ ಪೂರ್ಣಮಾಗಿರ್ಪುದಱಿಂದಾವಗಂ ಕೃತಯುಗಮಲ್ಲದೆ ಯುಗಾಂತರಂಗಳ ನೆನಪಿಲ್ಲದಿರ್ಕುಂ ನೆಲದೊಳೀಮಹಾನುಭಾವನುದಿಸಿರ್ಪುದಱಿಂ ನೇಸರಂ ಪೊತ್ತಾಗಸದ ಗರ್ವಂ ಕಿಱಿದಕ್ಕುಂ. ಇವನ ಬಲ್ಮೆಯಿಂ ಧರೆ ಚಲಿಸದಿರ್ಕುಂ. ಮತ್ತಮಿವನಿರವಂ ಭಾವಿಸೆ ಕೃಪೆಯ ಪೊನಲುಂ. ಸಂಸಾರಮೆಂಬ ಕಡಲಿನತ್ತಡಿಗಾಣಿಪ ಸೇತುವುಂ. ಆಸೆಯೆಂಬ ಬಿಸವಳ್ಳಿಗೆ ನಡುವೇಸಗೆಯುಂ. ಸಂತಸಮೆಂಬಮರ್ದಿಂಗೆ ಪೆರ್ಗಡಲುಂ. ಸಿದ್ಧಮಂತ್ರಗಳ್ಗೆ ಮಹಾರ್ಷಿಯುಂ. ಶಾಂತಿಯೆಂಬ ಪೆರ್ಮರಕ್ಕೆ ತಾಯ್ಬೇರುಂ. ಆಚಾರಂಗಳ ನೆಲೆವೀಡುಂ. ಧರ್ಮಮೆಂಬ ಪಳಯಿಗೆಗೆ ಬಲ್ಗಾವುಂ,

ನಾಸ್ತಿಂಗಳೆಂಬ ಹೊನ್ಗೆ ಒರೆಗಲ್ಲುಂ, ಮುಳಿಸೆಂಬ ಹಾವಿಗೆ ಗರುಡನುಂ, ಮೋಹಮೆಂಬ ಕಳ್ಗತ್ತಲೆಗಾದಿತ್ಯನುಂ, ಮಂಗಳದಂಗಳಮುಂ, ಸತ್ತ್ವಕ್ಕಾಶ್ರಯಮುಂ, ತಪಕ್ಕೆ ತಾಣಮುಂ, ನೇಮಕ್ಕೆ ನೆರವುಂ, ಸತ್ಯಕ್ಕೆ ಸಂಗಾತಿಯುಮೆನಿಸಿರ್ದಂ." ತಿರುಮಲಾರ್ಯನ ಶೈಲಿಯಲ್ಲಿಯ ನಾಟಕೀಯ ಅಂಶಗಳು ಕೃತಿಯುದ್ದಕ್ಕೂ ನಿಚ್ಚಳವಾಗಿ ಗೋಚರಿಸುತ್ತವೆ. ತಿರುಮಲಾರ್ಯನ ಜನ್ಮಸಮಾಚಾರವನ್ನು ತಿಳಿಸುವ ಸಂದರ್ಭವನ್ನೇ ಗಮನಿಸಬಹುದು. ದೇವರಾಜ ಮತ್ತು ಅಮೃತಾಂಬೆ ಇದ್ದಾಗ ಅಲ್ಲಿಗೆ ಪರಿವಾರದ ಸ್ತ್ರೀಯೊಬ್ಬಳು "ಸಡಗರದಿಂದ ಬಂದು ತನ್ನ ಕೈಯಲ್ಲಿಯ ಹೊನ್ನಬೆತ್ತದಿಂದ ನೆಲಗಟ್ಟಿನ ಸ್ಫಟಿಕದ ಹಾಸಿನ ಮೇಲೆ ಮೆಲ್ಲನೆ ಕುಟ್ಟಿ ದನಿಗೈದು ಅಡ್ಡಬಿದ್ದು ಹೆಮ್ಮೆಗೊಂಡ ಮುಖವೂ ನಿಡುಗಣ್ಣೂ ಆದ ಸಂತೋಷಭರದಿಂದ ಹೇಳುತ್ತಾಳೆ"[19]: "ಜೀಯ, ಪರಾಕು ಚಿತ್ತವಿಸುವುದು ಪಿರಿಯೊಸಗೆಯೊಸಗೆ." ದೊರೆಯು ವಿವರ ಕೇಳಿದಾಗ ಹೇಳುವುದಿದು : "ದೇವ ಚಿತ್ತವಿಪುದು. ದೇವರ ಕೆಳೆಯಳಿಯಸಿಂಗರಾರ್ಯನ ಧರ್ಮಪತ್ನಿ ಲಿಂಗಂಮಂಗೆ ಸುಮುಹೂರ್ತದೊಳ್ಗಂಡುಗುವರನಾದನ್". ರಾಜರಾಣಿಯರು ಹರ್ಷದಿಂದ ತಾವು ತೊಟ್ಟ ಆಭರಣಗಳನ್ನು ಆ ಪರಿಚಾರಿಕೆಗೆ ನೀಡುತ್ತಾರೆ ! ತನ್ನ ಜನನವನ್ನು ಕವಿಯೇ ಹೀಗೆ ವರ್ಣಿಸಿಕೊಂಡ ಸನ್ನಿವೇಶ ವಿರಳಾತಿವಿರಳ !

ಕವಿಯು ಬಳಸಿದ ಏಕಾವಳೀ ಅಲಂಕಾರ ಅಥವಾ ಮುಕ್ತ ಪದಗ್ರಹಣಕ್ಕೆ ಇದು ಉದಾಹರಣೆ : ಸ್ವಸ್ತಿ ಸಮಸ್ತ ಸಾಮಂತಮಹೀಪಾಲಮೌಳಿಮಾಲಾಲಾಲಿತ ಪದ ರಾಜೀವ, ರಾಜೀವಸಖಗರ್ವಸರ್ವಸ್ವನಿರ್ವಾಪಣಚಣಪ್ರತಾಪೋದಯ, ದಯಾರಸತರಂಗಾಯಿತಾಪಾಂಗಾವಲೋಕನಾಪ್ಯಾಯಿತ ಕರ್ನಾಟ ಮಂಡಲಮಂಡಲಾಗ್ರಖಂಡಿತಾರಾತಿನೃಪಕಂಠಕಾಂಡೋಚ್ಚಲದ್ರಕ್ತ ಧಾರಾಪರಿಪ್ಲುಷ್ಟತದೀಯ ಬಿರುದ । ಬಿರುದೆಂತೆಂಬರಗಂಡ ರಾಜನೃಪ ವಿಜಯಿತಾಭವ ದಿಗ್ವಿಜಯಿತಾಭವ ಎಂದು ಪೊಗಳ್ವುದುಂ

ತಿರುಮಲಾರ್ಯನ ಕೃತಿಯು ಐತಿಹಾಸಿಕಕಾವ್ಯವೆಂಬ ಹಣೆಪಟ್ಟಿ ಹಚ್ಚಿಕೊಂಡಿರುವುದರಿಂದ ಸ್ವಾಭಾವಿಕವಾಗಿಯೆ ನೂರಾರು ಊರುಗಳ ಹೆಸರುಗಳಿಂದ ಅದು ತುಂಬಿದೆ ; ಕಣೆ, ಕೈಯಿಟ್ಟಿ, ಹಾಱುಂಬಳೆ, ಭಿಂಡಿವಾಳ, ಸಬಳ, ಭಲ್ಲೆಯ, ಕತ್ತಿ, ಕೈಗತ್ತಿ, ಕಠಾರ ಮುಂತಾದ ಹಲವಾರು ಆಯುಧಗಳ ಉಲ್ಲೇಖವಿದೆ : ಸೋಗೆ, ಲಾವುಗೆ, ಗವುಜು, ಗೀಜಗ, ಗೊರವ, ಪಾರಿವ, ಗುಬ್ಬಿ,

---

19. ಮ.ಪಾ. ಘೋಷ ಚಿಕ್ಕದೇವರಾಯ ವಂಶಾವಳಿ, ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್ತು, ೧೯೮೧, ಪು. ೯೫

ಕರ್ಬಕ್ಕಿ, ಬೆಳ್ವಕ್ಕಿ ಮುಂತಾದ ಪಕ್ಕಿಗಳು, ಮೀನ್ಗೋಡಿಯಾಮೆಯಂಥ ಜಲಚರಗಳೂ, ಇಲಿ ಬೆಕ್ಕಿಲಿಯಂಥ 'ಬಿಲಚರ' ಗಳೂ ಹಂದಿ, ಸಲಗ, ಕೋಳಿ ಇತ್ಯಾದಿ ಪ್ರಾಣಿಗಳೂ ಉಲ್ಲೇಖಗೊಂಡಿವೆ. ಹಾಗೆಯೆ ಇವರಲ್ಲಿ ಕಿರೀಟ, ಮಕುಟ, ಕುಂಡಲ, ಗ್ರೈವೇಯಕ, ಹಾರ, ಕಟಕ, ದಾಮೋದರಬಂಧನ, ಕಾಂಚೀಕಲಾಪ, ನೂಪುರಾದಿ ಆಭರಣಗಳ ಪ್ರಸ್ತಾಪ ಕಂಡುಬರುತ್ತದೆ. ತಿಜಿಕಲ್ಲಾಟ, ಕೋಲಾಟ, ಪಚೆವಚೆಯಾಟ, ಚೆಂಡಾಟ, ಕಣ್ಣುಮುಚ್ಚಾಟ, ಮುಷ್ಟಿಶಕ್ತಿ, ದೃಷ್ಟಿಶಕ್ತಿ, ತೋಳಬಲ್ಲು ಮುಂತಾದ ಕ್ರೀಡೆಗಳ ಉಲ್ಲೇಖ ಗಮನಾರ್ಹ.

ತಿರುಮಲಾರ್ಯನು ಜೀವನವನ್ನು ಗಮನಿಸಿರುವ ರೀತಿ ಸ್ತುತ್ಯರ್ಹ. ಅತನ ಕೆಲವು ನುಡಿಗಳು ವಿಶೇಷವಾಗಿ ಗಮನ ಸೆಳೆಯುತ್ತವೆ :

* ಧರ್ಮದನಿರ್ದಂತರಸಂಗೆ ಬಳ ವಿಲಗದೊಳಿಲ್ಪುದೆ ಮಾತರ್ಗೆ ನೀತಿ
* ಕಂಟಕಶೋಧನ ಪ್ರಜಾಪಾಲನ ದಂಡಯಾತ್ರಾದಿ ಕ್ಷಾತ್ರ ಸ್ವಭಾವಕರ್ಮ
* ದೇವರ್ ದಯೆಗೆಯ್ದೊಡೆಯೊಳ್ ಕೊರತೆಯೆತ್ತಣಿಂ ಬರ್ಪುದು ?
* ಸಾಸುವೆಯಂ ಕೊರೆದು ಕಡಲಂ ತುಂಬಲಡಂಗದೆ ಪೊರಮಡುವಂತೆ
* ಜಾಯಿಲವಾಲಮಂ ಪಿಡಿದು ಜಾಹ್ನವಿಯ ದಾಂಟಲೆಳಸಿದಂತೆ

ಧರ್ಮ, ಮತತತ್ತ್ವ, ಶ್ರೀವೈಷ್ಣವರ ವಿಷಯ ಬಂದಾಗ ತಿರುಮಲಾರ್ಯನ ಸಂಭ್ರಮ ಸಡಗರ ಅರ್ಥವಾಗುವಂಥದೇ. ಭಗವದ್ಗೀತೆಯ ಸಾರವನ್ನು ಆತ ಸಂಕ್ಷೇಪಿಸಿರುವ ರೀತಿ ನಿಜಕ್ಕೂ ಮೆಚ್ಚುವಂಥದು. ಚಿಕದೇವರಾಯವಂಶಾವಳಿ ಹಾಗೂ ಚಿಕದೇವರಾಜವಿಜಯದಲ್ಲಿ ಕೆಲವು ಸಮಾನಪಾಠಗಳಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.[20]

ತಿರುಮಲಾರ್ಯ ಯಾವುದನ್ನೂ ಸಂಕ್ಷಿಪ್ತವಾಗಿ ಹೇಳುವ ಜಾಯಮಾನದವನಲ್ಲ. ಅತಿವಿಸ್ತಾರವಾದ ವರ್ಣನೆಯಲ್ಲಿ ಬಳಸಿರುವ ಪದಗಳೂ ಹಿತವೆನಿಸುವುದಿಲ್ಲ. ಆದಿಶೇಷ, ಗರುಡ ವಿಷ್ವಕ್ಸೇನರನ್ನು 'ಹಾವು ಹಕ್ಕಿ ಪಡೆಯಜ್' ಎಂದು ಕರೆದುಬಿಡುತ್ತಾನೆ. ಅನ್ಯದೇಶೀಯ ಫೌಜು ಶಬ್ದವನ್ನು ಪ್ರಯೋಗಿಸಿರುವುದು ಎದ್ದು ಕಾಣುತ್ತದೆ. ಆಸ್ಥಾನಕವಿಯಾದುದರಿಂದ ಅರಸನನ್ನು ಸುಪ್ರೀತಗೊಳಿಸುವುದೇ ಅತನ ಧ್ಯೇಯವಾಗಿತ್ತು ; ಹಾಗೆಯೇ ಶ್ರೀವೈಷ್ಣವಧರ್ಮ, ತಂದೆ ಅಳಸಿಂಗರಾರ್ಯ

---

20. ನೋಡಿ : ಎಚ್. ಎಸ್. ಹರಿಶಂಕರ್ ಪೂರ್ವೋಕ್ತ ಮತ್ತು ಡಾ. ರಾಗೌ ಪೂರ್ವೋಕ್ತ

ಮತ್ತು ತನ್ನ ಹೆಗ್ಗಳಿಕೆಗಳನ್ನು ಹೇಳಿಕೊಳ್ಳುವುದೂ ಆತನ ಕಾವ್ಯೋದ್ದೇಶವಾಗಿತ್ತು. ಚಿಕ್ಕದೇವರಾಯನ ಪೂರ್ವಜರ ವಂಶಾವಳಿಯನ್ನು ಮತ್ತು ಅವರ ಸಾಧನೆಗಳನ್ನು ವಿವರಿಸಿರುವುದರಿಂದ ಇದನ್ನು ಚಾರಿತ್ರಿಕಕಾವ್ಯವೆಂದು ಕರೆಯಬೇಕು. ಆದರೆ ಅಸಮಗ್ರವಾಗಿದೆ. ಚರಿತ್ರಾಂಶಗಳನ್ನೂ ಕಾವ್ಯದ ಹೇಳಿಕೆಗಳನ್ನೂ ತಾಳೆನೋಡಿ ವಿಶ್ಲೇಷಿಸಬೇಕಾದ ಅವಶ್ಯಕತೆ ಇದೆ. ತಿರುಮಲಾರ್ಯ ಕನ್ನಡದ ಒಬ್ಬ ಪ್ರತಿಭಾನ್ವಿತ ಕವಿ ಎನ್ನುವುದು ನಿಸ್ಸಂದೇಹ. ಆದರೆ ಆತನನ್ನು ಬಾಣನಿಗೆ ಹೋಲಿಸುವುದು ಸೂಕ್ತವಲ್ಲ. ಇಬ್ಬರ ಪ್ರತಿಭೆಯ ಅಗಲಾಳಗಳೂ ಅನುಭವ ಶ್ರೀಮಂತಿಕೆಯೂ ಸಾಹಿತ್ಯ ಶಕ್ತಿಯೂ ಬೇರೆ ಬೇರೆ. ಸಂಸ್ಕೃತ ಕನ್ನಡ ಭಾಷೆಗಳ ಜಾಯಮಾನವೂ ಬೇರೆ ಬೇರೆ.

ಸಮಕಾಲೀನ ದಾಖಲೆಗಳಲ್ಲಿ ನಿರೂಪಿತವಾದ ಘಟನೆಗಳಿಗೂ ತಿರುಮಲಾರ್ಯ ತನ್ನ ಕಾವ್ಯದಲ್ಲಿ ನಿರೂಪಿಸಿರುವ ಘಟನೆಗಳಿಗೂ ಸಾಮ್ಯ ವೈದೃಶ್ಯಗಳಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.[21] ಶ್ರೀಯುತ ಮಂ.ಆ. ರಾಮಾನುಜಯ್ಯಂಗಾರ್ ಅವರು "........ ಈ ಕವಿಯಷ್ಟು ಸಂಸ್ಕೃತನೂ ಶಕ್ತನೂ ಬಹುಶಃ ಯಾರೂ ಇಲ್ಲವೆಂದು ನನ್ನ ಅಭಿಪ್ರಾಯ. ಈ ಕವಿಯ ಕಾಲದಲ್ಲಿದ್ದ ಕವಿಗಳಲ್ಲೂ ಈತನೇ ಅಗ್ರಗಣ್ಯನು" ಎಂದು ಭಾವಿಸುತ್ತಾರೆ.[22] ಆದರೆ ಇದು ಅಭಿಮಾನದ ಮಾತಷ್ಟೇ. ತಿರುಮಲಾರ್ಯ ಒಬ್ಬ ಉತ್ತಮ ಕವಿ ಎಂಬುದನ್ನು ಒಪ್ಪಿಕೊಳ್ಳಲಷ್ಟೇ ಸಾಧ್ಯ. ಆತ ಪ್ರತಿನಿಧಿಸುವುದು ಅರಮನೆಯ ಆಸ್ಥಾನವನ್ನೇ ಹೊರತು ಜನಸಾಮಾನ್ಯರ ಬದುಕನ್ನಲ್ಲವೆಂಬುದನ್ನೂ ಗಮನಿಸಬೇಕಾಗುತ್ತದೆ.

* *

---

21. ನೋಡಿ : ಎಚ್. ಎಸ್. ಹರಿಶಂಕರ್, ಪೂರ್ವೋಕ್ತ ; ಡಾ. ರಾಗೌ, ಪೂರ್ವೋಕ್ತ.

22. ಪೂರ್ವೋಕ್ತ, ಪು.ii

ಪರಿವಿಡಿ

ತಿರುಮಲಾರ್ಯ ವಿರಚಿತ

ಚಿಕದೇವರಾಯ ವಂಶಾವಳಿ

****

ಸ್ವಸ್ತಿ ಸಮಸ್ತಭೂಮಂಡಲಪುಂಡರೀಕಕರ್ಣಿಕಾಯಮಾನ ಕನಕಾಚಲದಿಶಾಪರಿಯಂತಪರಿಕರ್ಮಾಲಂಕರ್ಮಣಭಾರತವರ್ಷಮಂಡನಾಯತ ಭರತಖಂಡೋದ್ದಂಡವೈಭವೋತ್ತಮರ್ವರ್ಣಾಯತರ್ಣಾಟದೇಶದೊಳ್ಕಾವೇರೀದಕ್ಷಿಣ ತೀರದೊಳನತಿದೂರದೊಳೆಸೆವ ಮಹೀಶೂರಪುರದೊಳ್ ಸಕಲಸಾಮಂತ ಕೋಟೀರಕೋಟೀಮಣಿಘೃಣಿಚಿತ್ರಿತಪದರಾಜೀವನೆನಿಸಿ ರಾಜಿಪ ಚಾಮರಾಜಂಗೆ ಚತುರತೆಗೊಲ್ದು ಮೆಯ್ವೆತ್ತು ಬಳಿಸಲ್ವ ನಾಲ್ಕುಮುಪಾಯದಂತೆಯುಂ, ತಮ್ಮಿಂ ತಾಮೆಳಸಿ ಬಂದ ಚತುರ್ವರ್ಗದಂತೆಯುಂ, ಈತನ ಸತ್ಯಾದಿಗುಣಂಗಳಿಂದೆ ದಶರಥಂಗೆತ್ತು ಮತ್ತಮೊಗದ ನಾರಾಯಣನ ನಾಲ್ಮೆಯ್ಗಳಂತೆಯುಂ, ಈತನ ಸೇನಾಧೂಳಿಗಳ್ಕಿ ಮೆಯಿಕ್ಕಲೆಂದೊಡಲ್ವಡೆದೇಳ್ತಂದ ನಾಲ್ಗಡಲಂತೆಯುಂ, ನೆಗಳ್ತೆವೆತ್ತ ನಾಲ್ವರ್ಕುವರರೊಳಂ ಪಿರಿಯಮೆಲ್ಲಾ ರಾಯರ್ಗಂ ಪಿರಿಯನೆನಿಪ ರಾಜನೃಪಂ ನಿಜಕುಲಕ್ರಮಾಗತಕ್ಷಿತಿಯೊಳನುಜವೆರಸರಸುಗೆಯ್ವುತ್ತಿರೆ, ಅತ್ತಲುತ್ತರದೇಶದೊಳ್ತುಂಗ ಭದ್ರಾತಟದೊಳ್ವಿದ್ಯಾನಗರಿಯನಾಳ್ದ ಹರಿಹರಬುಕ್ಕರ್ಮೊದಲಾದ ಕುರುಂಬರಾಯರ ನಂತರದೊಳರಸುಗೆಯ್ದ ತುಳುವಕುಳದೀಶ್ವರ ನರಸ ವೀರನರಸಿಂಗ ಕೃಷ್ಣಾಚ್ಯುತರೆಂಬ ರಾಯರ್ರೈವರ ತರುವಾಯಿಂ ಮುದದೊಳೆಳೆಯಂ ಪೊರೆದ ಸದಾಶಿವರಾಯಂಗೆ ಸೇನಾನಿಯೆನಿಸಿದಾಂಧ್ರಕುಲದ ರಾಮರಾಜಂ ನಿಜರಾಜಂಗೆ ದ್ರವಿಡಾಂಧ್ರ ಕರ್ಣಾಟ ಸಾಮ್ರಾಜ್ಯಮಂ ಸಾರ್ಚಿ, ಪತಿಕಾರ್ಯದೊಳರ್ಪಿತಪ್ರಾಣನೆನಿಸಿ, ಒರ್ಮೆಯುತ್ತರ ದಿಗ್ವಿಜಯದೊಳುದ್ವೃತ್ತಯವನಸೇನಾಚಕ್ರಮನೊಕ್ಕಲಿಕ್ಕಿ ಯಶಶ್ಶೇಷನಪ್ಪಿನಮವನನುಜಂ ಎರೆದಿಮ್ಮರಾಜನಂದಿನಾಜಿಯೊಳಳಿದುಳಿದರನೊಡಗೊಂಡೂರ್ಗೆ ನಡೆತಂದಾಳ್ದನ ಸಿರಿಗೆಳಸಿಯವನಂ ಭಂಗಿಸಿ, ತಾನೆ ರಾಯನೆನಿಸಿರ್ದಳಿಗಜ್ಜದಿಂದಾ ವಿದ್ಯಾನಗರಂ ಕಿರಿದುಂ ದಿನಕ್ಕೆ ತುರುಷ್ಕರಿಂದಳಿಯಲೊಡಂ, ಅಲ್ಲಿಂ ಪೆನುಗೊಂಡೆಗೆಯ್ತಂದು ಒಂದೆರಳ್ವರಿಸಮಿರ್ದು ಪೊಂದಿ ಪೋಪಾಗಳ್– ತನ್ನ ಮೂವರ್ಕುವರರೊಳ್ ಮೊದಲಿಗನಾದ ಶ್ರೀರಂಗರಾಜನಂ ಪೆನುಗೊಂಡೆಯೊಳಿಟ್ಟಾತಂಗೆ ತೆಲುಂಗನಾಡೊಡೆತನಮಂ, ಎರಡನೆಯ ರಾಮರಾಯನಂ ಶ್ರೀರಂಗ

ಶುಭಮಸ್ತು ಶ್ರೀಮತೇ ರಾಮಾನುಜಾಯ ನಮಃ ಶ್ರೀಶೈಲಾರ್ಯ ಗುರವೇ ನಮಃ (ಕ.೧೩೭)

ಪಟ್ಟಣದೊಳಿರಿಸಿಯವಂಗೆ ಕರ್ಣಾಟದೇಶಾಧಿಪತ್ಯಮಂ, ಮೂರನೆಯ ವೆಂಕಟಪತಿರಾಯನಂ ಚಂದ್ರಗಿರಿಯೊಳಿಟ್ಟು ಆತಂಗೆ ತುಂಡೀರ ಚೋಳ ಪಾಂಡ್ಯ ಮಂಡಲೇಶ್ವರತ್ವಮನಿತ್ತಂ ಇವರೊಳ್ ಶ್ರೀರಂಗರಾಜನ ಪುತ್ರನಾಗಿ ಬರ್ದಿಲಮನ್ನೆದಲೊಡಂ ಆ ವೆಂಕಟಪತಿರಾಯಂ ಪೆನುಗೊಂಡೆಯೊಳಿರ್ದೆಳೆಯ ಪರಿಪಾಲಿಸುತ್ತಿರೆ–

ಇತ್ತಲೀ ರಾಮರಾಜಂ ಕೆಲವುಂ ಕಾಲಕ್ಕೆ ಕಾಲಧರ್ಮಮನೆಯ್ದಿದ ಬಳಿಕ ತಿರುಮಲರಾಜಂ ಮೊದಲಾದ ಅವನ ಕುವರರ್ ಶ್ರೀರಂಗಪಟ್ಟಣದಲ್ಲಿ ರೇಮಟಿ ವೆಂಕಟಯ್ಯನೆಂಬ ತಮ್ಮ ದಳವಾಯನಿರಿಸಿ ತಾಮೆಳವರಯದವರಾದುದರಿಂದೆ ಪೆನುಗೊಂಡೆಯಂ ಪೊರ್ದಿ ಕಿರಿಯಯ್ಯನ ಬಳಿಯೊಳಿರ್ದು ಬೆಳೆದರ್ಬಳಿಕ್ಕಾ ವೆಂಕಟಪತಿರಾಯಂ ಮಧುರೆಯ ವೀರಪ್ಪನಾಯಕನೊಳ್ಮುನಿದು ದಂಡೆತ್ತಿ ನಡೆದು, ಪಾಂಡ್ಯಮಂಡಲದ ಮಧುರಾಪುರಮಂ ಸುತ್ತಿ ಮುತ್ತಿರ್ಪಿನಮಾ ವೀರಪ್ಪನಾಯಕಂ ಭೇದೋಪಾಯಮನವಲಂಬಿಸಿ, ರಾಯನ ಸೇನಾನಾಯಕರ್ಗೆ ದ್ರವ್ಯಭೂಷಣಂಗಳಂ ಕಳುಪಲೊಡಮೀ ತಿರುಮಲರಾಜನಾ ಲಂಚಮಂ ಕೊಂಡದರ್ಕೆ ವಿವೇಕದೊಡನೆ ತನ್ನುಮಂ ಕೀರ್ತಿಯುಮಂ ಸುಕೃತಮುಮಂ ಮಾರಿ ತಂದೆಯುಮಾಳ್ದನುಮಪ್ಪ ಕಿರಿಯಯ್ಯನೊಳ್ ಗೆಂಟುಗೊಂಡು ತನ್ನ ಕರಿತುರಗಪದಾತಿಗಳ್ವೆರಸತ್ತಣಿಂ ಶ್ರೀರಂಗಪಟ್ಟಣಕ್ಕೆ ಬಂದನೆಂಬ ವಾರ್ತೆ ಬರಲೊಡಂ ಅದಂ ಕೇಳ್ದು ರಾಜನೃಪಂ ತನ್ನನುಜಸೇನಾನಿಮಹಾಮಾತ್ಯಮಿತ್ರರೊಡನಾಳೋಚಿಸಿ ನಿಶ್ಚಯಂಗೆಯ್ದು– ಈ ಪಿತೃಘಾತಿಯನೀ ಪಟ್ಟಣದಿಂ ಪೊರಮಡಿಸವೇಳ್ಕುಂ, ಅದರ್ಕಿವನ ಸಪ್ತಾಂಗದಿರವ ನಾರೆಯ್ವೆನೆಂದು ಗೂಢಚಾರರಂ ಪ್ರಣಿಧಿಗಳುಮಂ ಕಳುಪುವಿನಂ; ಅವರ್ ಅಲ್ಲಿ ಕೆಲವುಂ ದಿವಸಮಿರ್ದು ಮಗುಳ್ದಾಳ್ದನೆಡೆಗೇಳ್ತಂದು ಒಳವೋಲಗದೊಳ್ ಕೈಮುಗಿದು ಬಿನ್ನಪಂಗೆಯ್ದರ್ ಅದೆಂತೆನೆ–

ದೇವ, ಚಿತ್ತೈಸಾ ಪೊಳಲಂ ಬಳಸಿ ಬಲ್ವೊಳೆ ಕಲ್ಲೋದಧಿಯಂತಿರ್ತ್ತಡಿಯಂ ಕೈಗಣ್ಮಿ ಪೊಣ್ಮಿ ಬರ್ಪೂರ್ಮಿಗಳಿಂ, ಕಟ್ಟುರದಿಂ ಪರಿವ ನೀರ್ವೊನಲೊಳವೊಯ್ಲ ಕೋಲಾಹಲಂಗಳಿಂದೆಡೆಯೆಡೆಯೊಳೊಗೆದು ಸುರ್ರನೆ ಸುತ್ತಿ ಗರ್ತದಂತಿಳಿವ ಮಹಾವರ್ತಂಗಳಿಂ, ತಿಮಿತಿಮಿಂಗಿಳಂಗಳಂ ಕೆಳೆಗೊಳ್ವ ಪೆರ್ಮೀನ್ಗಳ ಬಾಳಚಳನದಿಂ ಕರೆಗಣ್ಮುವ ಕಮ್ಮಡುವಿನೆಡೆಯೊಳ್ದಡದಡಿಸಿ ನಾವೆಯೊಳಿಡಿಕಿರಿದ ಜನದಾರ್ತ ನಿನದ [ಕೋಲಾಹಲದಿಂ*]ದಿತ್ತಣಿನತ್ತಣ್ಗೆ ಪಾರಲರಿಯುದೆರಂಕೆಯುಲುಂಕಿ ಯಳವಳಿದೆಡೆಯೊಳ್ ಪಡಲ್ವಡುವ ಪಲವಕ್ಕಿಗಳ ಮೊತ್ತಮಂ ಕುತ್ತಲೆಂದು ಸಿಡಿವ ನೀರ್ಮೀನ್ಗಳಿಂ, ನೀರ್ಗುಡಿಯಲ್ಕಿಳಿವುರ್ಕಾನೆಗಳ ಸೊರ್ಕಿನ ಸೊವಡಂ ಸವಿದು ಕನಲ್ದು ಕಾದುವ ನೀರಾನೆಗಳಿಂ, ಮಹಾತ್ಸ್ರದಂಗಳಂ ಮುನ್ನೀರ್ಗೆತ್ತು ನೀರನೀಂಟುವ ಕಾರ್ಮುಗಿಲ್ಗಳನಾನೆಯೆಂದು ಒಗೆದು ನುಂಗಲಂಗವಿಪ ನಕ್ರಂಗಳಿಂದತಿಭೀಕರ ಮನಿಸಿಯುಲಂಘನೀಯಮಾಗಿರ್ಪುದು ಅದರ ಒಳವಳಯದ ಕೋಂಟೆ ಸುರಪುರದ

ಸಾಲೌನ್ನತ್ಯಮ ಕೀಳ್ಗೆಯ್ಯಲೆಂದು ಬಳೆದಿರ್ಪುದು ಅಲ್ಲಿಯ ಮುಗಿಲಟ್ಟಳೆಗಳೊಳಿರ್ಪ ಕಾವಲವರ್ಗೆ ಸೂರ್‍ಯಮಂಡಲಂ ಮಂಡೆದೆಸೆಯೊಳಿರ್ದೊಡಮಡಿಗೋಂಟೆಯಂ ಪೊಡೆಪೊಡೆದು ಸಿಡಿವ ಪೊಳೆಯ ತೆರೆಯ ನೀರ್ಪನಿಗಳಿಂ ನನೆದಾ ಶೀತೋಷ್ಣಂಗಳಂ, ಸರಿಗೆಯ್ದು ಸೊಗದೊಳಿರ್ಪರಾಳ್ವೇರಿ ನೆಲಗಟ್ಟಗುಳ್ ನಾಗಭುವನದಿಂ ನಾಕಲೋಕಂಬರಂ ಮೀರಿ ಬಳೆದ ಕೋಂಟೆಯನಳೆವಾಗಳ್ಬರೆದ ಸ್ವರ್ಗ್ಗಮರ್ತ್ಯಪಾತಾಳಂಗಳಳತೆಗೆರೆಗಳಂತಿರ್ಪುವು; ಸುತ್ತಣ ಕೊತ್ತಳಂಗಳ್ಗೋತ್ರಾರಿಯ ವಜ್ರಹತಿಗಳ್ಗಿ ವಂದು ರಂಗೇಶನಂ ಮರೆವೊಕ್ಕು ಶತಘ್ನೀವ್ಯಾಜದಿಂ ಕೌಮೋದಕೀ ಮುದ್ರೆಯಂ ವಹಿಸಿ ನಿರ್ಭಯಂ ಬೆತ್ತ ಕುಲಾಚಲಂಗಳಂತಿರ್ಪುವು; ಆ ಚೌವೀಧಿಯೊಳೆಸೆವ ಪೊನ್ನರನ್ನದ ನೆಲೆವಾಡಂಗಳ್ ರಂಗೇಶನಂ ಸೇವಿಸಲಿಳಿತಂದ ವೈಮಾನಿಕರ ದಿವ್ಯವಿಮಾನಗಳಂತಿರ್ಪುವು; ದಿವ್ಯವಿಮಾನಮಂಟಪ ಪ್ರಾಕಾರಗೋಪುರಗಳಿಂದೆಸೆವ ದೇಗುಲಂ ವೈಕುಂಠದಂತಿರ್ಪುದಲ್ಲಿ ಶೇಷತಲ್ಪದೊಳ್ಪವಡಿಸಿದ ಶ್ರೀರಂಗನಾಥಂ ವೈಕುಂಠಪತಿಯಂತಿರ್ಪಂತಿರ್ಪ ಪುರವರಮಂ ಪೊರೆವರಸನಿರಲುಮವನನುಚರರ ಪರಿಯುಮವನ ಸೇನಾನಿಯ ನಯಮುಮವನ ಮಿತ್ರರ ಚರಿತಮುಮವನಮಾತ್ಯರ ಕೃತ್ಯಮುಮತ್ಯಂತವಿಚಿತ್ರಮಾಗಿರ್ಪುದದಂ ದೇವರಡಿಯೆಡೆ ಯೊಳ್ಬಿನ್ನವಿಪೊಡೆಮಗಳ್ಕುದೋರುತಿರ್ಕುಮೆಂದವರ್ಪಿಂದೆಗೆಯಲೊಡಮೀ ರಾಜ ನೃಪನವರೊಳ್ದಯಾವಲೋಕನಮಂ ಸುಳಿಸಿ ಅಪ್ರಿಯಮಾದೊಡಂ, ಗ್ರಾಮ್ಯಮಾದೊಡಂ, ಪಳಿವಾದೊಡಂ, ಪರಿಹಾಸಮಾದೊಡಂ, ಚುನ್ನವಾದೊಡಂ, ಜುಗುಪ್ಸೆಯಾದೊಡಮಿರ್ದ್ದುದನಿರ್ದ್ದಂತರಸಂಗೆ ಒಳವೋಲಗದೊಳರಿಪುವುದೆ ದೂತರ್ಗೆ ನೀತಿ; ನೀಮದರಿಂ ಬೆರ್ಚದೆ ಬಿತ್ತರಿಪುದೆಂದಾಣತಿಯಿಾವುದುಮವರ್ ಬಿನ್ನವಿಸಿದರ್ ಅದೆಂತೆನೆ–

ಆ ರಾಯಂ ಚೆಲ್ವಂ ಪಡೆದ ಕಡುಪಿಂ ಮಡದಿಯರ ಮೆಯ್ಯೂಟದೊಳೆಡೆ ವಿಡದಿರ್ದು ಕಂಟಕಶೋಧನ ಪ್ರಜಾಪಾಲನ ದಂಡಯಾತ್ರಾದಿ ಕ್ಷಾತ್ರ ಸ್ವಭಾವಕರ್ಮಮಂ ತತ್ತಧಿಕಾರಿಗಳ್ಗೊಪ್ಪಿಸಿರ್ಪಂ; ಅನುಚರರುಂ ಪೆಣ್ಣೂಟದೊಳ್ ನೆರವೆನಿಪ್ಪ ವೃಷ್ಯೌಷಧಮಂತ್ರತಂತ್ರಘುಟಿಕಾಮೂಲಿಕಾಸ್ರಕ್‌ಚಂದನಾದಿವಸ್ತುಸಂಪಾದನ ನಿಪುಣರೆನಿಸಿ ವಿಟವಿದೂಷಕಪ್ರಾಯರಾಗಿರ್ಪರ್; ಸೇನಾನಿ ಆನೆ ಕುದುರೆ [ಕಾ*] ಲಾಳ್ಗಳನೊಳ್ಗು ಗೆಯ್ದು ದಂಡೆತ್ತುವ ಯತ್ನಮನುಳಿದು ತನ್ನಾಳ್ದನಂ ಬೇಂಟೆಯೊಳ್ ಮೆಚ್ಚಿಸಿ ಬಸಂಗೆಯ್ದಪೆನೆಂದು ದಡಿವಲೆಗಳಂ ಬಡಿಕೋಲ್ಗಳನಂಟುಗಳೆಗಳಂ ಕಾಲ್ಗಣ್ಣಿಗಳಂ ಗಿಡುಗ ಸಾಳುವ ಜಾಯಿಲಂಗಳಂ ದೀಹದ ಮ್ರಿಗವಕ್ಕಿಗಳಂ ತರಿಸಿರಿಸಿ ಪರಿಕಿಪ ವ್ಯಾಪಾರದೊಳ್ ಬೇಡವಡೆಯೊಳೊಡವೆರೆದಿರ್ಪಂ; ಮಿತ್ರರೊಳುತ್ತಮರ್ ಈಯಿರ್ಕೆ ತಕ್ಕುದಲ್ತೆಂದು ಪಲರ್ಮೆ ತಿಳಿಪಿ ತಮ್ಮ ನುಡಿ ಬರಡಾದುದರಿಂ ಬಗೆದೆಗೆದಿರ್ಪರ್; ದುರ್ಮಿತ್ರರೀ ವ್ಯಸನಾಸಕ್ತಿಯಂ ಮಚ್ಚಿ ಮಚ್ಚಿ ಮನಂಗೊಂಡು

ಕೊಂಡಾಡಿ ತಾಮುಮಿದರೊಳಳ್ದು ಮುಳುಂಗಿರ್ಪರ್; ಮಂತ್ರಿಗಳೀ ರಾಜಸೇನಾನಿ ಪರಿಜನಂಗಳಿರವನಾರ್ಯೆದು ತಾಮಂದಂದುಳಿದಿರ್ಪುದೇ ಪರಮಲಾಭಮೆಂದು ತಮ್ಮಿಷ್ಟದೇವತೆಗಳ್ಗೆ ವಂದಿಸಿ ಅವರಳಿಗಜ್ಜಮನನುಮೋದನಂ ಗೆಯ್ವುತೆ ಹಿತಾಹಿತಚಿಂತೆಯನುಳಿದಿರ್ಪರ್; ಕಾಯಸ್ಥ ಪ್ರಾಡ್ವಿವಾಕಾದಿ ವಿವಿಧಾಧಿಕಾರಿಗಳು ತ್ಕೋಚವಂಚನಾದಿಗಳಿಂದೆಡೆಗೆಡೆಗಿರ್ಮಡಿಸುವ ತೆರಿಗೆ ಬೇಡಿಗೆ ಬಿರಾಡ ಬಿಟ್ಟಿಗಳುಟ್ಟುಳಿಯಿಂ ಪ್ರಜೆಗಳಂ ಕಿಡಿಪರೆಂದು ನುಡಿದೊರ್ವ್ವಂ ಸುಮ್ಮನಿರೆ ಪೆರತೊರ್ವಂ ಬೇಹಿಗನಿಂತೆಂದಂ–

ಜೀಯಾ, ಚಿತ್ತವಿಸು; ಇವರಿರವಂ ಕೇಳ್ವುದರಿದಾದೊಡಂ ಸ್ವೈರಣೆಗೊಂಡಾಲಿಪುದು; ಪೊಳ್ತರೆಯುಣಿಸಿಂಗೆಂದು ತೆಲುಂಗರಡಿಗೆವನೆಯೊಳ್ ತುಪ್ಪಳ್ಗಿತ್ತು ಕತ್ತರಿಪ ಪಲವಕ್ಕಿಗಳುಲಿಗೇಳ್ದುಪ್ಪವಡಿಪರ್; ಬಳಿಕ್ಕೊಲೆಗೆಂಡದೊಳ್ ಸುಡುವ ಪಳಗಂಡದ ಪೊಲಸುಗಂಪಿಂಗೆ ಪೇಸಿದಂತೆಡೆಯೆಡೆಯೊಳ್ ಮೂಗುವಿಡಿದು ಸಂಧ್ಯಾಜಪಮನೊಡರಿಪರ್; ಉಣ್ಬಾಗಳ್ ಕಳವೆಯೋಗರಮುಮಂ ಕಾಯ್ಕಿಚ್ಚಡಿ ಕಜ್ಜಾಯಂಗಳುಮಂ ಕಳೆದು ಪಾಲ್ಮೊಸರ್ಗಳಂ ಪಳಿದು ಕರುಳ್ ಬಾಡು ಮಿದುಳ್ಗಳಂ ತಿಂದು ಬಸಿನೆತ್ತರನೀಂಟಿ ಬೆರೆತು ಬೀಗಿ ತೇಗಿಯುರ್ಕಿ ಸೊರ್ಕಿ ಪೆರ್ಕಳಿಸುವರ್; ಬಳಿಕ್ಕೆ ಮಿಕ್ಕ ಪೊಳ್ತಂ ಕೋಳಿತಗರ್ಗಳ ಜೂದುಗಾಳೆಗದೊಳ್ ಕಳೆದು ಅಲ್ಲಿ ಸೋಲ್ತುದಂ ತಮ್ಮತಮ್ಮಡಿಗೆವನೆಗಂ ತಮ್ಮ ನೇಹಿಗರ ಮನೆಗಂ ತಾಮೆ ಕೊಯ್ದು ಪರ್ಚುಕುಡುವರ್; ಸಂಜೆಯೊಳ್ ಮಿಗವೇಂಟೆಗಾರರ್ ಪಂದಿ ಮೊಲ ಪುಲ್ಲೆಮರೆ ಸಾರಂಗಗಳ್ ಮೊದಲಾದ ಮಿಗಂಗಳಂ, ಪಕ್ಕಿವೇಂಟೆಗಾರರ್ ಸೋಗೆ ಲಾವುಗೆ ಗವುಜು ಗೀಜುಗ ಗೊರವ ಪಾರಿವ ಗುಬ್ಬಿ ಕರ್ಬಕ್ಕಿ ಬೆಳ್ಳಕ್ಕಿಗಳ್ ಮೊದಲಾದ ಪಕ್ಕಿಗಳಂ, ನೀರ್ವೆಂಟೆಗಾರರ್ ಮೀನೇಡಿಯಾಮೆಗಳ್ ಮೊದಲಾದ ಜಲಚರಪ್ರಾಣಿಗಳಂ, ಕಿರುವೇಂಟೆಗಾರರ್ ಇಲಿ ಬೆಳ್ಳಿಲಿ ಮೊದಲಾದ ಬಿಲಚರಪ್ರಾಣಿಗಳಂ ತಂದು ಮುಂದಿರಿಪುದುಂ; ಅವಂ ನಿಟ್ಟಿಸಿ ಕೈಮುಟ್ಟಿ ಪರಿಕಿಸಿಯವರೊಳ್ ಸಾರಮನರಿತು ಸಂತಸಂಬಟ್ಟು, ಅವಂ ತಂದವರ್ಗಿಷ್ಟಾರ್ಥಮಂ ಕೊಟ್ಟುಮನ್ನಿಪರ್; ಮತ್ತಮೇಂ ಊರ್ವಂದಿಯಂ ತಂದವಂಗೂರುಂಬಳಿಯನೀವರ್; ಕುರಿಯಂ ತಂದವಂಗೆ ತೆರಿಗೆಯಂ ಮನ್ನಿಪರ್; ಗೆಂಡೆಮೀನಂ ತಂದವಂಗೆ ದಂಡಿಗೆಯನಿಕ್ಕುವರ್; ಉಡುವಂ ತಂದವಂಗೆ ಕೊಡಗಿಯಂ ಕೊಡುವರ್; ಇನಿತರಿಂ ತಣಿಯದೊಂದೊಂದು ದಿವಸಂ ತಾಮೆ ವಿಲಾಸದಿಂ ತಮ್ಮ ನೇಹಿಗರ್ವೆರಸು ಬೇಂಟೆಗೊಳವಿಗಳಂ ತಳೆದು ಪೊರಮಟ್ಟು ದೇಗುಲದ ಗೋಪುರ ಪ್ರಾಕಾರ ಮಂಟಪ ವಿಮಾನಂಗಳೊಳ್ನೆಲಸಿರ್ಪ ಕಿರುವಕ್ಕಿಗಳನೂದಿ ಮಿಂಟೆಗಳಿಂದಿಟ್ಟು ಕೆಡಪಿಯುವರೊಳೊಂದೊಂದು ಗರ್ಭಗೃಹಮಂ ಪೊಕ್ಕೊಡಂ ಬಿಡದೆ ಸಿಡಿದಲೆಯಿಕ್ಕಿ ತಂದು ಅವು ಸ್ವಾರ್ಜಿತಂಗಳಾದುದರಿಂದತಿ ಪ್ರೀತಿಯಿಂ ತಮ್ಮ ತಮ್ಮ ಸತಿಸುತಹಿತರೊಡವೆರಸುಣ್ಬರ್; ಇಂತೆತ್ತಾನುಮೊರ್ಮೆ ಸವನಿಸದೆ ಪೋಪುದೆಂಬ

ತಳ್ತಂಕದಿಂ ತಮ್ಮ ತಮ್ಮ ಮನೆಯೊಳೆ ಸಾಕುವ ಕೋಳಿ ಹುಂಜಮುರಿ ಮೊಟ್ಟೆಗಳುಮಂ, ಪಂದಿಯ ಸಲಗ ಮರಿಯೆಡೆಮರಿ ಕಿರುವರಿಗಳುಮಂ ಲಾವಣಿಗೆಗೊಂಡು ಪದುಳದಿನಿರ್ಪರ್; ಊರೂರ್ಗಳಿಂ ತರ್ಪುಲುಪೆಗಳ ಪಣ್ಗಾಯ್ಕುರ್ಬೆಳನೀರ್ಗಳಂ ಕಸನೆಂದು ಮಾಣಿಸಿ ಮಿಗವಕ್ಕಿಗಳಂ ತರ್ಪುದೆಂದು ನಿರವಿಸುವರ್; ಅಂತುಮಲ್ಲದೆ ಅವರಂಗಳಂಗಳಾವಗಂ ಕೊಯ್ದೆಡೆದುಗಿದ ಪಸಿದೊವಲ್ಗಳಿಂ, ಪಳಯಲುಗಳಿಂ, ಗಿಳಿಯ ತುಪ್ಪುಳ್ಗಳಿಂ, ಪಂದಿಯ ಮೆಯ್ನವಿರ್ಗಳಿಂ, ಮಾಂಸಮಂ ಸಂಸ್ಕರಿಸಲ್ಕೆಡೆ ವಿಡದಡಿದೆಡೆಯೊಳುದಿರ್ದರಿಸಿನವುಡಿಗಳಿಂದೆಸೆವ ಪಂಚವರ್ಣದ ರಂಗವಲ್ಲಿಗಳಿಂ ಇರ್ತ್ತರದೊಳ್ಕಟ್ಟಿದ ನೇಣ್ಗಳೊಳ್ ನೇಲ್ದೊಣಗುವ ಕೆಂಗುಡ್ಡದ ಚಿಗುರ್ದೋರಣದಿಂ, ಕಿರುನರದೊಳ್ಕೋದು ಬಿಗಿದು ಜೋಲ್ವೆಳಮಿಾನ್ಗಳ ಸರದ ಮುತ್ತಿನ ಲಂಬಣಂಗಳಿಂ, ನಿಡುಗರುಳ ಪವಳದ ಸರಂಗಳಿಂ, ದೀಹವಕ್ಕಿಗಳಿಂಚರದ ಕೊಳಲ್ಮೊಗಬೀಣೆಗಳಿಂದರೆ ವರಣದೂರ್ವಂದಿಗಳ್ ಚೀರುವ ದನಿಯ ಬುರುಗುಗಳಿಂ, ಪುಂಜಗಳುಗ್ಗಡಣೆಯ ಕಾಳೆಗಳಿಂದರೆಗೊರಲನರಿವೆಡೆಯೊಳ್ ಪೊಡವಿಯನೊದೆವಾಡುಕುರಿಗಳ ಖುರಪುಟನಿನದದ ಮುರಜಂಗಳಿಂ, ಪುರದಿರಿಸಿದೀಚಲ್ಪುಳು ಕೆಂಜಿಗೆಗಳ ಲಾಜಾಕ್ಷತೆಗಳಿಂ, ಪರಿದು ಕಿಳ್ತ ಪೆರ್ಗಿಳಿಗಳ ನಿಡುಗರಿಗಳ ದರ್ಭೆಗಳಿಂದಾಮೆಯೋಡ ಕಪ್ಪರೆಯೊಳ್ ತೀವಿದ ಬಸೆಯ ಹೋಮದ್ರವ್ಯದಿಂ, ಪೊಸನೆತ್ತರೋಕುಳಿಯಿಂ, ಪಾಪಕನ್ಯೆಯ ಮದುವೆಮನೆಯಂತಿರ್ಪುವು; ಮತ್ತಮವರ ಪಸುಳೆಗಳ್ ಪಕ್ಕಿಗಳ ಸಿಡಿದಲೆಯೊಳ್ ತಿರಿಕಲ್ಲಾಟವಮಂ, ಕೈಕಾಲ್ಗಳೆಲುಗಳ ನುಡಿವೆಡೆಯೊಳ್ ಕೋಲಾಟಮಂ, ಕೀರಿದು ಪಾರಿ ಬವಣಿಗೊಂಬ ಮರಿವಕ್ಕಿಗಳನಟ್ಟಿ ತಱುಬಿ ಪಿಡಿವಲ್ಲಿ ಪೆರಿವರಿಯಾಟಮಂ, ತುಪ್ಪುಳ್ಗೀಳೆ ಸಿಡಿವ ಪಾರಿವಂಗಳಂ ಪೊಯ್ದು ನೆಲಕ್ಕೆ ಕೆಡಪುವಲ್ಲಿ ಪೊಡೆ ಸೆಂಡಾಟಮಂ, ತುಡುಂಕಿ ಪಿಡಿವಡೆಯೊಳ್ಕೊಡಪುವ ಕೋಳಿಯೆರಂಕೆಯ ಪೊಯ್ದಿಂ ನೆಗೆದ ದೂಳಿ ಕಣ್ಗೆ ಬೀಳೆ ಕಣ್ಮುಚ್ಚುವುದರಿಂ ಕಣ್ಮುಚ್ಚಾಟಮಂ ಕಲ್ವರ್; ಅಂತುಮಲ್ಲದೆ ಅವರ್ಗೆ ಹರಣಂ ಬೆರಸು ಚುರ್ಚುವ ಸಲಗನರಿಚದಂತೆ ಬಾಯ್ಮುಚ್ಚಿ ಪಿಡಿವುದರೊಳ್ಮುಷ್ಟಿಶಕ್ತಿಯುಮಂಗಳವರದೊಳಿರ್ಪ ಮರಿಗುಬ್ಬಿಯಂ ಕೊಳವಿಮಿಾಂಟೆಗಳಿಂದಿಟ್ಟು ಕೆಡಪಲ್ ಗುರಿನೋಳ್ಪಲ್ಲಿ ದೃಷ್ಟಿಶಕಿಯುಂ, ಹಬ್ಬ ಮದುವೆ ಬಿದ್ರೂಟಂಗಳೊಳ್ಪಲವಾಡು ಕುರಿಗಳಂ ತರಿವಾಗಳ್ ತೋಳ ಬಲ್ಪುಂ, ಪರಿದೋಡುವ ಪಂದಿಯಂ ತವಕದಿನಟ್ಟಿ ಪಿಡಿವಲ್ಲಿ ಕಾಲ ಬೇಗಮುಂ ಕೊಯ್ವ ಕೊರೆವ ಕೊರ್ಚುವೆಡೆವುಗಿವ ಸೀಳ್ವ ಕಡಿವ ಕತ್ತರಿಪ ಮಿದಿವ ಸದೆವರಿವುದುರ್ಚುವ ಸುಡುವಡುವ ಸುಂಟಿಗೆಗಳೆವ ನೆತ್ತರ್ಗರೆವ ಬಸೆದೆಗೆವ ಕರುಳನುರ್ಚುವ ಗೆಯ್ಮೆಯೊಳ್ ಕೈಮೆಯುಂ ಸಫಲಮಪ್ಪವು; ಮತ್ತಂ ಇವರ ನೋಟದೊಳೆ ಕಣ್ಗಳನಿವರ ದನಿಯೊಳೆ ಕಿವಿಗಳನಿವರ ಸೊವಡೊಳೆ ಮೂಗನಿವರ ಸೋಂಕಿನೊಳೆ ತೊವಲುನಿವರ ಸವಿಯೊಳೆ ರಸನೆಯಂ ಸವಿಗಾಣಿಸಿ ಪೆರತೊಂದರೊಳಾಸೆಯಂ ತೊರೆಯಿಸಿ ಕಡುಸಂತಸಂ ಬಡೆದಿರ್ಪರ್; ಮತಮೇಂ ಕಿರಿದುಂ ದಿವಸದೊಳೆ

ಪೊಳೆಯ ಮೀಂಗಳುಂ ಬನದ ಪಕ್ಕಿಗಳುಂ ಬಿಲದಿಲಿಗಳುಂ ತೀರ್ವುವು; ಆ ಬಳಿಕ್ಕವರೆಂತಿರ್ಪರೊ; ತಂದೆಯ ತದ್ದಿನಮೆಂದೊಂದು ದಿವಸಮುಳಿದುದಕ್ಕೆ ಮೆಯ್ಗರಗುವರ್; ಏಕಾದಶಿಯೊಳಿವಿಲ್ಲದುದರ್ಕೆ ಬಾಯ್ನೀರೊರೆತು ಬಣ್ಣಂಗುಂದುವರ್; ಕಟ್ಟೆಡರೊಳಂ ಬಿಟ್ಟಿರಲಾರದೆ ಸುಟ್ಟ ಪಕ್ಕಿಂಯುನೆಡಗೆಂಯ್ಯೊಳಿಟ್ಟು ಆ ಗಂಧಮನಾಘ್ರಾಣಿಸುತೆ ಪಥ್ಯಮಂ ಕೊಂಬರ್ ಎಂದು ಬಿನ್ನವಿಸುತ್ತಿರೆ– ಅರಸನದರ್ಕೆ ಪೇಸಿ ಪೆರತೊಂದಂ ಕೇಳ್ವೆನೆಂದದಂ ಮಾಣಿಸಿ ಅವರ ಸಂಧಿವಿಗ್ರಹಾದಿ ಷಾಡ್ಗುಣ್ಯದೆಸಕಮಂ ಬೆಸಗೊಳೆ ಪೇಳ್ದಂ:

ದೇವ, ಚಿತ್ತವಿಸು ಆಂ ಬಿನ್ನವಿಪುದರೊಳೇನಾನುಂ ಮರೆಮೋಸದಿಂ ಪೆರ್ಚು ಕುಂದುಳ್ಳೊಡದಂ ಸೈರಿಪುದು; ಆ ತೆಲುಂಗರಾಯಗುವರಂ ಮಧುರೆಯತ್ತಣಿಂ ಪಡೆವೆರಸು ಬರ್ಪುದಂ ಕೇಳ್ದು ಈ ಪ್ರಾಂತದ ನಾಡುಬೀಡುಗಳನಾಳ್ವ ಪಾರ್ವ ದೊರೆಗಳುಮರಸುಮಕ್ಕಳುಮೊಕ್ಕಲಿಗರುಂ ಬಣಂಜಿಗರುಂ ಬೇಡರುಂ ಮೊದಲಾದ ಪಲಂಬರ್ ಪ್ರಭುಗಳ್ ತಮ್ಮುಳ್ಳ ಧನಕನಕವಸ್ತುವಾಹನಂಗಳಂ ಕೊಂಡು ಕಾಲ್ಗೆರಗಿ ಕಪ್ಪಕಾಣ್ಕೆಗಳನೊಪ್ಪಿಸಿಯವನ ಮುದ್ರೆಯಂ ವಹಿಸಿಯುಂ ಪೆಸರ್ವೊತ್ತುಮಾಳ್ವೈದುಂ ಅವನೊಲವಂ ಪಡೆದು ತಮ್ಮ ತಮ್ಮ ನೆಲದೊಡೆತನಮಂ ನೆಲೆಗೊಳಿಸಿಯನಿ ಬರುಮೊಂದಾಗಿ ಪೊಸನೇಸರೊಳ್ ಪೊಣರ್ಕೆಗೆಳಸುವ ಮರ್ಬಿನ ಪರ್ಬುಗೆ ಯಂತೆಯುಂ, ಬಿರುಗಾಳಿಯಂ ತರುಬಲೆಣಿಸುವ ಮುಗಿಲ ಮೋಹರದಂತೆಯುಂ, ಪೆರ್ಗಿರ್ಚಿಗಿದಿರ್ಚಿ ನಿಲಲ್ಬಯಸುವ ಪಳ್ತಿಯ ಮೊತ್ತದಂತೆಯುಂ, ಕರೆಗಣ್ಮುವ ಪೊಳೆಯ ಪೆರ್ಮೆಗೆ ಮಾರ್ಮಲೆಯಲಾಸೆವಡುವ ಮಳಲ್ಗಟ್ಟೆಯಂತೆಯುಂ, ಪಕ್ಕಿಯಾಳ್ಮನೊಳ್ಳಳಂಚಲ್ ಪೊಂಚುವೊಳ್ಗೆಗಳೊಳ್ಗಿನಂತೆಯುಂ ಗಂಡುಸಾಳ್ವನ ನಂಡಲೆಯುಲುರವಣಿಪ ಗೂಗೆಗಳ ಗುಂಪಿನಂತೆಯುಂ, ಮತ್ತಮೇಂ, ಸಿಂಗದೊಳ್ ಕಾದಲಂಗವಿಪ ಜಾಯಿಲಂಗಳ ಜಂಗುಳಿಯಂತೆಯುಮವರ್ ಮುಂತರಿಯದೆ ದೇವರಡಿಯೊಳ್ ಮಚ್ಚರಮಂ ಮನಂಗೊಳಿಸಿರ್ಪರೆಂಬುದುಂ; ಅರಸನಾ ದೂತನ ಮೊಗಮಂ ನೋಡಿ– ನಿನ್ನೀ ಈ ನುಡಿಗಳೆಮಗೆ ಕಿವಿಗೊಳವೇಳ್ಕುಮೆಂದು ಕಂಡುದರೊಳ್ ಕೆಲಕೆಲವಂ ಕೂಡಿ ಕಳದು ಕಬ್ಬಂ ಗೆಯ್ಯದಿರ್ದುದನಿರ್ದಂತೆ ಪೇಳ್; ಅವರೆನ್ನೆಡೆಯೊಳೆಣಿಸಬಾರದುದನೆಣಿಸಿದೊಡವಾಡಬಾರದುದ ನಾಡಿದೊಡಮೆಸಗಬಾರದುದನೆಸಗಿದೊಡಮದರ್ಕಂಜದಿರೆಂದು ನಿರವಿಪ್ಪುದುಂ; ಅವಂ ಕೈಮುಗಿದಿಂತೆಂದಂ:

ದೇವ, ನೀನೆನ್ನ ಬಿನ್ನಪಮಂ ದಯೆಯಿಂದಾಲಿಪುದು; ಒರ್ಮೆ ಆ ತಿರುಮಲರಾಜಂ ಒಡ್ಡೋಲಗದೊಳ್ ತನ್ನೆಡಬಲದೊಳ್ ನಿಂದಿರ್ದಖಿಳ ಪ್ರಭುಗಳೊಳ್ ಕಟಾಕ್ಷಾಮೃತಮಂ ಕವಿಸಿ– ನಿಮ್ಮ ನಿಮ್ಮ ನಾಡು ಬೀಡುಗಳ ಪಡುಳದ ಪರಿಯೆಂತುಂ ಎನಲ್ ಒಡನವರನಿಬರುಮೊಂದಾಗಿ ವಂದನಂಗೆಯ್ದು ಒಂದೆ ಸೊಲ್ಲೊಳ್ ಮೈಸೂರ ರಾಜೊಡೆಯರಟ್ಟುಳಿ ಬೆಟ್ಟಿತೆಂದು ಗಾವಳಿಪುದುಂ;

ಆ ರಾಯಂ ಪಡಿಯರರ ಮೊಗಮಂ ನಿಟ್ಟಿಸಿ ಅವರಾ ಕಳಕಳಮಂ ಮಾಣಿಸಿ ಪರಿವಿಡಿಯಿಂದೋರೊರ್ವರೆ ಬಿನ್ನವಿಸಿಮೆಂಬುದುಂ–

ಮೆಯ್ಯಿಕ್ಕಿ ಕಾರಿಗೆಹಳ್ಳಿಯವನಿಂತೆಂದಂ: ಜೀಯಾ, ಕೇಳ್ ಎಮ್ಮ ಪೊಳಲ್ಗೆ ಕೇರಿಗಳಾರು; ದೊರೆಗಳುಮರುವರೊಡವುಟ್ಟಿದರಾ ಕೇರಿಗಳಂ ಪರ್ಚುಗೊಂಡು ಓರೊರ್ವರೊಂದೊಂದುಕೇರಿಯೊಳರಸುಗೆಯ್ಯುತ್ತಿರ್ದೆವು; ಇಂತಿರ್ಪೆಮಗೆ ಎಲ್ಲವೊಲದತ್ತಣಿನಾ ರಾಜನೃಪನೊಳ್ ಪಗೆತನಂ ಬಳೆದು ಎಡೆವಿಡದೆ ಕಾದುವೆಡೆಯೊಳ್ ಅಂದಂದಿಂಗೆನ್ನೊಡವುಟ್ಟಿದರೈವರ್ ಕಡಿವೆಡೆದು ಮಡಿದರ್; ಆ ಬಳಿಕಾನುಮವನಿಂದಳಿವನೇ ನಿಶ್ಚಯಿಸಿ ನಿರ್ಭಯದೊಳವನೆಡೆಗೆ ದೂತರ ನಟ್ಟಿ ಇಂದಿನ ಕೊಳಗಳದೊಳೆರಳ್ಪಡೆಯುಂ ಪೋರದೆ ನೋಡುತಿರ್ಕೆ; ಆಮಿರ್ವರೆ ಕಾದುವಂ; ಆಗಳಾನೀ ಕತ್ತಿಯಿಂ ನಿನ್ನ ನೆತ್ತಿಯನೊತ್ತಿಕತ್ತರಿಪೆನ್; ಅದು ತಪ್ಪಿದೊಡೆನ್ನ ನಾಡುಬೀಡುಗಳನೊಪ್ಪಿಸಿ ಕಪ್ಪಡಮನುಟ್ಟು ಕಪ್ಪರೆವಿಡಿದು ಜೋಗಿಯಾಗಿ ಪೋಪೆನೆಂದು ಬೆಸಸಿ ಕಳುಪಿದುದಂ ಕೇಳ್ದು ಮಗುಳ್ದವನುಂ– ನೀನೆಂದುದೆಮಗೆ ಸಮ್ಮತಂ; ಆನುಮಿಂದೆನ್ನಯ ಎಡಗೆಯ್ಯ ಚಮ್ಮಟಿಗೆಯಿಂದಮೆ ನಿನ್ನ ಮೂಗಂ ಪರಿಗಡಿವೆನೆಂದು ಬೆಸಸಿ ಕಳುಪಿ, ಆಗಳೆ ಪಡೆಯನೊಡಗೊಂಡು ಬರ್ಪುದುಂ; ಆನುಮೆನ್ನ ಸರ್ವಬಲದೊಡನೆ ಇದಿರೇರಿ ಪೋದೆನ್; ಆಗಳೆರಳ್ದಳಮುಂ ಬೆರಗುವಟ್ಟು ನಿಟ್ಟಿಸುತ್ತಿರ್ಪಿನಂ ಆಮಿರ್ವರುಂ ವಾರುವಂಗಳನೇರಿ ರಾವುತತನದ ಬಿನ್ನಣಮಂ ಮೆರೆಯಲ್ ನಡೆಯಿಪುದುಂ, ಕುಣಿಯಿಪುದುಂ, ಪಾಯಿಪುದುಂ, ಸುತ್ತಿಪುದುಂ, ತೊಲಗಿಪುದುಂ, ದುವ್ವಾಳಿಪುದುಂ, ತರುಬುವುದುಮೆಂಬಿವು ಮೊದಲಾದ ಗತಿ ಭೇದಂಗಳಿಂದಿನಿಸುಂ ಪೊಳ್ತುಗಳೆವುತ್ತಿರ್ಪಿನಂ; ಆನೊತ್ತರಿಸಿ ಕತ್ತಿಯಿಂ ನೆತ್ತಿಯಂ ಪೊಯ್ಯಲೊಡನವಂ ತನ್ನ ಬಲಗೈಯ್ಯಲಗಿಂದಣೆದೊಡನೆಡಗೈಯ್ಯ ಚಮ್ಮಟಿಗೆಯಿಂದೆನ್ನ ಮೊಗಮಂ ಪೊಡೆಯೆ, ಮೂಗು ಪರಿದು ಪರಿಭವಂಬಡೆದೂರ್ಗೆ ವಂದಾಳೋಚಿಸಿದೆಂ; ಅಕಟೀ ಘಾತಕನತಿವೈರದಿಂದಿಳೆಯೊಳ್ ನೆಗಳ್ತೆವೆತ್ತ ಬತ್ತೀಸ ಕೈದುಗಳೊಳಂ ಗಣನೆಗೆ ಬಾರದೀ ಚಮ್ಮಟಿಗೆಯಿಂ ಬಡಿದನ್; ಅದರಿಂದಾಂ ಮುನ್ನಾಡಿದ ಮಾತಿಂಗೆ ತಪ್ಪಿದ ಪಾಪಮನಾದೊಡಮೊಡಂಬಟ್ಟುಂ ಎಂತಾನುಮಿಾ ಪಾಡುಪಂತಮಂ ಮಗುಳ್ಚಿವೇಳ್ಕುಮೆಂದಿರ್ಪಿನಂ; ಅನಿತರೊಳೆ ಎನ್ನೂರಂ ಲಗ್ಗೆಯೇರಿ ಕಳ್ಗೊಲೆವೀಳ್ದು ಎನ್ನ ಸರ್ವಸ್ವಮಂ ಸೂರೆಗೊಂಡು ಎನ್ನುಮಂ ಕೊಳ್ವೋದನೆಂದು ಜರೆದು ಪೊರಮಡಿಸಿಯಾ ಕ್ಷಣದೊಳ್ ಕೋಂಟೆಯಂ ಕೆಡಪಿಸಿ ಪಾಳೆಯ್ದುಳಿಸಿ ಒಡಲಮಂ ಬಿತ್ತಿಸಿ ಆ ವಸ್ತುವಾಹನಂಗಳಂ ದೇಗುಲಗಳ್ಗಂ ಪಾರ್ವರ್ಗಮಿತ್ತುಮೆನ್ನ ನಾಡೊಳ್ತಲೆವಳ್ಳಿಗಳನಗರಂಗೆಯ್ದನಾ ಬಳಿಕ್ಕಾಂ ಪುಗಲೆಡೆಯುಮಂ ಪೊರೆವರಸರುಮಂ ಕಾಣದಿರ್ದೆಂ; ಈಗಳೆನ್ನ ಭಾಗ್ಯೋದಯದಿಂ ನಿಮ್ಮಡಿಗಳಂ ಸಾರ್ದೆಂ; ಎನ್ನಂ ಕಾಯವೇಳ್ಕುಮೆಂದು ಬಿನ್ನವಿಸಿ, ಕಿವಿಯಿಂದಂ ಕಿವಿವರೆಗಂ ಮೊಗದೊಳ್ಗೆರೆಗೊಂಡು ಗಂಟುಗಟ್ಟಿ ಮೆರೆವ ಏರ ಬಾಸುಳಂ ತೋರಿಸಿ ಪೆರಸಾರಲೊಡಂ–

ಕನ್ನಂಬಾಡಿಯವನಿಂತೆಂದಂ: ಜೀಯಾ, ರಾಯವಜೀರರೊಳ್ರಾಣಾ ಜಗದೇವರಾಯರಸನಗ್ಗಳನೆಂಬುದು ಚಿತ್ತಕ್ಕೆ ವೇದ್ಯಮೈಸೆ; ಅವನಡಿಗೋಂಟೆಗಳೆಮ್ಮ ನೆರೆಯೊಳಿರ್ಪುವು; ಅವರೊಳ್ ಪೊಸಪೊಳಲಂ ಮೋಸದೊಳ್ ಕೊಳಲೆಂದು ರಾಜನೃಪನೆಮ್ಮೊಳ್ ಸ್ನೇಹಂ ಬೆರಸಿ, ಎಮ್ಮೆಡೆಯೊಳ್ ನಡೆದಾ ಕೋಂಟೆಯಂ ಬಸಂಗೆಯ್ದನದರ್ಕೆನ್ನ ಕುವರರಾತನ ಪ್ರಭುಮಂತ್ರೋತ್ಸಾಹಶಕ್ತಿಗಳುಮನಾತನ ಭೃತ್ಯರೈಕಮತ್ಯ ಭಯಭಕ್ತಿಗಳುಮನಾತನನುಜರ ಸೌಭ್ರಾತ್ರಸೌಜನ್ಯ ಸೌಶೀಲ್ಯಂಗಳುಮನವರ ಕುವರರ ಕೂರ್ಮೆ ಪೆರ್ಮೆ ಕೂರ್ಪುಗಳುಮನವನ ಸೈನಿಕರ ಶಕ್ತಿಸಾಹಸಶೌರ್ಯಂಗಳುಮಂ, ಆತನೊಳ್ ನೆಲೆಗೊಂಡ ದೈವ ದೊಲವುಮಂ, ಪಾರ್ವ್ವರ ಪರಕೆಗಳುಮನರಿಯದೆ ದುರುದುಂಬಿತನದಿಂ ಕೆಣಕು ಜಗಳಂದೆಗೆವುದುಮವನೆಂಮ ನಾಡೊಳ್ ದಾಳಿಟ್ಟು ತುರುಸೆರೆಯೊಡ ನೆನ್ನಣುಗರಂ ಪಿಡಿದು ಬಂಡುಗೆಯ್ದು ಪಾರ್ವರಗೊಲೆಗೆ ಪೇಸಿ ಬಿಟ್ಟೆನ್ನ ನಾಡೊಳ್ತಲೆಯೂರೆನಿಪ ಬೂಕನಕೆರೆಯಂ ಕೊಂಡದರ್ಕೆ ಸಲ್ವೆಲ್ಲಾ ಪಳ್ಳಿಗಳಂ ಮೇಲ್ಗೋಂಟೆಯ ತಿರುಕುಳಿ ಪಾರ್ವಗ್ರಿತ್ತನವರು ಮಾಗಳೆನ್ನೊಳ್ಗಾಯಿಗರುಂ ದೊರೆಯುಮಾದರಂತುಮಲ್ಲದಂದು ನಾಳಿನೊಳಾನಿರ್ಪೂರಂ ಕೊಳ್ಳದೆ ವಾಣನಿದರ್ಕೆನಗೆ ನೀನೆ ಗತಿಯೆಂದು ಬಿನ್ನವಿಸಿ ತೊಲಗಲೊಡಮಾ ತಳಕಾಡವನಿಂತೆಂದಂ:

ದೇವ, ಬಿನ್ನಪಂ; ಆ ಜಗದೇವರಾಯರಸನ ಪಡೆವಳರೊಳ್ ಮೊದಲಿಗನು ಮಿಳೆಯೊಳ್ಬಲ್ಗಯ್ಯನುಮೆಂದು ನೆಗಳ್ದದಟರಾಯನ ಅರಕೆರೆಯನಾತಂ ಪಗಲ್ ಕಳ್ಗೊಲೆಯೊಳ್ಕೊಂಡಲ್ಲಿ ಸಿಲ್ಕಿದ ನಲ್ವಚ್ಚಂಗಳನೀ ಪಶ್ಚಿಮರಂಗನಾಥಂಗೆ ಸಮರ್ಪಿಸಿ ದುದುಂ; ಪಣಂಗಳಿಂ ಪೊರವಳೆಯದ ಕಲ್ಲ ಪಾಗಲಂ ಕಟ್ಟಿಸಿದುದುಮಾಳ್ದನ ಚಿತ್ತವೃತ್ತಿಗೆ ಬಂದಿರ್ಕುಮೈಸೆ; ಬಳಿಕ್ಕಾನೆನ್ನಿರವನರಿಯದಅದಟರಾಯನ ದುರ್ಬೋಧನೆಗೊಳಗಾಗಿ ಅರೆಕೆರೆಯ ನಾಡೊಳ್ ಮರೆವುಯಿಲನೆಸಗುತಿರ್ಪಿನಂ; ಆ ರಾಜನೃಪನೆನ್ನ ಬನ್ನೂರಂ ಕೊಂಡಂ ಆ ರೋಷದೊಳಾಂ ಪೆರ್ವಡೆವೆರಸು ಮಾರ್ಕೊಳೆ, ಅವಂ ಕಿರಿದು ದಳದೊಳಿದಿರ್ದೊಡೆಮೆಮ್ಮ ಬಲಮಂ ಲೆಕ್ಕಿಸದೆ ಪೆರ್ಚಳಿಸಿ ಸೊರ್ಕಾನೆಯ ಮೊಕ್ಕಳಮಂ ಪೊಕ್ಕು ಪಾಯ್ದು ಪೊಯ್ವ ಐವಾಯ ಸಿಂಗದಂತೆಯುಂ, ಪೆರ್ವಟ್ಟಿನ ತಟ್ಟನೊಳ್ ನಟ್ಟು ತಟ್ಟುರ್ಚಲೆರಗುವ ಬರಸಿಡಿಲಂತೆಯುಂ, ಕಟ್ಟುರದೊಳುರುಜಿ ತರುಬಿ ತಾಗಿ ಕಣೆ ಕೈಯಿಟ್ಟ ಪಾರುಂಬಳೆ ಪಿಂಡಿವಾಳ ಸಬಳ ಬಲ್ಲೆಯ ಕತ್ತಿ ಕಡಿದಾಬೆ ಕಡಾರ ಕೈಗತ್ತಿಗಳಿಂ ಕೊಂದು ಕೊರೆದರಿದು ನಾಂಟಿರಿದೌಂಕಿ ಕಡಿದು ಕತ್ತರಿಸಿ ತಿವಿದು ಕುಯ್ದು ಕೋಟಲೆಗೊಳಿಸಿ ಪೊಕ್ಕಲ್ಲಿ ಪೊಕ್ಕೊಕ್ಕಲಿಕ್ಕೆ ಕಣ್ಗೆಡಿಸಿ ಕೆಲರಂ ಕೈಸೆರೆವಿಡಿದು ಕೈದುಗಳನೀಳ್ದು ಬನ್ನಂಬಡಿಸಿ ಬಳಿನೀರ್ಗುಡಿಸಿ ಬವಣೆಗೊಳಿಸಿದನದಂ ನೆನೆದೊಡೆ ಈಗಳುಮೆರ್ದೆಯೊಳದವಳಲುಂ, ಮೆಯ್ಯೊಳ್ ನಡುಕವುಂ, ನುಡಿಂಪೊಳ್ತಡಬಡವುಮಪ್ಪುದುಂ; ಎನ್ನ ರಣಭೀತಿ

ಯಿಂದೆಂದೆಣಿಸತಕ್ಕುದಲ್ತು; ಈ ನೆರೆದರಸುಗಳನಿಬರುಮರಿತಿರ್ಪರ್; ಎನಿತಾನೆ ಕುದುರೆ ಕಾಲಾಳ್ಗಳಿರ್ದೊಡಂ ಮಾರ್ಮ್ಮಲೆವುದರಿದು ಅವನೊಳ್ ಮಾನಿಸರ್ಗಳವಡದ ದೊಂದು ಮೈಮೆ ಮೆಯ್ಗೊಂಡಿರ್ಪುದು; ಅದೇಂ ಮಂತ್ರದಿಂದಮೋ, ಮಾಯೆಯಿಂದಮೋ, ಕೈಮೆಯಿಂದಮೋ, ಕಡುಪಿಂದಮೋ, ಬೀರದಿಂದಮೋ, ಬಿನ್ನಣದಿಂದಮೋ, ಸತ್ವದಿಂದಮೋ, ಸಾಸದಿಂದಮೋ, ಮೇಣಮಂ ಲಾವಣಿಗೆಯೊಳ್ ತಪ್ಪದೀವ ಕೈಜೀವಿತದೊಳಂ ಕಿರುಮೆಚ್ಚಿನೊಳ್ಕುಡುವುಡುಗೊರೆ ಕೊಡಿಗೆವಾರಕಗಳೊಳಂ, ಮದುವೆಯೊಸಗೆಗಳ್ಗೆಂದು ಪಸದನಂ ಗೆಯ್ವ ಪೊಂಗಳೊಳಂ, ಕರೆದು ಲಾಲಿಸಿ ನಂಬಿಸಿ ತಂಬುಲಂಗುಡುವ ಮನ್ನಣೆಗಳೊಳಂ, ಮನವಾರೆ ಮಾರುವೋದ ಕೂರಾಳ್ಗಳ ಕೂರ್ಮೆಯಿಂದಮೋ; ಮತ್ತಮವನಡಿಗಡಿಗೆ ನಡೆದು ಬಗೆಗರಗಿ ಮೆಯ್ನುವಿರುಣ್ಮಿ ಕೈಮುಗಿದರೆಗಣ್ಮುಚ್ಚಿ ಕೊಂಡಾಡಿ ಕೊನರ್ದು ಆನಂದಾಶ್ರುವಂ ಕರೆದಾಳ್ಗೆಯ್ವ ಭಕ್ತಿಯೊಳಂ, ಎಮ್ಮೆಲ್ಲರುಮಂ ಸದೆದೀಳ್ದು ಕೈಕೊಂಡ ರತ್ನಭೂಷಣಂಗಳೊಮರ್ದ ದಿವ್ಯರತ್ನಂಗಳಿಂ ತೆತ್ತಿಸಿದ ಕಿರೀಟ ಮಕುಟ ಕುಂಡಲ ಗ್ರೈವೇಯಕ ಹಾರ ಕಟಕ ದಾಮೋದರಬಂಧನ ಕಾಂಚೀಕಲಾಪ ನೂಪುರಾದಿ ದಿವ್ಯಾಭರಣಸಮರ್ಪಣದೊಳಂ, ಎಮ್ಮ ಭಂಡಾರಂಗಳೊಳ್ ಸೂರೆಗೊಳ್ಳಿಡ ಪೊಂಗಳಿಂದೊಡರ಼್ಿದ ಸೋಪಾನ ಗೋಪುರ ಪ್ರಾಕಾರ ವಿಮಾನ ಮಂಟಪ ವಾಹನೋಪವನ ವಾಪೀ ಕೂಪ ತಟಾಕಾದಿ ನಿರ್ಮಾಣದೊಳಂ, ಅಂದಂದೆಸಗುವ ಸಂವತ್ಸರ ಮಾಸ ಪಕ್ಷ ನಿತ್ಯ ನೈಮಿತ್ತಿಕಾದ್ಯುತ್ಸವಂಗಳೊಳಂ, ತಣ್ಣನೆ ತಣಿದೊಲ್ದ ಯಾದವಗಿರಿ ನಾರಾಯಣನ ಕಟಾಕ್ಷಾಮೃತಸೇಕದಿಂದಮೋ, ಮತ್ತಮತಿಭಕ್ತಿಯೊಳ್ ಕರೆಯಿಸಿ ಬರಿಸಿಯರಮನೆಯ ಮಣಿಪೀಠದೊಳ್ ಕುಳ್ಳಿರಿಸಿ ಮಣಿದಡಿದೊಳೆದಣ್ಪಿಟ್ಟಲರಂ ಸೂಡಿ ನಲ್ಲುಡೆಯಂ ಪೊದೆಯಿಸಿ ತೊಡವಂ ತುಡಿಸಿ ಇಷ್ಟದೇವತೆಯೆಂದು ಭಾವನೆಯೊಳುಪಚರಿಸಿ ಬೆಳೆಗೆಯ್ವೊಲಂಗಳಂ ಗರ್ದೆತೋಂಟಗಳಂ ಪಳ್ಳಿಗಳಂ ಬೇಳ್ಪ ವಸ್ತುವನಿತ್ತು ಪರಕೆಗೊಂಬುದರಿಂದೆ ಎರಕಂಬೆತ್ತ ಪಲಂಬರ್ ಪಾರ್ವರ ಆಶೀರ್ವಾದದಿಂದಮೆಯೋ ತಿಳಿಯದು ಅವಂ ಇನ್ನೀ ಮೇರೆಯೊಳಿರ್ಪನಲ್ತು; ಗಳಿಗೆಯರಗಳಿಗೆಯ ಗಣನೆಯೊಳೆ ಪೆರ್ಚಿ ಬರ್ಪಂ ಅವನಂ ಸದೆವುದರ್ಕಿದುವೆ ವೇಳೆ; ಈ ನೆರೆದರಸುಗಳನಿಬರುಂ ಬೆರಸು ದೇವರೇಳ್ತರವೇಳ್ಕುಂ; ಈ ರಾಯಗಜ್ಜದೊಳಾಂ ಪಡೆವಳನಪ್ಪೆಂ ಎನಗಪ್ಪಣೆ ವೀಳೆಯಮಂ ದಯೆಗೆಯ್ವುದು ಎಂದು ಮಣಿದು ಬಿನ್ನವಿ[ಸಿ*] ಸುಮ್ಮನಿರ್ಪಿನಂ; ಅಮಚವಾಡಿಯವನೆಳ್ದು ಕೈಮುಗಿದಿಂತೆಂದಂ:

ಸ್ವಾಮಿ, ಈ ತಳಕಾಡ ನಂಜರಾಜಂ ಪಾದಕ್ಕೆ ಬಿನ್ನವಿಸಿದಿನಿತುಂ ನಿಕ್ಕುವಂ ಆ ಮೈಸೂರವನೊಳತಿಮಾನುಷಶಕ್ತಿಯುಂಟು; ಅದರ್ಕೆ ಕುರುಪೇನೆಂದೊಡೆ – ಈ ಯುಗದೊಳಂ ಬೇಳ್ಪರ್ಗೆ ಬೇಳ್ಪುದನೀವ ಶ್ರೀವೇಂಕಟೇಶ್ವರನಿವನ ಮೈಮೆಯ ನರಿಪಲೆಂದೊರ್ಮೆ ತನಗೆ ಪರಕೆಗೊಂಡು, ತಿರುಪತಿಗೇಳ್ತಂದ ವಿಪ್ರಕುಲದ

ಕಣ್ಬರಡುವೆಣ್ಗೆ ತಾನೊಂದು ಕಣ್ಣನಿತ್ತು ಪೆರತೊಂದಂ ಮೈಸೂರ ರಾಜನೃಪನೀವನೆಂದು ಕಳಿಪುವುದುಂ; ಈ ಕೌತುಕಮಂ ನಿಟ್ಟಿಸಲೆಂದಾ ತಿರುಪತಿಯೊಳ್ನೆರದಾ ಜಾತ್ರೆಯ ನೆರವಿಯೆಲ್ಲಮುಮವಳ ಬಳಿವಿಡಿದೂರ ಮುಂತಣ್ಗೆ ಬರಲೊಡಮಾ ವಾರ್ತೆಗೇಳ್ದು, ರಾಜನೃಪಂ ಮಿಂದು ಮಡಿಯುಟ್ಟು ತನ್ನ ಮನೆಯೊಳ್ನೆಲಸಿ ಮನೆದೇವರೆನಿಪ ಲಕ್ಷ್ಮೀಕಾಂತಂಗಂ, ಯದುಗಿರಿಯೊಳ್ನೆಲಸಿ ಯಾದವರಿಂ ಪೂಜೆಗೊಂಡು ತನ್ನ ಕುಲದೇವರೆನಿಸಿದ ನಾರಾಯಣಂಗಂ, ತನ್ನೊಳ್ನೆವಮಿಲ್ಲದೊಲ್ದು ದಯೆಗೆಯ್ದ ಶ್ರೀ ವೇಂಕಟೇಶಂಗಂ ಮಣಿದಾ ನೆರವಿಯನಿದಿರ್ಗೊಂಡು ಬಲವಂದು ಕೈಮುಗಿದು ಬಗೆಯೊಳ್ ಶ್ರೀವೇಂಕಟೇಶ್ವರನ ಭಾವನೆಯಂ ನೆಲೆಗೊಳಿಸಿ ಆ ಪಾರ್ವತಿಯಂ ಕರೆದು –ಎಲೆ ತಾಯೆ, ಮುಂ ನಿನಗೆ ತಿರುಪತಿಯೊಳ್ನೆಲಸಿರ್ದೊಂದು ಕಣ್ಣಿತ್ತಾ ಶ್ರೀ ವೇಂಕಟೇಶ್ವರನೀಗಳೆನ್ನೆರ್ದೆವನೆಯೊಳ್ ನಿಂದು ಪೆರತೊಂದು ಕಣ್ಣನಿತ್ತಂ; ಎನ್ನಂ ಕಣ್ದೆರೆದು ನೋಡು ಎಂಬುದುಂ; ಮುಸುಂಕಿದ ಮುಗಿಲನೊಡೆದು ಮೆಯ್ದೋರುವ ಪೆರೆಯಂತೆಯುಂ, ಮಂಜಂ ಕಳೆದು ತೊಳಗುವ ನೇಸರಂತೆಯುಂ, ತಮಮಂ ತಳ್ಗಿಸಿ ಪೊಣ್ಮುವ ಸತ್ವಗುಣದಂತೆಯುಂ, ಮಾಯೆಯಂ ನೀಳ್ಕರಿಸಿ ನೆಗಳ್ವ ತತ್ವಜ್ಞಾನದಂತೆಯುಂ, ಎವೆದೆರೆದು ಮಿರುಪ ಕಣ್ಣಂ ಕಂಡಾ ನೆರೆದ ನೆರವಿಯೆಲ್ಲಮುಮಿಾತಂ ವೇಂಕಟೇಶ್ವರನಪರಾವತಾರಮೆ ತಪ್ಪದೆಂದು ವಂದಿಸಿ ಪರೆದು ಪೋದುದು; ಇದನೆಲ್ಲರುಂ ಬಲ್ಲರ್; ಅಂದು ಮೊದಲಿವನ ಮೈಮೆಗಳ್ಕಿಯೆನ್ನೊರ್ವನನುಳಿದು ಕಳಲೆ ಬಿಳುಗುಲಿ ಬಿಳುಕೆರೆ ಹುರ ಹುಲ್ಲನಹಳ್ಳಿ ಮೂಗೂರ್ಮೊದಲಾದ ದೊರೆಗಳವಂಗೆ ಪೆಣ್ಣಿತ್ತು ಕಪ್ಪಮಂ ತೆತ್ತು ಕೆಳೆಗೊಂಡಿರ್ಪರವರೇ ಗೆಯ್ವರ್; ಅವರೆನಿತರವರ್, ಅವರ ಪಾಡೇಂ, ಅವರ ಪವಣಾವುದು ಎನ್ನಂತಪ್ಪಂಗವುಸದಳವಾಗಿರ್ಕುಂ; ಇನ್ನೆಂ ತಾನುಪೇಕ್ಷಿಸತಕ್ಕುದಲ್ತು; ಈಗಳೆ ಪಡೆವಳತನಮನೀ ನಂಜರಾಜಂಗಿತ್ತೆಮಗೆಲ್ಲರ್ಗಂ ನೀಮುಳ್ಳ ಬಲಸನ್ನಾಹಂ ಬೆರಸೊಡವರ್ಪುದೆಂದಾಣತಿಗೊಟ್ಟು, ಮತ್ತಂ ಸುತ್ತಣರಸುಗಳ್ಗೆ ರಾಯಸಮನಟ್ಟಿ ಕರೆಯಿಸವೇಳ್ಕುಂ; ಇಂತೆನ್ನ ಬಗೆಗೆ ತೋರ್ಪುದಂ ಬಿನ್ನವಿಸಿದೆಂ; ಮೇಗಣೆಸಕಂ ದೇವರ ಚಿತ್ತಮೊಪ್ಪಿದಂತು – ಎಂದು ಬಿನ್ನವಿಪ್ಪುದುಂ; ಆ ರಾಯನಂತೆಲ್ಲರ್ಗಮಾಣತಿಯಿತ್ತು ತಾನು ಮಿತ್ತಲ್ ತೆರಳ್ದು ಬರ್ಪುದಕ್ಕೆ ಸನ್ನದ್ಧಮಾಗಿರ್ದಪಂ; ಈ ವೇಳೆಗೇನುಚಿತಮೋ ದೇವರ ಚಿತ್ತಮೆ ಬಲ್ಲುದು– ಎಂದು ಕಂಡುದಂ ಬಿನ್ನವಿಸಿ ಕೆಯ್ಯೊಳಿರ್ದ ಬಿನ್ನವತ್ತಳೆಯಂ ಪಡಿಯರಂಗಿತ್ತು ಕೈಮುಗಿದು ಬೀಳ್ಕೊಂಡು ಪೋಪ್ಪುದುಂ ಅರಸನ ಕಣ್ಸನ್ನೆಯಿಂ ರಾಯಸಿಗನದಂ ಕೊಂಡು ಮುದ್ರೆಯನಪ್ಪಣೆವಿಡಿದು ಸಡಿಲ್ಚಿ ತೆಗೆದೋದಿದಂ:

ದೇವರಡಿಗೆ ಬಿನ್ನಪಂ; ಆ ದೇವರ ಪಾದದತ್ತಣಿಂ ಬೀಳ್ಕೊಂಡು ನಡೆತಂದು ಪಟ್ಟಣದ ಪೊರವಳಯದುಪವನದೊಳಿರ್ಪಿನಂ; ಅವರೆನ್ನನಿದಿರ್ವ್ವಂ ದೊಡಗೊಂಡುಯ್ದುದರ್ಕೆ ಪೊರ್ದುಗೆಯ ಗುರಿವಾನಸನೊರ್ವನಂ ಕಳುಪಿ

ಕರೆಯಿಸಲೊಡಮಾನುಮರಮನೆವೊಕ್ಕು ರಾಯನಂ ಕಂಡು ಕೈಗಾಣ್ಕೆಗೊಟ್ಟು ಕುಳ್ಳಿರ್ಪಿನಂ; ಆ ರಾಯಂ ದೇವರಡಿಯ ಪದುಳಮಂ ಬೆಸಗೊಳೆ- ದೇವ, ಕೇಳ್ ಎಮ್ಮಾಳ್ದಂ ಯಾದವಗಿರಿ ನಾರಾಯಣನ ಕರುಣಾಕಟಾಕ್ಷದತ್ತಣಿಂ ದಾನಕ್ಷಾತ್ರ ನಿರತನೆನಿಸಿ ಕ್ಷೇಮದೊಳಿರ್ಪಂ; ದೇವರಿಲ್ಲಿಗೈತಂದುದರ್ಕೆ ಪೆರ್ಕಳಿಸಿ ದೇವರ ಕುಶಲಮಂ ತಿಳಿಯಲ್ಲಾವುಡಮಂ ಕೊಟ್ಟೆನ್ನಂ ಕಳುಪಿದರ್ ಎಂದು ಮುಂದಿಡುವುದುಂ; ಅದಂ ಕೊಂಡು ಸಂತಸಂಬಟ್ಟು ತಮ್ಮೆಮ್ಮ ನೇಹಂ ಬಳೆವುದರ್ಕೆ ಇದು ನಾಂದಿಯೆಂದೆನಗೆ ಉಡುಗೊರೆ ವೀಳೆಯಂಗಳನಿತ್ತು, ಬೀಡಾರಕ್ಕೆ ಕಳುಪಿ, ಉಲುಪೆಯುಚಿತಂಗಳಿಂದುಪಚರಿಸಿ, ಪೆರತೊಂದು ದಿನಂ ಎನ್ನಂ ಒಳವೋಲಗಕ್ಕೆ ಕರೆಯಿಸಿ, ಕೆಲವುಂ ಪೊಳ್ತಿಷ್ಟಾಲಾಪದೊಳಿರ್ದು, ಬಳಿಕೆನ್ನ ಮೊಗಮಂ ನೋಡಿ ನಿಮ್ಮಾಳ್ದನವತರಿಸಿದುದರಿಂದೇಳ್ಗೆವೆತ್ತೆಸೆವ ವಂಶಮಾವುದು, ಆಚಾರದ ಪರಿ ಯಾವುದು, ವಯಸ್ಸೆನಿತು, ಮೆಯ್ಸಿರಿಯೇತೆರಂ, ಸೋದರರುಂ ಸುತರುಮೆನಿಬರ್, ಆಳ್ವ ನಾಡೆನಿತು, ಆನೆ ಕುದುರೆಯಾಳ್ಗಳೆನಿತು, ಆಯವ್ಯಯದ ನೆಲೆ ಯಾವುದೆಂದು ಬೆಸಗೊಂಬಿನಮಾಂ ಬಿನ್ನವಿಸಿದೆಂ:

ದೇವ, ಚಂದ್ರವಂಶದೊಳವತರಿಸಿದ ಯದುಭೂಮಿಪನ ಕುಲಭೂಷಣರೆನಿಪ ಬಲಕೃಷ್ಣರಿರ್ವರುಂ ಕುಲದೇವರಂ ಬಲಂಗೊಳಲೆಂದು ಯಾದವಗಿರಿಗೇಳ್ತಂದು, ಅಲ್ಲಿ ನಾರಾಯಣಂಗೆ ಮಹೋತ್ಸವಮನೊಡರ್ಚೆ, ವೈರಮುಡಿಯೆನಿಪ್ಪ ದಿವ್ಯ ಕಿರೀಟಮಂ ಸಮರ್ಪಿಸಿ, ಮಗುಳೆ ತಾಂ ದ್ವಾರಕಿಗೆ ಪೋಪಾಗಳ್, ಈ ಕ್ಷೇತ್ರಮಂ ಕಾಪಿಟ್ಟು ಸಕಲವಿಧಸೇವೆಗಳಂ ನಡೆಯಿಪುದರ್ಕೆ ತಮ್ಮ ಕುವರರೊಳೊರ್ವನನಿಟ್ಟು ಪೋಪಿನಂ; ಆ ಯದುಭೂಷಣಂ ತನ್ನ ಕರಿತುರಗಪದಾತಿಗಳ್ವೆರಸು ತಾನಾವಗಮಲ್ಲಿರ್ದೊಡೆ ಶ್ರೀಮನ್ನಾರಾಯಣನ ನಿತ್ಯಕಿಂಕರತೆಯೊಳಿರ್ಪ ವೈಷ್ಣವಜನಕ್ಕಂ ತರುಗುಲ್ಮಲತಾದಿರೂಪದೊಳಿರ್ಪ, ನಿತ್ಯಮುಕ್ತರ್ಗಮುಪರೋಧಮಪ್ಪುದೆಂಬುದರಿಂ, ವೈಕುಂಠವರ್ಧನಂ ಕ್ಷೇತ್ರಂ ಪರಿತೋ ಯೋಜನದ್ವಯಂ- ಇಂತೆಂಬ ನಾರದೀಯ ವಚನದಿಂದೀ ಕ್ಷೇತ್ರಮಂ ಬಳಸಿದೆರಳ್ಗಾವುದ ನೆಲನುಂ, ವಿಷ್ಣುಕ್ಷೇತ್ರಮಾದುದರಿಂದೀ ಮೈಸೂರೊಳರಸುಗೈವುತ್ತಿರ್ದಂ; ಅವನ ಸಂತತಿಯೊಳ್ ಪುಟ್ಟಿ ನೆಗಳ್ತೆವೆತ್ತ ಬೆಟ್ಟದ ಚಾಮರಾಜಂಗೆ ತಿಮ್ಮರಾಜ ಕೃಷ್ಣರಾಜ ಚಾಮರಾಜರೆಂಬ ಮೂವರಣುಗರಾದರ್; ಆ ಚಾಮರಾಜನ ತಪಃಫಲಮೆನಿಸಿ ನೆಗಳ್ದೆಸೆವೀ ರಾಜಭೂಪಾಲಂ ಪುಟ್ಟಿದಂದಿಂದೆಯುಂ ಪುಸಿವಾತು ಪೆರರೊಡವೆ ಪೆಣ್ಡಿರ ನೆನಪಿಲ್ಲದೆಳವೆಯೊಳ್ ಶಾಸ್ತ್ರಶಸ್ತ್ರಾಭ್ಯಾಸದಿಂ ಜವ್ವನದೊಳ್ ದಿಗ್ವಿಜಯ ವ್ಯಾಪಾರದಿಂದಿರ್ಪುದರಿಂ, ಬೆಸನಂಗಳ್ಗೆ ಪೊಳ್ತುಗುಡದೆ ನಿಚ್ಚಮುಂ ಸ್ನಾನಸಂಧ್ಯಾಜಪ ದಾನದೇವಪೂಜಾಪುರಾಣಪುಣ್ಯಕಥಾಶ್ರವಣಾದಿ ಪಾರಲೌಕಿಕ ವ್ಯಾಪಾರಮುಮಂ, ಷಾಡ್ಗುಣ್ಯಚಿಂತನ ಪ್ರಜಾಪಾಲನ ಕಂಟಕಶೋಧನಾದಿ ರಾಜ್ಯವ್ಯಾಪಾರಮು ಮನೊಂದರಿಂದೊಂದಂ ಸಡಿಲ್ಚದೆ ಸಂತಸದೊಳಿರ್ಪಂ; ಈ ಪರಿಯಿಂ ಬಗೆಯೊಳ್

ಮೈಗೊಂಡ ಸತ್ವಗುಣಂ ಪೊರಪೊಣ್ಮಿದಂತೆಯುಂ, ಅರುವತ್ತುಂ ಬರಿಸಮುಂ ಬೆಳ್ಗೊಡೆಯ ನೆಳಲೊಳಿರ್ದುದರಿಂದಾಬೆಳ್ಗದಿರ್ ಮೆಯ್ವೆತ್ತಿದಂತೆಯುಂ, ಮೂಜಗಮಂ ಪರ್ಬಿದೊಳ್ಜಸವಳ್ಳಿ ಪೊಸವೇರ್ವೆತ್ತಂತೆಯುಂ, ಮೊಗಸಸಿಯಿಂ ಪಸರಿಪ ಜೊನ್ನದ ಜೊಂಪದಂತೆಯುಮೆಸೆವ ನರೆವೊತ್ತಿರ್ದೊಡಂ ಪೊಸಮಿಸುನಿಯೊಳ್ ಕರುವಿಟ್ಟರೆದಂತೆಯುಂ, ಕಂಡರಿಸಿದಂತೆಯುಂ, ಬಟ್ಟಿತ್ತಾದ ತೋಳ್ನಡುತೊಡೆಗಳಿಂ ಪೇರೆರ್ದೆಯಿಂ ಬಲ್ಗಂದದಿಂ, ಬೆಟ್ಟಿತ್ತಾದ ಮೆಯ್ಯಿಂ ವೃಷಭದಂತೆಯುಂ, ಪುಲಿಯಂತೆಯುಂ, ಸಿಂಗದಂತೆಯುಂ ಮೆಯ್ಸಿರಿವಡೆದಿರ್ಪಂ; ಬೆಟ್ಟದ ಚಾಮರಾಜ, ದೇವರಾಜ, ಚನ್ನರಾಜರೆಂಬ ಮೂವರ್ ಸೋದರರ್ ವೇದತ್ರಯದಂತೆ ಧರ್ಮಸಾಧಕರುಂ, ತ್ರಿವರ್ಗದಂತೆ ಸುಖಸಾಧಕರುಂ, ಶಕ್ತಿತ್ರಯದಂತೆ ವಿಜಯಸಾಧಕರುಂ, ಕರಣತ್ರಯದಂತೆ ಕಾರ್ಯಸಾಧಕರುಮೆನಿಸಿ ಮೂವರೊಂದಾಗಿ ಮುಪ್ಪುರಿಗೊಂಡಂತಾತನಾಣತಿಯೊಳಿರ್ಪುದೇ ಶೀಲಮೆಂದಾತಂ ಗಾಳ್ಗೆಯ್ವುದೇ ಒಳ್ಗಜ್ಜಮೆಂದಾತನ ಹಸಾದಂಬಡೆವುದೇ ಪರಮಲಾಭಮೆಂದಿರ್ದಪರ್; ನರಸರಾಜ ಇಮ್ಮಡಿರಾಜರೆಂಬಣುಗರ್ ಪಡಿನೆಳಲಂತೆ ಆ ಗುಣಂಗಳಂ ಪಡೆದಾತನ ಬಳಿಸಲ್ವರ್; ಈ ಸೋದರರುಂ ಸುತರುಂ ಬೆರಸು ತಮ್ಮ ಕುಲಕ್ರಮಾಗತದ ಮೈಸೂರ್ಗೆ ಸಲ್ವಿರ್ಪತ್ತು ಮೂರು ಮರೆವಳ್ಳಿಗಳೊಳೆತ್ತಿ ಬರ್ಪ ಮೂಸಾಸಿರ ಪೊನ್ನಂ, ಮುನ್ನೂರಾಳ್ಗೆ ಪಚ್ಚುಗೊಟ್ಟೆಡಬಲದ ಮನ್ನೆಯರಿಂ ಬರ್ಪ ಕಪ್ಪದೊಳಮವರ್ ಮಿಸುಕದಂತವರವರ ನಾಡೊಳ್ ಬಸಂಗೆಯ್ದಿರ್ಪ ತಲೆವಳ್ಳಿಗಳಿಂ ಬರ್ಪ ಕಂದಾಯದೊಳಂ, ಮನವಾಳ್ತೆಯುಮಂ ನಿತ್ಯದಾನಧರ್ಮಂಗಳುಮಂ ಮದುವೆಯೊಸಗೆಗಳುಮನುಡುಗೊರೆಯುಚಿತಂಗಳುಮನೆಸಗುತ್ತಿರ್ದಪರ್; ಇದುಮಲ್ಲದೆ ಇದಿರಾದರನೊಕ್ಕಲಿಕ್ಕಿ ಸೆಳೆದುತಂದ ವಸ್ತುವಾಹನಂಗಳಂ ದೇವಬ್ರಾಹ್ಮಣರ್ಗಿತ್ತು ಅವರೊಲವನೇ ಧನಮಾಗಿ ಸಂಗ್ರಹಿಸಿರ್ಪರ್ – ಎಂಬುದುಮುದರ್ಕೆ ಸಂತಸಂಗೊಂಡು ಕೊಂಡಾಡಿಯುಂತಪ್ಪ ಪುಣ್ಯಪುರುಷನಂ ನಿಟ್ಟಿಸಿ ನುಡಿಸಿ ಕೆಳೆಗೊಂಡು ನಂಬಿ ನೇಹಂಬೆರಸಿರ್ಪರೊಂದೆನಿಸಿಯೊಡರ್ಚುವ ಕಜ್ಜಮೆನಿತಾನುಮುಂಟದರಿಂ ತಾಮಿಲ್ಲಿಗೆ ಬರ್ಪುದರ್ಕವಾಮೆ ತೆರಳ್ದೇಳ್ತರವೇಳ್ಕುಮೆಂಬುದರ್ಕಂ ಬರೆಯಿಸಿ ಕಳುಪಿ ನಿಶ್ಚಯಮಂ ತಿಳಿದು ಬೇಗದೊಳೆಮಗರಿಪುವುದೆಂದೆನಗುಡುಗೊರೆ ವೀಳೆಯಂಗಳನಿತ್ತು ಕಳುಪಿದರ್; ಆ ಬಳಿಕ್ಕೆ ಮತ್ತೊಂದು ದಿವಸದೊಳ್ ತಮ್ಮ ಸಾಮಾಜಿಕರುಮಂ ತಮ್ಮಂ ಕಂಡೋಲಗಿಪರುಮಂ ಕರೆಯಿಸಿ – ಮೈಸೂರವನೊಳಾಮೀತೆರದಿಂ ವರ್ತಿಸವೇಳ್ಕುಮೆಂದು ಬೆಸಗೊಳ್ವಿನಂ ಅವರನಿಬರುಂ ದೇವರಸಗುಪಟಳದಿಂ ನೊಂದು ಬೆಂದಿರ್ಪುದರಿಂದೀ ವೇಳೆಯೊಳವನಂ ಬೆಂಬಲಂಗೊಂಡನಿಬರುಮೊಳ್ಗಾಗಿನ್ನೊರ್ಮೆ ಸರ್ವಶಕ್ತಿಯೊಳ್

ಪೊಣರಲ್ಕಾತನಂ ದಟ್ಟಿಗಟ್ಟಿಸಲೆಂದು ದೇವರ್ ತಮ್ಮೊಳೆಸಗಿದ ಪರಿಭವಮುಮವನೊಳ್ ನಡೆಯಿಪೌದಾಸೀನ್ಯಮುಮಂ ಬಿನ್ನವಿಸಿ ಕಿವಿಗೊಳಿಸಿ - ಒಡಲೊಳೆಡರಂ, ಪಾಸಿನೊಳ್ ಚೇಳಂ, ಮಗ್ಗುಲೊಳ್ ಪಾವಂ, ಮನೆಯೊಳ್ಮಾರಿಯಂ ಊರೊಳ್ಪುಲಿಯಂ ಪುಗಿಸಿ ಬಾಳ್ವಂತೀ ಮೈಸೂರವನ ನೆರೆಯ ಬಾಳ್ಮೆಯೆಂದುಬೋಧಿಪುದುಂ; ಅವನುಮದಂ ನನ್ನಿಯೆಂದು ಬಗೆದು – ಎಂತಾನುಮೀ ಕಜ್ಜಮಂ ಸಾಧಿಪಂ ಒಳ್ವಾತಿನಿಂದವನಿಲ್ಲಿಗೆಯ್ತಂದೊಡವನಂ ಪಿಡಿದು ಬಂಧಿಪಂ; ಅಂತಲ್ಲದಿರ್ದೊಡೆ ದಂಡೆತ್ತಿ ಪೋಗಿಯೂರಂ ಮುತ್ತಿ ಲಗ್ಗೆಯೇರಿ ಕೈಸೆರೆವಿಡಿದು ತರ್ಪಂ; ಇದರ್ಕೆ ಸಾಧಕವಾಗಿ ಮಾನೌಮಿಯೊಸಗೆಯ ನೆವದಿಂ ನೀಮೆಲ್ಲರುಂ ದಳಂ ಬೆರಸ್ಲೇಳ್ತರ್ಪುದೆಂದು ಕಳುಪಿದರ್ಗಡ; ಆ ಬಳಿಕ್ಕೆ ಕಿರಿದುಂ ದಿವಸದೊಳೆ ಮುಂಗಾರೊಳ್ತೆರಳ್ದೇಳ್ತರ್ಪ ಮುಗಿಲ ಮೋಹರದಂತೆಯುಂ, ಮಳೆಯೊಳ್ತುಂಬಿಬರ್ಪ ಪೆರ್ವೊಳೆಗಳಂತೆಯುಂ, ಪ್ರಳಯವೇಳೆಯೊಳ್ವೇಲಿಯಂ ಕೈಗಣ್ಮೆಯುಣ್ಮಿ ಕವಿದು ಸಾರ್ತಪ ಕಡಲ ಗಡಣದಂತೆಯುಂ, ದೆಸೆದೆಸೆಯಿಂ ನಡೆತಂದು ನೆರೆದ ಪೆರ್ದಳಮೂರ ಮುಂದಣ ವೈಯಾಳಿಯ ಬಯಲೊಳಂ ಪೊಳೆಯ ತಡಿಯ ತೋಪು ಗಳೊಳಮಿಳಿದಿರ್ದಪುದದಂ ಲಾವಣಿಗೆಗೊಳಲೆಂದು ರಾಯನೊರ್ವ ಗಲೂರ್ವಾಗಲುಪ್ಪರಿಗೆಯನೇರಿ ಬಲಮಂ ನೋಳ್ಪಲ್ಲಿ –ಬಳ್ಳಾಪುರ ಕೋಳಾಲ ಪುಂಗನೂರ್ಮಾಗಡಿ ಬೆಂಗುಳೂರ್ಮೊದಲಾದ ಮೊರಸುನಾಡ ಮೋಹರ ದೊಳಿರ್ಪತ್ತಾನೆ ಈರ್ಚ್ಛಾಸಿರ ಕುದುರೆಯಿರ್ಪತ್ತು ಸಾಸಿರಾಳ್ಗಳುಂ, ತಳಕಾಡೆಳವಂದೂರಮಚವಾಡಿತೆರಕಣಾಂಬಿಕೋಂಟೆ ಮೊದಲಾದೊಳನಾಡ ದಳದೊಳೀರೈದಾನೆ ಐನೂರು ಕುದುರೆಯಿರ್ಪೈದು ಸಾಸಿರಾಳ್ಗಳುಂ, ಕಳಲೆ ಬೇಲೂರ್ಕೆಳದಿ ಮೊದಲಾದ ಮಲೆನಾಡ ಬಲದೊಳಿರ್ಪತ್ತಾನೆ ಈರ್ಛಾಸಿರ ಕುದುರೆ ಇಪ್ಪತ್ತು ಸಾಸಿರಾಳ್ಗಳುಂ, ಚಿಂತನಕಲ್ಬಿಕನಾಯಕನಹಳ್ಳಿ ಬಾಣಾವರ ಬಸವಪಟ್ಟಣ ಸೀರೆಯಂ ಮೊದಲಾದ ಬೇಡವಡೆಯೊಳೈದಾನೆಯೈನೂರು ಕುದುರೆಯಿರ್ಪೈದು ಸಾಸಿರಾಳ್ಗಳುಂ, ರಾಣಾಜಗದೇವು ಕೆರೆಯೂರ ತಿಮ್ಮನಾಯಕಂ ಮೊದಲಾದ ರಾವುತಪಾಯಕರೊಳ್ ಪದಿನೈದಾನೆ ನಾಲ್ಸಾಸಿರ ಕುದುರೆಯಿರ್ಪತ್ತು ನಾಲ್ಸಾಸಿರಾಳ್ಗಳುಂ, ಮೂಲಬಲದೊಳ್ಮೂವತ್ತಾನೆ ಮೂರುಸಾಸಿರ ಕುದುರೆ ಮೂವತ್ತು ಸಾಸಿರಾಳ್ಗಳುಂ – ಅನಿತುಂ ಕೂಡಿ ನೂರಾನೆ ಈರಾರು ಸಾಸಿರ ಕುದುರೆ ಲಕ್ಕಪಾಯ್ದಳವಾಯ್ತೆಂದು ಲೆಕ್ಕಿಗಂ ಬಿನ್ನವಿಸೆ– ಕೇಳ್ದೆಲ್ಲರ್ಗಂ ವೀಳೆಯಂಗಳನಿತ್ತವರವರ ಪಾಳೆಯಕ್ಕೆ ಕಳುಪಿ, ತಾಮುಮರಮನೆಗೆ ಬಂದು, ತಮ್ಮ ಪಡೆವಳನಂ ಕರೆದು, ಪಯಣಸನ್ನದಮೆಲ್ಲಮುಮನೆಸಗೆಂದು ನಿರವಿಸಿ ಕಳುಪಿದಂ ಅಂದು ಮೊದಲ್ ಗುಡಿ ಗೂಡಾರ ಕೊಟ್ಟಿಗೆ ಕಟಾರ ಬಾಣ ಬತ್ತಿ ಮೊದಲಾದುದಂ ದೊರೆಕೊಳಿಪುದುಮಾನೆ ಕುದುರೆಯಾಳ್ಗಳಂ ಲಾವಣಿಗೆಗೊಂಬುದುಮಾಗಿರ್ದಪರ್; ಇದೀಗಳ್ನಡೆದ ನಡತೆ ಮುಂತೆ

ನಡೆವುದರ್ಕಂದಂದಿಗೆ ಬರೆದು ಬಿನ್ನವಿಸಿ ಕಳುಪುವೆಂ; ಇದಂ ದೇವರ ಚಿತ್ತಕ್ಕೆ ತಂದು ಆನಿವರೊಳ್ ವ್ಯವಹರಿಪುದರ್ಕೆನಗೆ ತಿಳಿವಂತೆ ನಿರವಿಸಿ ರಾಯನ್ಸವುಂ ದಯೆಗೆಯ್ವುದು; ಇದರೊಳೇನಾನುಂ ಕೈವೋಸ ಬಾಯ್ಮೋಸಂಗಳುಳ್ಳೊಡಮೊಲ್ಮೆಯಿಂ ಸೈರಿಸುವುದು – ಎಂದೋದಿ ತೀರ್ವುದುಂ; ಆ ರಾಜನೃಪನೀ ವಿಷಯದೊಳಾಮೆಂತು ವರ್ತಿಸವೇಳ್ಕುಮೆಂದನುಜರ ಮೊಗಮಂ ನೋಡಿ ನುಡಿವುದುಂ.

ಬೆಟ್ಟದ ಚಾಮರಾಜಂ – ಎಲೆ ಜೀಯಾ, ಕೇಳೀಗಳೆಮಗೆ ಬಂದ ಕಜ್ಜ ಮಾವುದು; ಇದರ್ಕ್ಕೆ ಯೋಚಿಸತಕ್ಕುದೇಂ; ಸಂತೆಯ ಸಂದಣಿಯಂತೆಯುಂ, ಜಾತ್ರೆಯ ಜಂಗುಳಿಯಂತೆಯುಂ, ಅಗರದ ಪಾರ್ವರೊಗ್ಗಿನಂತೆಯುಂ, ಪರದರ ಪಾಳೆಯದಂತೆಯುಂ, ಒಕ್ಕಲಿಗರ ಮೊಕ್ಕಳದಂತೆಯುಂ, ಮಿಗವಿಂಡಿನಂತೆಯುಂ, ಕಾಗೆಯ ಬಳಗದಂತೆಯುಂ, ಕಪ್ಪೆಯ ಕುಂಪೆಯಂತೆಯುಂ, ಕೈಪರೆಗೆ ಬೆದರಿ ಪರಿದೋಡುವ ತೆಲುಂಗವಡೆಯಂ ಕಡಿದಟ್ಟುವುದಕ್ಕೆ ದೇವರಡಿವರೆಗಂ ಬರ್ಪುದೇನಿರ್ಕುಂ ತಕ್ಕುಮಿಕ್ಕೆಮ್ಮ ವಂದಿಗ [ರ್ಗಾಣತಿಯಿತ್ತು] ಕಳಿಪುವುದು – ಎನಲೊಡಂ ವಿನಯಂ ಬೆರಸು ಕೈಮುಗಿದು ದೇವರಾಜಂ:

ಜೀಯಾ, ಬಿನ್ನಪಂ ಕಿರಿಯರಸರ್ ಬಿನ್ನವಿಸಿದುದೆ ನನ್ನಿ; ಅಂತಾ ತೊಡಮರಸುಗಳ್ ಗೆಲ್ಲಂಗೊಂಬೆಡೆಯೊಳ್ ಮೊತ್ತಮೊದಲನುವೇಳ್ವುದುಂ, ಕುಡುವುದುಂ, ಪಗೆವರೊಳೋರೊರ್ಬರಂ ಬೇರ್ಪಡಿಸುವುದುಮೆಂಬೀ ಮೂರು ಮುಪಾಯಂಗಳನೆಸಗಿಯುಮ ಇವರೊಳ್ಬಸವಾಗದುದರ್ಕೆ ಕೊಳುಗುಳಮನೊಡಂ ಬಡುವರ್; ಅಂತಾಮುಂ ಅವರ್ ಎಮ್ಮೊಳ್ ಕಡುಗೇಣಂ ಗೊಂಡಿರ್ಪುದರಿಂದೊಳ್ವಾತಿನೊಳಂ ಕಟ್ಟೈಸಿರಿಯೊಳಿರ್ಪುದರಿಂ ಕೋಡಿನೊಳಂ ಬೆರಸಿರ್ಪುದರಿಂ ಬೇರ್ಪಡಿಸುವುದರೊಳಂ ಬಸಮಾಗರೆಂದು ತಿಳಿದಿರ್ದೊಡಂ ಲೋಗರಂ ಮೆಚ್ಚಿಸವೇಳ್ವುದಾನರಿತೊಡಂ ಅರಿಯದಿರ್ದೊಡಂ ಭಕ್ತಿಯಿಂ ಬಿನ್ನವಿಸಿದೆಂ; ಎನ್ನ ನುಡಿಯಂ ಲಾಲಿಸಿ ಚಿತ್ತ ಬಂದಂತೆ ನಡೆಯಿಪುದು; ಎಮ್ಮೊಳ್ ಕೇಣಮಾ ಪ್ರಭುಗಳ್ಗಲ್ಲದಾ ರಾಯಂಗಿಲ್ಲಮವನ ಗಣಿಸದಿರ್ಪುದ ರಿಂದವರ್ಗೊಳಗಾಗಿರ್ದಪನಾಮೊಳ್ವುದೋರಿದೊಡೆಮ್ಮೊಳ್ಬೆರಸುವಂ; ಎಮ್ಮ ನೇಹಮನೇ ಪರಮಲಾಭಮೆಂದೆಣಿಸಿ ಎಮ್ಮನಾದರಿಸಿ ಮನ್ನಿಸಿ ತೇಜಂಗೆಯ್ದುಂ ಆಗಳೀ ನೆರೆದ ನೆರವಿ ಮುನಿದು ಪರೆದು ಪೋಪುದು; ಆ ಬಳಿಕ್ಕಾಮಂದಂದಿನೌಚಿತ್ಯಮನಾರಯ್ದು ನಡೆಯಲ್ ಬರ್ಕುಂ; ಅದರಿಂದೀಗಳ್ ಪಟ್ಟಣಕ್ಕೆ ಬರೆಯಿಸಿ ಕಳುಪುವಲ್ಲಿ - ತಮ್ಮೆಮ್ಮ ನೇಹಂ ಪಿರಿಯರ ಕಾಲದಿಂ ಬಂದುದಲ್ಲದೆ ಪೊಸತಲ್ತೈಸೆ; ತಾಮಿಲ್ಲಿಗೆಯ್ತರ್ಪುದರ್ಕಮಾಮಲ್ಲಿಗೆ ಬರ್ಪುದರ್ಕಂ ಎರವಾವುದು; ತಾಮುಂ ದೂರದೇಶದಿಂ ಬಂದು ಬಳಲ್ದಿರ್ಪುದರಿಂದಾಮೆ ನಡೆತರ್ಪೆವು –ಎಂದು ಬರೆಯಿಸಿ ಕಳುಪುವಂ; ಇಲ್ಲಿ ಮೈಸೂರ

ಕೆಸರೆಯ ಕೋಂಟೆಯಗಳಾಳ್ವೇರಿ ಗಳನಾರಯ್ದು ಪೊರವಳೆಯದ ಮರೆತೆರೆಗಳಂ ತೆಗೆಯಿಸಿ ಸಕಲ ಸಂವರಣೆಗಳಂ ದೊರೆಗೊಳಿಪುದಕ್ಕೆ ಕಿರಿಯರಸರಂ ಪೊಸ ಆಳ್ಗಳಂ ಲಾವಣಿಗೆಗೊಂಬುದರ್ಕೆ ಚನ್ನರಾಜನುಮನಿರಿಸಿ ದೇವರುಮೆನ್ನ ಸೇರುವೆಯ ಕೂರಾಳ್ಗಳನೊಡಗೊಂಡು ಪೊಳೆವರೆಗಂ ಪೋಗಿ ನಿಂದಲ್ಲಿಯವನಲ್ಲಿಗಿದಿರ್ವಂದನಾದೊಡಾಮೇರೆಗೆ ಸೈರಿಸಲಾರದೆ ನೆರೆದ ಕಿರುದೊರೆಗಳೆಲ್ಲರುಮಾಗಳೆ ಕೈದೆಗೆವರ್ ಆಮುಂ ಪಟ್ಟಣಕ್ಕೆ ಪೋಗಿ ದೇವರ್ಕಟ್ಟಿಸಿದ ಪಶ್ಚಿಮರಂಗನಾಥನ ದಿವ್ಯಮಂಟಪ ಪ್ರಾಕಾರಂಗಳಂ ನಿಟ್ಟಿಸಿ ರಂಗೇಶಂಗೆರಗಿ ತೀರ್ಥಪ್ರಸಾದಂಗೊಂಡು ಕೃತಾರ್ಥರೆನಿಸಿ ಬರ್ಪಂ ಮೇಣವನಿದಿರ್ಗೊಳ್ಳದಿರ್ದೊಡವನೊಳ್ ತಪ್ಪಂ ಪೊರಿಸಿ ಬರ್ಪಂ –ಎಂದು ಬಿನ್ನವಿಪುದುಂ; ರಾಜನೃಪನದಂ ಮನದೆಗೊಂಡು ಕಿರಿಯರಸನಮೊಗಮಂ ನೋಡಿ– ಬೆಟ್ಟದಯ್ಯ, ಕೇಳೀ ದೇವರಾಜಂ ನುಡಿದಂತೆ ನಡೆಯಿಸಿನೋಳ್ಪಂ; ಇದರೊಳ್ ತಪ್ಪಿಲ್ಲೆಂಬುದುಂ ಜೀಯಾ, ಹಸಾದಮೆಂದೊಡಂಬಡೆ ಪಟ್ಟಣಕ್ಕೆ ರಾಯಸಮಂ ಕಳುಪಿದಂ

ಇಲ್ಲಿಯಾ ತಿರುಮಲರಾಜಂ ಮರುವಗಲ್ ಮೈಸೂರ ನಿಯೋಗಿ ತಂದೋದಿಸಿದೋಲೆಯಭಿಪ್ರಾಯವಂ ತಿಳಿದು, ತಮ್ಮವರಂ ನೋಡಿ, ಕಡಲೊಳ್ ಸೊದೆಯ ಪೆಂಪುಂ, ಚಂದಿರನೊಳ್ ಕದಿರ ತಣ್ಪುಂ, ಸುಗ್ಗಿಯೊಳಲರಲಂಪುಂ, ತೆಂಬೆಲರೊಳ್ ಬಾವನ್ನಗಂಪುಂ, ಕುಲೀನನೊಳೊಳ್ಗುಣದ ಗುಂಪುಂ, ಇರ್ಪುದಚ್ಚರಿಯಲ್ತು ಆದೊಡಮಿವನೊಳ್ ವೀರಮುಂ ವಿನಯಮುಂ ತಮ್ಮೊಳ್ ತಾಂ ಕೇಣಮನುಳಿದು ಕೆಳೆಗೊಂಡಿರ್ಪುವು; ಇವನ ನೇಹದೊಳಪ್ಪ ಕಜ್ಜಮೆಮಗಿವನ ಬೇರದೊಳಾಗದು; ಈ ನೆರೆಯವರನಿಬರುಮಿವನನೊಳಪುಗಲುಮಿದಿರ್ಚಲು ಮಾರದೆ ಬರಬೇರದಿಂ ಕಳ್ಳರೆಳ್ಚರಿಕೆಯುಳ್ಳರಂ, ಕಣ್ಬೇನೆಯವರ್ಬೆಳಕಂ, ಗೂಗೆಗಳ್ಪಗಲಂ, ನಾಸ್ತಿಕರ್ವೇದಶಾಸ್ತ್ರಂಗಳಂ, ಗಾಂಪರೊಳ್ಗಬ್ಬಮನೆಗ್ಗರಕ್ಕರಿಗರಂ ಪಗೆಸಾರಿ ಪಂಬಲಿಸಿ ಬಸವಳಿವಂತೆ ಪಲತೆರದಿಂ ಬನ್ನಂ ಬಡುವರ್ ಇವರ್ಗಮಾ ರಾಜನೃಪಂಗಂ ತಾರತಮ್ಯಂ ಆಡುಗಳ್ಗಮಾನೆಗಮೊಳ್ಳೆಗಳ್ಗಮುರಗೇಂದ್ರಂಗಂ, ವಾಯಸಂಗಳ್ಗಂ ವೈನತೇಯಂಗಂ, ಕಿರುಬಗಳ್ಗಂ ಕೇಸರಿಗಂ, ಮಿಂಚುಬುಳುಗಳ್ಗಂ ಮಿಹಿರಂಗಂ, ಗುಂಬಗುಳಿಗಳ್ಗಮಂಬುಧಿಗಂ, ಅಣುಗಳ್ಗಮಮರಗಿರಿಗಂ, ಮಿಕ್ಕೋದುಗಳ್ಗಂ ವೇದಕ್ಕಂ ಅಖಿಲದೇವರ್ಗಮಬ್ಜನಾಭಂಗಂ ಇರ್ಪಂತಿರ್ಕುಂ; ಅದರಿಂದಾಮಿವರ ನೇಹಮಂ ನೀಳ್ಕರಿಸಿಯವನನಿದಿರ್ಗೊಂಡುಪಚರಿಸಿಯೆರವಿಲ್ಲದೆ ಬೆರಸಿ ಬೇಳ್ಪ ಕಜ್ಜಮಂ ಸಾಧಿಸಿಕೊಂಬುದೇ ಜಾಣ್ಮೆ–ಎಂದು ನಿಶ್ಚಯಿಸಿ ಪೊಳಲಿಂ ಪೊರಮಟ್ಟು ತೆಂಕಣ ಪೊಳೆಯಂ ದಾಂಟಿ ಪಡುವಣ್ಗೆ ಪರಿವ ಕಿರುವಳೆಯ ತಡಿವರೆಗಮೆಯ್ದಿ, ಅಲ್ಲಿರ್ವರುಂ ದಂಡಿಗೆಗಳನಿಳಿದು ಬಳಿಕಂ ಕ್ಷೇಮಾಲಿಂಗನಂಗೆಯ್ದು, ಉಡುಗೊರೆಗಳಂ ಕೊಟ್ಟು ಕೊಂಡು ಸರಿದಂಡಿಗೆಗಳೊಳ್ಕುಂಡಿಸಿ ಮಾತಾಡುತುಂ ಬರ್ಪಲ್ಲಿ ರಾಜನೃಪಂ ತಿರುಮಲರಾಜನಂ ನೋಡಿ–

ರಾಯ, ನೀಂ ಪಲವುಂ ದಿವಸಮಿಾದೇಶಮಂ ಪೊರ್ದದಿರ್ದುದರಿಂ ಪಲಂಬರ್ ಪ್ರಭುಗಳ್ ಪಲತೆರದೊಳ್ ಪರಿದಾಡುತೆ ಪದುಳದೊಳಿರ್ದರ್; ದೇವರಿಲ್ಲಿಗೆಯ್ತಂದ ಬಳಿಕೀತಕ್ಕುಮಿಕ್ಕರ ಸೊರ್ಕು ಸುರ್ಕಿ ಪೊಡವಿ ಕಿರಿದುಂ ದಿವಸದೊಳೇಕರಾಜ್ಯಮಪ್ಪುದು– ಎಂಬುದುಂ; ಅವಂ ರಾಜರಸ ಕೇಳ್ವುದು; ಆಮೆಲ್ಲಿರ್ದೊಡಮೇಂ; ಎಮ್ಮಿಂದಪ್ಪ ಕಜ್ಜಮಾವುದು; ಈ ನಾಡುಬೀಡುಗಳನಿತುಂ ನಿಮ್ಮವು, ಆಂ ನಿಮಿತ್ತ ಪಡಿಯೊಳಿರ್ಪೆವು, ಎಮ್ಮಂ ಬೆಸಗೊಳವೇಳ್ಕುಮೆಂದುಂ ಮನದಿರವನಾರಯ್ಯವೇಳ್ಕುಮೆಂದುಂ, ಬಳಿಸಲವೇಳ್ಕುಮೆಂದುಂ ಆಳೋಚಿಸದೀ ದೊರೆತನಮೆ ಸ್ವಕೀಯ್ಯಮೆಂದು ಬಗೆದು ನಡೆಯಿಸವೇಳ್ಕುಂ ಎನಲೊಡಂ, ರಾಜನೃಪಂ ದೇವರಾಜರಸನಂ ಸನ್ನೆ ಗೆಯ್ದಾ ರಾಯನೊಡನೆ– ನಿಮ್ಮೆಮ್ಮೊಳೆಂತೆಣಿಸಿದಪಿರಂತೆ ನಡೆವುದರ್ಕೆ ಸಂದೆಯಮಿಲ್ಲ, ಶ್ರೀರಂಗೇಶನೇ ನೆರವಪ್ಪಂ– ಎಂದೀ ತೆರದಿಷ್ಟಾಲಾಪಂಗಳಿಂದಮೆ ಕಳೆದ ಪೊಳ್ತಂ ನಡೆದ ದಾರಿಯನರಿಯದೆ ಪಟ್ಟಣದೊಳ್ಖನ್ನಮೆ ರಾಜನೃಪಂಗೆಂದು ಸಜ್ಜುಕಂ ಗೆಯ್ದ ಬೀಡಾರದ ಸರಿಸಕ್ಕೆ ಸಾರ್ತಪ್ಪುದುಂ. ಪಡಿಯರಂ– ಜೀಯಾ, ಪರಾಕು ಎಂದೆಳ್ಚರಿಸಿದಂ. ಆಗಳಲ್ಲಿ ದಂಡಿಗೆಯಂ ನಿಲ್ಲಿಸಿ ತಿರುಮಲರಾಜಂ ತನ್ನ ದಂಡನಾಯಕನನೆಕ್ಕಟಿ ಕರೆದು–ಈ ರಾಜನೃಪನೆಮ್ಮ ಪುಣ್ಯೋದಯದಿಂದೆಮ್ಮವನ್ಸಾದಂ; ಈತನ ಕೆಳೆಯೆಮಗೆ ಮಂತ್ರಸಿದ್ಧಿಯಂತೆಯುಮಸ್ತ್ರಶಕ್ತಿಯಂತೆಯುಂ, ಯೋಗಸಿದ್ಧಿಯಂತೆಯುಂ, ದೇವತಾಪ್ರಸಾದದಂತೆಯುಮತ್ಯಂತಾತಿಶಯಾವಹಮಾರ್ಗಿಕ್ಕುಂ; ಅದರಿಂದೀತಂಗೆ ಸಂತಸಮಪ್ಪವೊಲ್ ಉಲುಪೆಯುಪಚಾರಂಗಳಿಂ ಮನಂಗೊಳಿಪುದು– ಎಂದಾಣತಿಯಿತ್ತು ರಾಜನೃಪನಂ ಮೊಗಮಂ ನೋಡಿ ವಿನಯಂಗೂಡಿ ಬೀಡಾರದೊಳ್ ವಿಶ್ರಮಿಪುದು ಎಂದು ಬೀಳ್ಕೊಟ್ಟು, ತಾನುಂ ತನ್ನರಮನೆಯ ಮೊಗಮಪ್ಪುದುಂ ರಾಜನೃಪನ ಕೈವಾರಿಗಳ್ಕೈಯ್ಯೆತ್ತಿ– ಸ್ವಸ್ತಿ ಸಮಸ್ತ ಸಾಮಂತಮಹೀಪಾಲವೌಲಿವಾಲಾಲಾಲಿತಪದರಾಜೀವರಾಜೀವಸಖಗರ್ವಸರ್ವಸ್ವ ನಿರ್ವಾಪಣಚಣಪ್ರತಾಪೋದಯದಯಾರಸತರಂಗಾಯಿತಾಪಾಂಗಾವಲೋಕ ನಾಪ್ಯಾಯಿತಕರ್ಣಾಟಮಂಡಲಮಂಡಲಾಗ್ರಖಂಡಿತಾರಾತಿನೃಪಂಕಂಠ ಕಾಂಡೋಚ್ಚಲದ್ರಕ್ತಧಾರಾಪರಿಮೃಷ್ಟತದೀಯಬಿರುದ ಬಿರುದಂತೆಂಬರಗಂಡ ರಾಜನೃಪ ವಿಜಯಿಾಭವ ದಿಗ್ವಿಜಯಿಾಭವ ಎಂದು ಪೊಗಳ್ವುದುಂ; ಅದಂ ಕೇಳ್ದು ಮುಂಗಾರವೊಳಗಂ ಕೇಳ್ದ ಕೇಸರಿಯಂತೆ ಕನಲ್ದು, ಕಾಲೋಚಿತಮಲ್ತೆಂದಾಕನಲ್ಕೆಯನೊಳಕೊಂಡು ತನ್ನ ಕೆಲದೊಳ್ಬರ್ಪ ಮಂತ್ರಿಯೊರ್ವನಂ ಕರೆದು, ನೀಂ ರಾಜನೃಪನ ಬಳಿ ಗೆಯ್ದಿ ಆತನ ಮನಂ ಕದಡದಂತನುವೇಳ್ದು ಅಂತೆಂಬರಗಂಡನೆಂಬುದೊಂದು ಬಿರುದ ನೆಮ್ಮಿದಿರೊಳ್ಪೊಗಳದಂತೆ ಗೆಯ್ವುದೆಂದು ಕಳುಪುವಿನಂ, ಅವನಲ್ಲಿಗೆಯ್ದಿ ಕೈಮುಗಿದು ದೇವರೆಡೆಯೊಳೆಮ್ಮಾಳ್ದರ ನೇಹ ಮೆರವಿಲ್ಲದಿರ್ಕುಮಿದಂ ಸೈರಿಸಲಾರದಿದ

ರೊಳೂಣೆಯಮನೂಹಿಸಿ ಯೆಳ್ಳೆನಿತುಮುಂಟಾದೊಡದಂ ನೆಗಳಿಸಿ ಪೆರೆಯೊಳ್ ಕರೆ ಗಂಡಂತೆಕೊಂಡು ಕೊನರಿಸಲೆಂದು ಕಾದಿರ್ಪರ್; ಅದರ್ಕೀಗಳಂತೆಂಬರಗಂಡನೆಂಬೀ ಬಿರುದು ದೇವರ ವಂಶ ಪರಂಪರೆಯೊಳಮೆಮ್ಮಾಳ್ದರ ಪರಂಪರೆ ಯೊಳಮೊಳದದನಿರ್ವರುಮಿರ್ಪೆಡೆಯೊಳುಗ್ಗಡಿಸದಂತೆ ಕೈವಾರಿಗಳ್ಗೆ ಕಟ್ಟಳೆಯಾಯ್ತು ದೇವರ ಬಗೆಯನವರ್ಗ‍ಮಂತು ನಿರವಿಸವೇಳ್ಕುಂ ಎಂದು ಬಿನ್ನವಿಪ್ಪುದುಂ.

ರಾಜನೃಪನೊಡವುಟ್ಟಿದನ ಮೊಗಮಂ ನಿಟ್ಟಿಸೆಯಾ ದೇವರಾಜಂ ನಸುಕಿನಿಸುವೆರಸು ಮೋಡಿಯೊಳ್ ನಿಯೋಗಿಯ ಮೊಗಮಂ ನೋಡಿ– ನೀಂ ಬಿನ್ನವಿಸಿದುದು ಸಾಜಂ ಅಂತಾದೊಡಮಿಾ ಬಿರುದು ನಿಮ್ಮರಸರ್ಗೆ ಕೈವಾರಿಗಳಿಂ ಬಂದುದಾದುದರಿಂ ಪೊಗಳವೇಡೆಂದು ನಿರವಿಸಿದೊಡಮವರಂತೆ ಮಾಣ್ದಿರ್ಪರ್; ಎಮಗೀ ಬಿರುದೆಮ್ಮ ಪಿರಿಯರ ಬೀರದಿಂ ಸಮನಿಸಿ ಸೈನಿಕರುರ್ಕಿನಿಂ ನೆಗಳ್ದುದು; ಆದುದರಿಂ ಕೈವಾರಿಗಳಂ ತಡೆಯಲ್ಕೆ ಕಾರಣಮಿಲ್ಲ; ಮುನ್ನೆಮ್ಮ ಮುತ್ತಯ್ಯನೆನಿಸಿದ ಬೆಟ್ಟದ ಚಾಮರಾಜಭೂಪಾಲನ ಮನ್ನಣೆಯ ತುಳಿಲಾಳ್ ಕಳಲೆಯ ನಂಜಿಸೆಟ್ಟಿ ನಂಜನಗೂಡ ಜಾತ್ರೆಯೊಳ್ ನೆರೆದ ಪಲಂಬರ್ ಪ್ರಭುಗಳ ಮುಂದುಗ್ಗಡಿಪ ಪಲವುಂ ಬಿರುದುಗಳಂ ಕೇಳ್ದು ಸೈರಿಸದೆ ಪಲವುಂ ಪಜ್ಜೆಗಳನಡಕಂ ಗೆಯ್ವಾನೆವಜ್ಜೆಯಂತೆಯುಂ, ಪಲವುಂ ಪೊಳೆಗಳನೊಳಕೊಳ್ವ ಮುನ್ನೀರಂತೆಯುಂ, ಪಲವುಂ ಮಹಾಭೂತಂಗಳನಾವರಿಪಾಗಸದಂತೆಯುಂ, ಪಲವುಂ ಬಿರುದುಗಳಂ ನೀಳ್ಕರಿಸಿ ನೆಗಳ್ವ ಅಂತೆಂಬರಗಂಡನೆಂಬ ಬಿರುದಂ ತಾಂ ಬಲಗೈಯೊಳ್ಪಿಡಿದ ಕಟಾರದಿಂದೆಡಗೈಯೊಳಂಗಡಿಯ ಮಾನಮಂ ಪಿಡಿದು ಬಾಜಿಸಿಯುಗ್ಗಡಿಪುದುಮಲ್ಲಿ ನೆರೆದ ಸಮಸ್ತಪ್ರಭುಗಳು ಮೊಗ್ಗಾಗಿ ತಮ್ಮ ತಮ್ಮ ದಳದೊಡನವನಂ ಪೊಯ್ಯಲೆಂದು ಸುತ್ತಮುತ್ತುವಿನಮವಂ ಗಿಡುಗಂ ಗಿಳಿಗಳಂ, ಕಿರುಬ ಕುರಿಗಳಂ, ಪುಲಿ ಮೊಲಂಗಳಂ, ಜಕ್ಕಂದೊಳಲಿ ಪಲ್ವಲಮಂ, ಮದಕರಿ ಕದಳೀವನಮಂ ಪುಗುವಂತೆ ಪೊಕ್ಕು ಮಿಕ್ಕೊಕ್ಕಲಿಕ್ಕಿ ಗೆಲ್ದು ಬಿರುದನುಗ್ಗಡಿಸಿದಂ; ಅದರಿಂದೀ ಬಿರುದೆಮ್ಮ ತುಳಿಲಾಳ್ಗಳ ಪಾಲ್ಗೆ ವಂದಿರ್ಪುದು ಅದರಿನೀ ವಿಷಯದೊಳಾರುಮಂ ಗಣಿಸರ್; ಆಮೆ ನಿರವಿಸಿದೊಡಂ ಸಲಿಗೆಯಿಂದಾಳೊಡೆತನದ ಮೇರೆಯಂ ಮಿಾರುವರ್ ಇದರ್ಕೀತ್ತೊಡರ್ ನಿಮ್ಮ ಬಗೆವಂದಂತು– ಎಂದು ನುಡಿದು ವೀಳೆಯಂಗೊಟ್ಟು ಕಳುಪುವುದುಂ. ಅವಂ ತನ್ನಾಳ್ದನ ಬಳಿಯಂ ಸಾರ್ದು ತಾಂ ಕೇಳ್ದುದನೆಲ್ಲಮಂ ಬಿನ್ನವಿಸೆಯಾ ರಾಯಂ ಮನದೊಳ್ಬಿರುದಿಂಗೆ ಬೀಯ್ಯಮಪ್ಪೆಡೆಯೊಳ್ ಸೈರಿಪ್ಪುದು ಬೀರರ್ಗೆ ಪಿರಿಯೂಣೆಯಮೆಂದು ಬಗೆದು –ಅಕಟಾ, ಆಮಿವರೊಳ್ಪೆರಸಿದುದು ಕೂಗಿ ಮಾರಿಯಂ ಕರೆತಂದವೊಲಾದುದು, ಆದೊಡಮಿನ್ನಿವರೊಳ್ಬಾಸೆ ನಂಬುಗೆಗಳನಿತ್ತೆವು– ಎಂದು ಬಗೆದು ಪಿಂದೆಗೆಯದೆ ಕೈಸೆರೆಗೊಂಡು ಕಡೆಗಾಣಿಸುವುದೇ ಕಜ್ಜಂ ಎಂದಾಳೋಚಿಸಿ, ಮರುವಗಲೊಳ್ ಪೊತ್ತರೆಯಾಂ ವೈಹಾಳಿಯ ಬಯಲೊಳಿನಿಸುಂ ಪೊಳ್ತು ಜಿನದದೊಳಿರ್ದು ಬರ್ಪೆವು, ಇಲ್ಲಿ

ನೀಮುಂ ರಂಗೇಶನ ಸನ್ನಿಧಿಗೆಯ್ದಿ ಸಂದರ್ಶನಂ ಗೆಯ್ದು ವಂದಿಪುದು– ಎಂದು ರಾಜನೃಪಂಗೆ ಬೆಸಸಿ ಕಳುಪಿ, ಪೊಳಲ ಪೊರವಳಯದ ಸಾರಿಯ ಮಂಟಪದೊಳ್ ಕುಳ್ಳಿರ್ದು ಮೊದಲ ದಿವಸದೊಳ್ ಮುನಿದು ಮೋಡಿಯೊಳಿರ್ಪ ಸಕಲಪ್ರಭುಗಳಂ ಕರೆಯಿಸಿಯವರೇಳ್ತರ್ಪನ್ನಂ ತನ್ನ ಭಟರೆಸಗುವ ಲಗ್ಗೆ ಚಂಡಾಟಮಂ ನಿಟ್ಟಿಪ ನೆವದಿಂದಿರ್ದು ಅನಿಬರುಂ ಬರ್ಪುದುಮವರನೆಕ್ಕಟಿಗರೆದು– ನಿನ್ನೆ ನಿಮ್ಮೆಲ್ಲರ್ಗಂ ಪೇಳ್ದೊಡೆ ಮಂತ್ರಭೇದಮಪ್ಪುದೆಂದು ಮೈಸೂರವನೊಳ್ ಪುಸಿನೇಹಮಂ ಪೊಸೆಯಿಸಿ ಪೊಳಲಂ ಪುಗಿಸಿದೆವು ಅವನಂ ಕೈಸೆರೆಗೊಳಲ್ಕಿದೇ ವೇಳೆ ಘಳಿಲನೆ ತೆರಳಲ್ವೇಳ್ಕುಂ– ಎಂಬುದು ಮವರವರತಿತ್ವರಿತದಿಂ ತಮ್ಮತಮ್ಮ ದಳಮಂ ಮೇಳವಿಸುತಿರ್ಪಿನಂ–

ಇತ್ತಲೀ ರಾಜನೃಪನರುಣೋದಯದೊಳುಪ್ಪವಡಿಸುತುಂ ಶ್ರೀಮನ್ನಾರಾಯಣನ ಪರವಿಭವವ್ಯೂಹಾದಿ ಮೂರ್ತಿಗಳುಮಂ, ಗಜೇಂದ್ರಮೋಕ್ಷಣಾದಿ ದಿವ್ಯಚಾರಿತ್ರಗಳುಮಂ ನೆನೆದು ನಾಮಸಂಕೀರ್ತನಂ ಗೆಯ್ದು ಕಾವೇರಿಗೆಯ್ದಿ ಮಿಂದು ಮಡಿಯುಟ್ಟು ಲಲಾಟಾದಿತತ್ತದುಚಿತಸ್ಥಾನಂಗಳೊಳ್ ದ್ವಾದಶೋರ್ಧ್ವಪುಂಡ್ರಂಗಳನಿಟ್ಟು, ತೊಳಸಿ ತಾವರೆಮಣಿಗಳಮಳ್ಸರಮಂ ಧರಿಸಿಯುರಮನೆಗೆ ಬಂದಲ್ಲಿ ಗೃಹಾರ್ಚಾರೂಪದೊಳೆಸೆವಚ್ಯುತನಂ ಷೋಡಶೋಪಚಾರಂಗಳಿಂದರ್ಚಿಸಿ ತೀರ್ಥಪ್ರಸಾದಂಗೊಂಡು ನಿತ್ಯದಾನಮನೆಸಗಿ, ಬಳಿಕ್ಕೊಳ್ದೊಡವುಗಳಿಂದೊಡಲಂ ಸಿಂಗರಿಸಿ ಮಿತಪರಿಜನಂ ಬೆರಸು ರಂಗೇಶನ ದೇಗುಲಮಂ ಸಾರ್ದು, ಗೋಪುರದ ಬಾಗಿಲನೊಳಪೊಕ್ಕುಬಲವಪ್ಪಾಗಳಲ್ಲಿರ್ಪ ಶ್ರೀವೈಷ್ಣವರತಿಹರ್ಷದಿನಿದಿರ್ವಂದಾಶೀರ್ವಾದಿಸಿ– ಎಲೆ ಮಹಾರಾಯ, ನೀಮೆಮ್ಮೀ ಸ್ವಾಮಿಗೀ ದಿವ್ಯಪ್ರಕಾರಮಂ ಕಟ್ಟಿಸಿದುದರ್ಕೆ ಸಂತಸಬಟ್ಟು ನಿಮಗೀ ಪರಿಯ ಪಲವುಂ ಕೋಂಟೆಗಳನಿತ್ತು ದಯೆಗೆಯ್ವರ್ ಎಂಬುದುಂ ಅವರ್ಗೆ ವಂದಿಸಿ, ಅಖಿಲಜಗತ್ಕಾರಣನುಮಪ್ರಮೇಯನುಮನವಧಿಕಾತಿಶಯಾಸಂಖ್ಯೇಯಕಲ್ಯಾಣಗುಣಗಣನುಮಪ್ಪ ನಾರಾಯಣಂಗಾಳ್ಗೆಯ್ದೊಲಿಪುದರ್ಕಾನೆನಿತರವಂ, ನಿಮ್ಮೊಲವುಂ ಪರಕೆಗಳುಂ ಎಮಗೆ ಪರಮಪ್ರಾಪ್ಯಮೆಂದು ನುಡಿವುತ್ತವರೊಡವೆರಸಲ್ಲಿಂದೊಳಪೊಕ್ಕು ಬಲಿಪೀಠ ಧ್ವಜಸ್ತಂಭಂಗಳ ಬಳಿಯೊಳ್ ಸ್ವಾಮಿಗೆ ಸಾಷ್ಟಾಂಗಮೆರಗಿಯಾದ್ವಿತೀಯಾವರಣದೊಳ್ ಬಲವರುತ್ತೆ ದಕ್ಷಿಣಭಾಗದೊಳೆಸೆವ ಪರಕಾಲಾದಿ ದಿವ್ಯಸೂರಿಗಳಂ, ಪರಾಂಕುಶರಂ, ವಿಷ್ಣುಚಿತ್ತರಂ, ಚೂಡಿಕುಡುತ್ತನಾಚ್ಯಾರಂ, ಪಾರ್ಥಸಾರಥಿಯಂ, ನೃಸಿಂಹಸ್ವಾಮಿಯಂ ಪರಿವಿಡಿಯಿಂ ಬಲಗೊಂಡು, ಪಶ್ಚಿಮೋತ್ತರಭಾಗಮಂ ಸಾರ್ದಲ್ಲಿ ಸಕಲಜಗಜ್ಜನನಿಯೆನಿಸಿದ ಶ್ರೀರಂಗನಾಚ್ಚಾರಮ್ಮನವರ ದಿವ್ಯ ಶ್ರೀಪಾದಪದ್ಮಪರಾಗಮಂ ಶಿರದೊಳಾಂತು, ಕಟಾಕ್ಷಾಮೃತರಸಾಸೇಕದಿಂ ತಣಿದು, ವೇಣುಗೋಪಾಲ ವರದರಾಜ ರಾಮಾನುಜ ಶ್ರೀವತ್ಸಾಂಕರಂ ಸೇವಿಸಿ, ಜಯ ವಿಜಯರ್ಗೆ ಕೈಮುಗಿದೊಳಪೊಕ್ಕು ವಿಷ್ವಕ್ಸೇನರಂ ವಂದಿಸಿ, ಮುಂತಣ್ಗೆ ನಡೆದು ಗರ್ಭಗೃಹದ ಬಾಗಿಲೊಳ್ ಕೈಮುಗಿದು ನಿಂದು ನಿಟ್ಟಿಸುವಿನಂ–

ಇಂಗಡಲ ನಟ್ಟನಡುವೆ ನೆಗೆದು ಮೆಯ್ದೋರುವ ಕರ್ಮಣಿದೀವಿಯಂತೆಯುಂ, ಐಕಿಲ್ವೆಟ್ಟಿನ ತಪ್ಪಲೊಳ್ ಬೆಳೆದ ಕದ್ದಾಳೆಯ ಬನದಂತೆಯುಂ, ಬಾಂಬೊಳೆಯ ಮಡುವಿನೆಡೆಯೊಳ್ಪೂತು ಪೊದರಿಟ್ಟ ಕನ್ನೈದಿಲಗಡಣದಂತೆಯುಂ, ಮೆಯ್ಸಿರಿವೆತ್ತು ಶೇಷತಲ್ಪದೊಳ್ಪವಡಿಸಿ– ಎಳವಿಸಿಲ ಸೋಂಕಿನಿಂದೆಸೆವಾಗಸದಂತೆಯುಮರಿದಳದ ಪಾಸರೆಗಳಿಂದೊಪ್ಪುವ ಕಾಡಗೆವೆಟ್ಟಿನಂತೆಯುಂ, ಮಿಂಚಿನ ಮಿರುಗಿನಿಂ ಮೆರೆವ ಕಾರ್ಮುಗಿಲಂತೆಯುಂ, ಪಾವುಗಳ ಬೇರದಿಂ ಪಾತಾಳಮಂ ಪುಗಲ್ಕೆರಗಿದ ಗರುಡನೆರಂಕೆಗಳ ಕೆಳೆಯೊಳ್ತೊಳಪ ಕಡಲಂತೆಯುಂ, ಉಟ್ಟ ಪೊಂಬಟ್ಟೆಯ ಪೊಗರಿಂ ಬಗೆಗೊಳ್ವ ಸಿರಿವ್ಮೈಯ್ಯ ಕರ್ವೆಳಗು ಎಡೆವಿಡದೆ ನಿಟ್ಟಿಪ ಪಾಲ್ಗಡಲ ಕುವರಿಯ ಕರಿಯಾಲೆಯ ಕದಿರ್ಗಳಿಂ ಬಳೆದು, ಸುಳಿವೊರ್ಕ್ಕುಳ ತಾವರೆಯಲರುಣಿಗಳ ಬಳಗದ ನೆರವಿನಿಂ ನಿಮಿರ್ದು, ಸಿರಿದೊಳಸಿಯ ದುಂಡದಂಡೆಯೊಂದುಗೆಯೊಳ್ಪೆರ್ಮೆ ವೆತ್ತಡಿಯುಂಗುಟದ ಸೋಂಕಿನೊಳ್ನೆಗಳ್ದ ಬಾಂಬೊಳೆಯೊಳ್ ಕೇಣದಿಂ ಮೈಯೆಲ್ಲಮಂ ಸುತ್ತಿ ಸುಳಿವ ಜಗುನೆಯ ತೆರೆಯ ತಿಂತಿಣಿಯಂತೆ ಕವಿದುವರೆ, ಅದನಿದಿರಿಸುತ್ತೆ ಪತ್ತೆ ಸಾರ್ದು ಮುನ್ನಾಗಸಮನಳೆವಾಗಳಲರಿಚಂ ತೊಳೆದಿಟ್ಟ ಕುಂಕುಮದಣ್ಪಿನಿಂದಮೋ, ಮೇಣೆಡೆವಿಡದೆ ಪೊಡಮಡುವ ಪುರಹರಪುರಂದರಾದ್ಯರ ಮೌಳಿಮಾಣಿಕ್ಯ ಪ್ರಭಾಜಾಲದಿಂದಮೋ, ಮತ್ತೊಯ್ಯನೊತ್ತುವ ಸಿರಿಪೊಡವಿ ರಾಣಿಯರ ಚೆಂಗೈದಳದ ಕಳೆಯಿಂದಮೊ, ಯೋಗಿಜನಮನೋನುರಾಗದಿಂದಮೊ ಎಂಬಂತೆ ಕೆಂಪು ಪೆಂಪುವೆತ್ತ ಮೆಲ್ಲಡಿಗಳಿಂ, ಸಾಜದ ಕರ್ಪು ನೇವುರದ ಪಚ್ಚೆವಣಿಯ ಪಸುರ್ಪುಟ್ಟ ಪೀತಾಂಬರದ ಪೊಂಬೊಗರ್ಗ್ಗಳಿಂ, ಮೂವಣ್ಣಂ ಬಡೆದು ಗಂಡುಸೋಗೆಯ ದುಂಡುಗೊರಲಂತೆಸೆವ ಕಿರುದೊಡೆಗಳಿಂ, ಕಾವನಾರವೆಯ ಕರ್ಬಾಳೆಗಳಂತೆಯುಂ, ಬಿನದಂಗಳೊಳ್ನೆಂಮುವ ಸಿರಿಪೊಡವಿರಾಣಿಯರ ಕರ್ಬಟ್ಟೆಯ ಕೌಳುಗಳಂತೆಯುಂ, ತೋರ್ಕೆವೆತ್ತ ತೋರದೊಡೆಗಳಿಂ ಪೊಡೆಗಟ್ಟಿದ ಮುತ್ತಿನಸರದ ಬೆಳ್ವೆಳಗೆಂಬ ತಿಳಿನೀರಿಂ ತೀವಿ ತಂನೊಳ್ ಬೆಳೆದ ತಾವರೆಯುರಲ್ಪುಡಿಯಿಂ ನಾಲ್ಮೊಗನಂ ಪಡೆದ ಸುಳಿವೊರ್ಕ್ಕುಳ್ಗೊಳದಿಂವೆಡೆವಿಡದಿಡಿ ಬಾವನ್ನದಣ್ಪಿನ ಮೆಲ್ಪಾಸುಂ ಕೌಸ್ತುಭಮಣಿದೀಪಮುಂ ತೊಳಸಿಸರದುಯ್ಯಲೆಯುಂ ಪೊದೆದ ಪೊಂಬಟ್ಟೆಯ ಮೇಲ್ಕಟ್ಟುಂ, ಕಂಠಿಕಾಮುಕ್ತಾಹಾರದ ಲಂಬಣಂಗಳುಂ ಮೈಯ್ಗೊಳೆ ಸಿರಿಯರಸಿಯ ಸಜ್ಜೆವನೆಯಂತೆಸೆವ ಪೇರೆರ್ದೆಯಿಂ, ಪಾಸಿನ ಬೆಳ್ಪಾವಿನ ಬಿಂಕಮಂ ಬಿಡಿಸಲೆಂದೆಡಬಲದೊಳ್ ತಲೆವಾಲಂಗಳೆ ಪಾಯ್ವ ಎಡೆಯ ಕರ್ಬಾವುಗಳಂತೆ ಮಣಿದು ಮಂಡೆಯಡೆಗಂ ನೀಳ್ದು ಮೊಳಕಾಲೆಡೆಗಂ ನಡೆದ ಬಲದೆಡದ ನಿಡುದೋಳ್ಗಳಿಂ, ಮಕರಕುಂಡಲಮಣಿಪ್ರಭಾಪರಿವೇಷಮಂಡಲಮಂ ಮುಗುಳ್ನಗೆ ವೆಳ್ದಿಂಗಳಿಂ ಮುಸುಂಕುವ ಮೊಗಚಂದಿರನಿಂ, ನುಣ್ಬಾಣೆಗನ್ನಡಿಯೊಳ್ ಪಡಿನೆಳ

ಲ್ಕೊಂಡುದ್ದಂಡ ನಾಭೀಪುಂಡರೀಕ ತರ್ಕಣಿಕೆಗಳಂತೆ ಕಣ್ಗೊಳಿಪೂರ್ಧ್ವಪುಂಡ್ರ ಶ್ರೀಚೂರ್ಣಂಗಳಿಂ, ಮೇಲ್ಗಡೆಯೊಳ್ ಕವಿದ ಪಾವೆರೆಯನ ಪೆಡೆವಣಿವೊಗರ ಗಡಣಮೋ ಮಣಿದು ತಲೆಮಲಗಿನೊಳಿಟ್ಟ ಬಲಗೈಯ್ಯ ಸೆಳ್ತು ಗುರ್ಗಳ ಬೆಳಗಿನ ಬಿಂದಮೋ ಮೊಗದಾವರೆಯ ಮೋಡಿಗೆ ಮೋಹಿಸಿ ಮುದ್ದಿಸಲ್ಕವಿತಂದ ಗಗನಮಣಿಬಿಂಬಮೋ ಎಂಬ ಸಂದೆಯಮನೊದವಿಪ ದಿವ್ಯಕಿರೀಟದಿಂ, ಮನಂಗೊಳಿಪ ದಿವ್ಯಮಂಗಲವಿಗ್ರಹದ ಸಮುದಾಯಶೋಭೆಯಂ ದಿಟ್ಟಿ ಸೇರೆಗಳಿಂ ಮೊಗೆಮೊಗೆದೀಂಟಿ ಸವಿಸವಿದುರ್ಕಿ, ಸೊರ್ಕು ತಲೆಗೇರೆ, ಮೆಯ್ಮರೆದು ಮರವಟ್ಟೊಡಲೊಳೆಡೆವಿಡದಡಿಗುಣ್ಮುವ ನವಿರ್ಗಳುಂ ಪೊನಲಿಟ್ಟು ಪಾಯ್ದೆಡವರಿಯದೆ ಪರಿವ ಸೊಗದಾಲಿನೀರ್ಗಳುಂ ಸೆರೆಬಿಗಿಯೆ ಬೇಗದೊಳ್ಪೊರಪೊಣ್ಮಲಾರದೆ ತಡಬಡುವ ಗದುಗದಮುಮಾಗಿಪಿರಿದುಂ ಪೊಳ್ತಾನಂದಸಾಗರದೊಳ್ಮುಳುಂಗಿತೇಲುತ್ತೊಯ್ಯನಾಸುಖಂ ಮೆಯ್ಯಿಂದುಣ್ಮಿ ಪೊಣ್ಮೆ ಕಣ್ದೆರೆದೆಳ್ತರ್ತು ತರುವಾಯಿಂದೊಂದವಯವದ ಸೌಂದರ್ಯಮಂ ಬೇರೆವೇರೆ ಭಾವಿಸಿ ಬಗೆಯೊಳ್ಪಂದಿಗೊಳ್ವೆನೆಂದು ಸಂಕಿನ ಪಾರುಂಬಳೆಯ ಬಾಮ್ಮರದ ಪಳಯಿಗೆಯ ತಾವರೆಯಂಕುಸದ ಬಜ್ಜರದ ಮೆಯ್ಸಿರಿವೆತ್ತ ನುಣ್ಗೆರೆಗಳಿಂದೆಸೆವ ಕೆಂದಳಿರ್ದಳಮಂ, ನಂಬಿ ಸೇರಿದರೆಳಸುವ ಫಲಂಗಳನೊದವಿಸಲೆಂದೈಗೊಂಬುಗಳೊಳಂ ಪೂತೆಸೆವ ಬಾಂಬೊಳಲ್ಮರನಂ ದೊರೆಗೊಂಬ ಮೆಲ್ಲಡಿಗಳಂ ಅಂದು ಪಾಂಡವರ ಪಾಳೆಯದಿಂ ಕುರುನಗರಿಗೆ ದೂದು ನಡೆದ ಬಳಲ್ಕೆಗಳೆಯಲೆಂದು ಒಯ್ಯನೊತ್ತುವ ಸಿರಿಪೊಡವಿಯರ ಮೆಲ್ಗೈಸೋಂಕಿಂಗೆ ನವಿರುಣ್ಮುವ ಕಿರುದೊಡೆಗಳಂ, ಒಂದೇ ಅಡಿಯುಂಗುಟದುದಿಯ ಸೋಂಕಿನಿಂ ಬಿಂಕಂಬಡೆದ ಗಂಗೆಯ ಗಾಡಿಯಂ ಕಡೆಗಣ್ಣಲೆಂದಿರ್ಮೆಯ್ವೆತ್ತೀರಡಿಗಳ್ಗಂ ಕವಿದು ಪಾಯ್ವ ಜಗುನೆಯ ಪೊನಲ್ಗಳಂತೊಪ್ಪುವ ದುಂಡುದೊಡೆಗಳಂ, ಪೊಡೆವೂಗಾವಿನ ನೆವದಿಂ ಕುಡಿವರಿದು ಕೊನರ್ತು ಪರ್ಬುವ ಜಗತೀಲತೆಯ ದಾಂಗುಡಿಯ ತಾಯ್ಬುಳಿಯೆನಿಪ್ಪ ಸುಳಿವೊರ್ಕುಳಂ, ಎಡೆವಿಡದೆಡೆಯಾಡುವ ಸಿರಿವಡದಿಯಡಿಯಲತಿಗೆಯಣ್ಪುವಡೆದು ಪೊನ್ನುಡೆಯ ಪೊರ್ದುಗೆಯೊಳಮರ್ದು ಸಿರಿಮೆಯ್ವೊಗರ ಸೇರುವೆಯಿಂ ಸಿಂಗರಂ ಬಡೆದ ಪಲವಣ್ಣದ ತೊಳಸಿಯ ದಂಡೆಯ ಪರಿವೇಷದ ನಟ್ಟನಡುವೆ ನೆಗಳ್ದ ಕೆಂಬರಲ ನೇಸರ್ವಟ್ಟನಿಂ, ಬಗೆಗೊಳ್ವಾಗಸಮಂ ಪೋಲ್ವ ಪೇರೆರ್ದೆಯಂ, ಎಲ್ಲಾ ಜಗಮಂ ಪೊತ್ತು ಪೊರೆವ ಸಿರಿಯರಸನ ಸಿರಿಮುಡಿಗೀ ದಿವ್ಯಕಿರೀಟಮುಂ ಮಿಕ್ಕಿನಲರಿಚಂ ಮೊದಲಾದವರ ಮುಡಿಗಳ್ಗಿಂ ಕೇಸಡಿದಾವರೆಗಳುಮಳವಟ್ಟಿರ್ಪುವೆಂದು ಮುಟ್ಟಿತ್ತೋರ್ಪಂತೆ ಮುಡಿಯೆಡೆಗಮಡಿಯೆಡೆಗಂ ನಡೆದ ಬಲದೆಡದ ನಿಡುದೋಳ್ಗಳಂ, ಬಗೆಯೊಳೊಗೆದ ಚಂದಿರನ ಬೆಳ್ವೆಳಗು ಪೊರಸೂಸುವಂತೆ ಕಡೆವಾಯ್ಗೊಳೊಳ್ಮಿಸುಪ ಮುಗುಳ್ನಗೆಯುಂ, ತಮ್ಮೊಳ್ತಾಮೆಣೆಗೊಂಡು ಕೇಣಮನುಳಿದಾವಗಂ ತೇಜಂಬಡೆದುಗ್ರಜಾಡ್ಯಂಗಳನೊದೆದು ಬಾಹ್ಯಾಭ್ಯಂತರತಮಂಗಳಂ ಪರಿಹರಿಸುತ್ತೆ

ನೀಳ್ದು ಪೊಸಬಗೆವಡೆದ ಸಸಿನೇಸರ್ಗಣ್ಗಳಂ, ನುಣ್ಣಣೆವಲಗೆಯೊಳ್ತೊಳಪ ವಿಮಲೋರ್ಧ್ವಪುಂಡ್ರದ ಬೆಳ್ಗದಿರನಿದಿರ್ವಾಯಲಾರದೆ ಕೊಂಕಿ ಕವಿದ ನೊಸಲಪಟ್ಟದ ಕಾರ್ಮಣಿವೆಳಗಿನ ಮೊಳೆಗಳಂತೆಸೆವ ಸುರ್ಕುಂಗುರುಳ್ಗಳಂ, ಪದಿನಾಲ್ಕುಂ ಜಗದ ರಾಯತನದ ಬೆಳ್ಗೊಡೆಯಂ ಪೋಲ್ವ ಪಾವೆರೆಯನ ಪೆಡೆವಟ್ಟಿನ ನೆಳಲೊಳ್ನೆಗಳ್ದ ರನ್ನದ ಮಗುಡಮಂ ಕೂರ್ತು ನೋಡುತ್ತಿರ್ದೊಡಂ – ನವನಿಧಿಗಳನೊಂದೆ ಸೂಳೊಳ್ಕಂಡ ಕಡುಬಡವನಂತೆಯುಂ, ಸುಗ್ಗಿಯೊಳ್ ಪೂದೋಂಟಮಂ ಪೊಕ್ಕ ಪರಮೆವರಿಗಳಂತೆಯುಂ, ಬಿರ್ದಿನೊಳಗಿಕ್ಕಿದ ಪಂಚಭಕ್ಷ್ಯಪರಮಾನ್ನಂಗಳ್ಗೆ ಪಾಯ್ವ ಪಾರ್ವರ ಬಗೆಗಳಂತೆಯುಂ, ಬಿಡದೆ ಸುರಿವ ಜಡಿವಳೆಯಂ ಸಾರ್ದ ಚಾದಗೆಗಳಂತೆಯುಂ, ಆವುದಂ ಪಿಡಿವೆನಾವುದಂ ಬಿಡುವೆನೆಂಬ ತವಕದೊಳವನ ದಿಟ್ಟಿಗಳಡಿಯ ಮೆಲ್ಪಂ ತೊಡೆಯ ಬಲ್ಪಂ ನುಡಿಯೊಳ್ಪಂ ಪೊಡೆಯೆ ತೆಳ್ಪಂ ಉರದ ಪೆಂಪನೊಡಲ ಸೊಂಪಂ ಮೊಗದ ಕಳೆಯಂ ನಗೆಯ ಮೊಳೆಯಂ ನೋಟದಿಂಪಂ ನೊಸಲನುಣ್ಪನಾರಯ್ಯುತಡಿದೊಡಗಿ ಮುಡಿವರೆಗಂ ನಡೆದು ಮಗುಳೆ ತತ್ತದರ್ಥ ನಿಧಿಧ್ಯಾಸನದಿಂ ಮುಡಿದೊಡವಿನೊಳ್ನೀಳ್ದು ಪಣೆವಟ್ಟದೊಳ್ಕವಿದು ಕರುಳ್ಗಳೊಳ್ ಸುಳಿದು ನೊಸಲೊಳ್ ಮಿಸುಗಿ ಪುರ್ಬುಗಳೊಳ್ ಕೊಂಕಿ ಕಡೆಗಣ್ಗಳೊಳ್ ಕೂರ್ಪುವೆತ್ತು ದಿಟ್ಟಿಗಳೊಳ್ ತಣ್ಣಾಂತು ಮೂಗಿನೊಳರೆಮುಗುಳ್ತು ಗಲ್ಲದೊಳ್ ತೊಳಗಿ ಕಿವಿವಚ್ಚದೊಳ್ ಬೆಳಗಿ ಬಾಯ್ದೆರೆಯೊಳ್ ಕೆಂಪಡರ್ದು ನಗೆಯೊಳ್ ಮೊಳೆತು ಕೊರಲೊಳ್ ಗೆರೆಗೊಂಡು ಕಂದದೊಳ್ ಬಳೆದು ತೋಳೊಳ್ ಕುಡಿವರಿದು ಎರ್ದೆಯೊಳ್ ಪಸರಿಸಿ ಸಿರಿಯೊಳ್ ಸಿಂಗರಂಬಡೆದು ಪೊಡೆವೂವಿನೊಳರಲ್ದು ಪೊರ್ಕುಳೊಳ್ ಸುಳಿದು ಪೊಡೆಯೊಳ್ ತೆಳ್ಪುವೆತ್ತು ನಡುವಿನೊಳ್ ನಮೆದು ತೊಡೆಯೊಳ್ ತೋರವಾಗಿಯುಡೆ 'ಯೊಳ್ಪುವಡೆದು ಕಿರುದೊಡೆಯೊಳ್ ಬಟ್ಟಿತ್ತಾಗಿ ಅಡಿಯೊಳ್ ಮೆಲ್ಪಂ ತಳೆದು ತತ್ತದಾತ್ಮಕವಾಗೆ ಬಗೆಯೊಳ್ ಪತ್ತಿದ ಭಕ್ತಿರಸಪರಿಪಾಕಾತಿರೇಕದಿಂ ಸೊದೆಯುಂಡಂತೆಯುಂ ಸೊರ್ಕೇರಿದಂತೆಯುಂ ಮರವಟ್ಟಂತೆಯುಂ ಮರೆದೊರಗಿದಂತೆಯುಂ ಬೆರಗುವಡೆದಂತೆಯುಂ ಬೆಗಡುಗೊಂಡಂತೆಯುಂ ಕೆಲವುಂ ಪೊಳ್ತು ದಿವ್ಯಮಂಗಳ ವಿಗ್ರಹಗುಣಂಗಳಂ ಗಣನೆ ಗೆಯ್ದು ಮತ್ತೆ ದಿವ್ಯಾತ್ಮಕಗುಣಂಗಳಂ ಅಂತರಂಗದೊಳೆಣಿಸುತ್ತಿರ್ಪಿನಂ; ಅವುಮೊಳಗಡಂಗದೆ ಪೊರಪೊಣ್ಮೆ ಕೋಡಿಯನೋಡಿಸುವಂತೆ ನುತಿಗೆಯ್ದನದೆಂತೆನೆ–

ಕಂದಪದ್ಯ

ಶ್ರೀವರ ಸಕಲಜಗಜ್ಜ
ನ್ಮಾವನಲಯಲೀಲ ರಂಗಮಂಗಳನಿಲಯಾ ।
ಪಾವನಗುಣನಿಧಿ ಭಕ್ತನ
ಭಾವನೆಯೊಳ್ಗಂದು ನಿಂದು ನಲಿ ನೀಂ ನಲವಿಂ ॥ ೧ ॥

ಓದುಗಳೊಳ್ವೇದಂ ಪಿರಿ
ದೊದೊಡೆ ನೀಂ ರಂಗಧಾಮ ಸಕಲಜಗಜ್ಜ ।
ನ್ಮಾದಿ ನಿಮಿತ್ತಾಭಿನ್ನೋ
ಪಾದಾನಂ ನನ್ನಿ ನಿನ್ನ ಗುಣವಿಭವಂಗಳ್ ॥ ೨ ॥

ಕಡುನೇಹದೆ ಮೂಜಗಮಂ
ಪೊಡೆಯೆಡೆಯೊಳ್ಪೊತ್ತು ಪೊರೆವ ಪೊಸಬಗೆಯೆರೆಯಾ ।
ತಡೆದೆಮ್ಮನೇಕುಪೇಕ್ಷಿಪೆ
ಕುಡುಕೂರ್ಪರ ಕೂರ್ಪ ನಿನ್ನ ಚೆನ್ನಡಿಯೊಲವಂ ॥ ೩ ॥

ನಿಟ್ಟಿಸದಿರೆ ನೀಂ ದಯೆಯಿಂ
ಪುಟ್ಟಿದುಜಗಮೆಂತುಟೇಳ್ಗೆವೆತ್ತಪುದದರಿಂ ।
ಕಟ್ಟೆರಕದಿಂದಮೆಮ್ಮಂ
ದಿಟ್ಟಿಸಿ ಕಾಪಿಟ್ಟು ಮೆರೆವುದೊಡೆತನದದಟಂ ॥ ೪ ॥

ಪಶ್ಚಿಮರಂಗನಿವಾಸ ವಿ
ಪಶ್ಚಿನ್ನುತ ವಿಮಲಚರಿತ ಪರಮಾತ್ಮಸ ।
ರ್ವಾಶ್ಚರ್ಯನಿಳಯ ನಿಗಮದ
ನಿಶ್ಚಯಮಂ ಬಗೆಯೆ ನಿನ್ನ ಚರಣಮೆ ಶರಣಂ ॥ ೫ ॥

ಎಂದು ನುತಿಸಿಯಾಗಳರ್ಚಕರ್ ತಂದಿತ್ತ ಗಂಧಮಾಲೆಗಳಂ ಧರಿಸಿ ಮುಡಿಯೊಳಿಟ್ಟ ಶಡಗೋಪವೆಸರ ರನ್ನವಾವುಗೆಯಂ ಭಕ್ತಿಯೊಳಾಂತು ತೀರ್ಥಪ್ರಸಾದಂಗಳಂ ಸೇವಿಸಿ ಕೃತಾರ್ಥತೆವಡೆದು ಪೊಡವಟ್ಟು ಅಲ್ಲಿಂ ಪೊರಮಟ್ಟು ಬರ್ಪಿನಂ; ಪರಿಕಾರನೊರ್ವನೆಯ್ತಂದು ಪತ್ತೆಸಾರ್ದು ಕಿವಿಯೊಳಿಂತೆಂದು ಆ ತೆಲುಂಗರಾಯನ ದುರಾಲೋಚನೆಯಂ ಸೂಚಿಪುದುಮದಂ ಕೇಳ್ದು ತಮ್ಮನಂ ಕರೆದು– ನೀನುಮಾಳ್ಗಳನೊಳ್ಗುಗೆಯ್ದೆಚ್ಚರಿಕೆಯೊಳ್ ನಡೆವುದೆಂದು ಬೆಸಸಿ, ಕೊಂಬುಕಾಳೆಗಳ ಕೋಲಾಹಲಂಬೆರಸು ಪೊಳಲಂ ಬಿಟ್ಟು ಪೊರಗಣ್ಗೆ ಪೋಪಾಗಳೊತ್ತರವಳಯದ ಬಂಪುಲೊಳ್ತಮ್ಮ ದಳಂ ಬೆರೆಸಡಬಲದೊಳಿರ್ದೊಡಮವರಂ ಗಣಿಸದೆ ಪೊಳೆಯಂ ದಾಂಟಿ ದಾಳಿವಿಡಿದು ಮೈಸೂರಂ ಸಾರ್ದರ್. ಅತ್ತಲ್ ತಿರುಮಲರಾಜಂ ರಾಜನೃಪಂ ಪಾರಿ ಪೋದುದಂ ಕೇಳ್ದು– ಕಜ್ಜಂ ಕೈಗಣ್ಮಿದುದು ಬಲ್ಲಿದನೊಳ್ ಬೇರಂ ಬಳೆದುದು ಇನ್ನುಪೇಕ್ಷಿಸಲ್ತಕ್ಕುದಲ್ತು. ಎಂತಾನುಂ ಸಾಸಂ ಗೆಯ್ದರ್ಥ ಪ್ರಾಣಂಗಳನಾದೊಡಂ ವೆಚ್ಚಿಸಿಯುವಂಗೆ ಪಲವಂ ಕಾಣಿಪೆನೆಂದು ನೆರೆದ

ನಿಖಿಳಪ್ರಭುಗಳಂ ಕರೆಯಿಸಿ– ಮೈಸೂರ್ಗೆ ಮುತ್ತಿಗೆಯಿಡಲ್ವೋಪೆವೆಂಬುದುಂ: ಅವರ್ ವಿನಯಂಗೂಡಿ ಕೈಮುಗಿದು– ದೇವರಾಣತಿಯನಾಂ ಶಿರದೊಳಾಂತೆಸಗುವರಲ್ಲದೆ ಪಡಿನುಡಿವೇಳಲ್ತಕ್ಕರಲ್ತು; ಮುನ್ನೊರ್ಮೆ ಪಿರಿಯರಸಂ ರಾಮರಾಜನೆಮ್ಮೆಲ್ಲರೊಡಗೊಂಡಾ ಮೈಸೂರಂ ಮುತ್ತಿ ಮೂರು ತಿಂಗಳಿರ್ದಂದಂದಿಂಗಾ ಮೈಸೂರ ಚಾಮರಾಜನೆಸಗುವ ಮರೆವುಯ್ಯಲುಪಟಳದಿಂ ಪಾಳೆಯಕ್ಕೆ ಬರ್ಪ ಸಕಲವಸ್ತುಗಳು ಮಿಲ್ಲದೊಂದೆರಳ್ದಗಲುಪವಾಸಮಿರ್ದು ಪಿಂದೆಗೆದು ಪೋಪುದರ್ಕಂ ದಾರಿಯಿಲ್ಲದೊಂದು ದಿನಂ ನಟ್ಟಿರುಳ್ಮರ್ಬಿನೊಳೋಡಿ ಬರ್ಪಾಗಳೂರವರ್ಗೆ ಬೇಹುಸಂದು ದಾರಿಯನಡ್ಡಗಟ್ಟಿ ಕೆಲವಾನೆಕುದುರೆಗಳನೀಳ್ದು ಕೆಲಕೆಲರ ಕೈದುಗಳಂ ಸೆಳೆದಿದಿರಾದರ ಮೂಗಂ ಕೊರೆದು ಕಳುಪಿದರ್. ಅದುಮಲ್ಲದೆ ಮತ್ತಮವರ ಗಾವಳಿಯಿಂ ಪಟ್ಟಣದೊಳಂ ಪದುಳಮಿಲ್ಲದೆ ಬನ್ನಂಬಟ್ಟು ಮಗುಳೆ ಮೈಸೂರವರೊಳ್ ನೇಹಂ ಬೆರಸುವುದರ್ಕೆ ಕಾಲ್ವೆಯ ಕೊತ್ತಾಗಾಲಮನಿತ್ತರ್– ಅದರಿಂದೀಗಳುಮಾ ಮೈಸೂರಂ ಮುತ್ತುವುದು ಮೋಸಂ; ಮೊದಲೊಳ್ಕೆಸರೆಯಂ ಮುತ್ತಿ ನೋಳ್ಪಮೆಂಬುದುಮದರ್ಕೊಡಂಬಟ್ಟಾಗಳೆ ನಿಸ್ಸಾಳಂಗಳಂ ಪೊಡೆಯಿಸಿ ಸಂದಣಿಸಿ ಮುಂದೆ ಪರಿವ ತುರಗಂಗಳ ಪದಧೂಳಿ ಬಾಂಬೊಳಲ್ಗಂ, ಶಂಖಭೇರೀ ಪಣವಾನಕ ಗೋಮುಖಾದಿ ವಾದ್ಯಕಳಕಳಮೆಣ್ದೆಸೆವಳರ ಪೊಳಲ್ಗಂ ನಡೆಯೆ. ಕೆಸರೆಗೆ ನಡೆದು ಬಳಸಿ ಪಾಳೆಯವಿಳಿದು ತಳಿಮೇರುವೆಗಳನೊಡರ್ಚು ತಿರ್ಪಿನಮಾವೂರೊಳಿರ್ಪ ಬೆಟ್ಟದ ಚಾಮರಾಜ ಚನ್ನರಾಜರ್ ಕೋಂಟೆ ಕಿರಿದು ಮಗಳಾಳ್ವೇರಿಗಳಸಿದುಮಾಗಿರ್ದೊಡಮಾಳಮಾದ ತಮ್ಮಳವನೆ ಪಡಿಯಗಳು ಮನುದ್ದವರಿದ ಬೀರಮನೆ ಪಡಿಗೋಂಟೆಯುಮಂ, ಬಿತ್ತರಂ ಬಡೆದ ಬಿನ್ನಣಮನೆ ಪಡಿಯಾಳ್ವೇರಿಯುಮಂ–ಎಳ್ತರಂಬೆತ್ತ ಶಕ್ತಿಯನೆ ಕೊತ್ತಳಮುಮಂ, ಸಾಸಮನೆ ಶತಘ್ನಿಗಳುಮಂ, ಮೊನೆಗಾರತನ ಮನೆ ಮುಗಿಲಟ್ಟಳೆಗಳುಮಂ ಗೆಯ್ದು ಕಾದುತ್ತೆ ಕಳ್ತಲೆಯೊಳ್ ಪೊರಮಟ್ಟು ಪಾಳೆಯಮಂ ದಳದುಳವಾಯ್ದು ಪೊಯ್ದಾನೆ ಕುದುರೆಗಳನೊಯ್ದು ಕೋಂಟೆಯನೊಳಪುಗಲೊಡಂ–

ಮರುವಗಲ್ವೊಳ್ತರೆಯವರನಿಬರುಂ ಕಳ್ಗೊಲೆಗೊಳಲೆಂದು ಕವಿದೊತ್ತರಿಸಿ ಮೇಲ್ವಾಯ್ವ ಗುಂಡುವಳೆಗೆ ಪಲಗೆಯಂ ಮರೆಗೊಂಡು ಕೋಂಟೆಗೇಣಿಗಳಂ ಸಾರ್ಚಿ ಸಗ್ಗಮನೇರುವಲ್ಪಪುಣ್ಯರಂತೇರುತಿರ್ಪಿನಂ; ಊರವರ್ ಕವೆಗೋಲ್ಗಳಿಂ ನೂಂಕಿಯುಂ, ಕೆಯ್ಗಿಟ್ಟಿಗಳಿಂದಿಟ್ಟುಂ ಕಾಯ್ದೆಣ್ಣೆಗಳಂ ಸೂಸಿಯುಂ, ಪುರಿವಳಲಂ ಸುರಿದುಂ ಮದ್ದಿನುರಿಯಿಂ ಚುರ್ಚಿಯುಂ, ಕವಣೆಗಲ್ಗಳಂ ಬೀರಿಯುಂ, ಕಣೆಗಳಿಂದೆಚ್ಚುಂ ಮತ್ತಂ ಮಿಾರಿಯೇರಿವರ್ಪರಂ ಕತ್ತಿಗಳಿಂ ಕಡಿಕಡಿದುಂ ಕೆಡಪುತಿರ್ದೊಡಂ ಮಾಣದೆ ಮುರುಕೊಳಿಸಿ ದೀವಿಗೆಗುಡಿಗೆರಗುವ ಪತಂಗದ ಪುಳುಗಳಂತೆ ಬೀಳ್ವರಂ ಕಂಡು ಪೆರಸಾರದೆ ಪಡಲ್ವಟ್ಟಟ್ಟೆಗಳನೆ ಮೆಟ್ಟುಗೆಗೆಯ್ದೇರುತ್ತೆ ಮಿತಿಮಿಾರುತ್ತಿರ್ದ್ದಪರೆಂಬ ವೃತ್ತಾಂತಮಂ ದೂತಮುಖದಿಂ

ಕೇಳ್ದು, ತಮ್ಮ ಮೂಲಬಲಮನೊಡಗೊಂಡು ರಾಜನೃಪನುಂ ದೇವರಾಜನುಂ ಕಿರ್ಚುಂ ಗಾಳಿಯುಮೊಂದಾಗಿಯೊಣಗಿದ ಪಳುವಂ ಪುಗುವಂತೆ ಅವರ ತೆಂಕಣ ಪಡುವಣ ಪಾಳೆಯುಮಂ ಪೊಕ್ಕು ಬೀದಿವರಿದಿದಿರ್ಚಿದರಂ ಪೊಯ್ದು, ಕಾಲ್ಗೆರಗಿದರುಮಂ, ಕಾಯವೇಳ್ದುದೆಂದರುಮಂ, ಪುಲ್ಗರ್ಚಿದರುಮಂ, ಪುತ್ತನೇರಿದರುಮಂ, ನೀರ್ವೊಕ್ಕರುಮಂ, ನಿನ್ನವರೆಂದರುಮಂ, ಮರನನಡರ್ದರುಮಂ, ಮರೆವಿಳ್ದರುಮಂ, ತಲೆಗಾದು ಮನ್ನಿಸಿ ಮಿಕ್ಕರನೊಕ್ಕಲಿಕ್ಕಿಯವರ ಸರ್ವ್ವಸ್ವಮಂ ಸೂರೆಗೊಂಡು ಬರ್ಪಿನಂ–

ಬೆಟ್ಟದ ಚಾಮರಾಜ ಚನ್ನರಾಜರುಂ ಲಗ್ಗೆಯೇರಿದರನನಿಬರುಮಂ ಸಗ್ಗಕ್ಕೇರಿಸಿ ಕಿರಿದುಂ ದಳಮನೂರೊಳಿಟ್ಟು ಮಿಕ್ಕ ಬಲದೊಡನೆ ಪೊರಮಟ್ಟು ತಮ್ಮ ತಮ್ಮ ಪಾಳೆಯದೊಳ್ ದಳದುಳವಾಯ್ದುದಂ ಕೇಳ್ದು ಬಿಟ್ಟೋಡುವ ತೆಂಕಣ ಪಡುವಣವರಂ ಕಳೆದು ಮೂಡಣ್ಗೆ ನಡೆದು ತರುಬಿ ತರಿದಿರಿದು ತಲ್ಲಳಂಗೊಳಿಸಿ ದಾಯಗಿಡಿಸಿ ದಯೆಗೆಯ್ದು ಮರಲ್ದು ಬಡಗಣ್ಗೆ ಬರುತ್ತಣ್ಣನಂ ಕಂಡು ಕಾಲ್ಗೆರಗಿ ಬೇಗದೊಳ್ ನಾಲ್ವರೊಡವುಟ್ಟಿದರುಂ ಪಟ್ಟಣಕ್ಕಾಗಿ ಬಿಟ್ಟೋಡುವ ತಿರುಮಲರಾಜನಂ ಬೆನ್ನಟ್ಟಿ ಮುಟ್ಟವರೆ; ಅವನುಮಳಿವಿಂಗಳ್ಕಿ ಬೆಳ್ಗೊಡೆಯಂ ಬಿಟ್ಟು ಸೀಗುರಿಗಳಂ ನೀಗಿ ಚವರಮಂ ತೆವರ್ದು ಪಳಯಿಗೆಯಂ ಪಳಿದು ವಾದ್ಯಂಗಳನುದ್ಯಾಪನಂಗೆಯ್ದು ವಾರುವಮನಿಳಿದು ತೊಡವುಗಳಂ ತೊರೆದು ಒಳ್ದುಡೆಯನುಳಿದು ವೇಷಮಂ ಮಾಂಜಿಯಂಜಿ ಪೋಪುದುಂ; ಅವನರಸುಗುರಿಪುಗಳನೆಲ್ಲಮಂ ಕೊಂಡು ಗಂಡುಮಿರಿ ಮೈಸೂರಂ ಸಾರ್ದರ.

ಅತ್ತಲಾ ತಿರುಮಲರಾಜನೊರ್ವನೇ ಪಟ್ಟಣಮಂ ಪೊರ್ದಿ ಒಂದೆರಳ್ದಿನದೊಳ್ ಬಂದು ಸೇರಿಯಳಿದುಳಿದರಂ ಕರೆಯಿಸಿ– ಕೊಳುಗುಳದೊಳೆಮ್ಮ ದಳದೊಳಳಿದರಾರ್ ಉಳಿದರಾರ್ ಏರುವಡೆದರಾರ್ ಸೆರೆಸಿಲ್ಕಿದರಾರ್– ಎಂದು ಬೆಸಗೊಂಬುದು ಮವರ್ಬಿನ್ನವಿಸಿದರ್:

ಜೀಯಾ, ಬಿನ್ನಪಂ. ಈವೊಳನಾಡ ಪ್ರಭುಗಳನಿಬರುಂ ಪಲವುಂ ಸೂಳೊಳ್ ಮೈಸೂರವರಿಂ ನೊಂದವರೆಸಗುವ ಪ್ರಯಿಲ ಚಾತುರ್ಯಮನವರ್ ಬರ್ಪ ಬಟ್ಟೆಗಳಂ ತ್ರಿಳಿದಿರ್ಪ್ಪುದರಿಂದವರ ಮೂವಂಕದ ಕೊಂಬುಗಾಳೆಯ ದನಿಗೇಳ್ದುದುಂ, ಸಿಂಗದ ರವಂಗೇಳ್ದಾನೆವಿಂಡಿನಂತೆಯುಂ, ತಳವರರದಿರ್ಗೋಲುಲಿಗೇಳ್ದ ಮರೆ ಗಳ್ಳರಂತೆಯುಂ, ಮಾಂತ್ರಿಕರ ಮಂತ್ರಾಕ್ಷರಂಗಳಂ ಕೇಳ್ದ ಪಂದೆ ಮರುಳ್ಗಳಂತೆಯುಂ, ಪಾಂಚಜನ್ಯಝಂಕಾರಂಗಳಂ ಕೇಳ್ದ ರಾತ್ರಿಂಚರರಂತೆಯುಂ, ನಾರಾಯಣನ ನಾಮಮಂ ಕೇಳ್ದ ಪಾಪಂಗಳಂತೆಯುಂ ಬೆರ್ಚಿ ಬಿಗುರ್ತು ಬಿಂಕಂಗುಂದಿ ಬೇವಸಂಗೊಂಡು ಬೆದರಿ ಬೀದಿವರಿದು ಸರಿಯುತ್ತೆ ಇರ್ತರದೊಳ್ ನಿಂದು ನಿಂದಿಸಿ ನೀಳ್ಕರಿಪರಂ ನಿಟ್ಟಿಸದೆ ನಿಟ್ಟೋಟದೊಳ್ನಿಂದಲ್ಲಿ ನಿಲ್ಲದೆ ನಿಜನಿವಾಸಮಂ ಸಾರ್ದು ಜಸಮಂ ಜಾರಿಸಿಯುಸುವನಾದರಿಸಿ ಪೊಸತೊಂದು ಬಸುರೊಳ್ ಬಂದಂತೆ ಸಂತಸದೊಳ್

ಜವೆಗೊಂಕದಿರ್ದಪರ್. ಮೊರಸುಮೋಹರಂ ಮೊನೆಗಾರತನದ ಮೋಡಿಯೊಳ್ ಮುಂತರಿಯದಿರ್ಪಿನವರ್ ಮೋಸಂಗೊಂಡು ಮುತ್ತಿ ಮೊಗಗೆಡಿಸಿ ಮೋದಿ ಮೂದಲಿಸಿ ಮೂಗಂ ಕೊಯ್ದು ಮೊರೆಯಿಡಿಸಿಯರೆಯಟ್ಟೆ ಕೆಟ್ಟು ಮುರಿದೋಡಿದರ್. ಮಲೆನಾಡವರ್ ಮಲೆಪ ನಿಲ್ವಿನಮವರ್ ವೇಢೈಸಿ ಬಿಗಿದಿತ್ತತ್ತಲಿನಿಸುಂ ಮಿಸುಕಲೀಯದೆ ಕೈಯ್ಯ ಕೈದುಗಳನೀಳ್ದಾನೆ ಕುದುರೆ[ಗಳಂ ಬಸಂ]ಗೆಯ್ದುವರೊಳ್ಕಟ್ಟರಸುಗಳಂ ಕೈಸೆರೆಗೊಳಲು ಉಳಿದ ಕಿರುದೊರೆಗಳ್ ಕಪ್ಪಿನೊಳ್ ಬಿಳ್ದ ಪೇರಾನೆಯಂ ಬಳಿ ಸಂದ ಮರಿಗಳಂತೆ ಚೀರುತ್ತೆ ಕಟ್ಬುರದಿಂ ಮಲೆಯಂ ಸಾದಿರ್ತ್ತಣ್ಗೆ ಮೋಸದೊಳಾದೊಡಮಿನ್ನೊರ್ಮೆಯುಂ ಬರಲಣ್ಮೆವೆಂದು ಬಾಸೆಗೆಯ್ದೋಡಿದರ್. ಬೇಡವಡೆ ಮುನ್ನಡವಿಯೊಳ್ ಗಿಡುಮರಂಗಳ ಮರೆಯೊಳ್ ಪೊಂಚಿ ಬಟ್ಟೆಗರಂ ಕೋವಿಯೊಳಿಟ್ಟು ಕಣೆಯಿಂದೆಚ್ಚು ಕೆಡಪಿ ಬಟ್ಟೆಗಳಂ ಸುಲಿದ ಪಾಪದಿಂ ಕೆಸರೆಯ ಕೆರೆಯ ಕೋಡಿವಳ್ಳದೊಳೋಡಿವರುತ್ತೆಡಪಿ ಕಾಲುಳುಂಕಿಯುಂ ಮೊಳಕಾಲ್ಮುರಿದುಂ ತೊಡೆಯುಡಿದುಂ ನಡು ನೆರ್ಗಿಯುಮೆರ್ದೆ ಬಿರಿದುಂ ತೋಳ್ತೊಲಗಿಯುಂ ಕೊರಲ್ ಕುರ್ಗಿಯುಂ ತಲೆಯೊಡೆದುಂ ಪಡಲಿಟ್ಟು ಪಾಸಿದಂತಾಗಿ ಪಳ್ಳದಿಂಟೆಗಳ್ ಸಮತಳಮಾದೊಡಂ ಪಿಂದೆ ಬರ್ಪರುಮಾನೆ ಕುದುರೆಗಳ್ ತುಳಿದುದರಿಂ ಮಳ್ಮಳಿಯಾದರ ತಲೆಮಿದುಳ ಬಸಿರ್ಗರುಳ್ಗೆಸರೊಳ್ ಸಿಲ್ಕಿ ಮೊನೆಯಲ್ವು ಮುಳ್ಗಳಡಿದಳದೊಳ್ ನಾಂಟಿ ತಟ್ಟುರ್ಚಿ ತಡಬಡಿಸುತಿರೆ ಪಿಡಿಪಿಡಿದು ತುಟಿವೆರಸು ಮೂಗಂ ಕೊರೆದು ಪಲ್ಗಿರಿಸಿ ಕಳುಪೆ; ಮೂಗಳಿದುಸಿರುಳಿದುದರ್ಕೆ ಪೆರ್ಕಳಿಸಿ, ತಲೆಗೆ ವಂದುದೆವೆಯೊಳ್ಪೋದಂತೆ ಸಂತಸದಿಂ ಚಿಂತನಕಲ್ ಮುಂತಾದ ತಮ್ಮ ತಮ್ಮ ನೆಲನಂ ಸಾರ್ದರ್. ಮತ್ತಂ ರಾವುತ ಪಾಯಕ ಪೌಜೊಡೆಯದೆ ಪೊರಗೆ ನಿಂದು ಪುಯಿಲೊಳ್ ಪೊಲಂಬುಗೆಟ್ಟುದಂ ನಿಟ್ಟಿಸಿಯೋಡಿಪೋದರ ಪೆಂಡಿರೋಲೆಯುಳಿದುದೆಂಬ ನಾಳ್ನುಡಿಗೀಡಾಗಿ ವಾರುವಂಗಳಂ ಪರಿಸುವುದರಿಂದೆಲ್ದ ದೂಳಂ ಚಮ್ಮಟಿಗೆಯ ಪೊಯ್ಲಿಂದೊಡೆದ ಕುದುರೆಯ ತೊಡೆಯ ನೆತ್ತರ್ವೊನಲಿಂದಡಂಗಿಸುತ್ತೆ ಬೆಂಬತ್ತಿ ಬರ್ಪರಂ ಮುರಿಮುರಿದು ನೋಡುತ್ತೆ ಮತ್ತಡಿಗಡಿಗೆ ಮಡದಿಂ ಪಕ್ಕಮನೋತ್ತುತ್ತೆ ಕತ್ತಿಯ ಪರಜಿನಿಂ ನೆತ್ತಿಯಂ ತಿವಿಯುತ್ತೆ ಮುಂದಿರ್ಪ ಪಳ್ಳಕೊಳ್ಳಂಗಳಂ ತೆರ್ವದಿಂಟೆಗಳಂ ಕಲ್ಮುಳ್ಗಳಂ ಬೇಲಿಬೆಳ್ಳಾರಂಗಳುಮನರಿಯದರೆಯಟ್ಟುತ್ತೆ ಪೊಲಗೆಟ್ಟು ಬಗೆಯೊಳ್ನೆಲಂಬಾಯ್ದೆರೆಯದೆ ಅದೃಶ್ಯಾಂಜನಮನುಗೂಡದೆ ಎರಂಕೆಗಳ್ ಮೊಳೆಯವೆ ಎಮ್ಮೊರ್ಮಿದಿರ್ವಾರರದೆ ದೇವರುಂ ನೆರವಾಗರೆ ಇವರ್ಗಾದೊಡಂ ದಯೆದೋರದೆ-ಎಂದು ಬಗೆವುತ್ತೆ ತಂದೆಯಾದೊಡಂ ಕಂದನಾದೊಡಮೊಡನಾಡಿಯಾದೊಡಂ ಮತ್ತಂ ತನ್ನೊಡೆಯನಾದೊಡಂ ಬಿಳ್ದವನನೆತ್ತದೆ ಪಿಂತಿರುಗಿ ನೋಡದೋಡಿಸೆ ಬಸವಳಿದು ಮುಳ್ಗಿ ಮೊಳಕಾಲೂರಿ ಮುಂಗೆಡುವ ವಾರುವಂಗಳ ವಾಗೆಯಮಂ ಪಿಡಿದು ಜಡಿದೆತ್ತುತ್ತೆ ಇತ್ತಣಿಂ ಬಂದೆವಿತ್ತಣ್ಗೆ ಪೋಪೆವಿಲ್ಲಿಗಿದು

ದಾರಿಯೆಂಬಾರಯ್ಕೆದೋರದೆ ಕುದುರೆಯುಳಿವನ್ನವುನಿರ್ಗ್ಗಳಿವಂನಂ ದೆಸೆಗೆಟ್ಟೋಡಿದರ್. ಮೂಲಬಲಂ ಮುರಿದ ತೆರಂ ದೇವರ ಬಗೆಯೊಳ್ತಿಳಿದರ್ಪುದೈಸೆ. ಆಂ ಬಿನ್ನವಿಪುದೇನಿರ್ಕುಂ ಎನೆ–

ಕೇಳ್ದು ಮನದೊಳ್ – ಅಕಟಕಟ, ಈ ಕೂಟದ ದಳಂಗಳೆನಿತಾನು ಮಿರ್ದೊಡಂ ಬಳಿಸಲ್ಲುದು. ಈ ದಳವಾಯ್ಗೆನ್ನಮನಾಯಕನುಂ ಈ ಪ್ರದಾನಿ ರಾಮಾನುಜಯ್ಯನುಮೆನ್ನೆಡಬಲದೊಳಿರ್ದ್ದುಮೆನ್ನ ಮೇಲ್ವಿಳ್ದ ಪುಯಿಲ್ಪೊರೆಯಂ ಪೋರುವರಂತೆ ಮುಂತಣ್ಗೆ ನಡೆದು ಮೊಗವರೆಯಪ್ಪುದುಮೆನ್ನನೊಪ್ಪಿಸಿ ತಪ್ಪುದಾರಿವಿಡಿದೊಪ್ಪದಿಂ ನಡೆದರ್. ಆನಿನ್ನೆವರಮಿವರಂ ಮನ್ನಣೆಯಿಂದೋವಿದುದು ಕಾಡೊಳಳ್ತಂತೆಯುಂ ಕಲ್ಲರೆಯೊಳ್ಕಡಲ ವಿತ್ತಿದಂತೆಯುಂ ಅಂಧನೊಳಾಡಿದಂತೆಯುಂ ಬಧಿರನೊಳ್ಪಾಡಿದಂತೆಯುಂ ಮಳಲಂ ಪಿಳಿದಂತೆಯುಂ ಉಯ್ಯನಗಿದಂತೆಯುಂ ಪಳ್ತಿಯಂ ತುತ್ತಿದಂತೆಯುಂ ಕೊಡನಂ ಕೌಚಿ ನೀರನೆರೆದಂತೆಯುಮಾದುದು. ಇವರಂ ನಚ್ಚಿ ಮೈಸೂರವರೊಳಿದಿರ್ಚಿದೆಂ; ಅರಿತರಿತು ಮರಿಯದನಾದೆಂ; ಕೊಡೆಯಂ ಮರೆಗೊಂಡು ಸಿಡಿಲ್ಗಿದಿರೆರಿದೆಂ; ಜಾಯಿಲವಾಲಮಂ ಪಿಡಿದು ಜಾಹ್ನವಿಯಂ ದಾಂಟಲೆಳಸಿದೆಂ; ಪಳಮೊರದೆರಂಕೆಯಿಂ ಪಾರಲ್ಬಯಸಿದೆಂ; ಕಳಸದ ನೀರಿಂ ಕಾಳ್ಕಿರ್ಚನಡಂಗಿಡಲೊಡರ್ಚಿದೆಂ. ಮುಚ್ಚುಮರೆಯೇಂ ಮೋಸವೋದೆಂ. ಮುಂತೆನಗೆ ಗತಿ ಯಾವುದು; ಪಸಿದ ಪಾವನೇರುಗಂಡೆಕ್ಕಲನಂ ಸೊರ್ಕಿದಾನೆಯನೀದ ಪುಲಿಯಂ ಕಣ್ಮರೆಗೆಳೆದ ಸಾಳ್ವನಂ ಸಿಟ್ಟಿಳ್ದ ಸಿಂಗಮಂ ಕೆಣಕಿ ಕೆಟ್ಟೆಂ. ಇನ್ನೀ ಪಟ್ಟಣದಾಸೆಯಂ ಬಿಟ್ಟು ಪರಿವುದೇಂ ಪದುಳಂ. ಅದರಿಂ ಮರೆವುಯಿಲನೆಸಗಿ ಮುಳ್ಗಿಸದ ಮುನ್ನಮೆ ಬಟ್ಟೆಗಳಂ ಕಟ್ಟಿ ಬಾಧಿಸದ ಮುನ್ನಮೆ ದಳದುಳವಾಯ್ದು ದಾಯಂಗೆಡಿಸಿದ ಮುನ್ನಮೆ ಕಳ್ಗೊಲೆವಿಳ್ದು ಕೈಸೆರೆಗೊಳ್ಳದ ಮುನ್ನಮೆ ಮೋಸಂಗೊಂಡು ಮೂಗನರಿಯದ ಮುನ್ನಮೆ ಸಾಗುವೆ– ಎಂದು ಪಯಣಸನ್ನದಂ ಗೆಯ್ಯುತಿರ್ದಂ.

ಅತ್ತಲಾ ಪುಯಿಲೊಳ್ ನೊಂದು ಪೊಳಲ್ಗಳಂ ಪೊರ್ದಿದ ತಳಕಾಡೆಳ ವಂದೂರಮಚವಾಡಿ ತಗಡೂರ್ಮೊದಲಾದ ಮೈಸೂರ ನೆರೆದೊರೆಗಳ್ – ಎಮಗಿನ್ನುಳಿವಿಲ್ಲ, ಎಂತಾದೊಡಂ ತೆಲುಂಗುರಾಯಂಗೆ ಧೈರ್ಯಮಂ ನೆರಪಿಯವನ ಮರೆಯೊಳುಳಿದ ಕಾಲಮಂ ಕಳೆವೆವು, ಅವನಳಿಪಿನೊಳಳಿವೆವೆಂದನಿಬರುಮೊಂದಾಗಿ ನಿಯೋಗಿಯನೊರ್ವನಂ ಕಳುಪಲೊಡಮವಂ ರಾಯನಂ ಸಂಧಿಸಿ – ಅಂದು ಮೊರಸ ಜೇಡ ಮಲೆನಾಡವರ್ ಬಂದು ಬೆರಸಿರ್ದುದರಿಂದವನೊಡನೆಲ್ಲರುಂ ಪಂದೆಗಳಾಗಿ ಪುಯಿಲೊಳ್ ಪೊಲಂಬುಗೆಟ್ಟುದು ಅದರ್ಕೆ ಮನದೊಳ್ಕಕ್ಕುಲಿತೆಗೊಳಲ್ಕೆ ಕಾರಣಮಿಲ್ಲ. ಇನ್ನುಮವರ್ಮುನ್ನಿನಂತೆಣಿಸಿ ಮೆಯ್ಮರೆದಮ್ಮಂ ಬಗೆಯದೆ ಕಟ್ಟದಟಿಂ ಪಟ್ಟಣಮಂ ಮುತ್ತುವರ್. ಆಗಳಾಮವರ ಪಾಳೆಯಮಂ ದಳದುಳವಾಯ್ದು ಸೂಡುಪಾಡಂ ಮರಲ್ಚುವೆಪುದು ನಿಶ್ಚಿತಂ. ಇನಿತರೊಳವರುಪಟಳಕ್ಕೆ ಬೆರ್ಚದೆಮ್ಮಂ

ನಚ್ಚಿರ್ಪುದು – ಎಂದ ಅನಿಬರುಂ ಕಳುಪಿದ ಬಾಸೆವತ್ತಳೆಗಳನಿತ್ತು ಬಿನ್ನವಿಪುದುಂ; ಆ ತಿರುಮಲರಾಜಂ – ಅಕಟಕಟ, ಇರುಳ್ಕಂಡ ಪಳ್ಳದೊಳ್ ಪಗಲ್ ಬೀಳ್ವರೆ, ಅಟ್ಟಿಪಿಡಿದವನಮನೆಯೊಳವಿದುಕೊಳ್ವರೆ, ಪೋಪ ಮಾರಿಯಂ ಕೂಗಿಕರವರೆ, ತಳವನಗುಳ್ದು ಮೇಲೆ ಕೆಡಪಿಕೊಂಬರೆ, ತಲೆದಾಗಿಯುಂ ನಿಮಿರ್ದಿಪರೆ, ಮುಗ್ಗಿವಿಳ್ದುಂ ಮೂಗು ಮೇಲೆಂಬರೆ – ಎಂಬ ಮಾತೇನಿನ್ನರಮನೆಯ ಸೀಮೆಯೊಳ್ ದಾಳಿಟ್ಟು ತುರುಸೆರೆಗೊಂಡುದರಿಂದಂದಂದಿಗೆ ವರ್ಪ ಧನಧಾನ್ಯಂಗಳಡಂಗಿ ಸಂಚಿತಂಗಳುಂ ಸವೆದು, ಆನೆ ಕುದುರೆಗಳ ಮೇಪುಗಳ್ಗಂ ಜೋದರಾವುತಪಾಯುದಳದ ಜೀವಿತಂಗಳ್ಗಂ ಅರಮನೆಯೊಡವೆಯೊಳಮಗರದ ತೆರಿಗೆಯೊಳಂ ದೇಗುಲದುಪಕರಣಂಗಳೊಳಂ ಪರದರ ಬಣಂಜದೊಳಂ ಮತ್ತಮೇಂ ದಂಡದೊಳಂ ಕವರ್ತೆಯೊಳಂ ತೀರದೆ ದಂಡುಗೊಂಬುದೆನಿತಾನುಮುಂಟು. ಅದುಮಲ್ಲದೆ ಪಟ್ಟಪಗಲ್ ನಡುವಟ್ಟಣದೊಳ್ ತಳವರನ ತಲೆಗೊಯ್ದರ್; ಕಾವಲಿಗರಂ ಕಡಿದೊಟ್ಟಿದರ್; ಅಧಿಕಾರಿಯನರೆಯಟ್ಟಿದರ್; ಅರಮನೆಗೇಳ್ತರ್ಪರನಡ್ಡವಾಯ್ದು ಪೊಯ್ದರ್; ಕತ್ತಿಯೂಳಿಗದವನಂ ಕತ್ತರಿಸಿ ಕತ್ತಿಯನೀಳ್ದರ್; ಸಂಚಿಯವನಂ ಪೊಂಚಿ ಸದೆದು ಕಂಚುಮಿಂಚಾದರ್. ಅವರ್ಕೇಣಮಂ ತೊಟ್ಟು ಮನಂಮುಟ್ಟಿ ನಡೆಯಿಸಿದೊಡೆ ಪೊಳೆ ಬಳಸಿದುದೆ ಪುಸಿಯೆನಿಸುವರ್; ಕೋಂಟೆಯಳ್ಗಳಂ ದಿಂಟೆವಳ್ಳಂಗಳನರೆಗಳಿಗೆಯೊಳ್ ಸಮತಳಂಗೆಯ್ವರ್; ಮೂಡುವ ಪೊಳ್ತಂ ಮುಚ್ಚಿ ಮಾಂಜುವರ್; ಬೀಸುವೆಲರಂ ಪಿಡಿದು ನಿಲಿಸುವರ್; ಕರ್ಗ್ಗಲ್ಲಂ ಎಲ್ಲಿತೆನಿಸುವರ್ ಅಂತಾದೊಡಮೆನ್ನೊಳ್ ಮುನ್ನಿನ ಕೆಳೆಯನೆಂದುಂ ಮುದುಪನೆಂದುಂ ಬಲ್ಲರಣಿಗನೆಂದುಂ ಬಸಗೆಟ್ಟನೆಂದುಂ ತರಹರಿಸಲಾರನೆಂದುಂ ತಾನೆ ಪೋಪೆನೆಂದುಂ ದಯೆಗೆಯ್ದೆನ್ನುಮನೆನ್ನಂತವುರಮುಮಂ ಮನ್ನಿಸಿರ್ಪರ್. ಆದೊಡಮರ ಮನೆಯ ಮನೆವಾಳ್ತೆಗಂ ತೆರನಿಲ್ಲದೆ ಬೊಮ್ಮವುರದವರೋದಾಳಿ ಪಾರ್ವ್ವರೆಂದೊಲ್ದು ಮೈಸೂರವರವರೂರಂ ಸೂರೆಗೊಳ್ಳದೆ ತುರುಸೆರೆಗೆಯ್ಯದೆ ಕಾಪಿಟ್ಟುದರಿಂದಾ ಪೂರೊಳ್ಳೆಳೆದ ಕಳವೆಯೊಳಿನಿಸಿನಿಸಂ ಕಳ್ದು ತರಿಸಿನ್ನೆವರಂ ಕಾಲಂಗಳೆದೆಂ. ಇನ್ನಿಲ್ಲಿರ್ಪುದಿಲ್ಲ, ತಾಮಿರ್ಪಲ್ಲಿಗೆ ವರ್ಪೆಂ – ಎಂದು ಬೆಸಸಿ ಕಳುಪಿದಂ.

ಬಳಿಕ್ಕವರಾ ವೃತ್ತಾಂತಮಂ ಕೇಳ್ದಾಳ್ದನಾ ಪತ್ತನೊತ್ತರಿಪೆವೆಂದು ತಮ್ಮುಳ್ಳ ಧನಧಾನ್ಯಂಗಳಂ ಮದ್ದುಗುಂಡುಗಳಂ ಬಾಣಬತ್ತಿಗಳ್ಮೊದಲಾದೆಲ್ಲಾ ವಸ್ತುಗಳಂ ಕೊಂಡು ಬಂದು ಪಟ್ಟಣಮಂ ಪುಗಲೆಂದು ಬಡಗಣ ಪೊಳೆಯ ಪೊರಗಡೆಯೊಳ್ ಪಾಳೆಯವಿಳಿದರ್. ಇತ್ತಲ್ ರಾಜನೃಪನೀಯೆಸಕಮನಾರೈದು ಕೆಸರೆಯ ಪುಯಿಲೊಳ್ ಬಸಗೆಯ್ದಾನೆ ಕುದುರೆಗಳ ಬಳಗದಿಂ ಬಳೆದ ದಳಮಂ ನರಸರಾಜನೆಂದು ನೆಗಳ್ತೆವೆತ್ತ ತನ್ನ ಪಿರಿಯಣುಗನ ಬಳಿಯೊಳ್ ಕಳುಪುವುದುಂ; ಅವಂ ಕಣ್ಣೆವೆ ಮಿಸುಕದಂತವರ ಪಾಳೆಯದ ಮುಂತಣ್ಗೆ ವಂದು ನಿಂದು, ಭಟ ನೋರ್ವನಂ ಕರೆದು, ನೀನವರ ಬಳಿಯಂ ಸಾರಿ – ವೈರಿರಾಜವೇಶ್ಯಾಭುಜಂಗನೆನಿಪ

ರಾಜನೃಪನ ಕುವರಂ ಕೂರಾಳ್ಗಳ ಗಂಡನಾದ ನರಸರಾಜನರಿಕೆಗಾಳಗಂಗೊಳಲ್ಬಂದಂ. ನೀಂ ಇಂದು ಮೆಯ್ಮರೆದಿರ್ದೆವು, ಮದವೇರಿರ್ದೆವು, ಮರವಟ್ಟಿರ್ದೆವು, ಮರುಳಾಗಿರ್ದೆವು, ಪಸಿದಿರ್ದೆವು, ಬಳಲ್ದಿರ್ದೆವು, ಉಣುತಿರ್ದೆವು ಒರಗಿರ್ದೆವೆಂದು ಪಿಂದೆ ಗಳಪದೆಳ್ಚತ್ತು ಸನ್ನದಮಾಗಿ ಬಗೆವಂದಾಗಳ್ಪೂರ್ದು – ಎಂದು ಮೊದಲಿಸಿ ಬೆಸಸಿ ಕಳುಪೆ; ಅವಂ ಪಸಿದೆಯ್ದಿ ವಂದು ಅಂತೆ ತಿಳುಪಲೊಡಮವರ್ಮೊರೆದೆಳ್ದು ಅವಂ ಮರಲ್ದು ಬರ್ಪುದರ್ಕೆ ಮುನ್ನಮೆ ಕವಿತರ್ಪುದುಂ; ನರಸರಾಜಂ ಮುಂ ರಕ್ಕಸರನೊಕ್ಕಲಿಕ್ಕಿದ ಕುವರನಂತೆ ಶಕ್ತಿಧರನೆನಿಸಿ ಕೊಂಚವೆಟ್ಟಂ ತಟ್ಟುರ್ಚಿಸಿದಂತೆ ತಾರುಂತಟ್ಟಾಗಿ ಕೆಡಪಿ ಮಟ್ಟಿಡುವುದುಂ; ಅವರ್ ಕೆಟ್ಟು ಮುರಿದೋಡಿ ಬಡಗಲ್ ಗಾವುದದೊಳಿರ್ಪ ಕೋಡಾಲಮಂ ಪುಗಲೊಡಮಾತನುಂ ಬೆಂಬತ್ತಿ ಸುತ್ತಿರ್ಪಿನಂ; ಒಳಗಿರ್ದ್ದ ದೊರೆಗಳನಿಬರುಂ ಕಡುವಿಸಿಲೊಳ್ ಪರಿತಂದು ಪಸಿದಿರ್ದುದರಿಂ ನೀರಳ್ಕೆಗೊಂಡು ಬಾವಿಯನರಸಿ ಬನ್ನಂಬಟ್ಟು ಬಾಯೊಣಗಿ ಬಸಗೆಟ್ಟು ಅಲ್ಲಿರ್ಪ ತಿಪ್ಪೆವಳ್ಳದೊಳ್ ಪಾವಸೆಗಟ್ಟಿ ಬಣ್ಣಂಗುಂದಿ ಕೊಳೆತು ಪುಳಿತು ಪೊಲಸುಗಂಪಿಡುವ ನೀರನೆ ಕುಡಿದು ಸಂಜೆವರೆಗಮುಸಿರ್ವಿಡಿದಿರ್ದು ಮರ್ಬಿನೊಳ್ ಪೊರಮಟ್ಟು ಓರೊರ್ವರೊಂದದೆ ಪರೆದು ಪೋದರ್.

ಮರುವಗಲ್ ತಿರುಮಲರಾಜಂ ನರಸರಾಜನ ವಿಜಯವಾರ್ತೆಯಂ ಕೇಳ್ದು, ಎತ್ತಾನುಮಾತನಾಪಡೆವೆರಸು ಬಂದು ಪಟ್ಟಣಮಂ ವೇಢೈಪನೆಂದಳ್ಕಿಯೊಡಲಂ ಬಿಡುವ ಜೀವನಂತೆ ಪಲತೆರದೊಳ್ ಪಲುಂಬಿ ಕೊರಗಿ ಕೋಟಲೆಗೊಂಡು ಪೆಣ್ಡಿರಂ ಬಿಟ್ಟು ಪಟ್ಟಣದಿಂ ಪೊರಮಟ್ಟು ಗತಪುಣ್ಯರ್ ಸ್ವರ್ಗದಿಂ ದುರ್ಗತಿ ಗಿಳಿವಂತೆ ತಳಕಾಡ ಬಳಿಯ ಮಾಲಂಗಿಗೆಯ್ದಿ ಮೆಯ್ಮರಸಿದಂ. ಬಳಿಕ್ಕೆ ನರಸರಾಜಂ ರಾಜನೃಪಂಗೆ ಈ ವಾರ್ತೆಯಂ ಬಿನ್ನವಿಸಿ ಕಳುಪುವುದುಂ; ಸೋದರನೊಡಗೊಂಡು ಪಟ್ಟಣಕ್ಕೆ ನಡೆತಂದು ಊರ ಮುಂದಣ ಬಯಲೊಳಿಳಿದಿರ್ದ ಕುವರನಂ ಕೂರ್ಮೆಯಿಂದಪ್ಪಿ ಸಂತಸಂದಳೆದು ಸನ್ನುತಿಗೆಯ್ದು ಪೊಳಲಂ ಪುಗಲೆಳಸಿಯುಂ, ಪರಿವ ಪಾವಂ ಉರಿವ ಕಿರ್ಚಂ ಮೆಯ್ಗೊಂಡ ಮರುಳಂ ಪೆರರ ಪೆಂಡಿರಂ ಪತ್ತೆಸಾರ್ವುದು ಪಾಟಿಯಲ್ತೆಂದು ಅಲ್ಲಿಯೆ ನಿಂದು, ತಿರುಮಲರಾಜನ ರಾಣಿಯಾದ ರಂಗಮ್ಮನೆಡೆಗೆ ಮುತ್ತ ಮುದುಪನೊರ್ವನಂ ಬೆಸಸಿ ಕಳುಪಲೊಡಮವಂ– ಪದಿಬದೆಯರ್ಗೆ ಗಂಡನಂ ಬಳಿಸಲ್ಬುದೆ ಬಲ್ಲವಿಕೆ. ನೀಂ ನಿಮ್ಮಡಿಗೆ ತೊಡಿಗೆಗಳುಮನೂಳಿಗವೆಣ್ಗಳುಮನೊಡಗೊಂಡು ಪೋಪುದರ್ಕ್ಕೆ ತಕ್ಕ ದಂಡಿಗೆಗಳುಮಂ ಭಂಡಿಕುದುರೆಗಳುಮನೊಡಗೊಂಡು ಬಂದೆಂ ತೆರಳ್ವುದು – ಎಂಬುದುಂ; ಆ ನುಡಿಗೇಳ್ದು, ಮುಂತೆನ್ನ ಮನದೊಳ್ ರಾಯಂ ಬಿಟ್ಟು ಪೋದ ನಿನ್ನೇನಪ್ಪುದೋ ಎಂಬ ಚಿಂತಾಸಾಗರದೊಳ್ ಮುಳುಂಗಿದ ಮೂಗುಬ್ಬಸಮಿಳಿದು – ಎಲೆಯಣ್ಣ, ನೀನುಂ ಮಡದಿಮಕ್ಕಳ್ವೆರಸು ಕಟ್ಟೈಸಿರಿಯೊಳ್ನೂರುಂ ಬರಿಸಂ ಸೊಗವಾಳೆಂದು ಪರಸಿ, ಸಂತಸಗದುಬಿನೊಳ್ ಕೆಳದಿಯರಂ ಕರೆದು, ರಾಜನೃಪಂ

ನೆವಮಿಲ್ಲದೆರಕದೊಳಿಂದೆನ್ನನೆಮ್ಮಾಳ್ದನ ಬಳಿಗೆ ಕಳುಪುವಂ, ಪೋಪಮೆಂಬುದುಂ; ಅವರವರ್ ತಮ್ಮ ತಮ್ಮ ಕಟ್ಟಳೆಯೊಳಿಗಂಗಳನೆಸಗುತ್ತೆ ಬಳಿವರೆ, ರಾಣಿ ಪೊರಮಟ್ಟು ರಂಗೇಶರಂಗನಾಯಕಿಯರ್ಗೆ ವಂದನೆಯಂ ಗೆಯ್ದು ಅಂದಳಮೇರಿಯೂರ ಪೊರಗಣ್ಗೆ ವಂದು, ರಾಜರಸನ ಪೌಜಂ ಕಿರಿದುಂ ದೂರದೊಳ್ಕೊಂಡು ನಿಂದು ಕೆಳವಿಗೆಳದಿಯೊರ್ವಳಂ ಕರೆದು, ನೀಂ ರಾಜನೃಪನ ಸಮ್ಮೊಗದೊಳ್ ನಿಂದೆನ್ನ ನುಡಿಯಿಂದೆ – ಎಲೆ ತಂದೆ, ಕೇಳೆನ್ನರಸನುಮೂರೊಳಗಿಲ್ಲದೆ ಮೆಯ್ಗಾವಲಿಗರುಂ ಪೋಗಿಯಾನೋರ್ವಳೆಂ; ಎನಗಮೆನ್ನೊಳಿಗವೆಣ್ಗಳ್ಗಮೆನ್ನ ಮನಮುಮಂ ಮಾತುಗಳುಮಂ ಕಾವಲಿಟ್ಟು ಕಡಲೊಳ್ಮುಳುಂಗಿ ಕೈಗೆಟ್ಟಂತಿರ್ಪಳನೆತ್ತಿ ಸಲಹಿಯೆನ್ನಾಳ್ದನೆಡೆಗೆ ಕಳುಪಿದೆ; ಪ್ರಾಣಮಾನಂಗಳೊಡನೆಮ್ಮ ಕುಲಧರ್ಮಮಂ ಕಾಪಿಟ್ಟು ಮನ್ನಿಸಿದೆ; ಇಂದಾಂ ನಿನ್ನ ಬೆನ್ನೊಳಂ ಬಸಿರೊಳಂ ಬಂದೆಂ; ನೀನೆನ್ನ ಪರಕೆಗಳಿಂ ನಳನಹುಷನಾಭಾಗರಂತೆ ಇಳೆಯನಾಳ್ದು ಪಗೆಗಳಂ ಗೆಲ್ದು ಪೊರ್ದಿದರಂ ಪೊರೆದು ಪಾರ್ವರ್ಗಿತ್ತು ಮಿತ್ರಕಳತ್ರಪುತ್ರಪೌತ್ರರ ಮೇಳದೊಳ್ಸೊಗವಾಳೆಂದು ಬಿನ್ನವಿಸಿ ಬರ್ಪುದು ಎಂದು ಕಳುಪೆ; ಅವಳಂತೆಗೆಯ್ದು ಮರಳ್ದಳ್.

ಬಳಿಕ್ಕೆ ರಾಜನೃಪಂ ನಂಬುಗೆಯೊಳ್ ಪೂರ್ಣಕುಂಭಂಗಳಂ ಕೊಂಡು ಪರಸುತ್ತಿದಿರ್ವಪ್ಪಗರದ ಪಾರ್ವರಂ ಬಲಗೊಂಡು, ಇರ್ತರದೊಳ್ ಕೈಯೆತ್ತಿ ಪೊಗಳ್ವ ಕೈವಾರಿಗಳ ಕೊರಲುಲಿಗೆ ಕೊರ್ಬುತೆ, ತಮ್ಮ ತಮ್ಮ ಕೇರಿವಾಗಿಲ ಸರಿಸಕೊಳ್ನಿಂದು ಆರತಿಯೆತ್ತಿ ಸೇಸೆಗಳಂ ಸೂಸುವ ಪಾರ್ವಿತಿಯರ ಪರಕೆಗೊಂಡು, ಅವರ್ಗೆ ಬಣ್ಣಬಂಗಾರಂಗಳನಿತ್ತು ರಂಗೇಶನ ಸನ್ನಿಧಿಗೆಯ್ದಿ ಬಲವಂದು ವಂದಿಸಿ ಹಸಾದಂಬಡೆದು ಕಾಣ್ಕೆಯಿತ್ತು ಅರಮನೆಯಂ ಪೊಕ್ಕು , ಜೋಯಿಸಿಗನಿತ್ತ ನಲ್ಲೊಳ್ಳಿನೊಳೋಲಗಮಿರ್ದು, ದೇವದಾಯಮಂ ಕೊಟ್ಟು ಅಗರಂಗೆಯ್ದು, ನಂಬಿ ಸೇರಿದರನುಂಬಳಿಯುಚಿತಂಗಳಿಂದೆ ಮನ್ನಿಸಿಯರಸುಗೆಯ್ಯುತ್ತಿರೆ –

ವೆಂಕಟಪತಿರಾಯಂ ತನ್ನಂ ಮಧುರೆಯ ಪುಯಿಲೊಳ್ ಪಗೆವರ್ಗೊಪ್ಪಿಸಿಯೆರಳ್ಗೆದು ಬಿಟ್ಟು ಪೋಗಿ ಪಿಂತೆಣಿಸದೆ ಬೇರಂಗೊಂಡು ಬಿಂಕದೊಳ್ತನಗಂ ತನ್ನನೋಲಗಿಪ ದೊರೆಗಳ್ಗಂ ಬಸಮಾಗದೆ ಪಡಿಬರಿಸಿ ಬಲ್ಮೆಯೊಳಿರ್ಪ ತಿರುಮಲರಾಜನಂ ದೇಶಕೋಶಂಗಳಂ ಕೊಂಡು ಅವನನೆಳ್ಬಿದುದರ್ಕೆ ಪೆರ್ಕಳಿಸಿ, ಸೊರ್ಕಾನೆಗಳನುರ್ಕುಗುದುರೆಗಳನೊಳ್ಪುಡೆ ತೊಡವುಗಳಂ ಪಾವುಡಮಂ ಕೊಟ್ಟು ಮಂತ್ರಿಗಳೊಳ್ ಕಟ್ಟಾಳೆನಿಸಿದ ಗಂಭೀರರಾಯ ವಿರುಪಣ್ಣನಂ ಕಳುಪೆ, ಅವನೆಯ್ತಂದು ತಂದುವನೊಪ್ಪಿಸೆಯವಂ ಕೊಂಡವನಂ ಮನ್ನಿಸಿ ರಾಯಂಗೆ ಪಡಿವಾವುಡಮಂ ಕಟ್ಟಿಸಿ ಕಳುಪಿ ಸಂತಸದೊಳಿರ್ದಂ.

ಇತ್ತಲೀ ಪದಿನಾಡ ನಂಜರಾಜಂ ತನ್ನಂ ಕಂಡೋಲಗಿಪಾಲಂಬಾಡಿ ಕೋಳೆಯಂ ಮೊದಲಾದ ಕುಟದಾಳ ನೆರವಿಯುಂ, ಎಳವಂದೂರ ಸತ್ಯಗಾಲದರಸರಪ್ಪ ತನ್ನೊಡವುಟ್ಟಿದರ ಪಡೆಯುಂ, ನೆರೆಯ ದೊರೆಗಳ ಪಡಿದಳಮುಂ, ತನ್ನ

ಮೂಲಬಲಮುಂ, ತನಗೆ ಮಧುರೆಯವರೀವ ಕಪ್ಪದ ಪಣದೊಳ್ಕಟ್ಟಿದ ಕಾಲಾಳ್ಗಳ ಮೋಹರಮುಮುಂಟೆಂಬುರ್ಬಿನಿಂ ರಾಜನೃಪನೊಳ್ತೋಂಟಿಗೊಳಲೆಂದು ಎಡದೊರೆಯೆಂಬ ಗಡಿಗೋಂಟೆಯೊಳ್ಕಟ್ಟಿರ್ದ ಮೇಘಪುಷ್ಪಮೆಂಬ ತೇಜಿಯಂ ಕಳವಿನಂದೆ ಕೊಂಡೊಯ್ದುದುಂ; ಅದಂ ಸೈರಿಸದೆ ರಾಜನೃಪನಾ ತೇಜಿಗವನ ತಲೆಯನೆ ಬೆಲೆಗೊಂಬೆನೆಂದು ಬಲದೊಡನೆ ನಡೆದು ಅವನ ತಾಯೂರೆಂಬ ಗಡಿಗೋಂಟೆಯಂ ವೇಢೈಸಿ ಮುತ್ತುವಿನಂ; ಅವಂ ಸಂವರಣೆಗೊಂಡುಬರೆ, ದಾರಿಯೊಳವನ ದಳಮನಡ್ಡಗಟ್ಟಿ ಬೇಡರನರೆಯಟ್ಟಿ ಬೀರದೊಳಿದಿರ್ಚಿದ ಹರಿಗೆಯ ನಂಜುಂಡಂ, ಕೋರನಹಳ್ಳಿಯ ಕೊಂಡಂ ಮೊದಲಾದ ಗಂಡುಗಲಿಗಳ ತಲೆಯಂ ಚೆಂಡಾಡಿಯಾ ನಂಜರಾಜನಂ ಕೈಸೆರೆಗೊಂಡು ಕೈಗಾದು ಕಳುಪುವೆನೆಂದಿರ್ಪಿನಂ; ಮೊನೆಯೊಳೋರ್ವಂ ಮುಂಚಿ ಮೋಹರದೊಳ್ಕುರುಪು ಗಾಣದಿರಿದು ಕೊರಲಂ ಕೊರೆದು ತರ್ಪಿನಂ; ಅರಸನದಂ ಕಂಡು ಮರುಗಿಯವನಂ ಕೊಂಡಾಡಿ ಆ ಪಂದಲೆಯಂ ಪೊಂದಳಿಗೆಯೊಳಿಟ್ಟು ಪೊಂಬಟ್ಟೆಯಂ ಪೊದಿಸಿಯಂದಣ ದೊಳಿರಿಸಿಯವನೂರ್ಗೆ ಕಳುಪಿಯುವನ ಧನಕನಕವಸ್ತುವಾಹನಾದಿಗಳಂ ಸೂರೆಗೊಂಡಾ ನಾಡವನಿತುಮಂ ಬಸಂ ಗೆಯ್ದವನ ಕಂಡೋಲಗಿಪರನಾಳ್ಗೊಂಡು ಬೀರರೊಳ್ಬೀರನೆನಿಸಿಯೆಣ್ಬತ್ತುಂ ಬರಿಸಂ ಧರ್ಮದಿಂ ಧರೆಯಂ ಪಾಲಿಸಿ ಬಳಲ್ದು ಯದುಗಿರಿನಾರಾಯಣನಡಿದಾವರೆಯ ನೆಳಲೊಳಾ ಬಳಲ್ಕೆಗಳಿಯಲೆಳಸಿಯನುಜರಂ ಕರೆದು – ಎಲೆ ಬೆಟ್ಟದಯ್ಯ, ದೇವರಾಜರಿರಾ, ನೀಮಿರ್ವರುಮೆನ್ನಂ ತಂದೆಗೆತ್ತಿರ್ಪುದರಿಂದಾನುಮೆನ್ನ ಕಂದರ್ಗೆತ್ತು ಕಿರಿಯತಮ್ಮಂ ಚನ್ನರಾಜಂ ನರಸರಾಜಂ ಮೊದಲಾದ ಮೂವರಣುಗರುಂ ನಾರಾಯಣನ ಚರಣಾರವಿಂದದೊಳಡಂಗಿಯೆನ್ನಂ ತೊರೆದುದರ್ಕ್ಕೆ ಮರುಗದೆ, ಮನಂಗುಂದದಿರ್ದೆಂ. ಇನ್ನೆವರಂ ಪೊತ್ತಿರ್ದರಸುತನದ ಬಲ್ಪೊರೆಯಂನಿಳುಪುವೆಂ. ನೀಮಿದಂ ಪೊತ್ತೆನ್ನಂ ಮನ್ನಿಸಿ ತಪಕ್ಕೆ ಕಳುಪುವುದೆಂದಾಣತಿಗುಡುವುದುಂ; ಅವರಿರ್ವರುಂ ಕಡುಮರುಕದಿಂ ಕಣ್ಣನಿಗರೆಯುತ್ತೆ – ಜೀಯಾ, ನೇಸರನುಳಿದು ಬಿಸಿಗದಿರ್ಗಳಿಕ್ಕುಮೆ, ಬಿಜ್ಜೆಯಂ ವರ್ಜಿಸಿ ಬಿನ್ನಣಂಗಳ್ಬಳೆಗುಮೆ, ಬಿಂಬಮಂ ಬಿಟ್ಟು ಪಡಿನೆಳಲ್ನೆಗಳ್ಗುಮೆ, ದೇವರಂ ಬಿಟ್ಟಾಮಿರ್ಪೆವೆ; ಈ ಮಾತಂತಿರ್ಕೆ ದೇವರ ಕಿರಿಯಣುಗರಿರ್ಮಡಿ ರಾಜರಸಂಗಾದೊಡಂ ನರಸರಾಜನ ಬಸಿರೊಳ್ಬಂದ ಮೊಮ್ಮಂಗೆ ಚಾಮರಾಜರಸಂಗಾದೊಡಂ ಪಟ್ಟಂಗಟ್ಟಿಯಾಂ ಮೂವರುಂ ಪರಮಪುರುಷನ ಚರಣಯುಗಳಧ್ಯಾನಾರ್ಚನಪ್ರಣಾಮಾದಿತತ್ಪರರಾಗಿ ಪರಮಪದವಿಯಂ ಪಡೆವೆವೆಂಬುದುಂ, ಅದರ್ಕ್ಕೆ ಸಮ್ಮತಿಸಿ – ಆದೊಡೀ ನರಸರಾಜನ ಕುವರಂಗೆ ಚಾಮರಾಜಂಗರಸುವಟ್ಟಂಗಟ್ಟಿ ಯೆನ್ನ ಕುವರಂಗಂ ನಿಮ್ಮ ಕುವರರ್ಗಂ ಜೀರವೇರುಂಬಳಿಗಳನಮರಿಸಿಯಾಂ ಬಳಿಕ್ಕೆ ಪರಮಪದಸಾಮ್ರಾಜ್ಯಮಂ ಸಾರ್ವೆವು –ಎಂದು ಚಾಮರಾಜಂಗೆ ರಾಜ್ಯಾಭಿಷೇಕಂ ಗೆಯ್ದು, ತನ್ನ ಕುವರಂಗೆ ಪಡುವಣ

ದಣಾಯಕನಕೋಂಟೆಯುಂ, ಬೆಟ್ಟದ ಚಾಮರಾಜರಸನ ಕುವರರ್ಗೆ ರಂಗಸಮುದ್ರನಳೂರ್ವಿಜಯಾಪುರಂಗಳಂ, ದೇವರಾಜರಸನ ಕುವರರ್ಗೆ ಅರಕೆರೆಯೆಲೆಯೂರ್ಮಂಗಲಂ ಗಳನಿತ್ತು, ಅವರನಿಬರುಮನೆನ್ನಂ ಕಂಡಂತೆ ಕಾಣ್ಬುದೆಂದು ಮೊಮ್ಮಂಗೆ ಬೆಸಸಿ, ಪುಯಿಲನೆಸಗುವಲ್ಲಿಯುಂ ಪೊಡವಿಯಂ ಪೊರೆವಲ್ಲಿಯುಂ ಪುರುಳ್ಗೊಂಬಲ್ಲಿಯುಂ ಪುಸಿವುಗದೆ ಧರ್ಮಮನಾರೈದು ನಡೆವುದೆಂದು ಬುದ್ಧಿವೇಳ್ದು ಮೂವರುಮಂಬರೀಷ ರುಕ್ಮಾಂಗದಾದಿ ಪರಮಭಾಗವತರಂ ದೊರೆಗೊಂಡು ಪರಮಾನಂದದೊಳಿರ್ಪಿನಂ; ಒಂದು ದಿವಸಂ ರಾಜನೃಪನಂ ಮೆಯ್ಗಿನಿಸಾಯಸಂದೋರಿ ಕಡುಮುಪ್ಪಾದುದರಿಂ ಕಳಿವೂವಿನ ಕಾಉಗಳೆದಂತುಗ್ಗಡಿಪ ನಾರಾಯಣನ ನಾಮಾಕ್ಷರದೊಡನೆ ಅಸು ಪೊರಮಟ್ಟು ಪೋಪುದುಮಾ ದಿವಸದೊಳಾ ಜಾವದೊಳಾ ಗಳಿಗೆಯೊಳಾ ಕ್ಷಣದೊಳ್ ಮುನ್ನೆಯ್ತರ್ಪ್ಪ ಪರಿಯೊಳ್ ಈ ಯದುಗಿರಿನಾರಾಯಣನ ಚರಣಾರವಿಂದದ್ವಂದ್ವ ಸನ್ನಿಧಾನಮಂ ಸಾರ್ವುದುಂ; ಅಲ್ಲಿ ದಿವ್ಯಪ್ರಬಂಧಾನುಸಂಧಾನಂಗೆಯ್ವುತಿರ್ಪ ಶ್ರೀವೈಷ್ಣವರನಿಬರುಮೆಳ್ದಾಶೀರ್ವಾದಿಸೆ ಅವರ್ಗೆರಗಿ ಗರ್ಭಗೃಹಮಂ ಪೊಕ್ಕು ತಿರುನಾರಾಯಣನಡಿದಾವರೆಯೊಳ್ಮುಡಿಯಂ ಸಾರ್ಚಿ ಮೆಯ್ಮರೆಸಿದಂ. ಅದಂ ಕಂಡಂದು ಮೊದಲಲ್ಲಿರ್ಪರನಿಬರುಂ ಪರಾಂಕುಶ ಪರಕಾಲಾದಿ ದಿವ್ಯಯೋಗಿಗಳ ಗಣನೆಯೊಳೀತನಂ ಪುದುಂಗೊಳಿಸಿಯೆಣಿಸುವರ್.

ಇತಲ್ ಪಟ್ಟಣದೊಳ್ ಬೆಟ್ಟದ ಚಾಮರಾಜ ದೇವರಾಜರಸರಿರ್ವ್ವರುಂ ಮೊಮ್ಮನನುಮತದಿಂದಣ್ಣಂಗೌರ್ಧ್ವದೈಹಿಕ ಸಂಸ್ಕಾರಮಂ ನಿರ್ವರ್ತಿಸಿ ತಂಮಣುಗರನಾ ಚಾಮರಾಜನ ಕೈಯೆಡೆಗೊಟ್ಟು ಯದುಗಿರಿ ವೇಂಕಟಾಚಲ ಕಾಂಚಿ ಕುಂಭಘೋಣ ಶ್ರೀರಂಗ ರಾಮಸೇತುಗಳ್ ಮೊದಲಾದ ಪುಣ್ಯಕ್ಷೇತ್ರಂಗಳ ಯಾತ್ರೆಗೈಯ್ದಿದರ್.

ಆ ಚಾಮರಾಜನೆಳವರೆಯದವನಾದೊಡಂ ಮರಿಸಿಂಗದಂತೆಯುಂ, ಪೊಸನೇಸರಂತೆಯುಂ, ನೃಸಿಂಹನಂತೆಯುಂ, ತ್ರಿವಿಕ್ರಮನಂತೆಯುಂ, ಬೀರಮುಂ ತೇಜಮುಂ ಶೌರ್ಯಮುಂ ಪರಾಕ್ರಮಮುಂ ಮೆಯ್ಗೊಂಡು, ಗಂಡುಮೀರಿ ದಿಗ್ವಯಂಗೆಯ್ಯಲುಜ್ಜುಗಿಸಿ ದಳಮಂ ದಳವಾಯೊಡನೆ ಕಳುಪಿ, ಮೂಡಲ್ತಳಕಾಡವರ ಮಳವಳ್ಳಿಯಂ ವೇಢೈಸಿ ಮುತ್ತಿ ಸುತ್ತುವೇಲಿಯಂ ಬಲಿದು ತಳಿಯನೊತ್ತರಿಸಿ ಪಡಿದಳವಾಗಿ ಬಂದ ಜಗದೇವರಾಯನ ಪಡೆನೋಡಿಸಿಯೂರುಗರ್ಗೆ ಕವಲ್ನಂಬುಗೆಯನಿತ್ತು ಪೊರಮಡಿಸಿಯದಂ ಬಸಂಗೆಯ್ದು ಒಡನೆ ತಳಕಾಡಂ ತನ್ನದೆನಿಸಿ ಅತ್ತಣಿಂದಾಗ್ನೇಯದೊಳ್ ಕಣುವೆಯ ಬೆಟ್ಟವನಿಳಿದು ಘಟ್ಟಮದನಾರಿಯಂ ಕುಟ್ಟಿಮಟ್ಟಿಟ್ಟವಂ ಕಾಣ್ಗೆಗೊಟ್ಟೊಡವೆಪೊಂಗಳೊಡನೆ ಚೆಂಗೊಡೆಂಬಾನೆಯನಂಗೀಕರಿಸಿ, ಪಡುವಲ್ – ಕೆಳಲೆಯನಾಡ ಪಿರಿಯಪಟ್ಟಣದ ದೊರೆಯ ತಟ್ಟನೆರೆಯಟ್ಟಿ ಅವಂಗೆ ನೆರವಾಗಿ ಬಂದ ಕೆಳದಿಯ ಸಿಂಗಳರಾಯನ

ಮೂಗನರಿದು ಭಂಗಿಸಿ, ಚೋಳಮಲ್ಲನೆಂಬಾನೆಯೊಡನೆ ತೊಡವು ಪಾವುಡಂಗಳಂ ಕೊಂಡು, ಅವನಂ ಮನ್ನಿಸಿಯುತ್ತಣಿಂ, ಬಡಗಲ್-ನರಸಿಂಹಪುರದರಸನಂ ಧುರದೊಳ್ ಪರಿಭವಿಸಿಯುವಂ ತಂದಿತ್ತ ಕನಕಭೂಷಣದೊಡನೆ ಕನಕವಸಂತನೆಂಬಾನೆಯುಂ ಸ್ವೀಕರಿಸಿ, ಬಳಿಕ್ಕೆ ಬೇಲೂರವನೊಳೆಲ್ಲೆವೊಲದತ್ತಣಿಂ ಬೇರಂಬಳೆದವಂ ಬೆಳೆಯಿಸಿದ ದಳಮೆಲ್ಲಮಂ ಚೋಳೆಯನಪಳ್ಳಿಯ ಬಳಿಯೊಳೊರ್ಮೆ, ಆನೆಯಕೆರೆಯ ಸನಿಯದೊಳೊರ್ಮೆ, ಯೆಲೆಯೂರ ಪೊಲದೊಳೊರ್ಮೆ, ಕೊಳುಗುಳದೊಳೊಕ್ಕಲಿಕ್ಕಿ ಸೊರ್ಕನುಡಿದು, ಮಿಕ್ಕವರ ಮೂಗನರಿದು ಮೊಗಗೆಡಿಸಿ, ಕೊಳತೂರಂ ಮುತ್ತಿ ಲಗ್ಗೆಯೇರಿ ಕಳ್ಗೊಲೆವಿಳ್ದು ಕಡಿದೊಟ್ಟಿದ ಕಡಿವೆಟ್ಟಿನೊಳ್ತಂದಲೆಗಳ್ಗಳಂ ತಂದದರೊಳ್ಮೊನೆಲೆಯ ಜಗತಿಯಂ ಕಡಿದು ಕೆಡಪಿದಾನೆಗಳ ನೀಡುಗೋಡುಗಳಿಂ ಕಂಭಂಗಳಂ ಪುರದೊಳ್ಗುಂಡು ಗೋವಿಸರಗೋವಿಗಳಿಂ ಬೋದಿಗೆತೊಲೆಗಳಂ, ಕೈಸೆರೆ ಸಿಲ್ಕಿದ ಪದಿನಾರು ಸಾಸಿರಾಳ್ಗಳ ಕೈಯ್ಯೊಳೀಳ್ದ ಕುನ್ತಂಗಳಿಂ ಜಂತೆಗಳಂ, ಪ್ರಾಸಪಟ್ಟಸಂಗಳಿಂ ಪಾಸುವಲಗೆಗಳಂ, ವಂಕಿಗಳಿಂ ಲೋವೆಗಳಂ, ಕಣೆಗಳಿಂ ಪಂಜರಂಗಳಂ, ಬಿಲ್ದಿರುವುಗಳಿಂ ಬಿಗಿನೇಣ್ಗಳಂ, ಪಲತೆರದಲಗುಗಳಿಂ ಮೇಲ್ವೊದಕೆಗಳನಳವಡಿಸಿ, ಬೀರಕ್ಕೆ ಬೀಡಾರಮಂ, ರೌದ್ರಕ್ಕೆ ಭದ್ರಶಾಲೆಯಂ, ಸಾಸಕ್ಕೆ ವಾಸಗೃಹಮಂ, ಗರುವಿಕೆಗರಮನೆಯುಂ, ಗರ್ಭಕ್ಕೆ ಗರುಡಿಯುನೊಡರ್ಚುವಂತೊಂದಲಗುವನೆಯನನುಗೆಯ್ದು ಅದಂ ಗೆಲ್ಲವೆಣ್ ಮದುವೆಯ ಪಸೆಜಗತಿಯನೇರುವಂತೆ ಸಂತಸದೊಳೇರಿ ಪೇರೋಲಗಮನಿತ್ತು ಅವರೊಳ್ ಬಲಿದ ಬೇರಮಂ ತೀರ್ಚಿ, ಬಳಿಕ್ಕೆ ಪೊಸಕೋಂಟೆಯಂ ಮುತ್ತಿ ಮೂಗುಬ್ಬುಸಂ ಗೆಯ್ವಿನಮಲ್ಲಿಯ ದೊರೆ ನೆವಂಗೊಂಡು ಬಂದ ಜಗದೇವರಾಯನ ಒಡವುಟ್ಟಿದನಾದಂಕುಶರಾಯನ ನರೆಯಟ್ಟಿ ಅವನ ತಟ್ಟಿನೊಳ್ ಭೋಜರಾಜ ಚೊಕ್ಕಳಿಕವೆಸರೆರಡಾನೆಗಳುಮಂ ಪಲಬಿರುದುಗುರುಪುಗಳುಮಂ ಕೊಂಡು ಕಳುಪಿಯಾ ಕೋಂಟೆಯಂ ಬಸಂಗೆಯ್ದು, ಕೆಲವುಂ ದಿನದಮೇಲೆ ಮುಂ ಜಗದೇವರಾಯಂ ಪೊಸಕೋಂಟೆಯಂ ಕೊಂಬೆಡೆಯೊಳಡವಾಯ್ದುದಂ ನೆನೆದವನ ಚನ್ನಪಟ್ಟಣ ನಾಗಮಂಗಲಂಗಳೆಂಬ ತಾಯ್ಗೋಂಟೆಗಳಂ ಕಳ್ಗೊಲೆಯೊಳ್ಕೊಂಡು ಪೊರಮಡಿಸಿಯದರ್ಕೆ ಸಲ್ವ ಬೆಳ್ಳೂರಂ ಮುತ್ತಿ ಮುನ್ನಂ ನೆರೆಯು ಕಿರುದೊರೆಗಳಂ ಗೆಲ್ದುಬರ್ಪಗೊರ್ಬಿನಿಂ ಮಯ್ಮರೆತು ಮೇರೆಯಳಿದು ಗಳಪುವ ಚಿಕನಾಯಕನಪಳ್ಳಿಯ ದಳವಾಯಾದ ಪರಮರಾವುತ ನನ್ನಿರಿದು ಕೆಡಪಿ ಕೊರಲನರಿದು ಮೂಗಂ ಕೊಯ್ದು ಅವನ ಬಲವುಂ ಬರುಕೈವಿನಮದರ್ಕ್ಕೆ ಬಿಗುರ್ತವನ ದೊರೆಯಿತ್ತ ವಸ್ತ್ರಭೂಷಣಂಗಳೊಡನ ರಾಮಂಯುಲಿಂಗಮೆಂಬಾನೆಯುಂ ಕೊಂಡು, ಇಂತೆಣ್ದೆಸೆಗಳಂ ಗೆಲ್ದು, ಜಸಮಂ ಪಸರಿಸಿ, ಮತ್ತಂ ಮಿತ್ರ ಭಾವದೊಳ್ಪತ್ತಿದಿರ್ಕ್ಕೇರಿ ಬಾಣಾವರ ಬಸವಪಟ್ಟಣಂಗಳ್ಮೊದಲಾದ ಪೊಳಲಾಣ್ಮರ್ಗೆ ನಲ್ಮೆಗೆಯ್ದು, ನಲ್ಮೆಯಿಂ

ಕನ್ನಡನಾಡೆಲ್ಲಮಂ ಬಸಕ್ಕೆ ತಂದು, ಅಗರ ದೇಗುಲಂಗಳಂ ಪೊರೆವುತ್ತುಂ, ಪೊಸತಾದುವನೆಸಗುತ್ತುಂ, ಸಂತಸಮಿರುತ್ತಾನೆ ತೇಜಿಗಳನೇರಿ, ವೈಹಾಳಿಯ ವಿಳಾಸದೊಳೊರ್ಮೆ, ಕೈದುವಿಡಿದು ಗರುಡಿಗೆಯ್ವದ ಕೈಮೆಯೊಳೊರ್ಮೆ, ಬಿಲ್ಗಣೆಗೊಂಡು ಗುರಿಯಿಸುವ ಕೌಶಲದೊಳೊರ್ಮೆ, ವೀಣೆದಳೆದು ಬಣ್ಣವಾಡುಗಳಂ ಬಾಜಿಪೋಜೆಯೊಳೊರ್ಮೆ, ನುಣ್ಚರವೆತ್ತಿ ಪಾಡುವ ಬಿಡಯದೊಳೊರ್ಮೆ, ಅಂತವುರದ ಕಾಂತೆಯರ ನೃತ್ತಾವಲೋಕನದೊಳೊರ್ಮೆ, ಕಾವ್ಯನಾಟಕಾಲಂಕಾರಸಾರಸರ್ವಸ್ವರಸಾಸ್ವಾದನದೊಳೊರ್ಮೆ, ಪುರಾಣೇತಿಹಾಸಾದಿಪುಣ್ಯಕಥಾಶ್ರವಣಾನುರಾಗದೊಳೊರ್ಮೆ, ದೇವಯಾತ್ರೋತ್ಸವ ಸಂದರ್ಶನಾನಂದದೊಳೊರ್ಮೆ, ಉಳ್ಳ ಕಾಲಮೆಲ್ಲಮನಿಂ ತೊಳ್ಗೆಯ್ವದೊಳ್ ಕಳೆದು ಅಳಿಯದ ಬೆಳ್ವಸಮೆಯ್ಯಂ ಇಳೆಯೊಳ್ ನೆಲೆಗೊಳಿಸಿ ಬರ್ದಿಲದನಾಡೊಳ್ ಬಾಳ್ದಂ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

ಬಳಿಕ್ಕೆ ರಾಜರಸನ ಕುವರನಾದಿರ್ಮ್ಮಡಿರಾಜರಸಂ ಅರಸುಗೆಯ್ಯುತ್ತುಮಳವಿನೊಳಮಾರ್ಪಿನೊಳಂ ಸತ್ತಿಯೊಳಂ ಸಾಸದೊಳಂ ಬೀರದೊಳಂ ಬಿನಯದೊಳಂ ನನ್ನಿಯೊಳಂ ನಲ್ಮೆಯೊಳಂ ಜಸದೊಳಂ ಜಾಣ್ಮೆಯೊಳಂ ಬಿಜ್ಜೆಯೊಳಂ ಬಿನ್ನಣದೊಳಂ ಎರಕದೊಳಂ ಏಳ್ಗೆಯೊಳಂ ಓಜೆಯೊಳಂ ಉಜ್ವುಗದೊಳಂ ಧೈರ್ಯದೊಳಂ ಧರ್ಮದೊಳಂ ವಿನಯದೊಳಂ ವಿವೇಕದೊಳಂ ತಂದೆಯಿಂದೆಯುಂ ಇರ್ಮಡಿಸಿ ತನ್ನ ಪೆಸರನನ್ವರ್ಥಂಗೆಯ್ದೆಣೆಸೆಗಳಂ ಜಯಿಸಿ, ಪಲದೊರೆಗಳಿಂ ಪಲರ್ಮೆ ಧನಕನಕವಸ್ತುವಾಹನಂಗಳಂ ಕಪ್ಪಂಗೊಂಡು, ಪೊರ್ದ್ದಿದರಂ ಪೊರೆದು, ಎರೆವರ್ಗಿತ್ತು, ಪರಮಪುರುಷನ ಚರಣಾರವಿಂದ ದ್ವಂದ್ವ ಸಂದರುಶನ ಶ್ರವಣಕೀರ್ತನಾದಿ ಭಕ್ತಿರಸಪರಿಪಾಕಭೇದಮಂ ನಿಚ್ಚಣಿಗೆಗೆಯ್ದು ಪರಮಪದಮನೇರಿದಂ.

ಬಳಿಕ್ಕೆ ಬೆಟ್ಟದ ಚಾಮರಾಜರಸನ ಕುವರಂ ವೈರಿರಾಜಗಜಕಂಠೀರವಂ ಕಂಠೀರವ ನರಸರಾಜಂ ರಾಜ್ಯಾಭಿಷೇಕಮಂ ತಾಳ್ದು ಪಟ್ಟವಣೆಯಂ ಪಗೆವರ ತಲೆಯೊಡನೆ ಮಟ್ಟ ಕಟ್ಟಾರ್ಪಿನೊಳಿರ್ಪಿನಂ–

ಬಸವಪಟ್ಟಣದ ಕೆಂಗೆ ಹನುಮಪ್ಪನಾಯಕನಿರ್ಕೇರಿಯ ವೀರಭದ್ರನಾಯಕನ ಮೇಗಣ ಪೇರದಿಂ ಯವನಕುಲದ ವಿಜಯಾಪುರದ ಸುರಿಥಾಣನ ಮಹಮ್ಮದ ಪಾದುಶಾಹನೆಡೆಗೆ ನಡೆದವನಡಿವಿಡಿದು ರಣದುಲಖಾನನೆಂಬ ಸೇನಾಪತಿಯೊಡನೆ ನಾಲ್ವತ್ತು ಸಾಸಿರ ವಾರುವಂಗಳುಮಂ ನಾಲ್ವತ್ತಾನೆಯುಮಂ ಲಕ್ಕಪಾಯಿದಳಮುಮನೊಡಗೊಂಣ್ಡು ಬಂದೊಂದೆ ಸೂಳೊಳಿರ್ಕೇರಿಯನೊಕ್ಕಲಿಕ್ಕಿ ದಕ್ಕುಗೊಳಲೊಡಮಾ ತುರುಕ ಪಡೆವಳಂ ಕೊರ್ಬಿಯುರ್ಬಿ ಕನ್ನಡನಾಡೊಳ್ ತನ್ನ ಪೆರ್ವಡೆಗಿದಿರಪ್ಪರೊರ್ವರುಮಿಲ್ಲೆಂದು ಮುಂತಣ್ಗೆ ನಡೆದು ಸೀರೆಯದ ದೊರೆಯಂ ಸೆರೆಗೊಂಡು ಪಾಯ್ದು ತುರುಗೆರೆಯವನಂ ತೊತ್ತಳಿಂದುಳಿದು, ಬೆಂಗುಳೂರವನಂ ಭಂಗಂಬಡಿಸಿ,

ಅವರವರ ದೇಶಕೋಶಂಗಳಂ ಬಸಂಗೆಯ್ದು, ಬೆರೆತು, ತರುವಾಯೊಳ್ ಕೆಂಗೆ ಹನುಮಂ ತಕ್ಕುದಲ್ತೆಂದು ನುಡಿದು ತಡೆದೊಡಮೊಡಂಬಡದೆ ಕಡುಪಿನೊಳ್ ಮಟ್ಟು ಮೀರಿ ಪಟ್ಟಣಮಂ ಬಳಸಿ ವೇಢೈಸಿ ಕಟ್ಟಳವಿನಿಂದಿಟ್ಟಡಿಯಂ ಪಿಂದೆಗೆಯದೆ ಫಲಂಗೊಟ್ಟು ನಡೆದಿಟ್ಟು ಕೆಡಪಿದ ಪೆಣದೊಟ್ಟಿಲೊಳಗರಂ ಪೂಳ್ದು ಪಟ್ಟಪಗಲೆ ಕಳ್ಗೊಲೆಗೆ ಬಗೆಯಿಟ್ಟು ಕಟ್ಟುರದೊಳಿಟ್ಟಳಿಸಿ ಸುರಿದ ಕೈದುವಳೆಗಳವಳಿಯದೆ ಕೋಂಟೆಯಂ ಮುಟ್ಟೆ ನಿಟ್ಟೇಣಿಗಳನೇರಿ ತಲೆ ಪರಿದು ಪಡಲ್ವಟ್ಟೊಡಂ ನಿಟ್ಟೋಟದಿಂದಟ್ಟಳೆವರೆಗಮಡರ್ದಟ್ಟೆಗಳನಿಟ್ಟಿಗಳಿಂದಿರಿದಿರಿದವನ ತಲೆಗೇರಿದ ಸೊರ್ಕಿನೊಡನಿಳಿಯ ಕೆಡಪಲೊಡಂ; ಅವಂ ಕೆಟ್ಟು ಮುರಿದು ಬಾಯ್ವಿಟ್ಟು ಕೆಂಗೆಯ ಹನುಮನ ಬಸಿರೊಳ್ ತಲೆಯಿಟ್ಟು ನುಡಿದಂ:

ಎಲೆ ನಾಯಕ, ನೀನೆಂದ ನುಡಿ ನಿಜಮಾದುದು. ಆಂ ವಿಜಯಾಪುರಮಂ ಪೊರವಟ್ಟಂದು ಮೊದಲಿಂದುವರೆಗಂ, ಮತ್ತಮೇಂ, ಪುಟ್ಟಿದಂದು ಮೊದಲಿಂದುವರೆಗಂ ಈ ಪರಿಯ ಬೀರನಂ ಕಂಡುದಿಲ್ಲ. ಅಕಟಕಟಾ ಮುನ್ನೀ ತೆರದ ಬಲ್ಲಿದನೆಂದು ಬಗೆಯದೆ ಬಲಮನೆಲ್ಲಮಂ ಬಲಿಯಿತ್ತೆಂ; ಪೆತ್ತ ಗೆಲ್ಲಮಂ ಪೆರಸಾರ್ಚಿದೆಂ; ಪೊತ್ತ ಜಸಮಂ ಪುಯ್ಯೆನಿಸಿದೆಂ; ಪತ್ತಿದೇಳ್ಗೆಯಂ ಬಯಲ್ಗೆಯ್ದೆಂ; ನಿನ್ನ ನುಡಿಯಂ ನೀಳ್ಕರಿಸಿದೆಂ; ಭಿನ್ನತಂತ್ರದೊಳ್ಬೀದಿವರಿದೆಂ; ಮುಂತಣಿರವಿನೊಳ್ ಮೋಸವೋದೆಂ; ಪಿಂತಣೋಜೆಯಂ ಬೀಳ್ವಡಿಸಿದೆನೀ ಕಡಲುಡಿಗೆಯ ಪೊಡವಿಯೆಡೆಯೊಳಿಡಿದ ಕೂರ್ದೊರೆಗಳೊಳಿನ್ನೆವರಂ ಎನ್ನ ಪೆಸರ್ಗೇಳ್ದು ಬಸವಳಿಯದರುಂ ಪಳಯಿಗೆ ಗಂಡಳವುಗಳೆಯದರುಂ ಪೌಜಂ ಕಂಡು ತೇಜಂಗುಂದದವರುಂ ಕೈದುವೆಳಗಿಂಗೆ ಕಣ್ಗೆಡದವರುಮಿಲ್ಲ. ಅಂತಿರ್ಪ ಕೂರ್ಪನೀ ಪಟ್ಟಣದೊಳ್ ಪೊಟ್ಟುಗೆಯ್ದೆಂ. ಎನ್ನ ಮನ್ನಣೆಯ ತುಳಿಲಾಳ್ಗಳೀಲಗ್ಗೆಯೊಳೀರಾರು ಸಾಸಿರ್ವರಳಿದರ್. ಉಳಿದರುವೂರೂಗರಿರುಳೊಳ್ಪೊರವಟ್ಟು ಎಸಗು ವಟ್ಟುಳಿಯಿಂ ಕಣ್ಗೆಟ್ಟು ಕಟ್ಟಳಿದು ಇಂದು ನಾಳಿನೊಳೆನ್ನಂ ಬಿಟ್ಟುಪೋಪರ್; ಅವರೇಗೆಯ್ವರ್; ಕಳ್ವ ವಾರುವಂಗಳ್ಗಮೀಳ್ವ ಕೈದುಗಳ್ಗಂ ಕೊಯ್ವ ತಲೆಗಳ್ಗಂ ಕೊರೆವ ಮೂಗುಗಳ್ಗಂ ಗಣನೆಯಿಲ್ಲ. ಇಟ್ಟೆಡೆಗೆಯ್ದುದರಿಂ ಮೂಗುಬ್ಬಸಮಾದುದು. ಬಿಟ್ಟು ಪೋಪೊಡಂ ಬಟ್ಟೆಯಿಲ್ಲ. ಕೆಟ್ಟ ಕಜ್ಜದೊಳ್ ಕೈಗೊಟ್ಟು ಕಾಪಿಟ್ಟೆಮ್ಮಂ ಕಡೆವಾಯಿಸವೇಳ್ಕುಂ. ಅದರ್ಕೀ ಪಟ್ಟಣದವನ ಕಡೆಗಡಿವರೆಗಮೆಮ್ಮ ನಾಡುಗರ್ ಕಾಡದಂತೆ ಅವನ ರಾಯಸಮಂ ತೆಗೆದಿತ್ತೊಡಾಂ ಪದುಳದೊಳ್ ಪೋಪೆಂ ಎಂದನುವೇಳ್ದುದುಮವನುಮಂತೆಗೆಯ್ದಂ. ಬಳಿಕ್ಕಾ ತುರುಕ ಪಡೆವಳಂ ಕಪ್ಪಿನಿಂದೆಳ್ದ ಕಾಡಾನೆಯಂತೆಯುಂ, ಪುಲಿವಾಯ್ದುಳಿದ ಪುಲ್ಲೆಯಂತೆಯುಂ, ತಡೆಯೊಡೆದ ಪಾವಿನಂತೆಯುಂ, ಅಂಟುಗಳಿಗಳಿದ ಪಕ್ಕಿಗಳಂತೆಯುಂ, ಬಲೆಯಿಂ ತಪ್ಪಿದ ಮೊಲದಂತೆಯುಂ, ಬಾಲಂ ಪರಿದ ಪಿಳ್ಳಿನಂತೆಯುಂ, ಕಟ್ಟುಸಡಿಲ್ದ ಕಳ್ಳನಂತೆಯುಂ, ನಿಂದಲ್ಲಿ ನಿಲದೆ ಪಿಂದಿರುಗಿ ನೋಡದೋಡಿ ತನ್ನ ಬೀಡಂ ಸಾರ್ದಂ. ಅಂದು

ಮೊದಲ್ತುರುಕರೀ ಕಂಠೀರವನೃಪನ ಪೆಸರ್ಗೊಳಲುಮೀದೆಸೆಗೆ ಮೊಗಮಾಗಲು ಮಣ್ಮಿದೆ ಹಮ್ಮುಳಿದು ಹುದುಗಿದರ್.

ಈತನುಮಾ ಯವನಪಡೆಯಂ ಜಯಿಸಿ, ಕನ್ನಡನಾಡೊಳ್ ನೆಗಳ್ತೆವೆತ್ತು, ದೆಸೆಗಳಂ ಗೆಲಲುಜ್ಜುಗಿಸಿ ಮೂಡಲ್ನಡೆದು, ವಿಜಯಾಪುರದ ಸೇನಾನಿಯೆನಿಸಿದ ಖಾನಖಾನನ ಸೇನೆಯನೆಳ್ಬಟ್ಟಿ, ರಾಯಗೋಂಟೆ ರತ್ನಗಿರಿ ರಾಮಗಿರಿ ವೀರಭದ್ರದುರ್ಗ ಕೆಂಗೇರಿ ಪೆನ್ನಗರಂಗಳಂ ಕಟ್ಟಿ, ತೆಂಕಲ್ಮಧುರೆಯ ತಿರುಮಲನಾಯಕನನೀಕಮಂ ಧುರದೊಳ್ನೀಳ್ಕರಿಸಿ, ಕೊಳೆಯ ಸಾಂಬಳಿ ಸತ್ಯಮಂಗಲ ದಣಾಯಕನಕೋಂಟೆಗಳಂ ಕೊಂಡು, ಪಡುವಲ್– ಕೆಳಲೆಯನಾಡ ಪಿರಿಯಪಟ್ಟಣಮಂ ಕಳ್ಗೊಲೆಯೊಳೀಳ್ದು, ಸರ್ವ್ವಸ್ವದೊಡನಾ ಮಲ್ಲರಾಜನಂ ಕೈಸೆರೆವಿಡಿದು, ಬಡಗಲ್– ಮಲ್ಲುಕನ ದಳಮಂ ಮಳ್ಕಳಿಗೊಳಿಸಿ, ತುರುಗೆರೆ ಕಡಬ ಕಲ್ಲೂರ್ಹೆಬ್ಬೂರ್ಮೊದಲಾದ ಪಲವುಂ ಪೊಳಲ್ಗಳಂ ಸೆಳೆದು ಪೆರ್ಮ್ಮೆವೆತ್ತು, ಧರ್ಮ್ಮದೊಳಿಳೆಯಂ ಪಾಲಿಸುತ್ತೆ, ನಿತ್ಯಸುಖಮನೆಳಸಿ, ತತ್ವಮನಾರಯ್ದು, ಪುರುಷೋತ್ತಮನ ಭಕ್ತಿಯೊಳಲ್ಲದೆ ಮುಕ್ತಿಯನುಗೊಳ್ಳದೆಂದು ನಿಶ್ಚಯಿಸಿ, ಅವತರಿಸುತ್ತುಮೆ ಆರ್ತರಕ್ಷೆಯಂ ಧೂರ್ತಶಿಕ್ಷೆಯಂ ಕ್ಷಣವಿಳಂಬಮಂ ಸೈರಿಸದೆಸಗಿದ ನೃಸಿಂಹನ ದಿವ್ಯಮೂರ್ತಿಯಂ ನೆನೆದು ಜಾನಿಸಿ ಕೂರ್ತು ಕೊಂಡಾಡಿ ಅಡಿಗೆರಗಿಯಾಳ್ಗೆಯ್ದು ತಣಿದಾನಂದ ರಸದೊಳ್ನಾಂದಿದೊರ್ಡಂ– ತನ್ನಂತೀಲೋಗರೆಲ್ಲರುಂ ಬರ್ದುಂಕುಗೆಂದು ತಾನಿರ್ಪರಮನೆಯ ಮುಂದೆ ಸುತ್ತಲ್ಬಳಸಿದೇಳ್ತರದ ಕಲ್ಲ ಪಾಗಲುಂ, ಬಿತ್ತರದ ಕೈಸಾಲೆಯುಂ, ಬಾಂಬರೆಗಂ ಬಳೆದೇಳ್ನೆಲೆಯ ಗೋಪುರವುಂ, ಮಂಟಪಗಳುಮೊಳವಳಯದೊಳಿಡಿದ ಪರಿವಾರದೇವತಾಲಯಂಗಳುಂ, ರಂಗುವಡೆದ ನವರಂಗಮುಂ, ಕಳ್ತಲೆವಳಸುಂ ಗಬ್ಬವನೆಯುಮೊಳ್ಪುವಡೆದ ದೇಗುಲಮಂ ಕಟ್ಟಿಸಿಯಲ್ಲಿ ಸನ್ನಿದಮಾದ ಲಕ್ಷ್ಮೀನೃಸಿಂಹಂಗೆ ತನ್ನ ಬೊಕ್ಕಸದೊಳ್ಪೆಸರ್ವೆತ್ತ ಮುತ್ತಿನೆಕ್ಕಸರಂಗಳುಂ ಬಜ್ಜರದ ಮುಗುಡಂಗಳುಂ ಪಚ್ಚೆಯ ತೋಳ್ವಚ್ಚಂಗಳುಂ ಕೆಂಬರಲ ಕಡಗಂಗಳು ಕಾರ್ಮ್ಮಣಿಯುಡೆನೂಲ್ಗಳುಮಂ ಮೊದಲಾದ ಪಲವಣ್ಣದ ಪೊನ್ನರನ್ನದೊಳ್ತೊಡವುಗಳಂ ಮಿಸುನಿಯ ತಟ್ಟೆ ತಳಿಗೆ ಬಟ್ಟಲ್ಗುಂಬಂಗಳ್ಮೊದ ಲಾದುಪಕರಣಂಗಳಂ ಪಲತೆರದ ವಾಹನಂಗಳಂ ಸಮೆಯಿಸಿ ಬರಿಸದ ತಿಂಗಳ ಪಕ್ಕದ ನಿಚ್ಚದ ಜಾತ್ರೆಯುಕ್ಕೆವಂಗಳನೊಡರ್ಚಿ ಮೆರ್ಚಿಸಿ, ಕಟ್ಟೆ ಕೆರೆ ಪರಿ ಕಾಲ್ಗಳಿಂದೊಪ್ಪುವ ನಾಡುಗಳಂ ತದಧೀನಂಗೆಯ್ದಾವಗಂ ತದಾಯತ್ತಚಿತ್ತ ದೊಳ್ಪಲವೂಳಿಗಂಗಳನೆಸಗುತ್ತೆ ಪಲವುಂ ಬರಿಸಮಿರ್ದು ದಣಿದು ಪರವಾಸುದೇವ ನಡಿಯ ಪರಿಚರಿಸಲ್ಕೆಂದು ಪರಮಪದಮಂ ಸಾರ್ದಂ.

ಶ್ರೀಮತ್ಸಕಲಸಾಮಂತರಾಜನ್ಯಚೂಡಾವತಂಸಿತಪದರಾಜೀವನೆನಿಪ ದೇವರಾಜಂಗೆ ನಾಲ್ವರ್ಕುವರರೈರಾವತಕ್ಕೆ ನಾಲ್ಕುಂ ನಿಗ್ಗವಂಗಳಂತೆಯುಂ, ಪೊಂಬಸಿರಂಗೆ ನಾಲ್ಕುಂ ಮೊಗಂಗಳಂತೆಯುಂ, ಪೊಡೆಯಲರಂಗೆ ನಾಲ್ಕುಂ

ತೋಳ್ಗಳಂತೆಯುಂ ಅತಿಶಯಾವಹರೆನಿಸಿ ನೆಗಳ್ದರ್. ಆ ದೇವರಾಜರಸನ ನಾಲ್ವರ್ಕುವರರೊಳಂ ದೊಡದೇವರಾಜಂ ವರ್ಗಚತುಷ್ಟಯದೊಳ್ ಧರ್ಮದಂತೆಯುಂ, ಉಪಾಯಚತುಷ್ಟಯದೊಳ್ಸಾಮದಂತೆಯುಂ, ವೇದಚತುಷ್ಟಯದೊಳ್ ಋಕ್ಕಿನಂತೆಯುಂ, ವ್ಯೂಹಚತುಷ್ಟಯದೊಳ್ವಾಸುದೇವನಂತೆಯುಂ ಮೊದಲಿಗನಾಗಿ ಜಗದೊಳ್ನೆಗಳ್ತೆವೆತ್ತಂ. ಆತನಿರವನಾರಯ್ದು ಅವಂ ಮೆಯ್ವೆತ್ತ ಚಂದ್ರಕುಲದ [ಮೈ*] ಮೆಯೆಂದುಂ, ಗಂಡುವರಿಜುವಡೆದ ಯದುಕುಲದೇಳ್ಗೆಯೆಂದುಂ, ಪೊಸತೊಂದು ವೇಷದೊಳೆಸೆವ ಭೂಲೋಕದ ಪುಣ್ಯಮೆಂದುಂ, ಕೈಕಾಲ್ದಳೆದ ಕನ್ನಡನಾಡ ಕಡುಪೆಂದುಂ, ಪಡಿಯೊಡಲ್ಗಂಡ ಸಜ್ಜನರ ಭಾಗ್ಯೋದಯಮೆಂದುಂ ಬಗೆದು ಬಣ್ಣಿಪರ್. ಮತ್ತಮೀತನ ಮೈಸಿರಿಗಳ್ಕಿಯಲರಂಬನೊಡಲ್ಬರಡನಾದನೆಂದುಂ, ಮೊಗದೊಳ್ಪಿರಿಗೆ ನಾಣ್ಚಿ ಚಂದಿರಂ ಕಂದುದಳೆದನೆಂದುಂ, ತೇಜಕ್ಕೆ ದಿಟಗುಂದಿ ಬಿಸುಗದಿರಂ ಬವಣಿಗೊಂಡಪನೆಂದುಂ ಭಾವಿಸುವರ್. ಈತನುಂ ಧರ್ಮ್ಮದೊಳ್ ಧರ್ಮ್ಮಸುತನಂ, ಸತ್ಯದೊಳ್ ರಾಮಚಂದ್ರನಂ ದೊರೆಗೊಂಡು ತನ್ನಂ ಬಳಿಸಂದಾಳ್ಗೆಯ್ವನುಜರ್ವೆರಸು ಸಂತಸದೊಳ್ತನ್ನ ಬೀರಮಂ ಬಲ್ವಗೆದರರಿಕೆಗಾಳಗದೊಳ್ತನ್ನ ಬಿನ್ನಣದಿಂ ಪೊರ್ದಿದರಂ ಪೊರೆವುದರೊಳ್, ತನ್ನೌದಾರ್ಯಮಂ ಓದಾಳಿ ಪಾರ್ವರೊಳ್, ತನ್ನೆರಕಮಂ ತನ್ನಂ ನಂಬಿದರೊಳ್, ತನ್ನ ದಯೆಯಂ ಆರ್ತರೊಳ್, ತನ್ನೈಸಿರಿಯಂ ಆಳ್ಗಳೊಳ್ಗಿನೊಳ್, ತನ್ನ ಸೊಬಗಂ ಕೈಯ್ವಿಡಿದ ರಾಣಿಯೊಳ್, ತನ್ನ ಕಡುಪಂ ಕಳ್ಳರೊಳ್, ತನ್ನ ಪುರುಡಂ ಪುಸಿವರೊಳ್, ತನ್ನಾಸೆಯಂ ಜಸದೊಳ್, ತನ್ನ ಭಕ್ತಿಯಂ ಪುರುಷೋತ್ತಮನೊಳ್ ಪುದುಗಿಸಿ ಪದುಳದೊಳಗಿರ್ಪಂ. ಮತ್ತಮೊಡನಾಡಿವಗೆಗಳೆನಿಸುವೇಕಾದಶೇಂದ್ರಿಯಂಗಳುಮಂ ಗೆಲ್ದು ಬಸಂ ಗೆಯ್ದು ಬಲ್ಮೆಯಿಂದೊಳವಗೆಗಳಪ್ಪ ಕಾಮಾದಿ ಷಡ್ವರ್ಗಮಂ ನೆರ್ಗಿಯಾಪವಗಂ ಬಿಜ್ಜೆಗಲ್ವುದುಂ ಬಿನ್ನಣಂಬಡೆವುದುಂ ಬಿನಯುವಮಂ ತೋರ್ಪುದುಂ ಚಾಗಮನಾಗಿಪುದುಂ ಜಸಮಂ ಪಸರಿಪುದುಂ ಶಕ್ತಿಯಂ ಬಿತ್ತರಿಪುದುಂ ಶೌರ್ಯಮಂ ಬೀರ್ವರಿಪುದುಂ ಸಾಸಮಂ ಸೂಸುವುದುಂ ಸತ್ಯಮಂ ಸಲಿಪುವುದುಂ. ಜಯುಮಂ ಸಂಪಾದಿಪುದುಂ ಮೊದಲಾದೊಳ್ಗೆಯ್ತದೊಳೆಪೊಳ್ತುಗಳೆವುತ್ತೆ, ಪುಸಿಗಂ ಪೊರಟೆಗಂ ಮಾಯೆಗಂ ಮರವೆಗಂ ಕಳವಿಂಗಂ ಕಪಟಕ್ಕಂ ಓಂಸೆಗಂ ಓಸುಣ್ಗಂ ಬಿರುನುಡಿಗಂ ಬೇಂಟೆಗಂ ಪಗಡೆಗಂ ಪಗಲ್ನಿದ್ದೆಗಂ ಜೂದಿಂಗಂ ಜೋಂಡತನಕ್ಕಂ ಸೊರ್ಕಿಂಗಂ ಸೊರಹಿಂಗಮಿಂಬುಗುಡದೆ, ಜಸದೊಳಂ ತೇಜದೊಳಂ ಸಸಿನೇಸರ್ಗಳೊಡವೆರೆದೊಂದು ಮೆಯ್ದಳೆದರೆಂಬ ಸಂದೆಯುಮನೊದಪಿಸುತ್ತೆ, ಪತ್ತಿದರೊಳಂ ಪಗೆವರೊಳಂ ತರುವಾಯಿಂ ತಣ್ಬುಬಿಸುಪುಗಳಂ ಪಸರಿಸುತ್ತೆ, ತಾಂ ನಿರ್ಮಳನಾಗಿಯುಂ ಪಗೆರಾಣಿಯರ ಮೊಗದೊಳ್ಮಾಲಿನ್ಯಮಂ, ಪರಿಶುದ್ಧನಾಗಿಯುಂ ಪ್ರಜೆಗಳೊಳ್ ರಾಗಮನಾಗಿಸುತ್ತೆ, ಬೀರದ ಮೊಳೆ ಬಿನ್ನಣದ ಬೆಳೆ ದಯೆಯ ಸೊಂಪು ದಾಕ್ಷಿಣ್ಯದ ಪೆಂಪು ನಯದ ಕೂರ್ಪು

ಸನ್ನಿಯಾರ್ಪು ಚದುರಬಲ್ಪು ಜಾಣ್ಮೆಯೊಳ್ಪು ಜಯದಮೋಡಿ ಜಸದಗಾಡಿ ದಾನದ ಪೂಣ್ಕೆ ಧರ್ಮದ ಕಾಣ್ಕೆ ತಿಳಿವಿನ ಮಚ್ಚು ಧೀರತೆಯ ಪೆರ್ಚ್ಚು ಒಸಗೆಯುರ್ಬು ಓಜೆಯ ಕೊರ್ಬು ಸಿರಿಯ ಕೂಟಂ ಸಿಂಗರದಾಟಂ ಒಲವಿನಣ್ಪು ಉತ್ಸವದ ನಣ್ಪೆಂದು ಬಲ್ಲರ್ಬಗೆಯೆ ಬೆಟ್ಟದಂತೆಯುಂ ಪೆರ್ಗಡಲಂತೆಯುಮಿನಿತಿನಿತರ್ಕೆ ಕಂಪಿಸದೆ ಕದಡದೆ ಯಿಂತಿರ್ಪವನ ನಿರಿಗುರುಳಂ ಪೆರೆನೊಸಲಂ ಕುಡುವುರ್ವಂ ಕುಡಿತೆಗಣ್ಣಂ ಮೊನೆವಲ್ಲಂ ಮುಗುಳ್ನಗೆಯಂ ಕೆಂಬಾಯ್ದೆರೆಯಂ ಕಂಬುಗಳಮಂ ತೋರಗಂದಮಂ ಪೇರೆರ್ದೆಯಂ ನಿಡುದೋಳಂ ಬಡನಡುವಂ ಮಿಸುಪ ತೊಡೆಯಂ ಮೆಲ್ಲಡಿಯಂ ಕಂಡು ಮರುಳ್ಗೊಂಡು ಮೇರೆಮೀರಿ ಮೆಯ್ಮರೆದೆಕ್ಕಟಿಯೊಳ್ ಸೊರ್ಕಿಮೇಲಿಕ್ಕುವ ಸರಿಮಿಂಡಿವೆಣ್ಗಳಂ ಸದೆದು ಭಂಗಿಪ ಸತ್ವಸದಾಚಾರಂಗಳಿಂದೆಯುಂ, ನನ್ನಿಯ ನಲ್ಲನಣ್ಮೆನಾಣ್ಮಂ ಪುಸಿವರ ಬೊಜಗಂ ಮುದ್ದುಗರ ಮೊದಲಿಗನಾರ್ಪರ ರಸನಳವಿಗರಾಳ್ಮನುರ್ಕ್ಕಿಳರೋಪನೆಳ್ಚರುವರಿನೆಯನಿರಿತಗಾರರೆರೆಯಂ ಬಲ್ಲಿದರ ಬಲ್ಲಹನೆಂಬಿವು ಮೊದಲಾದ ಪಲವುಂ ಬಿರುದಂ ಕೇಳ್ದು ಕಿಡಿಗೆದರಿ ಕಿನಿಸು ಕೇಣಂಗೊಂಡು ದಂಡೆತ್ತಿ ನಡೆವ ಬಲ್ವಗೆವಡೆಯಂ ಬಂಡುಗೆಯ್ವ ಶೌರ್ಯ ಪರಾಕ್ರಮಂಗಳಿಂದೆಯುಮೊಂದಿ ಜಸಂಬಡೆದೆಸೆವೀತನಂ ಮುಂ ನೋಂತ ಪಲನೋಂಪಿಗಳಿಂ ದಮಯಂತಿ ನಳನಂ, ಸುದಕ್ಷಿಣೆ ದಿಳೀಪನಂ, ಜಾನಕಿ ರಾಮಚಂದ್ರನಂ, ರೋಹಿಣಿ ಚಂದ್ರಮನಂ, ಶಚೀದೇವಿ ದೇವೇಂದ್ರನಂ, ಗಿರಿಜೆ ಶಂಕರನಂ, ಸಿರಿಯರಸಿ ನಾರಾಯಣನಂ ಸಾರ್ದಂತೆ ಸಾರ್ದಮೃತಾಂಬೆಯೆಂಬರಸಿಯೆಡೆವಿಡದೆ ಕಾಂತಿ ಸೂರ್ಯನೊಳ್ಕಳೆ ಚಂದಿರನೊಳ್ ಕಂಪು ಬಾವನ್ನದೊಳ್ಪುದಿವಂತೆ ಪುದುಗಿ ಪೊರೆದೋರದೆ, ಮನ್ವಾದಿ ಸ್ಮೃತಿ ವೇದಾರ್ಥಮಂ, ಜಸವೆಣ್ಜಯವಂತನಂ, ಮತಿ ಬಿಜ್ಜೆವಳನಂ, ಧೃತಿ ದೃಢಸತ್ವನಂ, ಶುದ್ಧಿ ಸುಚರಿತನಂ, ಕ್ಷಮೆ ಜಿತಾತ್ಮನಂ, ದಯೆ ಧಾರ್ಮಿಕನಂ, ನೀತಿ ನೇಮಗಾರನಂ ಬಳಿ ಸಲ್ವಂತೆ ಬಳಿಸಂದಿರ್ಪಳ್. ಇಂತಿರ್ವರುಂ ಪಲವುಂ ಬರಿಸಂ ಪೊಸಪೊಸತೆನಿಸಿ ಪಸರಿಸುವ ನೇಹದಿಂ ಸಂತಸಂಮಿರ್ಪಿನಂ; ಅರಸಿಯೊರ್ವಗಲ್ಚಿಂತೆಯಿಂದೆವೆ ಯಾಟಮಂ ಮರೆದು ಮೌನದೊಳಿಪಿನಂ; ಅವಳ ಕೆಳದಿಯರುಂ ಬಗೆಯರಿದೊಳ್ವಾತಿನಿಂದೊಯ್ಯನೊಡಂ ಬಡಿಪಂತವುರದ ಬರ್ದೆಯರುಂ ಬಳಸಿರೆ, ಎಡಗೈದಳದೊಳ್ ಮೊಗದಾವರೆಯಿಟ್ಟು ನಿಟ್ಟುಸಿರ್ವಿಡುತ್ತೆ, ಎಡೆಯೊಳೆಮೆವೊಯ್ಲಿಂದುದಿರ್ವ ಕಣ್ಬನಿಯಿಂ ದುಗುಲಮಂ ನನೆಯಿಸುತ್ತೆ ಜಾನದೊಳಿರ್ಪಿನಂ; ಅರಸಂ ಪತ್ತೆ ಸಾರ್ದಿದಿರೇಳ್ವುದಂ ಮಾಣಿಸಿ, ತಾನುಮಾ ಮೆಲ್ವಾಸಿನೊಳ್ಕುಳ್ಳಿರ್ದು– ಎಲೆಯರಸಿ, ನೀನುಟ್ಟು ತೊಟ್ಟಣ್ಪುಟ್ಟು ಪೂ ಮುಡಿದಾನಂದಂಬಡೆಯದೆ ಬರಿದೇಕೆ ಪಗಲ್ಕಂಡ ಪೆರೆಯಂತೆ, ಮಂಜು ಮುಸುಕಿದ ತಾವರೆಯಂತೆ, ಪೊಗೆಸುತ್ತಿದ ಪುತ್ತಳಿಯಂತೆ, ಬಿಸಿಲ್ಪೊಡೆದ ನೈದಿಲಂತೆ, ಬಾಡಿ ಬಣ್ಣಂಗುಂದಿ ಬಸವಳಿದು ಜಾನಿಸುತ್ತಿರ್ಪೆ;

ಏಪರಿಯೆಣಿಸಿದೊಡಮೆಂನೊಳಮೆನ್ನಂತವುರದವರೊಳಂ ತಪ್ಪೆಳ್ಳನಿತುಮಿಲ್ಲ; ಅದೆತ್ತಣಿಂ ಬಂದುದೆಂತು ಪೊಳೆತುದೇ ಪರಿಯೊಳ್ಬಳೆದುದೇತೆರದಿಂ ನೆಲೆಗೊಂಡುದಿದೇನುಬ್ಬೆಗಮೋ ಮುಳಿಸೋ ಮರುಕಮೋ ಪೇಳೆಳರ್ವಡೆನ್ನಂ ಮೊಗನೋಡು, ನುಡಿಸು, ಬಣ್ಣಿಸೆಂದು ಪಲರ್ಮೆ ಬೆಸಗೊಳೆಯುಂ, ಪಡಿನುಡಿ ಗುಡಲಣ್ಮದೆ ಕೆಲದೊಳಿರ್ಪ ಕೆಳದಿಯ ಮೊಗಮಂ ನೋಡೆಯವಳ್ಮೆಲ್ಲಾತಿನಿಂದೆ– ಎಲೆ ದೇವ, ದೇವರ್ದಯೆಯ್ವೆಡೆಯೊಳ್ಕೊರತೆಯತ್ತಣಿಂ ಬರ್ಪುದೆತ್ತಾನುಮುಳ್ಳೊಡಂ ದೇವರಡಿಯೊಳರಸಿಯರ್ಗೆ ಮುನಿಸೆಂತು ಸಮಾನಿಪುದಾಯೆಣಿಕೆ ನಿಲ್ಕೆ. ಮೇಣರಸಿಯರ್ಪಲವುಂ ದಿವಸದಿಂ ಶಿಶುವಂ ಬಯಸಿ ಬೇವಸಂಗೊಂಬು ದೆನ್ನಿತಾನುಮುಂಟು. ಇನಿಸುಂ ಪೊಳ್ತೊಂದೆಡೆಯೊಳ್ನಿಲ್ಲದೆ ಕುಳ್ಳಿರದೆ ಮಲಂಗದೆ ದುಗುಲಮಂ ತೊಡವಂ ತಿಲಕವಂ ಮುಡಿವ ಮಾಟಮಂ ವೀಳೆಯಮನೆಮ್ಮ ನಿರ್ಬಂಧದಿಂದೆವೆಸಗುತ್ತುಂ ದೇವರಡಿಯೊಳ್ ಭಯದಿಂದೊಂದು ವೇಳೆಯುಂ ಕಂಡುಗಾಣಿಸದಿರ್ಪಳ್. ಈ ಪೊಳ್ತು ಭಾಗವತಶ್ರವಣಂ ಗೆಯ್ವಲ್ಲಿ–

ಗೊಲ್ಲವಳ್ಳಿಯೊಳೆಳಸಿ ಸುತನದೊಳೆಸೆವ ವಾಸುದೇವಂ ನೆವಮಿಲ್ಲದೆಡೆಯೆಡೆಯೊಳ್ ಮಸಗುವ ಮುದ್ದುನಗೆಯುಂ, ಒರ್ಕೆಯ್ಯೊಳೆಳೆದು ಚೆಂಬಾಯೊಳಿಂಬುಗೊಳಿಸಿದ ಮೆಲ್ಲಡಿಯುಂಗುಟಮುಂ, ಮುತ್ತಿನೆಕ್ಕಸರದೊಳ್ಕಟ್ಟಿ ನೇಲ್ದು ನೀಳ್ಕಿಯುಂ ನೀಳ್ಕದಯ್ಯಲಾಡುವ ಕೆಂಬರಲ ಸೆಂಡನಂಡಲೆವ ಪೆರಗೆಯ್ಯುಂ, ಒಗೆಗರಗಿ ಪರಿತಂದು ನಿಟ್ಟಿಸಿ ಮಣಿದು ಮೊಗದೊಳ್ಮೊಗವಿಟ್ಟು ಮುದ್ದಿಸಿ ಮೆಯ್ಮರೆವ ಗೋಪಿಯ ಮೊಲೆಯುಣಲೆಳಸಿ ನಿಮಿನಿಮಿರ್ದು ನೀಳ್ಕುತೆಳವಳ್ಳಿದೋಳ್ಗಳಂ ನೆಗನೆಗಪಿ ನೀಡುತಡಿಯಿಡುವ ತವಕದೊಳುಲಿವ ಕಿರುಗೆಜ್ಜೆಯಂದುಗೆಗಳುಂ, ನಸುಜೋಲ್ದೆಳಗಿವಿಯಿನಲೆವ ಪಚ್ಚೆಯ ಮಾಂಗಾಯ ತಾಕಿನೊಳ್ಮಸುಳಿಸುವೆರಡುಂ ಮೆಲ್ಗದಂಪುಗಳೊಳಿಟ್ಟ ಕತ್ತುರಿಯ ದಿಟ್ಟಿಬೊಟ್ಟುಂ, ಕಿರುಗುರುಳೊಳ್ಕೋದು ಕಟ್ಟಿದ ಕೆಂಬರಲರಳೆಲೆಯ ಲಂಬಣದ ಮುತ್ತಿನ ಪೆರೆಯಂತೆ ಮೆರೆವ ಪೆರೆಗೆರೆಯ ನಾಮಮುಂ ಮನಂಗೊಳೆ ಪೊಂದೊಟ್ಟಿಲೊಳ್ಮಲಂಗಿದ ಪಾಂಗಂ; ಮತ್ತಮೆಳಸಸಿ ನೊಸಲೊಳ್ಕವಿವ ನಿರಿಗುರುಳುಮರೆದೆರೆದ ಕಡೆವಾಯೊಳ್ಸೂಸುವಿಂಚರಿಯಂ ನನೆದ ನಸುದೋರುವುಸಿರುಂ, ಮುಂ ಜಗಮಂ ಪಡೆವಾಗಳ್ಮೊಗದೊಳ್ ಮೊಗೆದು ಮೊಳೆದೋರಿದ ಪಾವಕನಂ ಪಡಿಗೊಳ್ವ ಶ್ರೀಚೂರ್ಣತಿಲಕಮುಂ, ಕಾರ್ಪಣಿಯೊಗರ್ವಡೆದರ್ದೆಯಾಗಸದ ಸೊಬಗಿಂಗೆ ಸೋಲ್ತಿರ್ಮೆಯ್ದಳೆದುದಿಸಿದ ಪೊಸವೆರೆಯಂ ಪೋಲ್ವ ಪುಲಿಯುಗುರುಂ, ಪೆರಸಾರ್ಚಿದಡಿಯ ಕಿರುಗೆಜ್ಜೆ ಯುಲಿಗೇಳ್ದು ಮಡಮುರಿದು ಪಸರಿಸುವೆಸಳ್ಗಂಣ್ಗಳಗುಂ, ಪಿಡಿಪಿಡಿದೆಳೆಯೆ ಪರಿದುದಿರ್ದರಳೆಲೆಂಯು ಲಂಬಣಸರದ ಮುತ್ತುಗಳ್ ಊರಿದೊ ಗ್ಗೆದಳಪುನೊವರ್ೊಳಕಾಲನೊತ್ತುವಿನಮಲ್ಲಿ ನಿಂದಪಂ ಬೆದಕುವ ಪೊಳೆವೆರಲ್ಗಳುಂ, ತುಂಜಿದ ಪೊಂದಂಜಿಗೆಗಳಂ ತುಡುಕಿ ಕೌಚಿ ಪರಿವ

ತಿಳಿನೀರೊಳ್ತನ್ನ ಪಡಿನೆಳಲಂ ಕಂಡು ಪೊಡೆಯೆ ಸಿಡಿರ್ವ ನೀರ್ಪನಿದಳದ ಸಿರಿಯೊಡಲುಮಾಗಿ, ಅಂಗಳದೊಳ್ತಳರ್ವ ಬಳಿವಿಡಿದು ತನ್ನ ಮನದೊಡನೆ ದಿಟ್ಟಿಯುಂ ಸುಳಿಸುಳಿಸಿ ಸೊಗಂಬಡೆದು ಸೊರ್ಕಿ ಮೇಲಿಕ್ಕಿ ಪಿಡಿದೆತ್ತಿ ತಕ್ಕಯಿಸಿ ಮಗ್ಗುಲಂ ಸಾರ್ಚಿ ಮೊಗನೋಡಿ ಮೊಲೆಯೂಡೆ ಪಾಲ್ಗುಡಿವುತ್ತೆ ಮೊಳೆವಲ್ಮಿಸುಗೆ ಎಡೆಯೆಡೆಯೊಳ್ನಗುವ ಗಾಡಿಯುಂ ಬಳಿಕ್ಕಡಿಗಡಿಗೇಳ್ವ ಬೀಳ್ವಾಯಸದಿಂ ಪೊಡೆಯೊಳಿಡಿದ ಪಲವುಂ ಜಗಮುಂ ಕಂಪಿಸದಂತೆ ಬಿಗಿದು ಕಿಳ್ಪೊಡೆಯೊಳ್ಕಟ್ಟಿದ ಪವಳದ ಮಳ್ನೇವಳದೊಳ್ ನೇಲ್ವ ಪೊಂಗಿರುಗಂಟೆಯುಲಿಯ ದಂತೊರ್ಗೈಯ್ಯೊಳ್ಪಿಡಿದೊಯ್ಯನೆಡೆಗೋಣೆಗೆ ನಡೆತಂದು ಅಲ್ಲಿ ಗೋಪಿ ಕಡೆಗಂದಲೊಳ್ ಬೆಣ್ಣೆಗಳೆಯುದುಳುಪಿ ಯೊಲೆಯೊಳುರ್ಕಿಯುಗುವ ಪಾಲ್ಗಂದಲನಿಳಿಪಿ ಬರ್ಪನಿತರೊಳಾಕಡೆಗಂದಲಂ ಮಂತಿನೊಳ್ಪೊಯ್ದೊಡೆದು ಆ ಬೆಣ್ಣೆಯೊಳ್ ಬೇಳ್ಪನಿತುಮಂ ನುಣ್ಣನೆ ನುಂಗಿ ತಣ್ಣನೆ ತಣಿದುಳಿದುದಂ ಕೊಂಡಂಗಳಕೆ ನಡೆದು ಅಲ್ಲಿ ನಟ್ಟನಡುವೆ ನೆಟ್ಟ ಪೊಂಗಳೆಯೊಳ್ಕಟ್ಟಿರ್ದ ಕಾರ್ಗೋಡಗದ ಸರಪಣಿಯ ಕೀಲಂ ಕಳಲ್ಚಿ ಪೆಡೆತಲೆವಿಡಿದದನೆಳೆದುಯ್ದಾರು ಮರಿಯದಂತೊಂದು ಮೂಲೆವನೆಯೊಳ್ ಮರವೊರಲೇರಿ ಮಂಡಿಸಿ ಬೆಣ್ಣೆದಿನಿಸಿಯೊಡನುಂಡುದನುಗುಳಿಂದು ದಂಡಿಸುವಿನಮದರ್ಕದು ಬೆದರಿ ಪಲ್ಕಿರಿವುದುಮದಂ ಬೆಣ್ಣೆಗೆತ್ತು ಬೆರಲಿಂ ತೆಗೆಯುತ್ತಿರೆ ಮುಂ ಮನೆವಾಳ್ತೆಗೆಯ್ದುಬಂದ ನಂದವಧು ಕಂದಲೊಡೆದುದಂ ಕಂಡದಂ ತನ್ನ ಕಂದನೆಸ[ಕ*]ಂಗೆತ್ತು ಸಂತಸದೆ ನಸುನಗುತ್ತೆಲ್ಲಿಯುಮರಸಿ ಕಾಣದಲ್ಲಿಗೆ ನಡೆತಂದು ನಿಂದಾಮಾಳ್ಕೆಯಂ ಕಂಡಳ್ಕಿ ನಸುಮುನಿಸಿಂದೆ – ಎಲೆ ದುರುದುಂಬಿ, ಸಿಲ್ಕಿದೆಯೈಸೆ ನಿನ್ನುದ್ದುರುಟುತನಕ್ಕೆ ತಕ್ಕ ಬುದ್ಧಿವೇಳ್ವೆನೆಂದದ್ದರಿಪುದುವಾದನಿಗೇಳುತ್ತವಳ ಕೋಲ್ವಿಡಿದ ಕೈಯ್ಯುಂ ಗುಡಿಗೊಂಡ ಪುರ್ಬುಂ ಕೆಂಗಣ್ಣುಂ ಕೂರ್ನೋಟಮುಮಾದ ಕೋಪಾಟೋಪಕ್ಕಂಜಿ ತನ್ನಂ ವಾಂಜಲೆಂದತ್ತಣಿನೆಳ್ದು ಬೀದಿವರಿವುತ್ತೆ ಮನೆದೇಗುಲಮನಂಗಳದೆಳದೊಳಸಿದೋಂಟಮಂ ಕರುದುರುಗಳ ಕೊಟ್ಟಿಗೆಗಳುಮಂ ಪೊಕ್ಕುಬವಣಿಗೊಂಬ ತನ್ನಂ ಬಳಿಸಲ್ವಾಯಸದಿಂ ಬೆಮರ್ದ ಮೊಗಮಂ ಪೆರ್ಚಿದ ಸುಯ್ಸೆಲರುಂ ಸಡಿಲ್ದ ಮುಡಿಯುಂ ಸರಿದ ಮೇಲುದುಮಂ ಬಳ್ಕುವ ನಡುವುಂ ಬಸವಳಿದ ನಡೆಯುಮಾದ ತಾಯ ಬಳಲ್ಕೆಗಂಡೊದವಿದ ಮರುಕದಿಂ ನಾಲ್ಮೊಗಂ ಮಾದೇವಂ ಮೊದಲಾದ ಬಾಂಬಟ್ಟೆಗರ ದಿಟ್ಟಿಗಂ ಪರಮಯೋಗಿಗಳ ಬಗೆಗಂ ಮೆಯ್ಗುಡದ ಬೊಂಮನವಳ ಕೈಬಸವಾಗುತ್ತೆ ಹದುಗಿ ಹಮ್ಮೈಸಿ ನಡನಡುಗಿ ಪನಿಸೂಸುವ ಬಗಸೆಗಣ್ಣಂ ಮುಚ್ಚಿ ಪೊರಗೆಯ್ಯಿಂದೊರಸುತ್ತೆ ನಿಲ್ವುದುಂ. ಆವಳುಮ್ಮಳ್ಕರ್ತು ಕೊಲಲೆತ್ತಿದ ಕೋಲಂ ಕಲಕಿಟ್ಟು ಕಟ್ಟುರದೊಳ್ಟಿಟ್ಟೆತ್ತೆನೆ ನಿಟ್ಟುರಮಂ ನುಡಿದು ಕಟ್ಟಿ ನಿಲಿಸಲ್ಕೆಂದು ತೊಟ್ಟನೊಂದು ಕಡೆದಾವಂ ಪೊಡೆವಳಸಿ ಪಿಡಿವಿನಮೆರಳ್ಗೆರಲಳವುಂ ಕಡಮೆಯಾಗೆ ಬೇಗದೆ ತನ. ತನ್ನಿರ್ನೆರೆಯ ಬೀದಿಯ

ಪಳ್ಳಿಯ ಮನೆಗಳೊಳುಳ್ಳ ದಾವನಿತುಮಂ ತಂದು ಗಂಟಕ್ಕಿದೊಡಮಳ ವಡದಿರೆ ಅವಳಳಲಿ ಬಳಲ್ವಿನಂ, ಮನಂಗರಗಿ ನೆಟ್ಟನೆ ಕಟ್ಟುವಡೆದಿರ್ಪ ಕಟ್ಟೊಳ್ಪುಮಂ ಮತ್ತಂ– ಕೇಳೆಲೆ ಗೋಪಮ್ಮ, ನಿಮ್ಮೂರೊಳಿರ್ದೆಮ್ಮವಂದಿಗರ್ ಮನೇವಾಳ್ತೆಗೆಯ್ವುದರಿದು. ನಿನ್ನ ಮಗನಟ್ಟುಳಿ ಬೆಟ್ಟಿತ್ತು. ಈ ಪೊಳ್ತರೆಯೆಳ್ದು ಎಡೆಗೋಣೆಯೊಳ್ಕಡೆಯುತ್ತಿರ್ಪಿನಂ; ಮನೆವೊಕ್ಕುವಂದು ತೊಟ್ಟಿಲೊಳ್ಪುಟ್ಟಿರ್ದ ಮಗುವಂ [ತುರಿ]ಪುದ ಮಾದನಿಗೇಳ್ದಾ ಕಡುಗಿ ನಡುವನೆಗೆಯ್ತಪ್ಪನಿತರೊಳತ್ತಣಿಂ ಪರಿದಂಗಳಕ್ಕೆ ನಡೆದಲ್ಲಿ ಕಟ್ಟಿದೆಳಗರುವಂ ಬಿಟ್ಟದರವಾಲಮಂ ಪಿಡಿದು ಜಿಡದೆ ಪರಿದಂತೆ ಪರಿದು ನೆಗೆದಂತೆ ನೆಗೆದು ಪತ್ತೆ ಸಾರ್ವಿನಮಾತುರುಮರುಕದಿನೆಳ್ದು ಮೊಗಂ ಮುರಿದು ನೆಟ್ಟಾಲಿಯಿಂ ನಿಟ್ಟಿಸುತ್ತೆ ಪೆರಗಾಲ್ಗಳಿನಿನಿಸುಂ [ಕುನುಂಗಿ] ನಿಂದು ಮೊಲೆಯುಣವಂದ ಕರುವಿನ ಮೆಯ್ಗಂಪಂ ಸವಿದು ತೊರೆಯಿಳುಪಲೊಡಮಾಕರುವುಂ ನೆಗಪಿದ ಬಾಲಮುಂ ನಿಮಿರ್ದ ಪೆರಗಾಲ್ಗಳುಂ ನೆಗೆದ ಮೊಗಮುಂ ನಟ್ಟ ಮುಂಗಾಲ್ಗಳುಮಾಗಿ ಮೊಲೆಗುಡಿವ ಬೆಡಂಗಂ ನಿರವಿಸಿ ತಾನುಮದರಂತೆ ನಾಲ್ಗಾಲೊಳ್ನಿಂದು ಮೊಗನೆಗಪಿ ಮೊಲೆಯುಣ್ಬನಿತರೊಳಾನುಂ ಬಂದು ಕರೆಯಲನುವಪ್ಪುದುಂ, ಬೆದರಿಯತ್ತಣಿಂ ಬೀದಿವರಿದು ಮೆಯ್ಮರಸಿ ಮುಗುಳ್ದುಂ ಮನೆವೊಕ್ಕು ಕಂದಲ ಬೆಣ್ಣೆಯನಿತುಮಂ ತಿಂದು ಪೋದಂ –ಎಂದು ದೂರುವೆಡನೆರೆಮನೆಯ ಮಡದಿಯುಂ; ಮತ್ತಂ– ಎಮ್ಮ ಚತ್ವರದೊಳ್ಕರುವಾಲವಂ ಕಾರ್ಗೋಡಗದ ಗಡ್ಡದೊಳ್ಗಂಟಿಕ್ಕಲೊಡಮವೆರಡುಮೊಂದರ್ಕೊಂದು ಬಿಗುರ್ತು ಪಡುವ ಪಲವುಂ ಚಾಪಲಮಂ ನಿರವಿಸುತ್ತಿರ್ಪಿನಮಾನುಂ ಬಂದು– ಎಲೆಲೆ ಕಳ್ಳಂ ಕೈವಿಟ್ಟನೆಂಬುದುಮೊದವಿ ಮೆಯ್ಮರಸಿ ಮನೆವೊಕ್ಕಲ್ಲಿಯೊಲೆಯೇರಿಸಿದ ಪಾಲ್ಗಂದಲಂ ಕಡೆವೆಡೆಯೊಳಂ ಕಡೆವ ಮೊಸರ್ಗಂದಲನೊಲೆಯೊಳಂ ಪಲ್ಲಟಂಗೊಂಡಿರಿಸಿ ಸಿಸುಗೆರೆಯಲೆಂದಿರಿಸಿದ ಬಿಸುವಾಲ್ವೆಣ್ಣೆಯಂ ಸವಿದಾ ಪೊಂದಟ್ಟೆಯೊಳ್ ಸುಣ್ಣಮನಾ ತಿಳಿಯುಮಂ ತುಂಬಿ ಮೋಸಂಬಡಿಸಿದನೆಂದುಲಿವ ಬಲನೆರೆವನೆಯ ಭಾವೆಯುಂ; ಮತ್ತಂ– ಪೊಳ್ತರೆಯಾಂ ಕರೆಯುತ್ತಿರ್ಪಿನಂ ತನ್ನಂ ಬಳಿಸಲ್ವ ಪಲವುಂ ಕುವರರ್ವೆರಸೊಳಪೊಕ್ಕು ಬಳಸಿಯುಂ ನೋಡಿ ಕಾಣದೆ ಕೋಣೆಯೊಳ್ ಕಟ್ಟಿ ನೇಲ್ವ ನೆಲವಿನೊಳ್ ಮೊಸರ್ಗಂದಲಂ ಕಂಡು ಕಡೆಗೋಲಂ ನೆಗಪಿ ಕುಟುಕುವಿನಂ ನೀಳ್ಕದಿರೆ ಮಣೆಯಂ ಮರವೊರಲಂ ಮಕ್ಕಳಂ ಕುಳ್ಳಿರಿಸಿ ಪೆಗಲೇರಿ ನಿಂದು ಕಂದಲಂ ಕುಟುಕೆ, ಸುರಿವ ಮೊಸರ ಸರಿಯಂ ಸವಿಯುತ್ತಿರ್ಪಿನಮೆನ್ನೀ ಪೆಣ್ಮಗಳ್ವೋಗಿ ಕಂಡು ಕಳ್ಳಂ ಕಳ್ಳನೆಂಬುದುವೊದಗಿ ಬಾಯೊಳಿಡಿದ ಮೊಸರನಿವಳ ಮೊಗದೊಳ್ಮುಕ್ಕುಳಿಸೆ ಕಣ್ಮುಚ್ಚುವುದುಂ ಗಳ್ಕನೆ ತಕ್ಕೆಗೆಯ್ದು ಮೊಗದೊಳ್ ಮೊಗವಿಟ್ಟು ಮುದ್ದಿಪ ನೆವದಿಂ ಗಾಸಿಗೆಯ್ದನಿದೆ ನೋಡೆಂದು ಮಗಳ ಬಾಯ್ದೆರೆಯಂ ತೋರಿ ದೂರುವ ಮುಮ್ಮನೆಯ ಗರತಿಯುಂ; ಮತ್ತಂ –ಎಮ್ಮಂಗಳದೊಳ್ ಪಂಜರದ ಕೀಲಂ ಕಳಲ್ಚಿ ಗಿಳಿಯುಂ ತರುಬಿದನೆಂದುಂ, ಆಡುವೆಳೆಮಕ್ಕಳ ಕಣ್ಗೆ

ಮೆಣಸಿಕ್ಕಿದನೆಂದುಂ, ಮಲಂಗಿದ ಪೆಣ್ಗಳ ಮೊಗಕ್ಕೆ ಮಸಿಗರೆಯುಂ ಬರೆದನೆಂದುಂ, ಮುದುಪಂ ಬಾಯ್ದೆರೆಯದಂತೆ ಬಿಗಿದು ಗಡ್ಡಮೀಸೆಗಳಂ ಗಂಟಿಕ್ಕಿದನೆಂದುಂ, ಸಿಸುಗಳಾಡುವ ಪೊಡೆಚೆಂಡಂ ಕೊಂಡೊಯ್ದನೆಂದುಂ, ಪೊಂಬೊಗರಿಯನಪಹರಿಸದನೆಂದುಂ, ಕವಡೆಗಳು ಕವರ್ದನೆಂದುಂ ಇವು ಮುಂತಾದ ಪಲವುಂ ಪೊಲ್ಲದ ನಡತೆಗಳಂ ಸೊಲ್ಲಿಪ ಬೀದಿವನೆಗಳ ಪೆಂಡಿರ್ಗಳುಂ – ತಮ್ಮೊಳ್ತಾವೆ ನಾಣ್ಚಿ ತಲೆವಾಗಿ ಬೇಗದೆ ಮೋನದೆ ಪೋಪಂತೆ ತಾಯ ಮಗ್ಗುಲಿನೆಳ್ದು ಸಿರಿಮೊಗಂದೋರುವ ಮುದ್ದುವಗೆಯುಮಂ; ಮತ್ತಂ ನೆತ್ತಿಯೊಳ್ ಸಿರಿಮೆಯ್ವೊಗರ್ ಮೇ ಗಣ್ಗೆ ನೆಗದೊಳ್ಗುಗೊಂಡಂತೆ ಮೆರೆವ ಚೆಂಡಿಕೆಯುಂ, ಅಲ್ಲಿ ಮೊತ್ತಂಗೊಂಡ ಕಳ್ತಲೆಯತ್ತಲಿತ್ತಲುಂ ಬಿತ್ತರಿಸಿದಂತೆ ಸುತ್ತಮುತ್ತಿದೆಳನೇಸರ್ಗದಿರಂ ನೆರಂಗೊಂಡು ಚೆಂಡಿಕೆಯೊಳ್ಕಟ್ಟಿರ್ಪ ಪೊಂಗುಂಡುಸರಮಂ, ಜಗಮನೊಗೆಯಿಸುವಾಗಳ್ ಆವಗ ಮೊಗೆಯಿಸಿದಭ್ಯಾಸದಿಂದೀಗಳುಂ ಬಗೆಯೊಳಂ ಕಣ್ಣೊಳಂ ಪೊಣ್ಮಿ ನಿಂದೆಳಸ ಸಿನೇಸರ್ಗ್ಗಳ್ ಸಿರಿಗುರುಳ್ಗಳ್ತಲೆಯೊಳ್ ಕೇಣದಿಂದಿದಿರೇರಿದಂತಿರ್ಪ ಪೆರೆಗೆರೆ ನಾಮ ಕೆಂಬರಲರಳೆಲೆಗಳುಂ, ನಿಡುಗಣ್ಬಾಳೆಮೀನ್ಗಳುಗುಳ್ದುವೆಂಬಂತೆಸೆವ ಮುತ್ತಿನಕಿವಿ ವಚ್ಚಮುಂ, ತ್ರಿಗುಣಮಯಮಾದ ಸೃಷ್ಟಿಗೆಯ್ಯಲೆಂದಿತ್ತಿ ಕಟ್ಟಿದ ಬಿತ್ತುಗಳ ಮೊತ್ತದಂತೆಸೆವ ಮುತ್ತಿನ ಕೆಂಬರಲ ಕಾರ್ವಣಿಯ ಕಂಠಸರಂಗಳುಂ, ಬಾನೊಳಂ ಬಾಂಗುರುಳನ ತಲೆಯೊಳಂ ನೆಲಸಲ್ಕೆಂದಿರ್ಮ್ಮೈದಳೆದು ಮನದೊಳ್ಪೊಣ್ಮಿದೆಳವೆರೆ ಪೊರಗಣ್ಗೆ ಪಡಿನೆಳಲ್ಗೊಂಡಂತೆಸೆವ ಪುಲಿಯುಗುರ್ವಚ್ಚಮುಂ, ಕಲಿಯುಗದೊಳ್ಬಳೆವ ಸಿರಿಮೆಯ್ಯ ಕಾರ್ವೊಗರ್ಪೊರಮಡಿಸಿದೊಡಂ ಬಿಡದೆ ತೊಡರ್ವಪಿಂತಣ ದ್ವಾಪರದ ಪಳದಿವಣ್ಣದಂತಿರ್ಪ ಪೊಂದುಗುಲಮುಂ, ನಡುವಳಸಿ ಸುತ್ತಿಯದರೊಳ್ಸಿಲ್ಕಿದ ಪೊಂಗೊಳಲುಂ, ಏಳುಂ ಜಗಮನೊಳಕೊಂಡೊಡಂ ತಣಿಯದ ಬಸಿರಂ ತುಂಬಲ್ಕೆಂದು ಕಿರುಗಲ್ಲಿಯೊಳಿಟ್ಟು ಕಕ್ಷದೊಳ್ ನೇಲ್ವ ಕಟ್ಟೋಗರಮುಂ, ಕೈಯೊಳ್ಪಿಡಿದ ಕಿರುಗೋಲುಮಾಗಿ ತನ್ನಂತೆಸೆವ ಸಾಸಿರ್ಗುವರರ್ವೆರಸು ಕರುಗಾಯಲ್ಕೆಂದು ಕಾನನಮಂ ಪೊಕ್ಕಲ್ಲಿ ಕರುಗಳ ಮಂದೆಯೆಲ್ಲಮನೊಂದುವೆರಸಿ ಮೇಯಲ್ಕೆ ನಿಲ್ಲಿಸಿ, ತಾಮುಂ ಜಗುನೆಯ ತಡಿಯೊಳ್ ಜಾನಿಸುವಳ್ಳಿಗರೊಡನೆ ಕುಳ್ಳಿರ್ದರೆಗಣ್ಮುಚ್ಚಿ ಜಾನಿಸುತುಂ, ಮೊರೆವುತ್ತೆ ಬವಣಿಗೊಂಬ ತುಂಬಿಗಳೊಡನೆ ಸುತ್ತಿ ಮೊರೆವುತ್ತುಂ ಕುಕಿಲ್ವ ಕೋಗಿಲೆಗಳಂ ಬಳಿ ಸಂದು ಕೂಗುತ್ತುಂ, ಕಾರ್ಮುಗಿಲ ಕರುವಿನಂತೆ ಮೆರೆವ ತನ್ನ ಸಿರಿಮೆಯ್ಯಂ ಕಂಡು ಸೊರ್ಕೇರಿ ಕುಣಿಯುವ ಸೋಗೆಯೊಡನೆ ಕುಣಿಯುತ್ತುಂ, ಆಗಸದೊಳ್ ಪಾರುವ ಪಕ್ಕಿಗಳ ನೆಳಲಂ ತರುಬಿ ಪರಿವುತ್ತುಂ, ಏಡಿಸುವ ಕೋಡಗಂಗಳನೇಡಿಸುತ್ತುಂ, ಅವರ ಕೊನೆವಾಲಂಗಳಂ ಪಿಡಿದು ಬಿಡದೆ ಕೊಂಬಿನತ್ತಣಿಂ ಕೊಂಬಿಂಗಂ ಮರದತ್ತಣಿಂ ಮರಕ್ಕಂ ನೆಗೆಯುತ್ತುಂ, ನೀರ್ತಡಿಯೊಳ್ ಕುಪ್ಪಳಿಸುವ ಕಪ್ಪೆಗಳೊಡನೆ ಕುಪ್ಪಳಿಸುತ್ತುಂ, ಪಡಿನೆಳಲಂ

ಪ್ರೊಡೆಯುತ್ತುಂ, ಪಡಿನುಡಿಯಂ ಬಯ್ಯುತ್ತುಂ, ಪಿರಿದುಂ ಪೊಳ್ತುಗಳೆದುಣಲೆಳಸಿ ಕಿರುವೊನಲ್ವಳಸಿದ ಪುಳಿನವನವಂ ಸಾರ್ದು ಅಲ್ಲಿ ಓರೊರ್ವ್ವರ ಕಲ್ಲಿಗಳನೋರೊರ್ವರರ್ಕಳುತ್ತುಂ ಒಲ್ಮೆಯೊಳಿತ್ತುಂ ಮೇಗಣ್ಗಿಡುತ್ತುಮಾನುತ್ತುಂ ತಣಿದು, ಪದುಳದೊಳ್ಕಟ್ಟೋಗರಂಗಳಂ ಬಿಟ್ಟು ತಾವರೆಯ ಕರ್ಣಿಕೆಯಂ ಬಳಸಿದೆಸಳ್ಗಳಂತೆ ನಟ್ಟನಡುವಿರ್ಪ ತನ್ನಂ ಬಳಸಿ ಮಂಡಿಸಿದ ಕೆಳೆಯರನಿಬರ್ಗಂ ತನ್ನ ಸಿರಿಯೋಗರದ ಸವಿಯಂ ತೋರಿ, ತಾನುಮವರೋಗರಂಗಳಂ, ಸವಿಯುತ್ತುಂ ನುಡಿಸುತ್ತುಂ ನಗಿಸುತ್ತುಂ ಪಸಿವಂ ಕಳೆದು, ಇಳಿವೊಳ್ತಿನೊಳ್ ಮರಂಗಳ ತಳಿರ್ನನೆಪುಲರ್ಮಿಡಿಕಾಪುಣ್ಗಳಿಂದೆಯುಂ ಮುಂ ತಾಯೊಡರಿಸಿದ ಪಲವುಂ ತೊಡೆವುಗಳಂ ಮರಸಿ ಮನಂಗೊಳಿಸಿದ ಸಿಂಗರಗಳಂ ತಳೆದು, ಬೆಟ್ಟಗಳ ತಪ್ಪಲೊಳಿರ್ಪ ಅರಿದಳಕಾವಿಗಲ್ಗಳಿಂದಣ್ಪಿಟ್ಟು, ತನ್ನಂತೆ ತನ್ನೊಡವರ್ಪ ಪ್ರೋಲವುಮೆಳಗೋವಳರುಂ ಮುಂದೆ ನಡೆವ ಕರುವಂದೆಯುಂ ಬಳಸಿ ಕೈಪರೆಗುಟ್ಟುತ್ತೆ ಕುಣಿವೆಳಗುವರರುಮೊಡಂಬರೆ ಪುರವೀಧಿ ತುಂಬಿ ಬರ್ಪ ಬೆಡಂಗುಮಂ ಕೇಳ್ದು ತಾಮುಮಾ ತೆರದ ಕುವರರಂ ಪಡೆಯಲ್ಕೆ ನೋಂಪಿಗೆಯ್ವ ಪಂಪಂಚಿಂತ್ತಿರ್ಪರ್- ಎಂದು ನುಡಿವ ಕೆಳದಿಯ ಮೊಗದಾವರೆಯೊಳ್ಕಡೆಗುಣ್ಬುಂಜಿಗಳಂ ಸುಳಿಸಿ ಅರೆವೆರೆನೊಸಲೊಳ್ ಮಿರುಪ ಕರೆಗೆರೆಯೆನೆ ನಿರಿಗೊಳ್ವ ಪುರ್ಬುಗಳಿಂ ಜರ್ಬುವೆರಸಿಯೆನಸು ನಾಣ್ಬೆರಸಿದ ಮುನಿಸಿನೆಸಕಮನೆರ್ದೆಗೊಳಿಸಿ ಅಂತರಂಗದೊಳ್ಪೊಂಗುವ ಸಂತಸಮಂ ಸಂತಪಿಸಿ ಸಂತಾನಚಿಂತಾಸಂತಾಪಮನಭಿನಯಿಸುತ್ತೆ ಕಿರಿದುಂ ಪೊಳ್ತು ಮೋನದೊಳಿರ್ದ್ದು ನಿಡುಸುಯ್ದು ನುಡಿದಂ:

ಅರಸೀ, ಕೇಳೀ ಜಗದೊಳೆಂತಪ್ಪರ್ಗಂ ತನಯರ್ಗಳಂ ಪಡೆವ ಚಿಂತೆ ದುರಂತಮಾಗಿರ್ಪುದದರೊಳಂ ಸಿರಿಯುಮರಸುತನಮುಮುಳ್ಳೊಡೆ ಪೇಳ್ವುದೇಂ; ಅಂತಾದೊಡಮೀ ಯದುಕುಲಲಲಾಮರೆನಿಪ ಮಹೀಶೂರಪುರದರಸುಗಳ ಲೇಸಂ ಬಳೆಯಿಸಲೆಳಸಿ ಸಿರಿಯರಸಿವೆರಸಿ ಯದುಶಿಖರಿಶಿಖರದೊಳ್ನೆಲಸಿಯಖಿಲ ಜಗತ್ಕಾರಣನಪ್ಪ ನಾರಾಯಣಂ ಪೊಣೆಯಾಗಿರ್ಪನೀ ಚಿಂತೆಯಂ ತವಿಪುದು - ಎಂಬಿವು ಮೊದಲಾದ ಪಲವುಂ ಹಿತೋಪದೇಶಂಗಳಿಂದರಸಿಯ ಕಡುದುಗುಡಮಂ ಕಳೆದು ನಡೆದರಮನೆಯ ದೇಗುಲಮಂ ಸಾರ್ದಲ್ಲಿ ಮುಂ ತಮ್ಮೀಳ್ತರಸುಗಳೊಡರ್ಚುವರ್ಚ್ಚನೆಗಳಿಂ ಪೆರ್ಚುಗೆವಡೆದ ಗೃಹಾರ್ಚ್ಚಾಗೋಪಾಲನ ಶ್ರೀಪಾದಪದ್ಮಂಗಳ್ಗೆ ಸಾಷ್ಟಾಂಗವೆರಗಿ ಭಕ್ತಿಭರದೊಳ್ ಸ್ತುತಿಗೆಯ್ಯುತ್ತಿರ್ಪನಂ:

ಅನ್ನೆಗಮಾಳಪಿಯ ಸಿಂಗರಾರ್ಯರ್ ಇತ್ತ ಬ್ರಾಹ್ಮೀಮುಹೂರ್ತದೊಳುಪಪವಿಸಿ, ಸ್ನಾನಾರ್ಥಂ ಮೊದಲೆನೆ ಸಿರಿಯರಸಂಬರೆಗವಾದ ಪರಮಾಚಾರ್ಯರ್ ಚಾಸಿ, ಸ್ನಾನಾದಿ ನಿತ್ಯಕರ್ಮಾನುಷ್ಠಾನ ತಿರುವಾರಾಧನಂಗಳಂ

ನೆರವಣಿಗೆಗೊಳಿಸಿ, ಶಿಷ್ಯರ್ಗೆ ಶ್ರೀಭಾಷ್ಯ ಶ್ರುತಪ್ರಕಾಶಿಕೆಗಳಂ ಪ್ರಕಾಶಮಾಗಿ ತಿಳಿವಂತು ಸೈತುಪದೇಶಿಸಿ, ಶಾಂತಿಪಾಠಾನಂತರದೊಳ್ ರಹಸ್ಯಾರ್ಥಂಗಳಂ ಬಿತ್ತರಿಸಿ, ಆ ಬಳಿಕ್ಕೆ ನಿತ್ಯನಿಯತಮಾದ ಗೀತಾರ್ಥಮಂ ನಾಮತೀರ್ಥಸಮಯದೊಳರ ಸಂಗರುಹಲೆಳಸಿ, ಅರಮನೆಗೆ ತಕ್ಕ ಪಸದನಂಗೊಂಡು, ಶಿಷ್ಯಸಂಘಂ ಬಳಿವರೆ ಸಿರಿವಾಳಿಗೆಯಂ ಪೊರಮಟ್ಟು, ಪೊನ್ನಂದಳಮನೇರಿ, ಅರಮನೆಯ ಬಾಗಿಲಂ ಸಾರುವಿನಂ – ಅಲ್ಲಿ ಸಂದಣಿಸಿ ನಿಂದಿರ್ಪ ಮಂದಿ ಕುದುರೆ ಪೇರಾನೆ ತೇರುಗಳ ಭಾರಣೆಗಳಂ ತೇರೈಸಿ ಪಲನಾಡುಂಗಳಿಂ ಪಲತೆರದ ಕಪ್ಪಂಗಳಂ ಕೊಂಡು ಕಾಣ್ಕೆಗೆ ವಂದಿರ್ಪ ನೆಲದೆರೆಯರ ನೆರವಿ ಇರ್ತರದೊಳಮಿರ್ಕವಿಸಿ ಸಾಲ್ಗೊಂಡು ತಮ್ಮ ತಮ್ಮ ವಾಹನಂಗಳಿಂದಿಳಿತಂದು ಪರಿವಿಡಿಯಿಂದೆರಗಿ ಪರಕೆಗಳಂ ಸಿರದೊಳಾಂತು ಹರಿಸಂದಳೆಯೆ, ಕರುವಾಡದರಮನೆವಾಗಿಲಂ ಪೊಕ್ಕು ಮಿಕ್ಕು ಬರ್ಪಾಗಳ್ – ಇರ್ಕೆಲದೊಳಂ ಕಕ್ಕಸದ ಸೊಕ್ಕಿನುರ್ಕ್ಕಾಳ್ಗಳೆಕ್ಕತಳದಿಂ ಬಂದು ಮೆಯ್ಯಿಕ್ಕಲವರನಳ್ಕರಿಂ ತಕ್ಕವೋಲಾದರಿಸುತ್ತುಂ ಸಾರಿ ಬರೆ; ಹಜಾರದ ತೊಟ್ಟಿಯೊಳಿಟ್ಟಣಿಸಿ ನಿಂದ ಭಟ್ಟನಟ್ಟವಿಗರುಂ, ಕಟ್ಟಂದದಿಂ ಬಿಟ್ಟ ಕಣ್ಣ ಬಿಡಪೆಂಡಿರನಂಡಲೆವ ಸಿಂಗರದ ಬೆಲೆವೆಣ್ಗಳವಂ ಗಡಮುಂ, ಮುಂಗುಡಿಯೊಳ್ ಸಿಂಗಂಗಳಂತಂಗವಿಸಿಯೊತ್ತರದಿಂ ತೆತ್ತೈಸಿ ನಿಂದ ಬಾಹತ್ತ ವಿನಿಯೋಗಿಗಳುಂ, ದಿಗ್ದೇಶದ ನಿಯೋಗಿಗಳುಂ, ಬೇಗದಿಂ ಬಂದು ಕೈಗಳಂ ಮುಗಿವುತ್ತುಮಿರಲಿರ್ತೆರದೊಳಂ ಕೂರ್ತು ಮನ್ನಿಸುತ್ತೆಯ್ದಿ ಮತ್ತಮಾವೊತ್ತಿನ ಚಿತ್ತರದ ಬಾಗಿಲೋವರಿಯೊಳಾವಗಂ ತೀವಿ ಕಾವಲಿರ್ಪ ಬಲ್ಲಿದರಪ್ಪ ಗೊಲ್ಲರೆಲ್ಲರುಮಲ್ಲಿ ನಿಂದು ಪೊಡಮಡುತ್ತುಮಿರೆ ಬಿಡಯಂ ಬೆರಸು ಕಡುದಯದಿಂ ನಿಟ್ಟಿಸುತ್ತೆ ಮುಂದುವರಿದಂದಳಮನಿಳದು ಮುಂದಣ ಮೊಗಸಾಲೆಯ ತೊಟ್ಟಿಯಂಗಳದ ಮುಂಗುಡಿಯ ಬಾಗಿಲ ಪಡಿಯರರ್ಪಿಡಿದ ಪೊಂದಡಿಗಳಿಂ ನೆಲಗಟ್ಟಿನ ಪಲಗೆಯನಪ್ಪಳಿಸಿದ ಸೊಪ್ಪುಳಂ ಕೇಳುತ್ತೆ ತತ್ತರದಿಂ ತಮ್ಮ ತಮ್ಮ ತಾಣಂಗಳಿಂದಿಳಿತಂದು ಹಂತಿಗೊಂಡು ತಿಂತಿಣಿಸಿ ತುಳಿಲ್ಗೆಯ್ವ ಸಾಮಂತ ಮಂತು ಮನ್ನೆಯ ಮಂಡಳಿಕರಂ ಭಂಡಾರಿಗರಂ ಸಜ್ಜೆವಳರಂ ಬಿಜ್ಜೆವಳರಂ ಅಡಪವಳರಂ ಪಡೆವಳರಂ ಘೋಳಾಯ್ತರಂ ಝಳಂಪಾಯ್ತರಂ ಪಸಾಯ್ತರಂ ಪ್ರೇಮದಿಂದವರವರಂತರವರಿದು ಮಧುರೋಕ್ತಿಗಳಿಂ ಸಂತಸವಡಿಸುತ್ತಲ್ಲಿಂ ಮುಂದೆಸೆವ ಕರುವಾಡದೊಳವಾಗಿಲೊಳಗಣೋವರಿಯೊಳಿರ್ಪ ಮಂತ್ರಿ ಪ್ರಧಾನಿಗಳುಂ ರಾಯಸದಕ್ಷರಚಣರು ಮಣಿಯರದಿಂ ಮಣಿಯಲವರುಗಳ ಮನಮಂ ನಲ್ವಾತುಗಳಿಂ ತಣಿಯಿಸುತ್ತಂತವುರದ ಬಾಗಿಲಂ ಸಾರ್ದಲ್ಲಿರ್ಪ ವರ್ಷವರಾದಿಗಳ್ಗಾಶೀರ್ವಾದ ಪ್ರಕರ್ಷದಿಂ ಹರ್ಷಮನೆಸಗಿ, ಅಲ್ಲಿಂ ಮುಂದಿರ್ಪ ನಾಮತೀರ್ಥದ ಚೌಕಿಗೆಯ ಮುಂದಣ ಮೊಗಸಾಲೆಯೊಳೋಲಗಿಸುವ ಶಂಖಕಾಹಳೀವೇಣುವೀಣಾ ಮೃದಂಗತಾಳಢಕ್ಕಾದಿವಾದಕರುಂ ಸಂಗೀತನಿಪುಣರುಂ ಪ್ರಣಮಿಪುದಂ ನಿಟ್ಟಿಸಿ ಪದುಳಿಸುತ್ತಾ ತೊಟ್ಟಿಯೊಳಪೊಗುವಿನಂ;

ತತ್ಕಾಲೋಚಿತರಾಗಲ್ಲಿರ್ಪ ಸಾಮಾಜಿಕರೀಯಳಹಿಯಸಿಂಗರಾರ್ಯರಂ ನಿರವಿಸಿ, ಇವನಿಂದ್ರಂಗೆತ್ತು ಪರಿತರ್ಪ ಬೃಹಸ್ಪತಿಯೋ, ದಶರಥಂಗೆತ್ತು ಪತ್ತೆಸಾರ್ವ ವಸಿಷ್ಠನೋ, ಜನಕಂಗೆತ್ತೇಳ್ತರ್ಪ ಯಾಜ್ಞವಲ್ಕ್ಯನೋ, ಯುಧಿಷ್ಠಿರಂಗೆತ್ತು ಬಳಿಸಲ್ವ ಧೌಮ್ಯನೋ, ಜನಮೇಜಯಂಗೆತ್ತು ಬಂದ ವೈಶಂಪಾಯನನೋ ಎಂದೆಣಿಸುತ್ತಿರೆ ಪೌರಾಣಿಕರ್–

ಮತ್ತಂ, ಮುಂ ತಾನನುಗೊಳಿಸಿದ ವೇದಶಾಸ್ತ್ರಂಗಳ್ ಕಲಿದೋಷದಿಂ ವ್ಯಾಕುಲಮಾಗೆ ಮುಗುಳ್ದವೆಲ್ಲಮಂ ಮುನ್ನಂತನುಗೊಳಿಸುವ ವ್ಯಾಸನೋ, ಮುಗುಳ್ದೊರ್ಮೆ ಪರಾವರತತ್ತ್ವಮಂ ತಿಳಿಪಲಿಳಿತಂದ ಪರಾಶರನೋ, ಪೆರತೊರ್ಮೆ ಭಗವದ್ಭಕ್ತಿಯಂ ಚಿತ್ತರಿಸಲುದಿಸಿದ ಶುಕಮುನಿಯೋ, ಇನ್ನುಮೊರ್ಮೆ ಹರಿಹರಬ್ರಹ್ಮರಿರವನಾರೈದು ಹರಿಯೇ ಪರಬ್ರಹ್ಮಮೆಂಬುದಂ ನೆಲೆಗೊಳಿಸಲೊಗೆದ ಭೃಗುಮುನಿಯೋ ಎಂದು ತತ್ತ್ವಜ್ಞರ್ ಬಗೆಯುತ್ತಿರೆ;

ಮತ್ತಂ, ಬೇರೊರ್ಮೆಯಾರುಂ ದರ್ಶನಂಗಳನಾರೈದು ವೈಷ್ಣವಮೇ ಸಾರಮೆಂದೊರೆವ ಭಕ್ತಿಸಾರನೋ, ತಾಂ ತಾಮೆಳಸಿದ ದೇವರಂ ಪರತತ್ತ್ವಮೆಂದು ವಾದಿಸುವೋದಾಳಿಪಾರ್ವರ ಗರ್ವಮಂ ಕತ್ತರಿಪ ವಿಷ್ಣುಚಿತ್ತನೋ, ಮುಂ ತಾಂ ಶ್ರೀರಂಗ ವೇಂಕಟಾದ್ರಿ ಪ್ರಮುಖದಿವ್ಯದೇಶಾಶ್ರಯನಪ್ಪ ಶ್ರಿಯಃಪತಿಯ ದಿವ್ಯಮಂಗಲಗುಣಂಗಳಂ ಕಿರಿದುಂ ಬರಿಸಮನುಭವಿಸಿದುದರಿಂ ತಣಿಯದೆ ಪೊಸಮೆಯ್ವೆಳೆದಿಳಿದ ಶಠಗೋಪನೋ, ಮುಂ ತನ್ನಿಂ ಬನ್ನಂಬಡೆದ ವಾದಿಗಳೀಗಳ್ ಮರುವುಟ್ಟನೊಳಂ ತಿಳಿವಳಿದು ಕೆಲರ್ವೇದಮಪ್ರಮಾಣಮೆಂದುಂ ಕೆಲರ್ವೇದಪ್ರಾಮಾಣ್ಯಮನಂಗೀಕರಿಸಿಯುಂ ಅರ್ಥದೊಳ್ ಭ್ರಮಿಸಿ ಬೆಳಕಿಂಗೆತ್ತಿದ ಸೊಡರೊಳ್ ಸಿಡಿದು ಬೀಳ್ವ ಪತಂಗದಂತೆ ರೂಪಳಿದು ಪೋಗುತ್ತಿರೆಯವರ ಮರುಳಂ ಕಳೆದು ಶ್ರೀಮನ್ನಾರಾಯಣನೇ ಪರತತ್ತ್ವಮೆಂದುಮವನ ಭಕ್ತಿಯೇ ಮುಕ್ತ್ಯುಪಾಯಮೆಂದುಂ ಅವನಿಂ ಪುಟ್ಟಿದ ಜಗಮನಿತುಂ ಸತ್ಯಮೆಂದುಂ ಆವಂಗಾಳ್ಗಳೆನಿಸಿದ ಜೀವಾತ್ಮರವನ ದಿವ್ಯಾಜ್ಞಾರೂಪಮಾದ ವರ್ಣಾಶ್ರಮಾ ಚಾರಂಗಳನನುಸರಿಸಲೇಳ್ವುದೆಂದುಂ –ಇವು ಮುಂತಾದ ಹಿತೋಪದೇಶಂಗಳಿಂ ಜಗಮನಿತುಮುಜ್ಜೀವಿಸಲ್ ಜನಿಸಿದ ರಾಮಾನುಜನೋ, ಎಂದು ಪರಮಸಾತ್ವಿಕರ್ ಭಾವಿಸುತ್ತಿರೆ;

ಉದಯಗಿರಿಶಿಖರದೊಳುದಿಸುವ ರವಿಬಿಂಬದಂತೆ ಸಿರಿಮುಡಿಯೊಳ್ ಧರಿಸಿದ ರಕ್ತಪಟ್ಟೋಷ್ಣೀಶಮುಂ, ಸಿರಿಮೊಗದಾವರೆಯೊಳ್‌ಗಂಪನೆಳಸಿ ಬಳಸುತ್ತೆ ನಾಸಾಚಂಪಕಕ್ಕಳ್ಕಿ ಎರಡುಂ ಕಿವಿಗಡೆಯೊಳ್ ಸಾಲ್ಗೊಂಡು ಸಲ್ವ ತುಂಬಿವಿಂಡುಗಳಂತಿರ್ಪ, ಕಾಲಕಾರ್ಬಟ್ಟೆಯ ಸೆರಂಗುಗಳುಂ, ಮುನ್ನಾಗಸಮಾನಳೆವಾಗಳ್ ತನ್ನುಗುರ್ಗೊನೆಸೋಂಕಿಂ ಪರಿದಂಡ ಕಟಾಹ ಬಾಹ್ಯಜಲಮಿರ್ತರದೊಳ್ ಪರಿವುತ್ತಿರೆ ಮೆರೆವಾ ತ್ರಿವಿಕ್ರಮನ

ಚರಣಾಂಗುಷ್ಠನಖಮಂಡಲಮೆನೆ ವಿಮಲೋರ್ಧ್ವಪುಂಡ್ರದಿಂದೆಸೆವ ಮುಖಮಂಡಲಮುಂ, ಆ ಊರ್ಧ್ವಪುಂಡ್ರಮಂ ಪುಂಡರೀಕಪ್ರಕಾಂಡಂಗೆತ್ತಲ್ಲಿ ಮ್ಡಂಡಿಸಿದ ಸಿರಿಯರಸಿಯ ಪೊಂಜೆಳೆಮೆಯ್ಯಂ ಪೋಲ್ವ ಶ್ರೀಚೂರ್ಣತಿಲಕಮುಂ, ಮೊಗಮನಿತುಮಂ ವ್ಯಾಪಿಸಲೆಳಸುವ ಬಗಸೆಗಣ್ಗಳಂ ಮೇರೆಯೊಳ್ನಿಲಿಸುವೆಲ್ಲೆಗಟ್ಟೆಗಳಂತಿರ್ಪ ಪುರ್ಬುಗಳುಂ, ಎಮಗಿದಿರಪ್ಪ ವಸ್ತುಗಳನಲ್ಲದೆ ತಿಳಿವುದರಿದು ನೀಮುಭಯವಿಭೂತಿಗಳೊಳಿರ್ಪುದನಿತುಮಂ ತಿಳಿದಿರ್ಪ ತೆರನಾವುದೆಂದು ಬೆಸಗೊಳಲೆಳಸಿದಂತೆ ಕಿವಿವರೆಗೆ ಪರಿದ ಕಣ್ಮಲರ್ಗಳುಂ, ಕಡಲಂ ಕಡೆದು ಸೊದೆಗೊಂಬಂತೆ ಶಾಸ್ತ್ರದೊಳ್ ಸಾರಾಲ್ಪಸಾರಸಾರತರಗಳಂ ಕಳೆದು ಸಾರತಮಮಪ್ಪ ಮೂಲಮಂತ್ರದರ್ಥಂಗಳಂ ಸಂಗ್ರಹಿಸಿ ಸದಾಚಾರ್ಯರುಪದೇಶಂಗೆಯ್ದುದರಿಂದಾಯೆಂಟುಮಕ್ಕರಂಗಳೊಳ್ಪುರುಳ್ಗಳ್ ಬೇರೆ ರೂಪುವೆತ್ತು ಕಿವಿಯಂ ಪತ್ತಿದುದೆಂಬಂತಿರ್ಪ ಚೌಕುಳಿಗಿವಿವಚ್ಚಮುಂ, ತುಂಬಿತುಳುಂಕುವುಭಯವೇದಾಂತಸಾರ ಸಾಗರದ ತೆರೆಗಳಂತೆಯುಂ ಸತ್ಯಲತೆಯ ಪೂಗೊಂಚಲಂತೆಯುಂ ಸತ್ವಗುಣದುನ್ಮೇಷದಂತೆಯುಂ ಅಂತಃಕರಣಪ್ರಸಾದದಂತೆಯಂ ಧರ್ಮಾಂಕುರಂಗಳಂತೆಯುಂ ಬೆಳರ್ತು ಪೊರಸೂಸುವ ನಸುನಗೆಯುಂ, ರಜಸ್ತಮೋಗುಣಂಗಳೆರಡುಮಂ ಕಳೆದು ತಾನೊಂದುಮೆ ಮುಮ್ಮಡಿವೆತ್ತ ಸತ್ವಗುಣದಂದದಿಂ ಕಂದದೊಳೆಸೆವ ಯಜ್ಞೋಪವೀತಮುಂ, ಮಾನಸಪೂಜಾಸಮಯದೊಳಂತರಾತ್ಮಂಗರ್ಪಿಸಿದ ದುಂಡುಮಲ್ಲಿಗೆಯ ನನೆಗಳ್ನಿರ್ಮಲಹೃದಯದೊಳ್ಪೊರಗಣ್ಗೆ ಕಂಗೊಳಿಸಿದಂತೆ ಪೇರೆರ್ದೆಯೊಳೆಸೆವ ಮುತ್ತಿನೆಕ್ಕಸರಮುಂ, ಅದರ ನರುಗಂಪಿಂಗೆರಗಿದ ಪರಮೆವರಿಗಳ ಸಾಲ್ಗಳಂತೆಸೆವ ತೊಳಸಿಂದಾವರೆಮಣಿಗಳ ಸರಂಗಳುಂ, ಮೇರುವಿನ ತಪ್ಪಲೊಳ್ ಕಾಯ್ವ ಬೆಳ್ದಿಂಗಳಂತೆಯುಮಾಯೆಡೆಯೊಳ್ ಪರಿವ ಮಂದಾಕಿನೀಪ್ರವಾಹದಂತೆಯುಂ ಮೆಯ್ಯೊಳ್ ಪೊದೆದುಟ್ಟ ಧವಳಪಟ್ಟಾಂಶುಕಯುಗಳಮುಂ – ಮನಂಗೊಳೆ ಬಳಿವರುವ ಅಳಹಿಯ ಸಿಂಗರಾರ್ಯರನಾದರದೊಳ್ ಕಂಗೊಳಿಸುತ್ತ ರಸನ ಸಂಮೊಗದ ಕೃತಮುಖರ್ಮನದೊಳೆಣಿಸಿದರದೆಂತೆನೆ:

ಈ ಮಹಾನುಭಾವನೆಳಮೆವಿಡಿದೆಮಗೊಳ್ಗೆಳೆಯುಮೊಡನಾಡಿಗನುಮಾಗಿರ್ದೊಡಂ ಶಮದಮಾದಿಗುಣೈಕಾಶ್ರಯನಾಗಿದ್ದೊಡಂ ಇವನೊಡಲೊಳಿಡಿದ ಕಡುವೊಗರ ಪೆರ್ಕಳದಿಂ ಗಳ್ಕನೆ ನೋಡಲುಂ ನುಡಿಸಲುಮಸದಳಮಾಗಿರ್ಪುದು ಸಾಜಮುಮಿನಿತಾನುಂ ಬಿಜ್ಜೆಗರ ಯೋಗದೊಳ್ ಪೊಸಸಿರಿ ಮಿಸುಗುತಿರ್ಕುಂ. ಈ ತೆರದಿಂ ಪದದೊಳ್ಪತಂಜಲಿಯಂ, ವಾಕ್ಯದೊಳ್ ಜೈಮಿನಿಯಂ, ಸ್ಮೃತೀತಿಹಾಸ ಪುರಾಣವೇದವೇದಾಂತಂಗಳೊಳ್ ವ್ಯಾಸನಂ ದೊರೆಗೊಂಡಖಿಳತತ್ವಂಗಳಂ ಕರತಲಾಮಲಕಮೆನೆ ತಿಳಿದು ತಿಳುಪಲೀ ಮಹಾಮಹಿಮನ ಮೆಯ್ಮೆಯಂ ಪೇಳ್ವುದೇಂ; ಕಲಿಯೆಂಬ ಕಾರ್ಗಾಲದೊಳ್ ಕದಡಿದೆಲ್ಲಾ ಬಿಜ್ಜೆವೊಳೆಗಳುಮಿವನೆಂಬ

ಶರತ್ಸಮಯಮಂ ಸಾರ್ದು ಕಲುಷಮಂ ಕಳೆದು ತಿಳಿಗುಂ. ಇವನಾಧಾರದಿಂದೀ ಧರೆಯಾಂಗಿರಸನ ಸಂಗತಿಯುನಗ್ಗಳಿಸುವ ಸಗ್ಗದೇಳ್ಗೆಯಂ ತಳ್ಗಿಸಿರ್ಕುಂ. ಸರಸತಿಯುಮೀತನಂ ಸೇರಿ ಸಿರಿಯರಸಿಯೊಳ್ ಬೇರಮಂ ಪರಿಹರಿಸಿ ಸಂತತಮುಂ ಸಂತಸದೊಳಿರ್ಕುಂ. ಶ್ರುತ್ಯಂತದೊಳ್ ಬಿತ್ತರಂಬಡೆದ ಮೂವತ್ತೆರಡುಂ ಬ್ರಹ್ಮವಿದ್ಯೆಗಳುಂ ಮುಂ ಪರಾಶರ ವ್ಯಾಸ ಶುಕ ಶೌನಕ ನಾಥ ಯಾಮುನ ರಾಮಾನುಜರೊಳೆರವಿಲ್ಲದೊಡವೆರದಿರ್ದಂತೆ ಇವನೊಳುಂ ತಮ್ಮೊಳವಂ ತಿಳುಪಿನಂಬಿ ಸೊಗಂಬಡೆದಿರ್ಕುಂ. ಮಿಕ್ಕುದೇಂ ಬೆಳಕ್ಕರಿಗರೊಳ್ಸಿಲ್ಕಿ ಕಕ್ಕಸಂಬಡುವೆರಡುಂ ವೇದಾಂತಗಳುಮಿವನ ಸಂಗತಿಯಿಂ ಪೊಂಗಿ ಪೊಗರ್ವಡೆದಿರ್ಕುಂ. ಇಂತಪ್ಪವರಂ ನೆನೆದೊಡಮೆಂತಪ್ಪೆಡರ್ಗಳಂ ತೀರ್ಕುಂ ಪೆಸರ್ಗೊಂಡೊಡಮೊಡಲ್ವಿಡಿದ ಪಾಪಮನಿತುಂ [ಪೋ*]ಪುದು; ಕಂಡೊಡಂ ಕರೆಗಣ್ಮುವ ಕರಣಂಗಳ್ ಕೈಬಸಮಕ್ಕುಂ. ಆವಗಮೊಡನಾಡಿಯುಂ ನುಡಿಗೇಳಿಯುಂ ಬಿನಯಂಗೆಯ್ದುಂ ಬೇಳ್ಪುದನಿತ್ತುಂ ಮನ್ನಿಪರುನ್ನತಿಗೆ ಮಿತಿ ಯಾವುದು; ಇವನೊಳ್ಪಳಿಸಂದೊಂದೊಂದೆ ದಿನಮೋದುಗಲ್ತೊಡಂ ಓದುಗಳೊಳಗುದಿಳಿದು, ಕಾಮಕ್ರೋಧಾದಿಗಳಂ ಕಳೆದು, ಸಂದೆಯಮಂ ಕೆಲಸಾರ್ಚಿ, ಕದುಬಂ ಕಡೆಗಣಿಸಿ ಕುಲಪತಿಗಳೆನಿಸುವರ್ ಇವರಂತಿರ್ಕೆ. ಮತ್ತಮೆಂತಪ್ಪ ದುರ್ದಾಂತರಾದೊಡಂ ದುರುಳರಾದೊಡಂ ಅವರ ಕಲ್ಲೆರ್ದೆಗಳುಂ ಸಸಿಯಂ ಕಂಡ ಸಸಿವಣೆಯಂತೆ ತಣ್ಣೇರಿ ಕರಂಗುಗುಂ. ತಮ್ಮ ಸಂಬಂಧದಿಂದಮೆ ಪೆರರಂ ಬಸವಳಿಸಿಯುರಿವುಗೆಡಿಪುದೇ ಸಾಜಮಾದ ದುರ್ಗುಣಂಗಳುಮಿವನತ್ತಣಿಂ ತಮ್ಮ ತಮ್ಮ ಕಡುಪಂ ಕಳೆದು ಸದ್ಗುಣಂಗಳೆನಿಕುಂ. ಅದೆಂತೆನೆ: ಕಾಮಮುಂ ಅಲ್ಪಂಗಳುಮಸ್ಥಿರಂಗಳುಮೆನಿಸುವೈಹಿಕಾಮುಷ್ಮಿಕಫಲಭೋಗವಿಮುಖಮಾಗಿ ಭಗವದ್ಗುಣಾನುಭವವಿಷಯಮೆನಿಸಿ ಭಕ್ತಿಯೆನಿಪುದು. ಕ್ರೋಧಮುಂ ಜ್ಞಾತಿಸಾಮಂತಾದಿಗಳನುಳಿದಂತರ್ಬಾಹ್ಯಕರಣಂಗಳೊಳ್ ಪೊಂಗುವ ಪೊಲ್ಲದ ನೆನಪಂ ಸಲ್ಲದ ನುಡಿನಡತೆಗಳುಮಂ ವಿಷಯಂಗೊಂಡು ವೈರಾಗ್ಯಮೆನಿಪುದು. ಲೋಭಮುಂ ಧನಧಾನ್ಯಾದಿಗಳನಲ್ಲಿಗಳೆದು ಸದೋಷರಪ್ಪ ಸಂಶ್ರಿತಜನ ವಿಷಯಮಾಗಿ ವಾತ್ಸಲ್ಯಮೆನಿಪುದು. ಮೋಹಮುಂ ಪರಾವರತತ್ವಂಗಳ ನೆಲೆಯಿಂ ಕೆಲಸಾರ್ದು ಸ್ವಕೀಯಗುಣಗಣಮಾಹಾತ್ಮ್ಯಮಂ ಪತ್ತಿರ್ಪುದರಿಂ ಸೌಶೀಲ್ಯಮೆನಿಪುದು. ಮದಮುಂ ವಿದ್ಯಾಧನಾಭಿಜಾತ್ಯಾದಿಗಳಿಂದಲ್ಲದೆ ಭಗವದ್ಭಾಗವತ ಕೃಪಾಸಂಪನ್ನಮಾಗಿರ್ಪುದರಿಂ ಭಗವನ್ಮಹಿಮಾನುಸಂಧಾನಮೆನಪುದು. ಮಾತ್ಸರ್ಯಮುಂ ಭಗವದ್ವಿಷಯದತ್ತಣಿಂ ಪೆರತೆನಪ ಮಂತ್ರಸಾಧನದೇವತಾ ವಿಷಯಮಾಗಿರ್ಪುದರಿಂ ಸ್ವರೂಪಜ್ಞಾನಾಂತರ್ಗತಮಾಗಿರ್ಪುದು.

ಮತ್ತಮೀ ವೃಷ್ಣವೋತ್ತಮಂ ಮೈಮೆಯೊಳ್ ಪರಮೇಷ್ಠಿಸುತನೆಂಬ ಶ್ರೇಷ್ಠದಿಂದಿರ್ದ ವಸಿಷ್ಠನಿಂದಮೆ ಬ್ರಹ್ಮರ್ಷಿಯೆನಿಸಿ ಸಕಲವೇದಮಾತೆಯುಂ

ಬ್ರಾಹ್ಮಣ್ಯಜನನಿಯುಮೆನಿಪ ಗಾಯತ್ರಿಗಧಿಕರ್ತನೆನಿಸಿ ತಾರಕಮಂತ್ರನಾಮಕ ಶ್ರೀರಾಮಚಂದ್ರಂಗೆ ಮಂತ್ರರಹಸ್ಯೋಪದೇಶದೇಶಿಕನೆನಿಸಿ ತನ್ನ ಗೋತ್ರಪತಿಯೆನಿಪ ಕೌಶಿಕನಂ, ಸದಾಚಾರದೊಳ್ ಯಜುಶ್ಶಾಖೋದಿತಸಕಲಶ್ರೌತಸ್ಮಾರ್ತಕರ್ಮ್ಮಪ್ರಯೋಗಪದ್ಧತಿಯೊಳೇನಾನುಮೊಂದು ಶಂಕಾಕಳಂಕಂ ತೋರೆಯುಮದನೌದಾಸೀನ್ಯಂಗೆಯ್ಯದೆ ಆರೈದು ಪರಿಹರಿಸಿ ಸುಲಭಮಾಗಿಯುಂ ಸುವ್ಯಕ್ತಮಾಗಿಯುಂ ಪವಣ್ಗೊಳಿಸಿ ನಿಜಸೂತ್ರಕೃತ್ತೆನಿಸಿದಾಪಸ್ತಂಬನಂ, ತತ್ವಹಿತಪುರುಷಾರ್ಥನಿಶ್ಚಯದೊಳ್ ಶ್ರೀಹಸ್ತಿಗಿರಿನಾಥನಿಂದರ್ಥಪಂಚಕಂಗಳಂ ತಿಳಿದು ತಿರುಕುರುಂಗುಡಿನಂಬಿಗುಪದೇಶವಿತ್ತು ನಿಜದರ್ಶನಪ್ರವರ್ತಕನೆನಿಸಿದ ಶ್ರೀಭಾಷ್ಯಕಾರನಂ, ಸ್ವರೂಪಾನುರೂಪಾವೃತ್ತಿಯೊಳ್ ಪಿಂತಣ ಜನ್ಮದೊಳು ಶ್ರೀರಾಮಚಂದ್ರಂಗೆ ಸರ್ವದೇಶಸರ್ವಕಾಲಸರ್ವಾವಸ್ಥೋಚಿತ ಸರ್ವವಿಧಸೇವಾಸಾಮ್ರಾಜ್ಯದೀಕ್ಷಿತನೆನಿಸಿ ನೆಗಳ್ದ ರಾಮಾನುಜಾಚಾರ್ಯರ ಮುನಂಬರ್ಪಂತೆ ಸಂತತಮುಂ ಮನೋವಾಕ್ಕಾಯಂಗಳಿಂ ಬಳಿ ಸಂದಾಳ್ಗೆಯ್ದುವ ನೋಲ್ಮೆಯಿಂ ಸ್ವಾನುವರ್ತನದ್ಯೋತಕ ಬಾಲಧನ್ವಿನಾಮಧೇಯಮಂ ಪಡೆದ ನಿಜಕುಲಪತಿಯೆನಿಸುವ ಎಳೆಯವಿಲ್ಲಿಯಾರ್ಯರುಮಂ ನೆರಂಗೊಂಡಿರ್ಪಂ.

ಈ ದೇಶಿಕನ ದೇಶಿಯ್ಕುಂ ಭಾವಿಸೆಸ್ಯೆ¹ಪಿಂ ರೂಪುವೆತ್ತಂತೆಯುಂ, ಧರ್ಮಂ ಬೇರ್ವೆಯ್ದುಳೆದಂತೆಯುಂ, ಸತ್ಯಂ ಮೊತ್ತಮಾದಂತೆಯುಂ, ವೈರಾಗ್ಯಮೊಗ್ಗುಗೊಂಡಂತೆಯುಂ, ಭಕ್ತಿಯೊಳ್ತರಂಬೆರಸಿದಂತೆಯುಂ, ಬುದ್ಧಿಸನ್ನದ್ಧಮೆನಿಸಿದಂತೆಯುಂ, ಸತ್ವಂ ದೃಢಸತ್ವಮೊಂದಿದಂತೆಯುಂ, ಕ್ಷಮೆ ನಿಮಿರ್ದಂತೆಯುಂ, ಶಾಂತಿ ತಿಂತಿಣಿಸಿದಂತೆಯುಂ ತೋರ್ಕುಮೆಂದೆಣಿಸಿ, ಆನಂದಂಬಡೆದಲರ್ದ ಕಣ್ಮಲರ್ಗಳಿಂದೊಸರ್ವ ಹರ್ಷಾಶ್ರುವ್ರುಂ ಉಣ್ಮುವ ನವಿರುಂ ಕವಿವ ದಿಟ್ಟಿಯುಂ ಕಾತರಿಪ ಮನಮುಮಾಗಿರೆ ಅಳಹಿಯ ಸಿಂಗರಾರ್ಯರುಮರಸನಂ ಪತ್ತೆ ಸಾರುತ್ತವನ ದಿವ್ಯತೇಜಸ್ಸನಾರೈದು ಮುಂ ತಾಮಿತಿಹಾಸಪುರಾಣಂಗಳೊಳ್ಕೇಳ್ದ ಪಲವ್ರುಂ ಪುರುಷರಂ ಮನದೆಗೊಂಡನದೆಂತೆನೆ:

ಸತ್ಯಲೋಕದತ್ತಣಿಂದಿಳಿದು ಇಕ್ಷ್ವಾಕುಕುಲಪರಂಪರೆಯಿಂ ಪೂಜೆಗೊಂಡು ಕುಲಧನಮೆನಿಪ ಶ್ರೀರಂಗನಾಥನನಾರಾಧಿಪ ದಶರಥನೋ, ಮತ್ತಮಾಸತ್ಯಲೋಕದಿಂದಮೆ ಸನತ್ಕುಮಾರನತ್ತಣಿಂ ಯಾದವಗಿರಿಯೊಳ್ನೆಲಸಿ ಯದುಕುಲಪರಂಪರೆಯಿಂ ಪೂಜೆಗೊಂಡ ಶ್ರೀಮನ್ನಾರಾಯಣನಂ ಪೂಜಿಸುವ ವಸುದೇವನೋ, ತನ್ನುತ್ತರವೇದಿಯೊಳುದಿಸಿದ ಕಾಂಚೀವರದರಾಜನಂ ಪೂಜಿಸುವ

– ೧. ಇಲ್ಲಿ *ಗುರುತುಹಾಕಿ ಮೇಲಿನ ಮೂರು ಸಾಲುಗಳನ್ನು ಸೇರಿಸಿದೆ

ರಾಜೀವಸಂಭವನೋ, ರಾಜಸೂಯುಸಭಾಮಧ್ಯದೊಳಚ್ಯುತಾರ್ಚನೆಯೊಡರ್ಚುವ ಧರ್ಮಪುತ್ರನೋ, ಪ್ರಭಾಸದೊಳ್ ವೈದಿಕಸುತರನ[ರ*]ಸುತ್ತೆ ಸಮುದ್ರಮಂ ಪೊಕ್ಕ ಚಕ್ರಾಯುಧನ ಪಾದಸಪರ್ಯೆ ಗೆಯ್ವ ವರುಣನೋ, ಗೋವರ್ಧನೋದ್ಧರಣಾನಂತರಂ ಮುಂ ತಾಂ ಮಳೆಗರೆದ ಕರೆಯಂ ಕಳೆಯಲೇಳ್ತಂದು ಮುಕುಂದಂಗೆ ವಂದನಂ ಗೆಯ್ವ ದೇವೇಂದ್ರನೋ, ಆರಾಧನ ವಿಧಾನಮನರಿಯದ ಜಗಕ್ಕರಿಪಲೆಂದುತ್ತರಬದರಿಕಾಶ್ರಮದೊಳಿರ್ಮೆಯ್ದಳೆದು ತನ್ನಂ ತಾನೆಯಾರಾಧಿಸುವ ನಾರಾಯಣ ಶಿಷ್ಯನೆನಿಸುವ ನರಮುನಿಯೋ, ಎಂದಿಂತು ಪೊಣ್ಮುವ ಬಣ್ಣಿಗೆಗಳಿಂದಳವಳಿವ ಹೃದಯಮಂ ಪದುಳಂಗೊಳಿಸಿ ಮತ್ತಮವನ ಚೆಲ್ವಂ ಕಂಡೊಲ್ವ ಚಿತ್ತದೊಳ್ಚಿಂತಿಸಿದಂ: ಈಗಳಿವಂ ಗಿರಿಶನಂ ಗೆಲಲೆಳಸಿ ನೇಮಂ ಬೆರಸಿದ ಮನಸಿಜನಕ್ಕುಂ ಅಲ್ಲದೊಡೀ ಸೌಂದರ್ಯಮೆತ್ತಣದು; ಮೇಣಾವಗಂ ಪರಿಪೂರ್ಣತೆವೆರಲೆಂದು ತಪಕ್ಕೆ ಪೂಣ್ದ ಚಂದಿರನಕ್ಕುಂ ಅಲ್ಲದೊಡೀ ಕಳೆಯುಂ ಸೌಮ್ಯತೆಯುಮಲ್ಲಿಯದು; ಬರಿಸಮನಿತುಂ ಬೆರಸಿರ್ಪೆನೆಂದು ನೋಂಪಿ ಗೆಯ್ವ ವಸಂತನಕ್ಕುಂ ಅಲ್ಲದೊಡೀ ಸೌಗಂಧ್ಯ ಸೌಕುಮಾರ್ಯಂಗಳೇವಗೆಯುವೆಂದಣಿಸುತ್ತೆ, ಮತ್ತಮವನಧೀರೋದಾರಪ್ರಸನ್ನಾಕೃತಿಯುನಾರೈವುತ್ತೆ – ಸಿರದತ್ತಣಿಂ ದೋರಣದೊಳೊಂದು ಕಿವಿಯಂ ಪತ್ತೆಸಾರ್ದು ಬೆಳ್ವಟ್ಟೆಯಿಂ ಕಟ್ಟುವಡೆದು ಬಟ್ಟಿತ್ತೆನಿಸಿ ಅಚ್ಚ ಪೊಚ್ಚ ಪೊಸಸೇವಂತಿಗೆಯೆಸಳ್ಸರದ ಸುತ್ತಿನಿಂದಿನಿಸುಂ ನಡುವಟ್ಟನುಳಿದೆಲ್ಲೆಡೆಯುಂ ಬೆಳತ್ತೆಸೆವೋರೆಸಿಕಿ ತನ್ನ ಕುಲದೇಳ್ಗೆಯಂ ನಿಟ್ಟಿಸಲ್ಕಿಳಿತಂದ ಚಂದಿರನೆಂಬ ಸಂದೆಯುಮಂ ಸಮನಿಸುತ್ತಿದೆ. ಆ ಸಿಕ್ಕಿಯೊಳ್ಕಟ್ಟಿದೊಳ್ವಟ್ಟೆಯ ಮೂರುಂ ಸೆರಂಗುಗಳೊಳ್ಕೋದು ನೇಲ್ವ ಬಟ್ಟಮುತ್ತುಗಳುಂ ಕಿವಿಯೊಳಿಟ್ಟ ಚೌಕುಳಿವಾವುಲಿಗಳುಂ ಇನಿಯನಂ ಬಳಿಸಂದು ವಂದ ತಾರಗೆವೆಣ್ಗಳೆಂಬ ನೆನಪಂ ನಿಗುರಿಸುತ್ತಿದೆ. ಪೊಂಬಲಗೆನೊಸಲೊಳ್ಮಿರುಪ ಪೆರೆನಾಮದಿರುಚೂರ್ಣಂಗಳ್ಮುಂ ಗೋವಿಂದನಡಿಯಿಂದಿಳಿವ ಗಂಗಾಪ್ರವಾಹವೇಗದಿಂ ಸಡಿಲ್ವ ಮುಡಿಯಿಂ ಮೃಡನ ನುಣ್ಮೊಗದೊಳ್ಸರಿದು ಪಣೆಗಣ್ಣ ಕೆಳಗಣ್ದಿಳಿದು ನಾಸಿಕಾಧಾರದೊಳ್ನಿಂದ ಚಂದ್ರಕಲೆಯ ಸೊಬಗಂ ಸೂಚಿಸುತ್ತಿದೆ. ಕಡುನೀಳ್ದ ಕಣ್ಮಲರ್ಗಳ್ ಶತ್ರುಮಿತ್ರೋದಾಸೀನರೆನಿಪ ಮೂರುಂ ತೆರದ ದೊರೆಗಳ ರಾಜ್ಯಸಪ್ತಾಂಗದಿರವಂ ತಮ್ಮೊಳ್ಗೋರೊರ್ವರರಿಯದಂತೊಂದೊಂದೆಡೆಗೆ ಕಳುಪಿದ ಮೂರು ಮೂರುಂ ಬೇಹಿಗರಿಂ ಬೇರೆವೇರೆ ಕೇಳ್ದು ಕರತಲಾಮಲಕಮಾಗಿ ತಿಳಿದಿರ್ದುಂ ತಣಿಯದಿರ್ಪರಸನಭಿಪ್ರಾಯಮಂ ತಿಳಿದು ಕಿವಿಗೊಂಡಿರ್ಪ ಭೂಮಂಡಲವೃತ್ತಾಂತಮನಿತುಮಂ ಸಾಕ್ಷಾತ್ಕರಿಸಲೆಳಸಿ ಕಿವಿಗಳಂ ಪುಗುವ ಸನ್ನಾಹಮಂ ಸಮನಿಸುತ್ತಿದೆ. ಆ ಕಣ್ಗಡೆವರೆಗಂ ನೀಳ್ದ ಕುಡುವುರ್ವುಗಳವಂ ತಾವರೆಗೆತ್ತು ಸಾಲ್ಗೊಂಡೆರಗಿದ ಬಂಡುಣಿವಿಂಡುಗಳೆಂಬ ಭಾವಮಂ ಬಗೆಗೊಳಿಸುತಿದೆ. ನಸುನೀಳು ಮಿಸುಪ ನಾಸಾವಂಶಂ ನಯನಾ

ವೃತಜಲಧಿಗಳೆರಡುಂ ಮೊಡವೆರೆಯದಂತೆಡೆಯೊಳಿಟ್ಟ ಪೊಂಗಟ್ಟೆಯ ನೆಲೆಯಂ ನೆಗಳ್ತೆಗೆಯ್ಯುತ್ತಿದೆ. ಪಿರಿದುಂ ಕಿರಿದುಮಲ್ಲದೆಡತೆರದೊಳ್ಮೆರೆವ ಮೀಸೆಗಳ್ಮೊಗಸಸಿಯ ಕರೆಗೆರೆಯ ಸಿರಿಯಂ ಸೆರೆಗೊಳ್ಳುತ್ತಿದೆ. ಒತ್ತಿ ಕತ್ತರಿಸಿದ ಪವಣ್ಬವರಿ ಯೌವನದ್ವಿರದಮದಧಾರೆಗಳ ಪಾಂಗಿನೊಳ್ ಕಂಗೊಳಿಸುತ್ತಿದೆ. ಮಂತ್ರಾಕ್ಷರೋಚ್ಚಾರಣದೊಳ್ನಸುಬಿರ್ಚಿದ ಬಾಯ್ದೆರೆಯಿಂ ಪೊರಸೂಸುವ ವೊಲ್ಲೆವಲ್ವೆಳಗು ಭಗೀರಥಾನುವರ್ತನದಿಂದೊಲ್ದು ಜಹ್ನುಮುನಿಯ ಮೊಗದಿಂದೊಗೆವ ಬಾಂಬೊಳೆಯ ಪೊಚ್ಚ ಪೊಸವೊನಲಂದಮಂ ಬಂದಿವಿಡಿಯುತ್ತಿದೆ. ಭಗವದ್ಗುಣಾನುಭವದಿಂ ಗದುಗದಂಗೊಂಬ ಗೆರೆಗೊರಲ್ ನಿರ್ಮಲಮಾದಸ್ತುತಿವರ್ಣಂಗಳೆಂಬ ಪಾಲಂ ತುಂಬಿ ಮುಖಾಂಬುಜದಿಂ ಮರಸಿ ಸಜ್ಜುಗೆಯ್ದು ಭಗವನ್ಮಜ್ಜನಕ್ಕೆಂದಿರಿಸಿದ ಸಂಕೆಂಬ ಸಂಕೆಯ ನಂಕುರಂಗೊಳಿಸುತ್ತಿದೆ. ಬಾಹುಮೂಲದೊಳ್ ಪೊಳೆವ ಶಂಖಚಕ್ರಲಾಂಛನಂಗಳ್ ಮುಂ ಪರಶುರಾಮಂ ಕೈವಿಡಿದ ಕೈದುವಂ ತನ್ನಪರಾವತಾರಮೆನಿಪ ರಾಮಚಂದ್ರನೊಳಿರಿಸಿ ಸೊಗದೊಳಿರ್ದಂತೀಗಳುಂ ಶ್ರೀಕೃಷ್ಣನಂ ತಾಂ ಪೊತ್ತಿರ್ದ ಸಂಕುಪಾರುಂಬಳೆಗಳನಿವನ ಭುಜಂಗಳೊಳಿರಿಸಿದನೆಂಬ ಭಾವನೆಯಂ ಭಾವಿಸುತ್ತಿದೆ. ಇಂತಿರ್ಪ ನಿಡುದೋಳ್ಗಳೆರಡುಂ ಪಲವಗಲುಂ ಪಾತಾಳದೊಳಿರ್ದು ಬೇಸರ್ಗಳೆಯಲೆಳಸಿ ಇಳಾತಳಮನಡರುತ್ತೆ ಗರುಡನಿಂದೇ ನಾನುಮೊಂದೆಡರುದೋರದಂತೆ ಶ್ರೀಕಾಂತನ ದಿವ್ಯಾಯುಧಮುದ್ರೆಯಂ ಧರಿಸಿ ನಿರ್ಭಯದೊಳಾನಂದಂ ಬಡೆದಿರ್ಪ ಶೇಷವಾಸುಕಿಗಳ ಪೆರ್ಮೆಯಂ ಪೆತ್ತಿದೆ. ಮೊತ್ತ ಪೆರ್ಮುತ್ತಿನೇಕಾವಳಿ ತ್ರಿಸರ ಪಂಚಸರಂಗಳ ಬೆಳ್ಗದಿರ್ದೆರೆಗಳಂ ತೀವಿಯಂತರದೊಳ್ ಶ್ರೀಕಾಂತನಂ ತಾಳ್ದಿದ ಪೇರೆರ್ದೆ ಪಾಲ್ಗಡಲ ಬಿಡಯಮಂ ವಿಡಂಬಿಸುತ್ತಿದೆ. ಪೊದೆದುಟ್ಟ ಬೆಳ್ವಟ್ಟೆಗಳೆರಡುಂ ಗುಣಂಗಳಂ ನುಂಗಿ ಪೊಂಗುವ ಸತ್ವದೇಳ್ತರಮಂ ಬಿತ್ತರಿಸುತ್ತಿದೆ. ಪದ್ಮಾಸನದೊಳಿರ್ಪುದರಿಂ ಪೊರಗಣ್ಗೆ ತೋರ್ಪೊಂದಡಿಯ ಪೆರ್ವೆರಲ ಪೆರವೆರಲ್ಗಳ ಬಟ್ಟುಗುರ್ಗಳ್ ಮೊಗಸಿರಿಗೆ ನಿಂದಂತವುರಂ ಬೆರಸು ವಂದೆರಗಿದ ಚಂದಿರನಂದದೊಳ್ ಬಗೆವರುತ್ತಿದೆ – ಎಂದೆಣಿಸುತ್ತೆ ಮತ್ತಮಿವಂ ಭಗವದಾರಾಧನ ವಿಧಿಗೆ ಮೊತ್ತಮೊದಲೆನಿಪ ಮಾನಸಪೂಜಾವಿಧಿಯೊಳಧಿಕರಿಸಿ ಭಕ್ತಿಭರದಿಂ ನಸುಮಣಿದ ಸಿರದೊಳ್ಪೊತ್ತಂಜಲಿಹಸ್ತಮುಮಂ ಅರೆದೆರೆದ ಕಣ್ಗಳುಮಲುಗದಂಗಂಗಳುಮಾಗಿರೆ ಈಯಿರವನರೆಗಳಿಗೆ ನಿಟ್ಟಿಸುತಿರ್ಪಿನಮನಿತರೊಳೆ ಮಲರ್ವ ಮೊಗಮಂ ಸೊಗದಾಲಿನೀರೊಗುವ ಕಣ್ಮಲರಂ ಸೆರೆವಿಗಿವ ಕೊರಲುಮುಣ್ಮುವ ನವಿರು ಮಾದಿರವಂ ನಿರೂಪಿಸಿ ಆಯಿಂಗಿತಂಗಳಿಂ ಮಾನಸಾರಾಧನದೊಳಿನ್ನೆವರ ಮಾದುದೀ ನೀತಿಗಳಾಗುತಿರ್ಪುದೀ ಅಂಶವೆಂಬುದಂ ಸಂಶಯಮಿಲ್ಲದೆ ನಿರವಿಸಿದನದೆಂತೆನೆ:

ಮೊದಲೊಳ್ಪದಿನಾಲ್ಕುಂ ಜಗಂಗಳನವರಿಂದಿಡಿಕಿರಿದಜಾಂಡಮುಮನದರ ಪೊರವಳಯದೊಳ್ ತರುವಾಯಿನೊಂದರಿನೊಂದು ಪತ್ತುಂಮಡಿಯೆನಿಪ ಜಲಾದಿಪ್ರಕೃತ್ಯಂತವಾದೇಳುವಾವರಣಗಳುಮಂ, ಅವರಿಂ ಮೇಗಣ್ಗೆ ಪರಮವ್ಯೋಮಮೆಂಬ ಪೆಸರಿಂದೆಸೆದು ನಾಲ್ಮೊಗಂ ಮೊದಲಾದವರ ನುಡಿಗಂ ನೋಟಕ್ಕಂ ನೆನಪಿಂಗಂ ನೀಳ್ಕದ ಮಯ್ಮೆದಳೆದ ವೈಕುಂಠಲೋಕಮುಮಂ, ಅಲ್ಲಿ ಚೆಲ್ವುವೆತ್ತು ಪಲವುಂ ರನ್ನವೊನ್ನಗಳಿಂ ಸಮೆದುದಳದಳಿಪುದರಿಂದೀಯಗಲ ಮೀಯುದ್ದಮೀ ತೆರನೆಂಬುದನ್ನರಿಯಲರಿದಪ್ಪ ಪಲವುಂ ಪಾಗಲ್ಗಳಿಂ ಬಳಸುವಡೆದ ವೈಕುಂಠಮೆಂಬ ದಿವ್ಯನಗರಮುಮಂ, ಅಲ್ಲಿಯಾವಗಂ ತಳಿರ್ತು ನನೆಯೇರಿಯಲರ್ದು ಕಾಯ್ದಳೆದು ಪಣ್ತು, ನಲಿದುಲಿವ ಕೋಗಿಲೆ ತುಂಬಿ ಗಿಳಿ ಪುರುಳಿ ಮೊದಲಾದುವಂ ಪೊರೆವ, ಪಲವುಂ ಕುಲದ ಪೆರ್ಮರಂಗಳಿಂದೆಸೆವ ಪಲವುಂ ಸಿಂಗರದೋಂಟಂಗಳುಮಂ, ಆ ನಡುವೆ ಕೆಂಬರಲ್ಪಚ್ಚೆ ಮುತ್ತು ಕಾರ್ವಣಿಬಜ್ಜರಂಗಳಿಂ ಬೇರೆವೇರೆ ಸಮೆದ ನೆಲಗಟ್ಟುಗಳೊಳ್ ಬಳೆದ ಮಂದಾರ ಪಾರಿಜಾತಾದಿ ಕಲ್ಪದ್ರುಮಂಗಳಿಂದುದಿರ್ದ ಕಮ್ಮಲರ್ಗಳಿಂ ಪೂವೆಟ್ಟುಗಳೆನಿಪ ಪಲವುಂ ಸಿಂಗರದೋಂಟಂಗಳುಮಂ, ಅಲ್ಲಿಯೊಂದೆಡೆಯೊಳ್ಮೊಲ್ಲೆ ಮಲ್ಲಿಗೆ ಮೊದಲಾದ ಪೂಗೊಂಚಲ್ಗಳಿಂ, ಮತ್ತೊಂದೆಡೆಯೊಳ್ಸೋಗೆ ಮಾವು ಮೊದಲಾದ ತಳಿರ್ದೊಂಬೆಗಳಿಂ, ಮತ್ತೊಂದೆಡೆಯೊಳ್ ರನ್ನವೊನ್ನಗಳಿಂ ಸಮೆದ ಸೆಜ್ಜೆವನೆಗಳುಮಂ, ಆ ಕ್ರೀಡಾಶೈಲಂಗಳೊತ್ತಿನೊಳ್ ಬಳಸಿದ ಪಳುಕುವಲಗೆಯ ನೆಲಗಟ್ಟುಂ, ಪವಳಮುತ್ತುಗಳ ಪಾವಟಿಗೆಗಳುಂ, ಅಮರ್ದನಿಳಿಕೈವ ತಣ್ಪಿಂಪು ಕಂಪುಗಳ್ಪೆವಿದ ತಿಳಿನೀರುಂ, ಇಂಚರಂಗೆಯ್ವಂಚೆಕೊಂಚೆ ಮೊದಲಾದ ಪಲವುಂ ನೀರ್ವಕ್ಕಿಗಳುಂ ಮನಂಗೊಳೆ ತೊಳಪ ತಾವರೆನೈದಿಲ್ಗೊಳಂಗಳುಮಂ, ಇಂತೆಸೆವ ಪಟ್ಟಣದ ನಟ್ಟನಡುವೆಯಾವಗಂ ನೆಲಸಿರ್ಪರ್ಗಂ ಮುಪ್ಪೊಳ್ತುಂ ಪೊಸಪೊಸತೆನಿಸಿಯಚ್ಚರಿವಡಿಸುವ ಸರ್ವಾಶ್ಚರ್ಯಮಯಮಾದರಮನೆಯುಮಂ, ಅಲ್ಲಿ ಪಲವುಂ ಬಣ್ಣದ ಪೊಂಬಟ್ಟೆಯ ಮೇಲ್ಕಟ್ಟುಂ, ಮುತ್ತಿನ ಲಂಬಣಂಗಳುಂ, ನೀಲದ ನೆಲಗಟ್ಟುಂ, ಪಲವುಂ ರನ್ನಗಂಬಂಗಳುವಾಗಿ ಕಾಲತತ್ತ್ವಮುಳ್ಳನ್ನೆವರಂ ಎನಿಬರ್ಬಂದೊಡಮನಿಬರ್ಗಮೆಂಬಾಗಿ ಪೊಕ್ಕರಮನಮಂ ಗಳ್ಕನೆ ಸೊರ್ಕಿಪ ಪೇರೋಲಗದ ಸಾಸಿರ್ಗಂಬದೆಸರ ಮಹಾಮಣಿಮಂಟಪಮಂ, ಅಲ್ಲಿ ಯೆಲ್ಲೆಯಿಲ್ಲದರಿವು ಮಾಪುರ್ಮ್ಮೆಸಿರಿಯುಂ ಬೀರಮುಂ ತೇಜಮುಂ ಸಫಲಮಪ್ಪಂತು ಪರಮಪದನಾದನಡಿಯೂಳಿಗಮೆ ತಮಗೆ ಭೋಗಮೆಂದಿರ್ಪ ಪಲವುಂ ನಿತ್ಯಮುಕ್ತರ್ಗಳುಮಂ ಶಂಖಚಕ್ರಗದಾಸಿಶಾರ್ಙ್ಗಾದ್ಯಾಯುಧಂಗಳಂ ತಮ್ಮ ತಮ್ಮ ನೆತ್ತಿಯೊಳ್ಪೊತ್ತು ಭಯಮಿಲ್ಲದ ದೇವಮಾದೊಡಂ ಭಕ್ತಿವಿಶೇಷದಿಂದಾವಗಂ ಸನ್ನದ್ಧಮಾಗಿರ್ಪ ಸುದರ್ಶನಪಾಂಚಜನ್ಯಾದಿ ದಿವ್ಯಾಯುಧಪುರುಷರ್ಗಳುಮಂ, ಅಳ್ವನೂಳಿಗಮನಿತುಮಂ ತಾನೊರ್ವನೆ ಗೆಯ್ವ ಡಾವರದಿಂ ಪಟ್ಟವಣೆಯುಂ

ಪಳವಿಗೆಂಯುಂ ತೇರುಂ ತೇಜಿಯುಂ ಬಿಜ್ಜಣಿಗೆಯುಂ ಮೇಲ್ಕಟ್ಟುಂ
ಒಳ್ಗೆಳೆಯನುಮೂಳಿಗದವನುಮಾಗಿಯುಂ ತಣಿಯದೆ ಭಗವದ್ಗುಣಂಗಳನಿತುಮಂ
ಕಾಣ್ಕೆಗೆಂಬ್ಬ ಕೈಪಿಡಿಯಂತೆ ನಿರ್ಮಲವಾಗಿ ವೇದಮಯವಾದ
ಪಕ್ಕಂದಳೆದಾಳಂದದೊಂದೊಡಲ್ವಿಡಿದಿದಿರೊಳ್ ಕೈಮುಗಿದು ಸನ್ನದ್ಧಮಾಗಿರ್ಪ
ಗರುತ್ಮಂತನುಮಂ, ಆಳ್ದನಾರೋಗಿಸಿಯುಳಿಸಿದಮೃತಾನ್ನಮಂ ಸವಿವ ಬಲ್ಪಿಂದವಂ
ಪೊರಿಸಿದುಭಯವಿಭೂತಿಯರಸುತನದ ಪೊರೆಯಂ ಪೊತ್ತು ತತ್ತದ್ವ್ಯಾಪಾರಂ
ಗಳನಾಳ್ದನಿಂಗಿತವರಿದೆಸಗುವ ಸೇನಾನಿಯೆನಿಪ ವಿಷ್ವಕ್ಸೇನರುಮಂ, ಆ ನಟ್ಟನಡುವೆ
ಧರ್ಮ್ಮಾದಿಪೀಠವೆಸರ ಪಟ್ಟವಣೆಯ ಮೇಲೆ ವಿಮಲಾದಿಶಕ್ತಿಮಯಮಾದ ಪನ್ನೆರಡು
ಮೆಸಳ್ಗಳಿಂದೆಸೆವಪೊಂದಾವರೆಯ ದಿವ್ಯರತ್ನಮಯಕರ್ಣಿಕಾಗ್ರದೊಳ್
ಪುಷ್ಪಸಂಚಯವಿಚಿತ್ರಿತಮಾದ ದಿವ್ಯಯೋಗಪರ್ಯಂಕಮೆಂಬ ಪಾಸಿನೊಳ್ ಸಾಸಿರ್ವ
ರ್ಚಂದಿರರನೊಂದುವೆರಸಿ ಕರುವಿಟ್ಟೆರೆದಂತೆ ತಣ್ಪೊಗರ್ವೆತ್ತು ತನ್ನೊಳ್ಳುಗುಣಂಗಳ್ಗೆ
ಕಡೆಯಿಲ್ಲದುದರಿಂದರೆಂದನಂತನೆಂದುಂ ಪಾಸುವುಡಿಸುವ ಪೊದಿಸುವ
ಪಾವುಗೆಯಿಡುವ ಕೊಡೆವಿಡಿವುದು ಮೊದಲಾದೂಳಿಗಂಗಳೆ ಗೆಯ್ಮೆಯಾಗಿರ್ಪುದರಿಂ
ಶೇಷನೆಂದುಂ ನೆಗಳ್ತೆವೆತ್ತು ಮಲ್ಲೆಲರ್ಪಳ್ತಿಯಿಂ ತೀವಿದ ಪಾವೆರೆಯನೆಂಬ
ಮೆಲ್ವಾಸುಗೆಯುಮಂ ಭಾವಿಸಿದಂ. ಈಗಳಲ್ಲಿ ಮುಚ್ಚುಳ್ಚಿಗೆದ ಬೆಳ್ಳಿಗರಡಿಗೆಯೊಳ್
ತಳತಳಿಪ ಪಳನುಡಿವೆಂಡಿರ ಪಚ್ಚೆಯ ತೊಂಡಲ್ಪಚ್ಚಿದಂತೆಯುಂ ಸಿರಿಯರಸಿ
ತಂನ ಕಣ್ಗೆ ಸಿಂಗರಿಸಲೆಂದೆತ್ತಿ ಮುತ್ತಿನ ಸಿಪ್ಪಿನೊಳ್ಪದುಳಂಗೆಯ್ದ ಪೊಸವಗೆಯ
ಪೊಳೆಪ್ರುವಡೆದ ಕಾಡಿಗೆಯಂತೆಯುಂ, ಪೊಡವಿವಡದಿ ತನ್ನೊಡಲ ಪಸದನಕ್ಕೆಂದು
ಪಳುಕುದಟ್ಟೆಯೊಳಿಟ್ಟ ಕತ್ತುರಿಯಣ್ಪಿನಂತೆಯುಂ, ಮಂಜುವೆಟ್ಟಿನ ತಪ್ಪಲೊಳೊಪ್ಪುವ
ಸೊರ್ಕಾನೆಯಂತೆಯುಂ, ಅಲ್ಲಿಯಮರ್ದುವಳೆಗರೆಯಲಿಳಿದ ಪೊಗರುಗುವ
ಕಾರ್ಮುಗಿಲಂತೆಯುಂ, ಪಳುಕಿನ ಜಗಲಿಯೊಳ್ಬೆಳೆದ ಕಲ್ಪವೃಕ್ಷದಂತೆಯುಂ
ತೋರ್ಪ ಶೇಷಶೇಷಶೇಷಿಗಳ ಸಮುದಾಯಶೋಭೆಯಂ ಭಾವಿಸಿ– ಮತ್ತಮಲ್ಲಿ
ಮುಗಿಲೊಳ್ಪಳಂಚುವ ಮಿಂಚುವಳ್ಳಿಗಳಂತೆಯುಂ, ಕಾರ್ವ್ವಣಿವೆಟ್ಟನೊಳ್ಪೊಳೆವ
ಪೊಂದಪ್ಪಲ್ಗಳಂತೆಯುಂ, ಬಾಮ್ಮರನಂ ನೆಮ್ಮಿದ ಪೊಂಜೆಳೆಗಳಂತೆಯುಂ,
ಇರ್ಕೆಲದೊಳಿರ್ಪ ಶ್ರೀಭೂಮಿನೀಳೆಯರಿರವಂ ನಿರವಿಸಿ ಅವಯವಶೋಭೆಗಳಂ
ಬೇರೆವೇರ ಭಾವಿಪೆನೆಂದು ಮುಂದುವರಿವಿನಂ, ಪೊನ್ನಂ ಪಸುರ್ವಣಿಯಂ
ಕಾರ್ವಣಿಯುಮಂ ಸಮಂಗೊಂಡು ಕರಗಿಸಿಯಾತನಿರಸದಿಂ ತುಂಬಿ
ದಂಬುಧಿಯತ್ತಣಿಂದುರವಣಿಸಿ ಕವಿವತೆರೆಯ ತಿಂತಿಣಿಯಂತೆ ಮೇಲ್ವಾಯ್ವ
ಪೊಗರ್ವೊಳೆಗಿದಿರ್ವಾಯ್ದುವೆನಿಸುವ ದಿಟ್ಟಗಳೊಳಗುಂ ಪೊರಗುಂ ಪಸುರ್ಪುಂ
ಕಪ್ಪು[ರ್*]ಂ ಪಳದಿಯುಮಾಗಿ ಪರಿಣಮಿಸಿದುದರಿಂದಾವೆಡೆಯಂ ನೋಡಿದೊಡಂ
ಮೂವಣ್ಣಮಾಗಿ ಕಣ್ಗಳ್ತಲೆಗವಿದಿನಿಸುಂ ಪೊಳ್ತು ತಡೆದು ನಿಲ್ವಿನಂ – ಅನಿತರೊಳೆ
ತಾಪಿರ್ವರುಂ ಕಟ್ಟೈಸಿರಿಂಯೊಳ್ಪೊಗಪಿಪಾರ್ಗಳ್ ಮರುಳ್ಗೊಂಡು

ತಮ್ಮನಗಲ್ದು ಪಲವುಂ ನಾಡೊಳ್ಪವಣಿಗೊಂಡು ರೂಪುಂ ಪೆಸರುಮಳಿದಿರ್ದ ಕಂದನಾಮರುಳ್ಗಳಿದು ತನ್ನವರಂ ನೆನೆದುವಂದು ಮುಂದೆ ನಿಂದಿರೆ ಕಂಡ ತಾಯ್ತಂದೆಗಳ್ಮುದದಿಂ ಕರಗಿದ ಮನಮುಂ ಕದುಬುವಂಗಮುಂ ಕವಿದ ದಿಟ್ಟಿಯುಂ ಗದುಗದಂಗೊಂಬ ಕೊರಲುಮಾಗಿ ನೆಟ್ಟಾಲಿಯಲುಗದೆ ಕಟ್ಟೆರಕದಿಂ ನಿಟ್ಟಿಸುವ ಶ್ರೀನಾರಾಯಣರ ಕಟಾಕ್ಷಾಮೃತರಸಾಸೇಚನದಿಂದಾಪ್ಯಾಯನಂ ಬಡೆದು ತನ್ನ ದಿಟ್ಟಿ ನಾಲಗೆ ಮೂಗು ತೊವಲ್ಕಿವಿಗಳೆಂಬ ಐದುಂ ಕರಣಂಗಳುಂ ಅಪ್ರಾಕೃತದಿವ್ಯಾದ್ಭುತ ರೂಪರಸಗಂಧಸ್ಪರ್ಶಶಬ್ದಗ್ರಹಣಂಗಳೊಳವ್ಯಗ್ರಮಾಗಿರೆಯಾ ಪರಮಪದನಾಥನ ಕೇಶಾದಿಪಾದಾಂತಮಾದ ದಿವ್ಯಾಂಗಸೌಂದರ್ಯಮಂ ತನ್ನಂತರಂಗ ದೊಳ್ಬಿಂತಿಸಿದನದೆಂತೆನೆ:

ಸಿರಿಮೊಗದೊಳ್ವೆಳಗು ಮೇಗಣ್ಗೆ ಪಾಯ್ದುದೆಂಬ ಸಂದೆಯಮಂ ಸಮನಿಸುತ್ತೆ ಪಿಭೂತಿದ್ವಯದೊಡೆತನಮಂ ಚಾಡಿವೇಳ್ವ ರನ್ನದ ಮಗುಡಮುಮಂ; ನೋಳ್ಪರ ಕಣ್ಪಿಗೆಗಳ್ಗೆ ಮರ್ಬಂ ಕವಿಸಿ ತನ್ನಂತೆ ಸುಳಿಗೊಳಿಸುವ ಸುರ್ಕುಂ ಗುರುಳ್ಗಳುಮಂ; ಪೊಳೆಪುಂ ಮೆಲ್ಪುಮಾಗಿರ್ದುದರಿಂ ನಸುಬೆಮರ್ದಂತಿರ್ಪ ಸಿರಿನೊಸಲುಮಂ; ಅರೆವೆರೆಯೊಳ್ತುಂಬಿ ತುಳುಂಕುವಮರ್ದಿತರದೊಳ್ದೊನಲಿಟ್ಟಂತೆಸೆವ ವಿಮಲೋರ್ಧ್ವಪುಂಡ್ರವುಮಂ; ವೊಗಗನ್ನಡಿಯೊಳ್ಪಡಿನೆಳಲ್ಗೊಂಡ ಕೈವಿಡಿದ ಶಾರ್ಙ್ಗದೆರಡುಂ ಕಡೆಗಳಂ ಕಡೆಗಣ್ಬುವ ಕುಡುವುರ್ಬುಗಳುಮಂ; ಕಡುನುಣ್ಪಿಂ ಪೊಳಪುಂಬಡೆದು ಕರ್ಪುಂ ಬೆಳ್ಪುಮೇರ್ಪಟ್ಟಿಗಲ್ದು ನೀಳ್ದು ಕಡೆಯೊಳ್ಕೆಂಗರೆಗೊಂಡ ಮೊಗಸಿರಿಯುಮಂ; ನೀರೊಳೊಂದರ್ಕೊಂದು ಕೇಣಂಗೊಂಡು ಪಡಿಮೊಗದೊಳ್ಮಲೆವೆಳೆಮೀನ್ಗಳಂತೆಸೆವ ಬಗಸೆಗಣ್ಗಳುಮಂ; ಮೂವಡಿನಾಡೊಡೆತನದಿಂ ಮೆಯ್ಮೆವೆತ್ತಡಬಲದ ಸಿರಿಪೊಡವಿವಡದಿಯರ ನೆಡವಿಡದೆ ನಿಟ್ಟಿಪುದರಿಂ ನೇಹರಸದಿಂ ನನೆದು ಎಲ್ಲೆಡೆಯೊಳಮೆಲ್ಲಾಪೊಳ್ತು ಮೆಲ್ಲಾ ತೆರದೊಳೆಲ್ಲೂಳಿಗಂಗೆಯ್ವ ಪಳಪೊಸ ಊಳಿಗದವರೊಳ್ಮರುಕದಿಂ ತಣ್ಣೇರಿ ಕವಿವ ಕರುಣಾವಲೋಕನಂಗಳುಮಂ; ನಿಡುಗಣ್ಣಿನಿಮಡುಗಳ ನಡುದೀವಿಯೊಳ್ ಮೊಳೆತ ಕಲ್ಪಲತೆಯ ದಾಂಗುಡಿಯ ಮೊಗರಂತೆಸೆವ ನಾಸಾವಂಶಮುಮಂ; ಅದರ ತಳಿರ್ದೊಂಬೆಗಳಂತಿರ್ಪ ಮೆಲ್ಗದಂಪುಗಳುಮಂ, ಅದರ ಪೊಸಮಲರಂತೆಸೆವ ನಸುನಗೆಯುಮಂ, ತನ್ನ ಪೊಗರಿಂ ನಿಟ್ಟಿಪರ ಕಣ್ಪಿಗೆಗಳಂ ರಾಗಸಾಗರದೊಳ್ಮುಳುಂಗಿಸುವ ಚೆಂಬಾಯ್ದೆರೆಯುಮಂ, ಪೊಂಬೆಟ್ಟದತ್ತಣಿಂದೆಡಬಲವೆಟ್ಟುಗಳ್ಗಿಳಿವ ಬಾಂಬೊಳೆಯ ಪೊನಲ್ಗಳಂ ದೊರೆಗೊಂಡು ದಿವ್ಯರತ್ನಕಿರೀಟದತ್ತಣಿಂ ಕಂದಂಗಳೆಡೆಗಿಳಿತಂದ ಭುಜಕೀರ್ತಿಯ ಕಾಂತಿ ಪ್ರವಾಹದೊಳ್ ಪೊಳೆದು ಸುಳಿಗೊಂಬ ಮಕರಂಗಳಂದದ ರನ್ನಗಿವಿವಚ್ಚಂಗಳುಮಂ, ಪೊಳಪೊಳ್ಪು ತಣ್ಪಿಂಪುಗಳ್ತೀವಿರ್ಪುದರಿಂ ತುಂಬುವೆರೆಯುಂ ಪೋಲ್ವ ಸಿರಿಮೊಗಮುಮಂ, ಒಳ್ನಿಲದೊಳ್ಪುಟ್ಟಿ ಪೊಣ್ಮಿಪೊಗರ್ವಡೆದೆಳಗೌಂಗಿನ ತೊಂಡೆಯಂ

ಬೆಂಡುಗಳೆವಗೆರೆಗೊರಲುಮಂ, ತಮ್ಮ ತಣ್ಣೆಳಲೊಳುಭಯವಿಭೂತಿಗಳನಿಂಬುಗೊಳಿಸಿ ಸೊಗಂಬಡಿಸಿ ದಿವ್ಯಾಯುಧಂಗಳೆಂಬ ಪೊಸೆವಗೆಯುರಲ್ಗೊಂಚಲ್ಗಳಂ ತಾಳ್ದಿರ್ಪುದರಿಂದಪ್ರಾಕೃತಕಲ್ಪಶಾಖೆಗಳಂ ಕೆಳೆಗೊಂಬ ನಿಡುದೋಳ್ಗಳುಮಂ, ಪೊದೆದ ಪೊಂಬಟ್ಟೆಯ ಮೇಲ್ಕಟ್ಟಿಂ ಸಿರಿಗೊರಲ್ವಚ್ಚದೊಳ್ ಜೋಲ್ವ ಮುತ್ತುರನ್ನದ ಲಂಬಣಂಗಳಿಂ, ಬಾವನ್ನದಣ್ಪಿನಮೆಲ್ವಾಸಿನಿಂ, ಎಳದೊಳಸಿದಂಡೆಯುಯ್ಯಲಿಂ, ಕೌಸ್ತುಭಮಣಿ ದೀಪದಿಂದೆಸೆವ ಸಿರಿಯರಸಿಯ ಸೆಜ್ಜೆವನೆಯೆನಿಪ ಪೇರೆರ್ದೆಯುಮಂ; ಲಾವಣ್ಯಾಮೃತರಸಪ್ರವಾಹಕ್ಕಟ್ಟಿದ ಕಟ್ಟೆಯೆನಿಪ ರನ್ನದ ಪೊಡೆಗಟ್ಟುಮಂ; ಆ ಕಟ್ಟೆಯತ್ತಣಿಂ ಪೊಣ್ಮಿ ಪೊನಲಿಡುವ ಪರಿಕಾಲ್ಗಳೆನಿಪ ಯಜ್ಞೋಪವೀತಮಂ; ಆ ಲಾವಣ್ಯಾಮೃತರಸಪ್ರವಾಹಮಿಟ್ಟಣಿಸಿ ಸುಳಿಗೊಂಡಂತಿರ್ಪ ಸಿರಿವೊಕ್ಕುಳುಮಂ; ಶಂಖಚಕ್ರಂಗಳಂ ಚಂದ್ರಾದಿತ್ಯರ್ಗೆತ್ತಲರಲುಂ ಮುಗಿಯಲುಮಣ್ಮದರೆವಿರಿದ ಬಿದಿಯ ತಾಯ್ವನೆಯೆನಿಪ ಪೊಡೆದಾವರೆಯುಮಂ; ಕಂಡರಿಸಿದ ಪಸುರ್ವಣಿಗಂಬಂಗಳಂ ಪೋಲ್ವ ತೊಡೆಗಳಂ ಬಳಸಿ ಮುಸುಂಕುವುಡೆನೂಲ ಕೆಂಬರಲ್ಗಳ ಪೊಗರ್ದೆರೆಗಳಂ ನಗುವ ಚೆಂಬೊನ್ನುಡೆಯುಮಂ; ಸಂಕು ಬಳೆಗೈದು ಬಾಮ್ಮರ ಪಳವಿಗೆಯಂಕುಸ ಬಜ್ಜರಂಗಳಂ ತಾಳ್ದಲರ್ದ ಕೆಂದಾವರೆಗಳಂ ಪೋಲ್ವ ಚೆನ್ನಡಿಗಳುಮಂ ಭಾವಿಸಿಯಾನಂದಭರಿತನಾಗಿ ರಾಯಂ ಕಂಡು, ಎಳಸಿಸು ತನ. ಬಾಳ್ತಗೆಂದೇ ಪಚ್ಚುಗೊಟ್ಟಿರ್ಪ ಮೊಲೆಯೊಳ್ಬಾಯಿಟ್ಟು ಪಾಲುಂಡು ತಣಿದು ಸೊರ್ಕುವಂತೆ, ಭಕ್ತಜನದ ಭಾಗಕ್ಕೆ ಬಂದ ಅಮೃತಸ್ಯಂದಿ ಪಾದಾರವಿಂದಂಗಳ್ಗೆರಗಿ; ಮುಂ ಕಡುವೇಸಗೆಯ ನಡುವಗಲೊಳ್ ನೀರಳ್ಕೆಯಿಂ ಗಳ್ಕನಡವಿವೊಕ್ಕಲ್ಲಿ ಸಿಂಗದುಲಿ ಗೇಳ್ದು ಬೆರ್ಚಿ ಬೀದಿವರಿದುರ್ಕಡಗಿ ಸೊರ್ಕಿಳದಲ್ಲಿಯುಂ ದಳ್ಳುರಿಗೊಂಡು ಚುರ್ಚುವ ಕಾಳ್ಗಿರ್ಚಿಂ ಬೆಂದು ನೊಂದು ಬಾಯ್ಮೊಗೊಣಾಗಿ ಬಸುರ ನೀರಂ ಬಯಲ್ಗೆ ಚೆಲ್ಲಿ ಬರತು ಬಣ್ಣಂಗುಂದಿ ಬಸವಳಿದಿರ್ಪಾನೆ ಇನಿರಸಂ ತೀವಿ ತಣ್ಣುವಡೆದು ಕಂಪೇರಿದ ತಾವರೆವಡುವಂ ಕಂಡೊಡನದಂ ಪೊಕ್ಕು ಮುಳುಂಗಿ ತೇಲ್ದು ತುಳುಂಕಿ ನೀರನೀಂಟಿ ಮೊಗದೊಳುಂ ಮೆಯ್ಯೊಳುಂ ಚಲ್ಲಿ ಚೆಲ್ಲಾಡುವಂತಿವನು ಮಾಸಿರಿಯಡಿದಾದರೆಗಳಂ ಮುಡಿಯೊಳಮೆರಡುಂ ಕಣ್ಗೊಳಮೆರ್ದೆಯೊಳಂ ತಾಳ್ದಿ ತಾಳ್ದಿ ಸಕಲಸಾಂಸಾರಿಕದುಃಖಂಗಳಂ ಕಳೆದು; ಮತ್ತಂ ತಣಿಯದೆ ಮುಂ ಬತ್ತಿದ ಪಳಗೊಳದೊಳ್ಬವಣಿವರಿದು ಬಾಯೊಣಗಿಯೆರಂಕೆಯಲುಂಕಿ ಬಳಸಿ ಬಳೆದ ಕೊಳವಳಿಕೆಗಾಡೊಳ್ಪಡಲ್ವಟ್ಟು ಮುಳ್ಮೊನೆಯೇರಿನೊಳ್ಮೊಗಗೆಟ್ಟೊರಲ್ವ ಪರಮೆವರಿ ತಿಳಿನೀರ್ಗೊಳದೊಳಲರ್ದ ತಾವರೆಯಂ ಕಂಡದರೊಳ್ಬಂಡುಣಲೆರಗಿ ನಸುವೊಗರ್ವೆರಸಿ ಪೆಂಪುವಡೆದ ತಣ್ಗಂಪಿನಿಂಪಂ ಸವಿದಾ ಸೊರ್ಕ್ಕು ತಲೆಯೇರೆ ಮೆಯ್ಮರೆದು ಕಟ್ಟುವಡೆದಂತೆಯುಂ, ಕಾಸಿ ಬೆಚ್ಚಂತೆಯುಂ, ಕೊರೆದು ಕೋದಂತೆಯುಂ, ಕೂರುಗೊಂಡಂತೆಯುಂ, ಅಗೆದು ನೆಟ್ಟಂತೆಯುಂ, ಅಂಟುಗೊಳಿಸಿದಂತೆಯುಂ, ಚಿತ್ತಿದಂತೆಯುಂ, ಜೇರ್ವರಿದಂತೆಯುಂ,

ಮಗ್ನಮಾಗಿರ್ಪಂತುಟಾಮೆಲ್ಲಡಿಯೊಳ್ಗಂಪಂ ಸವಿವಿನಂ; ಬಗೆವಾಯ್ತೈಗಳ್ತಮ್ಮ ತಮ್ಮ ಗೆಯ್ಮೆಗಳಂ ತಮ್ಮುಮಂ ಮರೆಯೆ ಮರುಳ್ಗೊಂಡಂತೆಯುಂ, ಮರವಟ್ಟಂತೆಯುಂ, ನಿದ್ರಿಸಿದಂತೆಯುಂ, ನೇಮಂ ಬೆರಸಿದಂತೆಯುಂ ಯೆಮೆಯಾಡದುಸುರ್ಮಸಗದನ್ನಮಲುಗದೆ ಕಡಲೊಳ್ನಡೆವಂಗೆ ನಡುಮಡುವಿನೊಳ್ ನಾವೆಯೊಡೆದಂತೆ ಸಂತಸಗಡಲೊಳ್ನಡೆವುದರ್ಕೆ ಸಾಧನಮಾದ ತಿಳಿವುಂ ಕೈದೆಗೆದುದರಿಂದಾನಂದಸಾಗರದೊಳ್ಮುಳುಂಗಿ ಜೀವಾತ್ಮ ಪರಮಾತ್ಮ ಸಾಯುಜ್ಯ ಸಾಮ್ರಾಜ್ಯಮನನುಭವಿಸುತಿರ್ಪನೆಂದು ನಿರವಿಸುತಿರ್ಪಿನಂ; ಅರಸನಿನಿತುಂ ಪೊಳ್ತು ಮರೆದೊರಗಿದ ಮನಮೆಳ್ಚತ್ತು ಮುಂ ಮರವಟ್ಟು ಕೈಗಾಲ್ದಳದೊಳ್ಸುಬೆಮರ್ತು ಕಿರುನಡುಕಂಗೊಂಡು ನವಿರುದಳೆದ ಮೆಯ್ಯುವಾಬಿಗುಪಂ ಸಡಿಲ್ಚಿ ಸೊಗದಾಲಿನೀರ್ಗರೆದು ಮಗುಳ್ದು ಕಣ್ಮಲರಲರ್ದು ಇದಿರನೆಡಬಲಂಗಳಂ ತನ್ನುಮುಂ ನಿಟ್ಟಿಸಿಯುಚ್ಚರಿವಟ್ಟು ಈಗಳ್ತಾಂ ನಿತ್ಯವಿಭೂತಿಯತ್ತಣಿಂ ಲೀಲಾವಿಭೂತಿಗಿಳಿದಂತೆಣಿಸುತ್ತಿರ್ಪಿನಂ – ಈ ಅಳಹಿಯ ಸಿಂಗರಾರ್ಯರುಂ ಪ್ರಸನ್ನಮಧುರಗಂಭೀರಸ್ವರದಿಂದಾ–

ಶ್ಲೋಕಂ ॥

ಆಯುರಾರೋಗ್ಯಪುತ್ರಾರ್ಥ ರಾಜ್ಯಬಂಧು ಸಮೃದ್ಧಯಃ ।
ಭವಂತು ತೇ ಸದಾ ವಿಷ್ಣೋಃ ಪ್ರಸಾದಾದ್ರಂಗಶಾಯಿನಃ ॥

ಎಂದಾಶೀರ್ವಾದಿಪ್ರುದುಮಾ ದನಿಯಂ ಕೇಳ್ದು ಮುಂಗಾರ ಮೊಳಗಂ ಕೇಳ್ದ ಸೋಗೆಯಂತೆ ಕಣ್ಮನಂಗಳಂ ಕವಿಸಿ ನೇಹಂಬೆರೆಸಿದ ಬಹುಮಾನದಿಂ ಸನಿಯದೊಳ್ಕುಳ್ಳಿರಿಸೆ ಕಣ್ಮನಂಗಳ್ಗೆ ಸೊಗಂ ಬೆರೆದಚ್ಚರಿಯುಂ ಸೂರೆಗುಡುತ್ತೆ ಸಿರಿಯರಸನಡಿದಾವರೆಗಳಂ ಪೂಜಿಸುವೆಡೆಯೊಳ್ [ರಾಜನ*] ಭಾವಶುದ್ಧಿಯಂ ಭಾವಿಸಿ ತನ್ನೊಳಾಲೋಚಿಸಿದಂ:

ಲೋಕದೊಳ್ದುಷ್ಕೃತಿಗಳೊಳ್ಕೆಲರ್ಪರಲೋಕಮಿಲ್ಲೆಂದುಂ, ಕೆಲರ್ವೇದ ವಿರುದ್ಧಾಗಮೋದಿತಾಚಾರಮದರ್ಕೆ ಸಾಧನಮೆಂದುಂ, ಕೆಲರ್ವೈದಿಕಕರ್ಮಫಲ ಪ್ರದರ್ದೇವತಾಂತರಂಗಳೆಂದುಂ, ಕೆಲರ್ದೇವತಾನಿರಪೇಕ್ಷಮಾದ ಕರ್ಮದಿಂದಮೇ ಫಲಮೆಂದುಂ ನಿರವಿಸಿ ಕೆಡುವರ್; ಸುಕೃತಿಗಳೊಳಂ ಕೆಲರ್ ಭಗವದಾರಾಧನಮೆ ಇಷ್ಟಸಾಧನಮೆಂದು ತಿಳಿದದನಾಚರಿಸಿಯುಂ, ತಮ್ಮಂ ಪಡೆದು ಬಳೆಯಿಸಿ ಪೊರೆದು ಬಿಜ್ಜೆಗಲಿಸಿ ಬುದ್ಧಿ ವೇಳ್ದ ತಂದೆಗೇನಾನುಮೊಂದೂಳಿಗಂ ಗೆಯ್ದೊಲಿಸಿಯದರ್ಕೆ ಕೂಲಿಗೊಂಬೆಡೆಯೊಳಂ ತಂಮ ಹಿತಮನವನ ಪ್ರಿಯಮುಮನರಿಯದೆ ಕಳವಿನೊಳಂ ಜೂದಿನೊಳಂ ಸೂರ್ಕಿನೊಳಂ ಬಾಳ್ವೆವೆಂದು ಕೇಳ್ದ ಕಾಳ್ಗವರರಂತೈಹಿಕಾ ಮುಷ್ಮಿಕಫಲಮಂ ಬಯಸುವರ್; ಕೆಲರ್ತಮ್ಮಂ ಕೈವಿಡಿದು ತಂನೊಳ್ಗೊಡವೆಯೆಂದು ಮರೆವೊಯ್ಯೆಂದುಂ ಬಗೆದು ಕಾಪಿಟ್ಟು ಸಲಿಪಿ ಸರ್ವಸಮನಿತು ಸಂತತಮುಂ

ಸಂತಸಂಗೊಳಿಪ ನಿಜಪತಿಗೆ ತಾಂ ಗೆಯ್ವ ಮನೆವಾಳ್ತೆ ಸಜ್ವೆಯೊಳಿಗಂ ಮೊದಲಾದುದಂ ಗಣನೆಗೊಂಡು ಪೊಳ್ತರೆ ಪಣಮಂ ಕೇಳ್ವ ಕಾಳ್ವೆಂಡಿರಂತೆ ತಮ್ಮ ಕರ್ಮಜ್ಞಾನಭಕ್ತಿಗಳ್ಗೆ ಫಲಮಾಗಿ ಮುಕ್ತಿಯಂ ಬಯಸುವರ್; ಈ ರಾಯನವರರಂತಲ್ಲದೆ ತನ್ನಾಳ್ದನ ನೆಲೆಯಂ ತನ್ನ ನೆಲೆಯುಮಂ ತಿಳಿದಿರ್ಪುದರಿಂ ನಾರಾಯಣಂ ತನ್ನಾಳ್ಗಳಪ್ಪವೊಮ್ಮೆಳ್ನಿವಮಿಲ್ಲದ ನೇಹಂಬೆರೆಸಿ ಎಳಸಿಸುವಿನೆಡರಂ ತೀರ್ಚಲ್ಕೆಂದೌಷಧಂಗುಡಿವ ತಾಯಂತೆ ತಾನಿತ್ತ ಕರಣಕಳೇಬರಂಗಳಿಂ ತಾನಿತ್ತ ಪೂಜೋಪಕರಣಂಗಳಿಂ ತನ್ನಂ ತಾನೆ ಪೂಜೆಗೆಯ್ವೆನೆಂದು ತನ್ನ ಸ್ವರೂಪ ಪಾರತಂತ್ರ್ಯಮಂ ತಿಳಿದು ನಿರ್ಭರನಾಗಿರ್ಪಂ. ಈ ನೆಲೆ ಸತ್ಸಹವಾಸದಿಂದೆಯುಂ ಸದಾಚಾರ್ಯಸಮಾಶ್ರಯಣದಿಂದೆಯುಂ ಗುರುಕುಲವಾಸದಿಂದೆಯುಂ ಭಗವತ್ಕಟಾಕ್ಷದಿಂದೆಯುಂ ದೊರೆಕೊಂಬುದಲ್ಲದೆ ಬರಿಯೋದುಗಲ್ವ ಬಲ್ಮೆಯಿಂ ಸಮನಿಸದು. ಈ ಶೇಷತ್ವ ಪಾರತಂತ್ರ್ಯಂಗಳಂ ತಿಳಿವುದೆ ಸಕಲವೇದಾಂತಜ್ಞಾನಮುಂ ಮೂಲಮಂತ್ರಾರ್ಥತತ್ವಮುಂ ಮಂತ್ರರತ್ನ ತಾತ್ಪರ್ಯಮುಂ ಚರಮಶ್ಲೋಕಾರ್ಥನಿಷ್ಕರ್ಷಮುಮೆನಿಸಿರ್ಕುಂ. ಇದನೆ ದಿವ್ಯಸೂರಿಗಳ್, ತಮ್ಮ ತಮ್ಮ ದಿವ್ಯಪ್ರಬಂಧಗಳಿಂ ಪಲವಗೆಯಿಂ ನಿರವಿಸುವರ್; ನಾಥಯಾಮುನಯತಿ ವರಾದಿಗಳಿದನೆ ತಮ್ಮ ತಮ್ಮಡಿಗಳಂ ಪೊರ್ದ್ದಿದ ಶಿಷ್ಯರ್ಗುಪದೇಶಂಗುಡುವರ್; ಇವನಿರವಂ ನಿರವಿಸೆ ಮುಂ ಕೊಲ್ಲಿನಗರಗಳುದಿಸಿದ ಕುಲಶೇಖರನಂ ನೆನೆಯಿಸುವನೆಂದು ಮನದೊಳಾನಂದಂಬಡೆಯುತ್ತಿರ್ಪಿನಂ – ರಾಯನುಂ ಮಂತ್ರಸ್ನಾನಾಲಂಕಾರಭೋಜ್ಯಾಸನಂಗಳೊಳ್ತತ್ತದುಚಿತಭಗವದುಪ ಚಾರಂಗಳಿಂದಾರಾಧನಮಂ ನೆಗಳಿಸಿ ತೀರ್ಥಪ್ರಸಾದಂಗೊಂಡು ಕೃತಾರ್ಥನೆನಿಸಿ ಮತ್ತಂ ಭಗವದ್ಗುಣಾನುಭವಕ್ಕೆಳಸಿ ಅಳಹಿಯ ಸಿಂಗರಾರ್ಯರಂ ನೋಡಿ ಸ್ಮೃತೀತಿಹಾಸಪುರಾಣಂಗಳೊಳ್ ಭಗವದ್ವೈಭವಮಂ ಸಂಶಯವಿಪರ್ಯಯಮಿಲ್ಲದಂತೆ ಸೊಲ್ಲಿಸುವೊಂದಂಶಮಂ ಪೇಳವೇಳ್ಕುಮೆಂಬುದುಮದರ್ಕವರ್ಪರ್ಕಳಂಗೊಂಡು ಗುರುಪರಂಪರೆಯಂ ನೆನೆದುಪಕ್ರಮಿಸಿ ತಿಳುಪಿದರಂದೆಂತೆನೆ:

ಶ್ರಿಯಃಪತಿಯುಮನಾಪ್ತ ಸಮಸ್ತಕಾಮನುಮಖಿಲಹೇಯಪ್ರತ್ಯನೀಕನುಂ ಸಮಸ್ತಕಲ್ಯಾಣಗುಣಾಶ್ರಯನುಮಪ್ಪ ಶ್ರೀಮನ್ನಾರಾಯಣಂ ಬ್ರಹ್ಮಾದಿದೇವತೆಗಳಂ ಮನುಷ್ಯರುಮಂ ಸೃಜಿಸಿಯವರ್ಗೆ ಹಿತಾಹಿತಮಂ ತಿಳಿಪುದರ್ಕೆ ನಾಲ್ಕುಂ ವೇದಂಗಳನುಪದೇಶಂಗೆಯ್ದು ಆ ವೇದಾರ್ಥಮಂ ವ್ಯಕ್ತವಾಗಿ ತಿಳಿವುದರ್ಕೆಸ್ಮೃತೀತಿಹಾಸಪುರಾಣಂಗಳಂ ನಿರವಿಸಿದಂ. ಅವರೊಳ್ ಸ್ಮೃತಿಗಳ್ ಭಗವದಾರಾಧನರೂಪಮಾದ ವರ್ಣಾಶ್ರಮೋಚಿತಕರ್ಮಂಗಳಂ ವಿಧಿಸುವ ವೇದಂಗಳ ಪೂರ್ವಭಾಗದರ್ಥಮಂ ತಿಳುಪುವುವು ಇತಿಹಾಸಪುರಾಣಂಗಳೆರಡುಂ ಭಗವತ್ ಸ್ವರೂಪರೂಪಗುಣವಿಭವೈಶ್ವರ್ಯಂಗಳಂ ಪ್ರತಿಪಾದಿಸುವ ವೇದಾಂತಂಗಳ ತತ್ವಾರ್ಥಮಂ ವ್ಯಕ್ತಮಾಗಿ ತಿಳುಪುವುವು. ಈ ಎರಡರೊಳಂ –

ಶ್ಲೋ ॥

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।

ಎಂಬ ವಚನದೊಳಿತಿಹಾಸಮಂ ಮೊದಲ್ವೇಳ್ದುದರಿಂದಿದೆ ಮುಖ್ಯಮಾಗಿರ್ಕುಂ. ಇತಿಹಾಸಂಗಳೊಳಂ ದ್ವಾಪರಾಂತದೊಳ್ ವೇದೋದ್ಧರಣಾರ್ಥವಾಗಿ ಶ್ರೀಮನ್ನಾರಾಯಣಾಂಶದಿಂದುದಿಸಿದ ವೇದವ್ಯಾಸರ್ ಸಕಲವೇದಶಾಸ್ತ್ರಾರ್ಥಂಗಳನಾರೈದು ತಾಂ ತಿಳಿದ ಪಲವುಂ ತತ್ವಾರ್ಥವಮಂ ಲೋಕಹಿತಾರ್ಥವಾಗಿ ಪವಣ್ಗೊಳಿಸಿದುದರಿಂದೀ ಮಹಾಭಾರತಮೆ ಪ್ರಬಲಮಾಗಿರ್ಕುಂ. ಇದರೊಳುಂ ಭಗವದ್ವಿಷಯಮನೇ ಪ್ರತಿಪಾದಿಪುದರಿಂ ಶ್ರೀವಿಷ್ಣುಸಹಸ್ರನಾಮಮುಂ ಮೋಕ್ಷಧರ್ಮಮುಂ ಭಗವದ್ಗೀತೆಯುಮುತ್ತಮಂಗಳಾಗಿರ್ಪುವು. ಇವರೊಳ್ ವಿಷ್ಣುಸಹಸ್ರನಾಮಮಂ ಭಗವದಾರಾಧನಜಪಾದ್ಯುಪಯೋಗಮಾಗಿರ್ದೊಡಮದರಿಂ ತತ್ವಹಿತಪುರುಷಾರ್ಥಂಗಳಂ ತಿಳಿವುದರಿಂದಾಗಿರ್ಕುಂ. ಮೋಕ್ಷಧರ್ಮಂ ಸಕಲಾರ್ಥಪ್ರತಿಪಾದಕಮಾಗಿರ್ಕುಮಾದೊಡಂ ಯೀ ಭಗವದ್ಗೀತೆ –

ಶ್ಲೋ ॥

ಗೀತಾಸು ಗೀತಾಃ ಕರ್ತವ್ಯಾಃ ಕಿಮನ್ಯೈಶ್ಶಾಸ್ತ್ರಸಂಗ್ರಹೈಃ ।
ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ವಿನಿಸ್ಸೃತಾಃ ॥

ಎಂಬ ಮರ್ಯಾದೆಯಿಂ ಶ್ರೀಕೃಷ್ಣನ ದಿವ್ಯಮುಖಾರವಿಂದೋದ್ಭವಮಾಗಿರ್ಪುದರಿಂ ಸರ್ವೋತ್ಕೃಷ್ಟಮೆನಿಪುದು. ಅದರಿಂದಿದಂ ಸಕಲವೈದಿಕರುಮುಪನಿಷತ್ತೆಂದು ಪೇಳ್ವರ್. ತದ್ವ್ಯಾಖ್ಯಾತೃಗಳುಂ ಮೂವತ್ತೆರಡುಮುಪನಿಷತ್ತುಗಳೊಡನಿದನುಂ ವ್ಯಾಖ್ಯಾನಂಗೆಯ್ದರ್ –ಎಂದಿದರ ಮಹಾತ್ಮ್ಯಮನುಪಪಾದಿಸಿ ಪದಿನೆಂಟುಮಧ್ಯಾಯಂಗಳನೋದಿಯದರೊಳ್ ಶ್ಲೋಕಂಗಳೇಳುಂನೂರಕ್ಕಂ ಪ್ರತಿಶ್ಲೋಕದರ್ಥಮಂಪೇಳ್ವುದುಂ– ಆದರದೊಳ್ ಕೇಳ್ದರಸನುಮಖಿಳತತ್ವಾರ್ಥಂಗಳಂ ಕರತಲಾಮಲಕಮಾಗಿ ತಿಳಿ[ದು] ತಿಳಿದರ್ಥಂಗಳೆಂದುಂ ಮರೆಯದಂತಿವೆಲ್ಲಮಂ ಸಂಗ್ರಹಿಸಿ ಪೇಳಲ್ವೇಳ್ಕುಮೆಂದು ಬೆಸಗೊಂಬುದುಮಿವರುಂ –

ಶ್ಲೋ ॥

ಯುಕ್ತಂ ಹಿ ವಿದುಷಾಂ ಲೋಕೇ ಸಮಾಸನ್ಯಾಧಾರಣಂ ।

ಎಂಬ ತೆರದಿಂ ವಿಸ್ತರವಾಗಿ ಕೇಳ್ದರ್ಥಮಂ ಸಂಕ್ಷೇಪಮಾಗಿಯುಂ ಕೇಳ್ದೊಡೆ ಮರವುದೋರದೆ ನೆನಪಾಗಿರ್ಕುಮೆಂದು ಮನಮೊಲ್ದು ಪದಿನೆಂಟಧ್ಯಾಯಕ್ಕಮೊಂದು ಸಮುದಾಯಾರ್ಥವುಮಂ. ಆರುಮಾರುಮಧ್ಯಾಯಂಗಳ್ಗೊಂದೊಂದರ್ಥಮಾಗಿ

ಮೂರುಂ ಷಟ್ಕಾರ್ಥಂಗಳುಮಂ, ಒಂದೊಂದಧ್ಯಾಯಕ್ಕೊಂದೊಂದರ್ಥಮಾಗಿ ಪದಿನೆಂಟುಮಧ್ಯಾಯಾರ್ಥಮಗಳುಮಂ ಸಂಗ್ರಹಿಸಿ ಸುಲಭಮಾಗಿಯುಂ ಸುವ್ಯಕ್ತಮಾಗಿಯುಂ ತಿಳುಪಿದರದೆಂತೆನೆ:

ತಮ್ಮ ತಮ್ಮ ವರ್ಣಾಶ್ರಮೋಚಿತಮಾಗಿ ವೈರಾಗ್ಯಂಬೆರಸಿದ ಕರ್ಮಜ್ಞಾನಂಗಳಿಂ ಬಳೆದ ಭಕ್ತಿಗಂ ವಿಷಯಮಾದ ಪರಬ್ರಹ್ಮಂ ಶ್ರೀಮನ್ನಾರಾಯಣನೆಂಬುದು ಸಮುದಾಯಾರ್ಥಂ. ಜ್ಞಾನಕರ್ಮಂಗಳೆರಡುಂ ಯೋಗಾಭ್ಯಾಸದೊಡಗೂಡಿ ಆತ್ಮಸಾಕ್ಷಾತ್ಕಾರಸಾಧನಮಾಗಿರ್ಪುದೆಂಬುಂದಂ ಮೊದಲ ಆರುಮಧ್ಯಾಯದೊಳ್ ಪೇಳ್ವುದು. ಜ್ಞಾನಕರ್ಮಂಗಳಿಂದುದಿಸಿದ ಭಕ್ತಿಯೋಗದಿಂ ಪರಮಾತ್ಮ ತತ್ವಜ್ಞಾನಂ ಪುಟ್ಟುವುದೆಂಬುದನೆರಡನೆಯ ಆರುಮಧ್ಯಾಯದೊಳ್ ಪೇಳ್ವುದು. ಪ್ರಕೃತಿ ಜೀವಾತ್ಮಪರಮಾತ್ಮ ಸ್ವರೂಪಮಂ ಕರ್ಮಜ್ಞಾನಭಕ್ತಿಗಳ ಸ್ವರೂಪಮುಮಂ ಕಡೆಯಾರುಮಧ್ಯಾಯದೊಳ್ಪೇಳ್ವುದು.

ಎರಡುಂ ದಳಕ್ಕಂ ಪುಯಲಡಸಿ ಇರುವ ಸಮಯದೊಳ್ ಬಂಧುಸ್ನೇಹಮುಂ ಕಾರುಣ್ಯಮುಂ ಸ್ವಜಾತಿಧರ್ಮಮಾದ ಯುದ್ಧದೊಳ ಧರ್ಮಬುದ್ಧಿಯುಂ ಪುಟ್ಟಿಯರ್ಜುನಂ ವ್ಯಾಕುಲಚಿತ್ತನಾದನೆಂಬುದಂ ಮೊದಲಧ್ಯಾಯದೊಳುಂ; ಇಂತು ಶೋಕಾವಿಷ್ಟನಾಗಿ ತನ್ನಡಿಗೆರಗಿದರ್ಜುನಂಗೆ ಅನಿತ್ಯಮಾದ ಶರೀರಾದಿಗಳತ್ತಣಿಂ ಬೇರಾಗಿ ನಿತ್ಯಮಾದ ಜೀವಾತ್ಮನಂ ತಿಳಿವ ಸಾಂಖ್ಯಮೆಂಬ ಬುದ್ಧಿಯುಂ ಫಲಸಂಗಕರ್ತೃತ್ವರಹಿತಮಾದ ಕರ್ಮಸ್ವರೂಪಮಂ ತಿಳಿವ ಯೋಗಮೆಂಬ ಬುದ್ಧಿಯುಮಾತ್ಮಾವಲೋಕನ ಸಾಧನಮಾದ ಸ್ಥಿರಬುದ್ಧಿಯುಂ ಪುಟ್ಟಿಪುವೆಂಬುದಮೆರಡನೆಯ ಅಧ್ಯಾಯದೊಳಂ; ಈ ಕರ್ಮದಿಂದೀಫಲಮಂ ಸಾಧಿಪೆನೆಂಬ ಫಲಾಪೇಕ್ಷೆಯಂ ಈ ಕರ್ಮಮೆನಗೆ ಫಲಮಂ ಸಾಧಿಪುದರಿಮದೆನ್ನದೆಂಬ ಸಂಗಮುಮನೀ ಕರ್ಮಮನಾನೆಸಗುವೆನೆಂಬ ಕರ್ತೃತ್ವಮುಮಂ ಕಳೆದು ಸತ್ವರಜಸ್ತಮೋಗುಣಂಗಳ್ ತಮ್ಮ ತಮ್ಮ ಸ್ವರೂಪಕ್ಕನು ಗುಣಮಾದ ಕರ್ಮಂಗಳಂ ಗೆಯಿಸುವುವೆಂದಾದೊಡಂ ಕರಣಕಳೇಬರಂಗಳನಿತ್ತ ಪರಮಾತ್ಮನೆ ಗೆಯಿಸುವನೆಂದಾದೊಡಂ ತಿಳಿದು ಕರ್ಮಮನಾಚರಿಸಲ್ವೇಳ್ಪುದೆಂಬುದಂ ಮೂರನೆಯ ಅಧ್ಯಾಯದೊಳಂ; ಈ ಕರ್ಮಯೋಗದೊಳ್ ಜ್ಞಾನಮುಂ ಬೆರೆಸಿರ್ಪುದೆಂಬುದಂ ಈ ಕರ್ಮಭೇದಂಗಳುಮಂ ಅದರೊಳ್ ಜ್ಞಾನಾಂಶಮೆ ಪ್ರಧಾನಮೆಂಬುದಂ ಈ ಕರ್ಮಾರಾಧ್ಯನಪ್ಪ ಶ್ರೀಮನ್ನಾರಾಯಣನ ಅವತಾರ ರಹಸ್ಯಂಗಳುಮಂ ನಾಲ್ಕನೆಯ ಅಧ್ಯಾಯದೊಳಂ; ಕರ್ಮಯೋಗಮನಾಚರಿಪುದು ಸುಲಭಮೆಂದುಮಿದರಿಂ ಶೀಘ್ರಂ ಫಲಂ ಸಿದ್ಧಿಯಪ್ಪುದೆಂದುಂ ಇದರ ಭೇದಂಗಳುಮಂ ಐದನೆಯ ಅಧ್ಯಾಯದೊಳಂ; ಯೋಗಾಭ್ಯಾಸ ಪ್ರಕಾರಮಂ ನಾಲ್ಕುಂ ತೆರನಾದ ಯೋಗಿಗಳ ಭೇದಮುಮಂ ಯೋಗಸಾಧನಂಗಳುಮಂ ಯೋಗಸಿದ್ಧಿಯುಮಂ ಪಲವುಂ ತೆರದ ಯೋಗಿಗಳತ್ತಣಿಂ ಪರಮಾತ್ಮೋಪಾಸಕನಾದ ಯೋಗಿಯೆ

ಮುಖ್ಯನೆಂಬುದುಮನಾರನೆಯ ಅಧ್ಯಾಯದೊಳಂ; ಪರಮಪುರುಷನ ಮಹಿಮೆಯಂ ಜೀವಾತ್ಮಂಗೆ ಪ್ರಕೃತಿಬಂಧದಿಂದಾಮಹಿಮೆ ತಿಳಿಯದಿರ್ಪ ತೆರನಂ ಆ ಪ್ರಕೃತಿಬಂಧಮಂ ಪರಿವುದರ್ಕೆ ಆ ಪರಮಪುರುಷನಡಿವಿಡಿವುದೆ [ಉ]ಪಾಯಮೆಂಬುದುಮಂ ನಾಲ್ಕುಂ ತೆರನಾದ ಭಕ್ತರುಮಂ ಅವರೊಳಂ ಪರಮಾತ್ಮ ಪ್ರಾಪ್ತಿರೂಪಮಾದ ಮುಕ್ತಿಯಂ ಬಯಸುವ ಜ್ಞಾನಿಯೇ ಉತ್ತಮನೆಂಬುದನೇಳನೆಯ ಅಧ್ಯಾಯದೊಳಂ; ಐಹಿಕಾಮುಷ್ಮಕಮಾದೈಶ್ವರ್ಯಮಂ ಜೀವಾತ್ಮ ಪ್ರಾಪ್ತಿರೂಪಮಾದ ಕೈವಲ್ಯಮಂ ಪರಮಾತ್ಮ ಪ್ರಾಪ್ತಿ ರೂಪಮಾದ ಮುಕ್ತಿಯಂ ಬಯಸುವ ಮೂರುಂ ತೆರದ ಭಕ್ತರ್ಗೆ ಬೇರೆವೇರೆ ತಿಳಿಯವೇಳ್ಪುದಿದೆಂಬುದನೆಂಟನೆಯ ಅಧ್ಯಾಯದೊಳಂ; ಪರಮಪುರುಷನ ನಿರತಿಶಯಮಾಹಾತ್ಮ್ಯಮಂ, ಅವಂ ಮನುಷ್ಯರೊಳವತರಿಸಿದೊಡಂ ಮಹಿಮೆಯೊಂದೆ ತೆರನಾಗಿರ್ಪುದೆಂಬುದುಮಂ, ಭಗವದ್ಭಕ್ತನ ಬಗೆಗಳುಮಂ, ಭಕ್ತಿಯೋಗದ ನೆಲೆಯುಮನೊಂಬತ್ತನೆಯ ಅಧ್ಯಾಯದೊಳಂ; ಪರಮಪುರುಷನೊಳ್ ಭಕ್ತಿಪುಟ್ಟುವುದರ್ಕಾಗಿಯುಂ ಪುಟ್ಟಿದ ಭಕ್ತಿ ಪೆರ್ಚುವುದರ್ಕಾಗಿಯುಂ ಅವನ ಕಲ್ಯಾಣಗುಣಂಗಳುಮಂ ಈ ಜಗಮೆಲ್ಲಮುಮವನೊಡವೆಯುಮೊಡಲುಮಾಗಿಯವನಧೀನಮಾಗಿರ್ಪುದೆಂಬುದುಮಂ ಪತ್ತನೆಯ ಅಧ್ಯಾಯದೊಳಂ; ಪರಮಪುರುಷನ ದಿವ್ಯಮಹಿಮೆಯನರ್ಜುನಂ ಸಾಕ್ಷಾತ್ಕಾರಮಾಗಿ ಕಂಡ ಬಗೆಯನಾ ಪರಮಪುರುಷನಂ ತಿಳಿವುದರ್ಕಮವನಡಿದಾವರೆಗಳಂ ಸೇರುವುದರ್ಕಂ ಭಕ್ತಿಯೇ ಉಪಾಯಮೆಂಬುದುಮಂ ಪನ್ನೊಂದನೆಯ ಅಧ್ಯಾಯದೊಳಂ; ಭಗವದುಪಾಸನಾರೂಪಮಾದ ಭಕ್ತಿಯೋಗಮೇ ಸರ್ವೋತ್ತಮಮೆಂಬುದಂ, ಇದರೊಳ್ ಶಕ್ತಿಯಿಲ್ಲದವರ್ಗೆ ಈ ಭಕ್ತಿಯಂ ಸಾಧಿಸುವುದರ್ಕೆ ತಮ್ಮ ತಮ್ಮ ಶಕ್ತ್ಯನುಗುಣಮಾದ ನಡತೆಗಳುಮಂ ಜೀವೋಪಾಸಕನ ನಡತೆಗಳುಮಂ ಪನ್ನೆರಡನೆಯ ಅಧ್ಯಾಯದೊಳಂ: ಶರೀರದ ನೆಲೆಯಂ ಆತ್ಮಜ್ಞಾನಕ್ಕೆ ಸಾಧನಂಗಳುಮಂ, ಆತ್ಮಸ್ವರೂಪಮುಮಂ ಆತ್ಮಂಗೆ ಸಂಸಾರಸಂಬಂಧಕಾರಣಮುಮಂ, ಪ್ರಕೃತಿ ಜೀವಾತ್ಮರ ಭೇದಮುಮಂ ಪದಿಮೂರನೆಯ ಅಧ್ಯಾಯದೊಳಂ; ಸತ್ವರಜಸ್ತಮೋಗುಣಂಗಳ್ಜೀವಾತ್ಮಂಗೆ ಬಂಧಕಂಗಳಾಗದ ತೆರನಂ, ಆಯಾ ಗುಣಂಗಳ್ಪೆರ್ಚಿರ್ಪುದೆಂಬುದರ್ಕೆ ಕುರುಪುಗಳಾದ ಕಾರ್ಯಂಗಳುಮಂ, ಆಯಾ ಗುಣಂಗಳಿಂ ಬರ್ಪ ಉತ್ತಮ ಮಧ್ಯಮಾಧಮಂಗಳಾದ ಜನ್ಮಂಗಳುಮಂ, ಆಯಾ ಗುಣಂಗಳಂ ಜಯಿಸಿರ್ಪನ ನಡತೆಗಳಂ, ಜಯಿಸುವ ಪ್ರಕಾರಮುಮಂ ಪದಿನಾಲ್ಕನೆಯ ಅಧ್ಯಾಯದೊಳಂ; ಪ್ರಕೃತಿಯೊಡಗೂಡಿ ಸಂಸರಿಸುವ ಜೀವಾತ್ಮವರ್ಗಮುಂ ಪ್ರಕೃತಿಬಂಧಮಂ ಕಳೆದು ಮುಕ್ತಿವಡೆದಿರ್ಪ ಜೀವಾತ್ಮವರ್ಗಮುಂ, ಪುರುಷರೆನಿಪ್ಪುವು– ಈ ಎರಡಕ್ಕಮೊಡೆಯನಾಗಿ ಇವರೊಳ್ ವ್ಯಾಪಿಸಿಯಿವಂ ಪೊರೆವುದರಿಂ ಪರಮಾತ್ಮಂ ಪುರುಷೋತ್ತಮನೆನಿಸಿ, ಈ ಜೀವಾತ್ಮರತ್ತಣಿಂ ಬೇರಾಗಿರ್ಕುಮೆಂಬುದಂ ಪದಿನೈದನೆಯ ಅಧ್ಯಾಯದೊಳಂ: ವೇದಶಾಸ್ತ್ರಂಗಳೊಳ್ವಿಶ್ವಾಸಮುಂಟಾಗಿ ನಡೆವವರ್

ದೇವಪ್ರಕೃತಿಯುವರೆಂದುಂ ಈ ವಿಶ್ವಾಸಮಿಲ್ಲದೆ ತಮ್ಮಿಚ್ಛೆವಂದಂತೆ ನಡೆವವರಸುರಪ್ರಕೃತಿಯವರೆಂದುಂ ತಿಳುಪಿ, ಶಾಸ್ತ್ರದೊಳ್ವೇಳ್ದಂತೆ ನಡೆವವರ್ಗಲ್ಲದೆ ತತ್ತ್ವಜ್ಞಾನಮುಂ ಸದಾಚಾರಮುಂ ದೊರಕೊಳ್ಳದೆಂಬುದಂ ಪದಿನಾರನೆಯ ಅಧ್ಯಾಯದೊಳಂ; ಶಾಸ್ತ್ರವಿಧಿಯಿಲ್ಲದೆ ನಡೆವ ನಡತೆಯೆಲ್ಲಮುಂ ಆಸುರಮಾದುದರಿಂ ನಿಷ್ಫಲಮೆಂದುಂ, ಶಾಸ್ತ್ರವಿಹಿತಮಾದ ಕರ್ಮಮುಂ ಸಾತ್ವಿಕರಾಜಸತಾಮಸಭೇದದಿಂ ಮೂರುಂ ತೆರನಾಗಿರ್ಕುಮೆಂದದರ ಕುರುಪುಗಳಂ ಪದಿನೇಳನೆಯ ಅಧ್ಯಾಯದೊಳಂ; ತಾಮಸರಾಜಸಸಾತ್ವಿಕಂಗಳಾದ ನಡತೆಗಳಂ ಬೇರೆವೇರೆ ತಿಳುಪಿ ಇವರೊಳ್ ಮೋಕ್ಷಾರ್ಥಿಗೆ ಸಾತ್ವಿಕಂಗಳೆ ನಡೆಯತಕ್ಕವೆಂಬುದುಂ, ಈ ಸಾತ್ವಿಕ ಕರ್ಮಾಚರಣದಿಂ ಪೆರ್ಚಿದ ಭಗವದ್ಭಕ್ತಿಯೆ ಮೋಕ್ಷಸಾಧನವೆಂಬುದಂ ಪದಿನೆಂಟನೆಯ ಅಧ್ಯಾಯದೊಳಂ ಪ್ರತಿಪಾದಿಪುದು.

ಇವೆಲ್ಲಮಂ ಭಾವಿಸೆ ತಪಂ ಗೆಯ್ವುದುಂ, ತೀರ್ಥಯಾತ್ರೆಗಳಂ ಮಾಳ್ಪುದುಂ, ದಾನಯಜ್ಞಾದಿಗಳನಾಚರಿಪುದುಂ ಮೊದಲಾದುದು ಕರ್ಮಯೋಗಮೆನಿಪುದು; ಪರಿಶುದ್ಧಾಂತಃಕರಣದಿಂದಾತ್ಮಜ್ಞಾನಂಗೆಯ್ವುದು ಜ್ಞಾನಯೋಗಮೆನಿಪುದು; ಅತ್ಯಂತ ಪ್ರೀತಿಯಿಂ ಪರಮಾತ್ಮಧ್ಯಾನಮಂ ಮಾಳ್ಪುದು ಭಕ್ತಿಯೋಗಮೆನಿಪುದು. ಇವು ಮೂರುಮೊಂದರೊಳೊಂದು ಬೆರೆದಿರ್ಪುವು. ಅದರೊಳ್ಕರ್ಮಯೋಗಿಗೆ ಕರ್ಮಂ ಪ್ರಧಾನಮಾಗಿ ಜ್ಞಾನಭಕ್ತಿಗಳೆರಡುಮದಕ್ಕಂಗಂಗಳಾಗಿರ್ಪುವುವು; ಭಕ್ತಿಯೋಗಿಗೆ ಭಕ್ತಿಯೇ ಪ್ರಧಾನಮಾಗಿ ಕರ್ಮಜ್ಞಾನಂಗಳೆರಡುಮದರ್ಕಂಗಂ[ಗಳಾಗಿರ್ಪುವು*]. ಈ ಮೂರುಂ ಯೋಗಂಗಳ್ಗಂ ತಮ್ಮ ತಮ್ಮ ವರ್ಣಾಶ್ರಮೋಚಿತಮಾದ ಸದಾಚಾರ ಮಂಗಮಾಗಿರ್ಪುದು. ಮಿಕ್ಕ ಎರಡುಂ ಯೋಗಂಗಳತ್ತಣಿಂ ಭಕ್ತಿಯೋಗಮೆ ಉತ್ತಮಂ. ಇದೈಶ್ವರ್ಯಂ ಕೈವಲ್ಯಂಗಳ್ಗೆ ಸಾಧನಮಾಗಿರ್ದೊಡಮಿದರಿಂ ಮುಕ್ತಿಯಂ ಸಾಧಿಪುದೇ ಚಾತುರ್ಯಂ. ಇಂತು ಮೋಕ್ಷಾರ್ಥಿಯಾದ ಭಕ್ತಂ ತನ್ನ ಶರೀರಸ್ಥಿತಿ ಮುಂತಾದ ಯೋಗಕ್ಷೇಮದೊಳಂ ತನಗಾಸಕ್ತಿಯಿಲ್ಲದೆ ಸ್ವಾಮಿ ಕಟ್ಟುಮಾಡಿದಂತಿರ್ಪುದೆಂದು ಪರಮಾತ್ಮಾಧೀನಂಗೆಯ್ದು ತನಗೆ ಪರಮಾತ್ಮನ ಸೇವೆ ದೊರಕಿದುದೇ ಸುಖಮುಂ, ಅದಿಲ್ಲದುದೇ ದುಃಖಮುಮಾಗಿರ್ಪುದರಿಂದಾವಗಂ ಸ್ವಾಮಿಯ ಧ್ಯಾನಮುಂ ವಂದನಮುಂ ಕೀರ್ತನಮುಮೇ ಯಾತ್ರೆಯಾಗಿರ್ಪಂ; ಇರ್ಪ ಕಾಲಮೆಲ್ಲಮುಂ ತನ್ನ ವರ್ಣಾಶ್ರಮೋಚಿತವಾದ ಸದಾಚಾರಮನಾಚರಿಸುವೆಡೆಯೊಳ್ ಸಾಧನಬುದ್ಧಿಯಂ ಬಿಟ್ಟು ಸ್ವಾಮಿಯ ಸೇವೆಯೆಂದು ನಡಸುತ್ತೆ ನಿರ್ಭರನಾಗಿರ್ದು ಮೋಕ್ಷಮಂ ಪಡೆವಂ –ಎಂದು ಗೀತಾತಾತ್ಪರ್ಯಂ.

ಎಂದಿಂತಳಹಿಯ ಸಿಂಗರಾರ್ಯರೊರೆದ ಸಮುದಾಯಾರ್ಥಮಂ, ಷಟ್ಕಾರ್ಥಂಗಳನಧ್ಯಾಯಾರ್ಥಂಗಳ ತಾತ್ಪರ್ಯಾರ್ಥಮುಮಂ, ಬಗೆಯೊಳ್ಕುರುಪ್ಪು ಗೊಂಡು ಸಂತಸಗೊಂಡು ರಾಯಂ ತನ್ನುಳ್ಳ ದೇಶಕೋಶಮನಿತುಂ ಎರವಿಲ್ಲದೆ ತನಗಮಿವರ್ಗಂ ಪುದುವಾಗಿರ್ದೊಡಂ ಕುಡುವುದು ಕೊಂಬುದೆಂಬ

ತಮ್ಮಿರ್ವರ ಕುಲಧರ್ಮಮಂ ಪೆರ್ಮೆಗೊಳಿಸಲ್ಕೆಂದು ಉಡೆತೊಡವುಗಳಂ ಪೊನ್ಗಳಮನಗರಂಗಳುಮನಿತ್ತು ಮನ್ನಿಸಿ ಬಳಿಕ್ಕಿರ್ತರದೊಳ್ ನೆರೆದಿರ್ಪ ಋತ್ವಿಕ್ಪುರೋಹಿತನಾಕ್ಷತ್ರಿಕ ಪ್ರಭೃತಿ ನಿಜಾಶ್ರಿತವರ್ಗಕ್ಕಂ ಸ್ವಪರದೇಶದಿಂದೇಳ್ತಂದ ಪಲವುಂ ಶ್ರೋತ್ರಿಯವರ್ಗಕ್ಕಂ ನಿತ್ಯನೈಮಿತ್ತಿಕಾದಿದಾನಂಗಳಂ ಮತ್ತಮವರ್ಬೇಳ್ವ ವಸ್ತುಗಳನಿತ್ತು ಬೀಳ್ಕೊಟ್ಟು ರಹಸ್ಯದೊಳ್ಕುಳಿರ್ದು ಇಷ್ಟಾಲಾಪಂಗೆಯ್ವೆಡೆಯೊಳ್ –ಎಮಗೆ ಯಾದವಗಿರಿ ನಾರಾಯಣನ ಕರುಣಾಕಟಾಕ್ಷದಿಂ ಸರ್ವಾಭೀಷ್ಟಮುಂ ಕೈಸಾರ್ದಿರ್ಕುಂ. ಎನ್ನ ತಮ್ಮಂದಿರಪ್ಪ ದೇವರಾಜರಸ ಮರಿದೇವರಾಜರಸರನಾಂ ಕುವರರ್ಗ್ಗೆತ್ತು ಇರ್ಪುದರಿಂ ಪುತ್ರವಂತನುಮಾಗಿರ್ಪೆಂ. ಆದೊಡಂ ಸಿಸುವಂ ಬಯಸುವ ರಾಣಿಯಂ ನೋಂಪಿಗೆಯಿಸುವ ನೆವದಿಂ ಭೂಲೋಕವೈಕುಂಠಮುಂ ಜ್ಞಾನಮಂಟಪಮುಮೆನಿಪ ಮೇಲ್ಗೋಂಟೆಗೆ ಪೋಪೆನೆಂದೆಣಿಸಿರ್ಪೆಂ –ಎಂಬುದುಂ; ಈ ಮಾರಾಯನ ನುಡಿಗೇಳ್ದವರುಮತ್ಯಂತಸಂತೋಷದಿಂದೆ – ಈಗಳಾ ಯಾದವಗಿರಿಯೊಳ್ ಚೈತ್ರಮಾಸದಾರ್ದ್ರಾ ನಕ್ಷತ್ರದೊಳ್ ತಿರುನಕ್ಷತ್ರಮೆಂಬ ಪಿರಿಯುಕ್ಕೆವಂ ನೆಗಳ್ಗುಮದರ್ಕೆ ಪಲವುಂ ದಿವ್ಯದೇಶಂಗಳಿಂದೆಯ್ತರ್ಪ ದೇಶಿಕಸಾರ್ಥದರ್ಶನದಿಂ ಕೃತಾರ್ಥರಪ್ಪೆವೆಂದೊರೆವುದುಂ;

ರಾಯನುಮತಿಹರ್ಷದಿಂ ಮೌಹೂರ್ತಿಕರ್ಕ್ಳಿರ್ತ ಸುಮುಹೂರ್ತದೊಳಾನೆ ಕುದುರೆ ಕಾಲಾಳ್ಗಳೊಗ್ಗಿನಗ್ಗಳದ ಕಳಕಳಮೆನೊಳಕೊಂಡು ಮೊಳಗುವ ಪಟಹಕಾಹಳಾದಿವಾದ್ಯ ಘೋಷಿತೋಷಿತನಾಗಿ ಪಯಣಗತಿಯೊಳಂತವುರಂ ಬೆರಸು ಯಾದವಾಚಲದ ತಪ್ಪಲಂ ಸಾರ್ದಲ್ಲಿ ಬಲ್ವಡೆಯನಿಳುಪಿ ಮಿತಪರಿಜನಂ ಬೆರಸು ಮುಂತಣ್ಗೆ ನಡೆವುತ್ತಲ್ಲಿ ನೆಟ್ಟನೆ ಬೆಳೆದು ಬಾಂಬಟ್ಟೆಯಂ ಕಟ್ಟಿ ಮುಡಿಯೊಳ್ನೀ ಸರ್ವಟ್ಟುದಳೆದಿರ್ಪುದರಿಂ ಸಿರಿಯರಸನಡಿದೊಳೆಯಲ್ಕೆ ಕಂದದೊಳ್ಮಜ್ಜನದ ಪೊಂದಂಬಿಗೆಯಾಂತೆಸೆವ ದಂತಾವಳದಂತಿರ್ಪ ಕದ್ದಾಳೆಗಳುಂ; ಇತ್ತಲುಮತ್ತಲುಂ ಬಳೆದ ಪಲವುಂ ಕೊಂಬುಗಳೊಳ್ ಪೂತಿರ್ಪುದರಿಂ ತತ್ತದುಚಿತಸ್ಥಾನದೊಳ್ ಪನ್ನೆರಳ್ನಾಮಮನಾಂತ ದೇಶಕರಂತಿರ್ಪ ಕೇದಗೆಗಳುಂ; ಫಲಭರಮಂ ಪೊರಲಾರದೆ ಪೊಡವಿವರೆಗಂ ಬಾಗಿರ್ಪುದರಿಂ ಪರಮಪುರುಷನಡಿದಾವರೆಗೆರಗುವ ಪರಮಭಾಗವತರಂ ದೊರೆಗೊಳ್ವ ಬಾಳೆಗಳುಂ; ಎತ್ತರದೊಳ್ಬೆಳೆದ ನೆತ್ತಿಗೊಂಚಿನೊಳರೆಬಿರಿದ ತಳಿರ್ಗೊಂಚಲಂ ತಾಳ್ದಿಸೆವುದರಿಂ ಪುರುಷೋತ್ತಮಂಗೆ ಮಸ್ತಕದೊಳ್ ಕೈಯೆತ್ತಿ ಮುಗಿವ ಭಕ್ತರಂತಿರ್ಪ ಮಾವುಗಳುಂ; ಎಡೆವಿಡದೊಂದೆ ಸೂಳೊಳ್ಕಿರುನನೆಯಾಂತಿರ್ಪುದರಿಂ ಮಾಧವನ ಮಾನಸಾರಾಧನ ವಿಧಿಯೊಳ್ ನವಿರ್ವಡೆದ ಯೋಗಿಗಳಂ ಪಡಿಗೊಂಬ ಕಡವುಗಳುಂ; ಮೆಲ್ಲೆಲರ ಫಲ್ಲಣೆಗೆ ತಲ್ಲಣಂಗೊಂಡೊಳ್ಳಲರಂ ಚೆಲ್ಲುವ ಬಳ್ಳಿಗೊಂಬುಗೊಂಡಿರ್ಪುದರಿಂದ ಚ್ಯುತನಡಿದಾವರೆಯುಮನರ್ಚಿಸುವ ರ್ಚಕರಂತೆಸೆವ ಸೋಗೆಗಳುಂ; ಪಿಡುದೋಳ್ಗೊನೆಯಿಂದುಕ್ಕಿ ಪರಿವ ತಿಳಿನೀರ್ವೊನಲನನುಗೆಯ್ವುದರಿಂ ಶಾರ್ಙ್ಗಿಯ

ಪೂಜೆಗೆ ಭೃಂಗಾರೋದಕಮಂ ಕೈನೆಗಪಿ ಸೂಸುವ ಸೂರಿಗಳಂತೆ ಸೊಗಯಿಪ ಕಿರುವೆಟ್ಟುಗಳುಂ; ಮೀರಿ ಮುಂತಣ್ಗೆ ನಡೆವ ನಿಡುಗೊಂಬಿನೊಳಿರುಳೆಳವೆರೆಯಂ ತಳೆದಿರ್ಪುದರಿಂ ಪುಂಡರೀಕಾಕ್ಷನ ಗಂಡೂಷೋದಕಮನಾನಲ್ಕೆ ಪಳುಕುಗಾಳಾಂಜಿದಳೆದ ಪಳಊಳಿಗದವರಂ ಬಳಿಸಲ್ವ ಪೊನ್ನೆಗಳುಂ; ಕೊಂಬುಗಳೆಡೆಯೊಳ್ ಪ್ರಲಂಬಮಾದ ಪಲವುಂ ಪೆರ್ಗಾಯ್ಗಳಂ ತಳೆದಿರ್ಪುದರಿಂ ಬನಮಾಳಿಗೆ ಧರಿಸಲ್ಕೆಂದು ಸಮೆದ ಮಾಲೆಗಳನೊಳಕೊಂಡಲರ್ಗೂಡೆಗಳನಾಂತು ಸನ್ನದಮಾದ ಮಾಲೆಗಾರರಂತಿರ್ಪ ಪಲಸುಗಳುಂ; ತಾಳಿಂ ತುದಿವರೆಗಂ ಪೂತು ಪೊದೆಳ್ದೊಂದು ಕೊಂಬನಡರ್ದು ಪಡಲ್ವಟ್ಟು ಜೋಲ್ವ ಕಾಳ್ಮಲ್ಲಿಗೆಯಂ ಪೊತ್ತಿರ್ಪುದರಿಂ ದೈತ್ಯಾರಿಗೆ ಧರಿಸಲ್ಕೆ ಕಮ್ಮಲರ್ದೊಳಸಿವೆರಸು ಸಮೆದ ದುಂಡದಂಡೆಯಂ ನೆಗಪಿ ನೀಡುವ ಪರಿಚಾರಕರಂ ನೆರಂಗೊಂಬ ಸುರಗಿಗಳುಂ; ಬಿರಿದ ಪೆರ್ಗ್ಗಾಯ್ವಡೆದಿರ್ಪು[ದ]ರಿಂ ಶೌರಿಗಲಂಕರಿಸಲ್ಕೆ ಬಣ್ಣಗರಡಿಗೆಯಂ ಮುಚ್ಚಳ್ದೆಗೆದು ರನ್ನಸರಮಂ ನೆಗಳ್ಚುವ ಭಂಡಾರಿಗರ ಬಗೆವಡೆದ ದಾಡಿಮಂಗಳುಂ; ಪೊಣ್ಮಿ ಪೊಗರೇರಿದ ಪೊಂಬಾಳೆಗಳಂ ಪೊತ್ತಿರ್ಪುದರಿಂ ಹರಿಗೆ ಬೆಳ್ಚವರಂ ಬೀಸುವ ಹರಿದಾಸರ ಪಾಂಗಿನೊಳಿರ್ಪ ತೆಂಗುಗಳುಂ; ಕುಕಿಲ್ತುಗಳಪಿ ಪಾಡಿ ಕೇಗುವಿಡಿವುದರಿಂ ತರುವಾಯಿಂ ಋಗ್ಯಜುಸ್ಸಾಮಂಗಳುಮಂ ದ್ರಾವಿಡಪ್ರಬಂಧಗಳುಮನನುಸಂಧಿಪಧ್ಯಾಪಕರನನುಕರಿಸುವ ಕೋಗಿಲೆ ಗಿಳಿ ದುಂಬಿ ಸೋಗೆಗಳುಂ ಮನಂಗೊಳೆ – ಮೆರೆವ ನೆಲಗಾಡಂ ನಿರವಿಸುತ್ತೆ;

ಮುಂತಣ್ಗೆ ನಡೆದಾಂಟೆಡೆಯೊಳ್ ಮುಂ ದತ್ತಾತ್ರೇಯುನು ತ್ತಮಾಶ್ರಮಂಗೊಳಲ್ಕೆ ಮುಕ್ಕೋಲೊಂಡ ಸುತ್ತುವೇಲಿಯ ಬಿದಿರ್ವಿಂಡುಗಳಂ; ಆ ನಡುವೆ ರಘುಪುಂಗವಂ ಮಲಂಗಲೆಂದು ಸೌಮಿತ್ರಿ ಸಮೆದ ನುಣ್ಚಾಸರೆಗಳಂ; ಸತ್ಯಭಾಮೆಯುಂ ಅಂತಃಪುರದಂಗಳದೊಳ್ ಪಣ್ತುದಿರ್ದ ಬಿತ್ತುಗಳಿಂ ಮೊಳೆತೆಳೆಸಸಿಗಳಂ ತಂದು ಮುಕುಂದನುಂ ತಾನುಂ ದೇವಿಯರುಂ ತಂಮ ಸಿರಿಗೈಗಳಿಂದ ನೆಟ್ಟು ನೀರೆರೆದು ಬಳೆಯಿಸಿದ ಪಲವುಮಭಿಜಾತಪಾರಿಜಾತಂಗಳಂ; ಮತ್ತಮಾವಗಂ ತಳಿರ್ತು ನನೆಯೇರಿ ಪೂತು ಕಾತು ಪಣ್ತಿರ್ಪ ಪಲವುಂ ಪೂವಳ್ಳಿಗಿಡುಮರಂಗಳಿಂ ಸಿಂಗರಂಬಡೆದ ಪೂದೋಟಂಗಳ ಪಾಂಗಂ ನಿಟ್ಟಿಸಿ ಕಟ್ಟಚ್ಚರಿವಟ್ಟು ನಿಂದಲ್ಲಿ ಕೊನೆಗೇರಿ ತಿರಿವ ಪೂವಡಿಗರ ಕೈಗೆ ನಿಲ್ಕದಲರ್ದೊಂಬೆಗಳ್ ಕೈಪಡುವಂತೆ ನಿಡುಗೊಂಬುಗಳಂ ಬಾಗಿಸಿ ಕುಡುವ ಕೋಡಗಗಳಂ; ಆಂತಿರ್ಪ ಪಣ್ಗಳಂ ಕರ್ದುಂಕದೆ ಕಾಲಿಂ ಸೋಂಕದೆ ಮೀಸಲಳಿಯದಂತೆ ತೊಟ್ಟುಂ ಕಳಲ್ಚಿ ಕೆಡಪಿ ಕೈಗೊಳಿಸುವ ಪುರುಳಿಗಳುಂ; ಎಳೆದೊಳಸಿಸಸಿಗಳಂ ಬಳಸಿಯಗೆದಾಲವಾಲಂಗೆಯ್ದು ತೋಂಟಗರ್ಗೆ ನೆರಮಾಗಿ ತಮ್ಮ ಬಾಗಿದ ಕೂರ್ಗೋರೆಗುದ್ದಲಿಗಳಿಂದಗೆವ ಕಾಳ್ಪಂದಿಯ ಮಂದೆಗಳಂ; ಅವಂ ಕಡೆಗಣ್ಚಿ ತಮ್ಮ ಕವಡುಗೋಡುಗಳಿಂದಿರ್ಮಡಿಸಿ ತೋಡುರಡುವ ಕಡವೆಸಾರ[ಂ*] ಗಗಳಂ; ಆ ಪೆರ್ಗ್ಗಳಿಗಳ್ತೋಂಟಗೆಯ್ಮೆಯೊಳೆರೆವ

ಕಿರುಗುಂಬದ ನೀರಿಂ ತುಂಬದಿರೆ ತಮ್ಮ ಪೊಡೆಗೊಂಡ ನೀರಂ ಸೊಂಡಿಲೊಳ್ಕೊಗೆಮೊಗೆದು ಸುರಿವ ಸೊರ್ಕಾನೆಗಳಂ; ಎತ್ತಾನುಮಿವನಿಂತು ಸಸಿಗಳಂ ಮೇದಪುವೆಂಬ ಬರುಸಂದೆಯದಿಂ ಕಾಪುಗೊಂಡಿರ್ಪ ಪೆರ್ಬುಲಿಗಳಂ; ಅವರ ಮರಿಗಳ್ತಾಯನಗಲ್ದಿರ್ಪುದರಿಂ ಪಸಿದು ಬಸವಳಿಯೆ ಕಂಡು ಮರುಕದಿಂ ತೊರೆಯಿಳಿಪಿ ಮೊಲೆಯೂಡುವ ಪೆಣ್ಬುಲ್ಲೆಗಳುಮಂ ಕಣ್ಗೊಳಿಸಿ ಮನಂಗರಗುತ್ತೆ;

ಮತ್ತಂ ಕಿರಿದುಂ ದೂರಂ ನಡೆದಾಯೆಡೆಯೊಳ್ ಸಮಿತ್ಕುಶ ಕುಸುಮಂಗಳಂ ಸಂಗ್ರಹಿಸುವೆಡೆಯೊಳಮುಳಿಯದಂತುಪಾಧ್ಯಾಯರೊಡನೋದುತ್ತೆ ಬರ್ಪ ಪಟುವಟುಗಳ ವೇದಘೋಷಮೆಂಬ ಮಂಗಳತೂರ್ಯರವಂ ಬೆರಸು ಗಿರಿಯೇರಿ ಶ್ರೀ ನಾರಾಯಣಪುರದ್ವಾರಮಂ ಸಾರ್ದು, ಅಲ್ಲಿ ಮಹಾರಾಜಂ ಬಂದನೆಂದು ಕೇಳ್ದೆಳ್ತಿರ್ತರದೊಳ್ ಬಿತ್ತರದಿಂ ಪಜ್ಜೆಗೊಂಡು ನಿಂದು ವಂದನಂಗೆಯ್ವ ಪೆರ್ಬಾಗಿಲ ಕಾಪಿನ ಕೂರಾಳ್ಗಳೊಗ್ಗುಗಳ ಗುರಿವಾನಿಸರಂ ಪೆಸರ್ಗೊಂಡುಗ್ಗಡಿಪ ಕೈವಾರಿಗಳ ಕೈವಾರಮನಾಲಿಸುತ್ತೆ ಆಯಾ ಪಡೆವರೊಳ್ಕಡೆಗಣ್ಬೆಳಗಂ ಕವಿಸಿ ಮನ್ನಿಸಿ ಒಳಪೊಕ್ಕು ನಡೆವುತ್ತಲ್ಲಿ ತಮ್ಮ ಸಿರಿಗಣ್ಗಳ ತಣ್ಗದಿರ್ಗಳಿಂದಲರ್ವಳೆಗರೆವಂತೆಯುಂ, ಪರಕೆವೆರದೊಳ್ಪಾತುಗಳಿಂದಿನಿರಸದ ಸರಿಯಂ ಸುರಿವಂತೆಯುಂ, ಅಕ್ಕರ್ವೆರಸು ಯೋಗಕ್ಷೇಮಂಗಳಂ ಬೆಸಂಗೊಳ್ವ ಸೈಪಿಂ ಸಂತಸಗಡಲ್ದೆರೆಗಳಂ ತಿಂತಿಣಿಗೊಳಿಸುವಂತೆಯುಂ ಪತ್ತೆಸಾರ್ವ್ವ ಸಾತ್ವಿಕರ ಮೊತ್ತಮನಡಿಗಡಿಗೆ ಪೊಡೆಮಡುತ್ತುಂ, ತಡೆದು ತಡೆದೊಂದೊಂದಡಿಯಿಡುತ್ತುಂ, ಸಿರಿಯರಸನುಕ್ಕೆವದೊಳ್ಬಲವರ್ಪ ಸಿರಿವೀದಿಯಂ ಸಾರ್ದು, ಅಲ್ಲಿ ಶ್ರೀನಾರಾಯಣನ ಸಿರಿಯಡಿಯುಳಿಗಕ್ಕೆ ತಕ್ಕರನೀರೇಳುಂ ಜಗದೊಳಗರಸಿ ತಂದೊಂದು ಗೊಳಿಸಿದಂತೆಯುಂ, ಪರಮಪದದೊಳರಿದಪ್ಪ ಸೌಲಭ್ಯಗುಣಮನರ್ಚಾವತಾರ ದೊಳನುಭವಿಸಲ್ಕೆಂದು ಬಂದು ನಿತ್ಯಸೂರಿಗಳ್ನೆರೆದಂತೆಯುಂ, ರಾಜಸನೆನಿಸುವಲರಿಚನನೆಡೆಯೊಳ್ ನಿಲಿಸದೆ ವಾಸುದೇವಂ ತಾನೆ ಸಮೆದ ಸತ್ವಮಯಮಾದ ಸೃಷ್ಟಿ ಬೆಟ್ಟಿತ್ತಾದಂತೆಯುಂ, ಕಲಿಯುಗಂ ಪುಗದ ನೆಲನೆಂಬ ನಂಬುಗೆಯಿಂ ಪಲವುಂ ನಾಡ ಪಿರಿಯರೆಯ್ತಂದು ಸಂದಣಿಸಿದಂತೆಯುಂ, ಐವತ್ತಾರುಂ ನಾಡೊಳಿಡಿದ ಪರವಾದಿಗಳಂ ಗೆಲಲ್ಕೆ ಪೂಣ್ದ ಯತಿರಾಜಂಗೆ ಬೆಂಬಲವಾಗಿ ವಿಷ್ವಕ್ಸೇನರ ಸೇನೆ ಸನ್ನಿದವಾದಂತೆಯುಂ, ಬೆಳ್ದೀವಿಯ ಸಿರಿಪೆಂಪುವಡೆದಂತೆಯುಂ, ಪರಮಪದದ್ದೈಸಿರಿ ಪಸರಿಸಿದಂತೆಯುಂ ತಿಂತಿಣಿಸಿ, ತಮ್ಮ ಬಗೆಗೊಂಡ ಜಿನ್ನಣದ ಬೆಳಗು ಪೊರಪೊಣ್ಮಿದಂತೆ ಮಿಸುಪ ಮೊಗಸಿರಿಯಿಂ ದೆಸೆಗಳಂ ತೊಳಗಿಸುತ್ತುಂ, ಮರ್ಬನೆಳ್ಟಟ್ಟುತ್ತುಂ, ಸತ್ವದಿಂ ಸಮೆದಂತೆಯುಂ, ನೇಮದಿಂ ನೆಗಳ್ದಿದಂತೆಯುಂ, ಜಿನಯದಿಂ ಬಿತ್ತರಿಸಿದಂತೆಯುಂ, ಬಿನ್ನಣದಿಂ ಬಣ್ಣಿಪಿಟ್ಟಂತೆಯುಂ, ಒಳ್ನಡತೆಯಿಂದೊಳಂಬಡಿಸಿದಂತೆಯುಂ, ತಾಳ್ಮೆಯಿಂ ನಿರ್ಮಿರ್ಚಿದಂತೆಯುಂ, ಓಜೆಯಿಂದೊಡರಿಸಿದಂತೆಯುಂ, ಪುಣ್ಯದಿಂ ಪ್ರೋಕ್ಷಿಸಿದಂತೆಯುಂ, ಜಸದಿಂ ಜನಿಯಿಸಿದಂತೆಯುಂ, ಧರ್ಮಮಯಮೆನಿಸಿ,

ದಯಾಮಯಮೆನಿಸಿ, ದಾಕ್ಷಿಣ್ಯಮಯಮೆನಿಸಿ, ಸತ್ಯಮಯಮೆನಿಸಿ, ಶಾಂತಿಮಯಮೆನಿಸಿ ಪರಭಕ್ತಿನಿಷ್ಣಾತರಪ್ಪ ಶ್ರೀವೈ[ಷ್ಣ*]ವರಂ ನಿರವಿಸಿದಂ.

ಮತ್ತಮವರ್ಗ್ಗೆಲ್ಲಿಯುಂ ರಾಗದ್ವೇಷಮಿಲ್ಲದುದರಿಂದಾವಗಂ ಪೊಗರೇರಿ ತಣ್ಪುವಡೆದಿರ್ಪ ಸಿರಿಮೊಗಂಗಳಿಂದೆ ಒರ್ಮೆಯುಂ ಬೆಂಕಿಯುಂ ನೇಸರುಂ ಸೋಂಕದ ಪೊಸವಗೆಯ ಪಲಸಾಸಿರ್ಸಂಕೆಯ ಸಸಿವಟ್ಟುಗಳಂ, ನುಣ್ಬಣೆಯೊಳೆಸೆವ ಸಿರಿವಣ್ಣೆಳಗುಗಳಿಂದೆ ಪೂತು ಪೊದಳ್ದ ಬೆಳ್ದಾವರೆಗಳಂ, ಎಡೆವಿಡದೆ ದಿವ್ಯಪ್ರಬಂಧಗಳನನುಸಂಧಿಪನ್ನಂ ಪೊರಸೂಸುವ ದಂತಕಾಂತಿಗಳಿಂ ಚಿತ್ತದೊಳ್ಪುತ್ತಿ ಬಿತ್ತರಂಬೆತ್ತ ಸತ್ವಗುಣಮಂ, ಸಿರಿಗೊರಲ್ಗೆ ಧರಿಸಿದ ತೊಳಸಿದಾವರೆ ಮಣಿಸರಂಗಳಿಂ ದಿವ್ಯಾಂಗದೊಳಜಾಂಡಮಂಡಲಕೋಟಿಯಂ ಪೊತ್ತ ಪುರುಷೋತ್ತಮನ ಸಾರೂಪ್ಯಮಂ, ಪೊದೆದ ದುಗುಲದ ತೆರೆಗಳಿಂದೆರ್ದೆಗೊಂಡ ಪುಂಡರೀಕಾಕ್ಷನಂ ತೊಡರ್ದ ಪಾಲ್ಗಡಲ ಪಡಿನೆಳಲಂ ಬಗೆಗೊಳಿಸಿದರ್.

ಮತ್ತಮವರ್ಗೆ ವರ್ಣಾಶ್ರಮಧರ್ಮಾಚರಣದೊಳ್ಕಾಮಮುಂ, ಅದರಿಂದಾನುಷಂಗಿಕಮಾಗಿ ಬರ್ಪ ತ್ರೈವರ್ಗಿಕಫಲದೊಳ್ ಕ್ರೋಧಮುಂ, ಅದರಿಂದೊಗೆವ ಭಗವನ್ಮುಖೋಲ್ಲಾಸದೊಳ್ ಲೋಭಮುಂ, ತದನುಭವಜನಿತ ಪ್ರೀತಿಯೊಳ್ಮೋಹಮುಂ, ಪ್ರೀತಿಕಾರಿತ ಕೈಂಕರ್ಯಲಾಭದೊಳ್ಮದಮುಂ, ಮದಜನಿತಕೈಂಕರ್ಯವಿಘ್ನದೊಳ್ಮಾತ್ಸರ್ಯಮುಂ, ಪೂರ್ವಪಕ್ಷೋಪನ್ಯಾಸದೊಳ್ ಮಿಥ್ಯಾವಾದಮುಂ, ಸ್ತೋಭದೊಳನರ್ಥಕವಚನಮುಂ, ಇಂದ್ರಿಯನಿಗ್ರಹದೊಳಾಗ್ರಹಮುಂ, ಬುದ್ಧಿಯೊಳ್ ತೈಕ್ಷ್ಣ್ಯಮುಂ ಸಮನಿಸಿರ್ಕುಂ. ಮತ್ತಂ ಬಿಜ್ಜೆಯೆ ರಾಜ್ಯಮುಂ, ಬಿನಯಮೆ ಧನಮುಂ, ವೈರಾಗ್ಯಮೆ ಭಾಗ್ಯಮುಂ, ಸೈರಣೆಯೆ ಬೀರಮುಂ, ಸತ್ಯಮೆ ನೆರವುಂ, ಬಿನ್ನಣಮೆ ಬೆಂಬಲಮುಂ, ವಿವೇಕಮೆ ಕಾಪುಂ, ನೇಮಮೆ ಸೇಮಮುಂ, ಒಳ್ಪೆ ಬಲ್ಪುಂ, ಸಂತಸಮೆ ಸಾಮ್ರಾಜ್ಯಮಾಗಿರ್ಕುಂ. ನಿಚ್ಚಲುಂ ಭಗವನ್ನಿವೇದನ ದ್ರವ್ಯೋಪದಾನಕಾಲದೊಳ್ ಬೆಳೆ ಕಳಿದ ಬೆಳೆಗೆಯ್ಯೊಳುದಿರ್ದ ಧ್ಯಾನ್ಯಕಣಂಗಳನಂದಂದಿಂಗೆ ತಕ್ಕುದನಲ್ಲದೆ ಮಿಕ್ಕೊಂದು ಕಾಳನಾದೊಡಮಾಯ್ದು ಕೊಂಬುದು ಕಟ್ಟಾಸೆಯೆನಿಪುದು. ಇಜ್ಯಾಕಾಲದೊಳು ಪ್ರಸಾದ ಪ್ರತಿಪತ್ತಿಗೆಯ್ಯುತ್ತೆ ಸವಿಭಾವಿಪುದು ವಿಷಯಾಭಿಲಾಷೆಯೆನಿಪುದು. ಉಭಯವೇದಾಂತಂಗಳ ನೋದುವೆಡೆಯೊಳ್ ಪೆರತೊರ್ಮೆ ಕೇಳ್ದು ಅರ್ಥನಿಶ್ಚಯಂಗೆಯ್ವುದು ಬುದ್ಧಿಮಾಂದ್ಯಮೆನಿಪುದು. ಸ್ವಯಂಪ್ರಯೋಜನವಾಗಿ ತಾಮೆಸಗುವ ಕರ್ಮ್ಮಜ್ಞಾನ ಭಕ್ತ್ಯಾದಿಗಳೊಳ್ ಸಾಧನಬುದ್ಧಿಗೆಯ್ವುದು ವೈಶಿಕಮಪ್ಪುದು. ನಿಷೇಧಿಸುವುದರ್ಕ್ಕಮಾಮೆನ್ನದೆಂದನುವದಿಪುದವಾಚ್ಯವಾದಮೆನಿಪುದು. ಭಗವದ್ಗುಣಗಣನೆಯೊಳಂ ಗೃಹಕ್ಷೇತ್ರಪುತ್ರಪಶ್ವಾದಿಕ್ಷುದ್ರಫಲಂಗಳನೀವನೆಂದು ಪೊಗಳ್ವುದು ಲಜ್ಜಾವಹಮಪ್ಪುದು. ಅನ್ಯೋನ್ಯವಂದನದೊಳೊಂದಿನಿಸು ಪಿಂಚುವುದುಂ ಗರ್ವಮೆನಿಸಿ

ನಿರ್ವೇದಕಾರಣಮಪ್ಪುದು. ಅರ್ಥಿಸಿ ಬಂದ ಶಿಷ್ಯಸಾರ್ಥ ಮನೊಂದೆರಳ್ ಸೂಳೊಳ್ಕಡೆಗಣಿಸದೆ ದಯದಿಂದಂಗೀಕರಿಪುದುಂ ಖ್ಯಾತಿಲಾಭ ಪೂಜಾರ್ಥಮೆನಿಪುದು. ಸಚ್ಛಿಷ್ಯನಂ ಪರಮಭಾಗವತನೆಂದುಂ ಶ್ರೀವೈಷ್ಣವನೆಂದುಂ ಸಿರಿವೆಸರ್ಗೊಳ್ಳದೆ ತನ್ನ ಶಿಷ್ಯನೆಂದುಸಿರ್ವುದು ವಾಕ್ಪಾರುಷ್ಯಮಪ್ಪುದು. ಮತ್ತಮವರ್ ತಮ್ಮ ಮನೆಯನವನ ದೇಗುಲಂಮೆಂದುಂ, ಮಡದಿಮಕ್ಕಳನವನೂಳಿಗದವರೆಂದುಂ, ಪುರುಳನವನೊಡಮೆಯೆಂದುಂ, ಗೃಹೋಪಕರಣಮನವನ ಪೂಜೋಪಕರಣಮೆಂದುಂ, ತಮ್ಮನವನ ಪೂಜಕರೆಂದುಂ, ತಮ್ಮ ಮನೋವೃತ್ತಿಯ ನಿತುಮವನನೆನಪೆಂದುಂ, ತಮ್ಮ ನುಡಿಯನಿತುಮವನ ಪೊಗಳ್ತೆಯೆಂದುಂ, ತಮ್ಮ ಗೆಯ್ಮೆಯೆನಿತುಮವನೂಳಿಗಮೆಂದುಂ, ಅವನೊಲ್ಮೆ ತಮಗೆ ಧಾರಕಮೆಂದುಂ, ಅವನ ಗುಣಾನುಭವಮೆ ತಮಗೆ ಪೋಷಕಮೆಂದುಂ, ಅವನ ಸೇವೆಯೆ ತಮಗೆ ಭೋಗ್ಯಮೆಂದುಮೆಣಿಸಿರ್ಪರ್.

ಇಂತಿರ್ಪ ದೇಶಿಕರ ನೆರವಿವೆರಸು ಶ್ರೀಗೋಪುರದ್ವಾರಮಂ ಸಾರ್ದು ಸಾಷ್ಟಾಂಗ ಪ್ರಣಾಮಂಗೆಯ್ದೊಳಪೊಕ್ಕು ನಡೆದು ಅಲ್ಲಿ ಸಿರಿಬಲ್ಲಹನೊಳಿಗ ದೊಳ್ ತವಕಿಗರ್ ತಮ್ಮೊಳ್ತಾಂ ನುಡಿವ ಸಿರಿವಾತುಗಳಂ ಕೇಳ್ದನದೆಂತೆನೆ:

ಶ್ರೀಮಜ್ಜನಮಂ ತರಲ್ಕೆಂದು ತನ್ನಿಂ ತಾನೆ ಮಿಂದು ಬಂದ ಕಾಡಾನೆಯ ಮೊಗದೊಳ್ ಸಿರಿವಣ್ಣಂ ಸಮನಿಸೆಂದು, ಶ್ರೀಕಲ್ಯಾಣತೀರ್ಥದೊಳ್ಮುಂ ಸುಚರಿತಂ ಸುರಸರಿತ್ಪೂರದಿಂದೆಳ್ದು ಪೊರಮಟ್ಟ ನೀರ್ವಟ್ಟೆಯ ಬಾಯ್ವರೆಗಂ ಮುಳುಂಗಿ ನೆಗಪಿ ನೀಡುವ ನೀರಾನೆಯ ಬರಿಕೆಯ್ಯೊಳೆಸೆವ ಪೊಂದಂಬಿಗೆಯ ತೀರ್ಥಮನೆ ತರ್ಪುದೆಂದು, ದರ್ಭತೀರ್ಥದ ತೀರದೊಳುದ್ಭವಿಸಿದ ದರ್ಭೆಗಳಿಂ ಸಮೆದ ಸಿರಿವರಲ್ಗಳಿಂ ಸಿರಿಯಂಗಳದ ಮೇಲ್ಕಟ್ಟಿನ ಲಂಬಣಸರಂಗಳಿಂದುದಿರ್ದು ಪರಮ ಭಾಗವತರಡಿದೂಳ್ಗಳಿಂ ಬಳೆದಲರ್ವುಡಿಯಂ ಗುಡಿಸಿ ಬೈತಿಡುವುದೆಂದುಂ, ಅಂದು ಸನಕಾದಿಗಳ್ ಮಂದಾಕಿನಿಯೊಳ್ಕರೆಗಳೆದು ತಂದ ಪೊಂದುಗುಲಂಗಳಂ ಜಡೆಗಾಡಂ ಪೊಡೆಯೆಡೆಯಂ ಬೂದಿವೆಟ್ಟಂ ಮುಟ್ಟಿ ಮೀಸಲಳಿಯದ ವೈಕುಂಠಗಂಗೆ ಯೊಳ್ಮಡಿಮಾಳ್ಪುದೆಂದುಂ, ಸಿರಿವಣ್ಗಣೆಯೊಳ್ ಮುಂ ತಾರ್ಕ್ಷ್ಯಂ ತಂದು ನಿಕ್ಷೇಪಿಸಿದ ತಾಯ್ವಣ್ಣನೆ ತಂದನುಗೆಯ್ವುದೆಂದುಂ, ನಯನ ವಾರಾಹ ಸೀತಾರಣ್ಯಾದಿ ಪುಣ್ಯಕ್ಷೇತ್ರಂಗಳೊಳ್ ಬೆಳೆದೆಳೆದೆಸೆದಳೆದ ತೊಳಸಿಯ ಪೊಸಗೊನೆಗಳನೆ ಸಾಸಿರ್ವೆಸರ ಪೂಜೆಗೆ ಮೀಸಲಿಡಿಸುವುದೆಂದುಂ, ನೇಮಂ ಬೆರಸು ತಿರಿವ ಭಾಗವತರನುಸಂಧಿಪ ದಿವ್ಯಪ್ರಬಂಧಗಂಧಬಂಧುರಮಪ್ಪಮಲರ್ಗಳನೆ ತರವೇಳ್ಪುದೆಂದುಂ, ಮುಂ ಪ್ರಹ್ಲಾದಂ ಬಿತ್ತಿದ ನೃಸಿಂಹಶೃಂಗದೊತ್ತಿನ ಬಾವನ್ನಗಾಡ ಪಳವರದೊಣಗೊಂಬಿನ ಬೇಗಿನೊಳಣ್ಣಂ ಸಂಪಾದಿಪುದೆಂದುಂ, ಅಂದು ವನವಾಸದೆಸೆಯು ಬೇಸಗೆಂಬೊಳ್ನೀರೆಳಸಿದ ತನ್ನರವನಾರಂಬ್ಬು ರಘುವೀರಂ ಬಿಲ್ಲೊಂಬಿನಿಂದುಬಿದರೆಯೊಳ್ಪೊಣ್ಮಿಸಿದ ತಿಳಿನೀರ್ ಸರಿಯೊಳ್ಮಿಂದ ಸೀತಾದೇವಿಯ

ಸಿರಿಯೊಡಲ ಕುಂಕುಮದಿಂ ಪೊಂಬಣ್ಣಮಾದ ಧನುಷ್ಕೋಟಿತೀರ್ಥೋದಕದಿಂ ಸಿರಿರಾಣಿಗರಿಸಿನದಣ್ಪಂ ಬಣ್ಣಂಬಡಿಪುದೆಂದುಂ, ಅತ್ರಿಕುಮಾರಂ ದತ್ತಮುನಿಯುತ್ತಮಾಶ್ರಮದೊಳ್ ಪೊತ್ತ ಪೊಸಗಾವಿಯುಡೆಯನಳ್ದಿದುದರಿಂ ಕಿರುಗೆಂಪಾದ ವೇದಪುಷ್ಕರಣಿಯುದಕದಿಂ ರಾಮಾನುಜಾಚಾರ್ಯರ ದುಗುಲಮಂ ತಳಿರ್ಗಾವಿಗೆಯ್ವುದೆಂದುಂ, ಪದ್ಮತೀರ್ಥದ ಮಧ್ಯದೊಳ್ ಪೊದಳ್ದ ಪೊಂದಾವರೆಯ ಪೊಸದಂಟುಗಳ ಎಸಳ್ಗಳಿಂದಾಲತಿವತ್ತಿಯುಂ ಬಿತ್ತರಿಪುದೆಂದುಂ, ಮುನ್ನಂಬರೀಷಾದಿಗಳ್ವೈವರ್ಭಾಗವತರ್ ಅಡಿದೊಳೆದ ತೀರ್ಥದೊಳೇಳ್ಗೆವಡೆದ ಬಿನ್ನಣದ ಅರಳಿವರದೊಳೆ ನಿತ್ಯಹೋಮ ಸಮಿತ್ಸಂಗ್ರಹಣಂಗೆಯ್ವುದೆಂದುಂ, ಯದುಶೇಖರಶೂರವಸುದೇವರಾಮಕೃಷ್ಣಾದಿಗಳ್ಪಲರ್ಮೆ ವಂದು ಮಿಂದಿರ್ತಡಿಯೊಳ್ ಪಲವುಂ ಜನ್ಮಂಗಳುಂ ಪದಿನಾರುಂ ದಾನಂಗಳನೆಸಗಿದುದರಿಂದದೆ ನಿರೂಪಕಮಾದ ಯಾದವತೀರ್ಥದ ಪರಿಕಾಲ್ಗಳಿಂ ಬಳೆದ ಕಳವೆಯಂ ಪತ್ತುಂ ಸೂಳೋಳ್ಮಿತ್ತು ಅಡಿಗೆವನೆಯೊಳಾಯತ್ತಂಗೆಯ್ವುದೆಂದುಂ, ಮೈತ್ರೆಯೊತ್ತಿನ ತೀರ್ಥಸಂಗ್ರಹಣ ಮೃತ್ತಿನೊಳೊಡರ್ಚಿದ ಕೋಶಂಗಳೊಳ್ ನಾರಾಯಣತೀರ್ಥೋದಕಮನೆಸರೆತ್ತುವುದೆಂದುಂ, ಹೀರೆ ಸೋರೆ ಮುಂತಾದುವಂ ಬಿತ್ತಿದ ಕಾಯ್ದೋಂಟದೊಳ್ ಬೆಳೆದ ಪಡಲ ಹಾಗಲಂ ಮೊದಲಾದೊಳ್ಗಾಯ್ಗಳುಮಂ ಕಳೆವುದೆಂದುಂ, ಸಂಕುಪಾರುಂಬಳೆಗಳಿಂ ದಂಕಿತಮಾಗದ ಬರುದುರುಗಳಂ ಕಜಿಯುದುಳುಪುವುದೆಂದುಂ, ಕರುವುಂಡ ಮೊಲೆಯಂ ಪಲರ್ಮೆ ತೊಳೆದು ಕಪಿಲೆಯಂ ಕರೆವುದೆಂದುಂ, ಎಳಸಿಸುತನ ದೊಳೆಸೆವ ಮುಂಗಾರ ಮುಗಿಲವಣ್ಣನ ಬಣ್ಣವಾಡಂ ಪಾಡದ ಕಾಳ್ವೆಂಡಿರ್ಕಡೆದ ಬೆಣ್ಣೆಯಂ ಕಡೆಗಣಿಪುದೆಂದುಂ, ಎನಿತಾನುಮೊಳ್ಪುವಡೆದುಪಕರಣಂಗಳುಮಂ ವೇಳೆವೇಳೆಗಂ ಮೂಲಮಂತ್ರಸಂಹಾರನ್ಯಾಸತಂತ್ರದಿಂ ಪ್ರಾಕೃತರೂಪಮಂ ಕಳೆದು ಸೃಷ್ಟಿನ್ಯಾಸದೊಳ್ ಪೊಸವುಟ್ಟುಗೊಳಿಪುದೆಂದುಂ, ಪಲನುಡಿಗಳಿಂ ಫಲಮೇನವನ ಭಕ್ತಿಯೊಂದರೊಳೆ ಪಲವುಂ ವಸ್ತುಗಳುಮಂವಂಗಿನಿದೆನಿಪುದೆಂದುಂ – ಇಂತು ನುಡಿವ ಪಲವುಮೊಳ್ನುಡಿಗಳಂ ಕೇಳುತ್ತೊಳಪಾಗಲಂ ಬಲವರುತ್ತೆ– ಅಲ್ಲಿ ತೇಜೋವಿಶೇಷದಿಂ ನೆಲದೊಳುದಿಸಿದ ನೇಸರಂತೆಯುಂ, ಮೆಯ್ವೆತ್ತ ಸಪ್ತಾರ್ಚಿಯಂತೆಯುಂ, ಕಾಂತಿಯಿಂ ತುಂಬುವೆರೆಯಂತೆಯುಂ, ಮೆರೆವ ವಾದಾಹವನಿಶ್ಶಂಕರಪ್ಪ ಶ್ರೀವತ್ಸಾಂಕರಂ ಪೊಡಮಟ್ಟು ನಿಟ್ಟಿಸಿ ಮನದೊಳೆಣಿಸಿದಂ – ಈ ದೇಶಿಕರಾಣ್ಮಂ ತಾಳ್ಮೆಯೊಳ್ತೊಡವಿಯನಾಳದೊಳ್ಮುನ್ನೀರಂ ನಿಸ್ಸಂಗದೊಳೆಲರಂ ನಿರ್ಲೇಪತೆಯೊಳಾಗಸಮಂ ಸಮಂಗೊಂಡಿರ್ಪಂ. ಮತ್ತಮಿವನ ಗರ್ವದೇಳ್ಗೆ ದುರ್ಜ್ಞೇಯಮಪ್ಪುದು. ಮುಂ ಬಾಸೆವತ್ತಳೆಯಂ ಬರೆಯಿಸಲೆಳಸಿದ ಚೋಳನ ಗರ್ವದೊಡನೆ ಶರ್ವನೊಳ್ಪತ್ತಿಸುವ ಪರತ್ವಮನಿಳಿಕೆಗೆಯ್ದಂ. ಮತ್ತಮಿಾಕೂರ ಕುಲವಲ್ಲಭನೆಲ್ಲಾಪುರುಳ್ಗಳನಂಗ್ಯೆಯ ನೆಲ್ಲಿಯವೋಲ್ತಿಳಿದಿರ್ಕುಂ. ಅಲ್ಲದೊಡಾ

ಭಾಷ್ಯಾಕಾಱಿಂ ಶ್ರೀಭಾಷ್ಯರಚನೆಯೊಳಿವನನೇತರ್ಕೆ ನೆರಂಗೊಂಡಂ – ಎಂದೆಣಿಸಿ ದಂಡಪ್ರಣಾಮಂಗೆಯ್ದು ಮುಂತಣ್ಗೆ ನಡೆವುತ್ತಲ್ಲಿ ಮುಂ ಸಿರಿಗೋವಲೂರೊಳ್ ಭಾಗವತನೊರ್ವನಕಿರುವನೆಯೊಳಿಟ್ಟಣಿಸಿ ನಿಂದುಂ ತಮ್ಮ ತಮ್ಮ ನಿರ್ಬಂಧಮಂ ಬಗೆಗೊಳಿಸದೆ ಸಂತಸಮಿರ್ಪ ಸೌಜನ್ಯಮಂ ತಾನುಮನುಭವಿಸಲ್ಕೆಳಸಿ ಕಳ್ತಲೆಯೊಳ್ವಂದು ಪೊಕ್ಕ ಮುಕುಂದಂಗೆ ನೇಸರಂ ಜ್ಞಾನಮಂ ಸೊಡರ್ಗೆಯ್ದು ಸಿರಿಮೆಯ್ಯಂ ಕಣ್ಗೊಳಿಸಿ ಜಸಂಬೆತ್ತ ಮೊತ್ತಮೊದಲ ಮೂರುಂ ಸೂರಿಗಳುಂ; ಸೂಜಿಯಂ ಬಳಿವಿಡಿದು ದಾರಂ ಬರ್ಪಂತೆ ಕರುಣಿಪುದೆಂದು ವರವಂ ಬೇಡಿ ಮೃಡನಂ ವಿಡಂಬಿಸಿ ಕಡೆಗಣಿಸಿದ ವೈರಾಗ್ಯಸಾರಂಬೆತ್ತ ಭಕ್ತಿಸಾರನುಂ; ಪುಟ್ಟಿದಂದು ಮೊದಲ್ ತಾಯ ಮೊಲೆವಾಲಂ ಮುಟ್ಟದೆ ಭಗದ್ಗುಣಾನುಭವಮೆ ತನಗೆ ಧಾರಕಪೋಷಕಭೋಗ್ಯಮಾಗಿ ಬಳೆದೇಳ್ಗೆವಡೆದ ಶಡಗೋಪನುಂ; ಶ್ರೀವೈಷ್ಣವರ್ಕಳವುಗೊಂಬರಲ್ತೆಂಬ ನಂಬುಗೆಯಿಂ ಪಾವುಗೊಡದೊಳ್ ಕೈಯಿಟ್ಟು ಗೆಲ್ದು ಭಾಗವತಕುಲಶೇಖರನೆನಿಸಿದ ಕುಲಶೇಖರನುಂ; ಪಾಂಡ್ಯಸಭೆಯೊಳ್ ಪರವಾದಿಗಳಂ ಜಯಿಸಿ ಹರಿಯೇ ಪರತತ್ತ್ವಮೆಂದು ನೆಲೆಗೊಳಿಸಿ ಮೆಯ್ಮೆವೆತ್ತ ವಿಷ್ಣುಚಿತ್ತನುಂ; ಪಸಿದು ಬಸವಳಿದಿರ್ಪ ದಸೆಯೊಳ್ ಶ್ರೀರಂಗನಾಥಂ ವಟುರೂಪದೊಳ್ವೊತ್ತು ತಂದಿತ್ತ ನೈವೇದ್ಯದ ಪೊಂದಟ್ಟೆಯಮೃತಾನ್ನಮಂ ಸವಿದು ಸತ್ವ ಶುದ್ಧಿವೆತ್ತ ಭಕ್ತಾಂಘ್ರಿರೇಣುವುಂ; ಸಿರಿಯರಸನಡಿವಿಡಿದು ಮುಡಿವರೆಗಂ ನಿರವಿಸಿ ನಿಟ್ಟಿಸಿದ ಕಣ್ಗಳಿಂ ಪೆರತೊಂದುಮಂ ನಿಟ್ಟಿಸೆನೆಂದು ನುಡಿದಂತೆ ನಿರ್ವಹಿಸಿದ ಮುನಿವಾಹನನುಂ; ತನ್ನ ವಲ್ಲಭೆಯಪ್ಪ ಕುಮುದವಲ್ಲಿಯಾಣತಿಯಿಂ ಗೆಯ್ವ ತದೀಯಾರಾಧನಕ್ಕೆ ತಕ್ಕ ಪೊನ್ನೊಡಖಂಡೆಯದ ಬಲ್ಪಿಂದಮೆ ಮೂಲಮಂತ್ರಮಂ ಕೊಂಡೆಸೆವ ಪರಕಾಲನುಂ; ಎಳವೆಯ್ಯೊಳೆ ಬಿನ್ನಣಂ ಪಣ್ತುದರಿಂದ ಚರ್ಾವತಾರದೊಳಾಸಕ್ತಿ ಪುಟ್ಟಿ ಮುಂ ವಿಭವಾನುರಕ್ತೆಯರಪ್ಪ ಗೋಪಿಯರಂ ಕೀಳ್ಪಡಿಸಿ ನಗಳ್ದ ಗೋದಾದೇವಿಯುಂ; ತೆಂಕಲ್ತೊಣ್ಮಿದ ನೇಸರಂತೆ ತೋರಿ ತನ್ನಂ ಬಸಂಗೆಯ್ದಾಳ್ದ ಶಡಗೋಪರ ಸಿರಿಯಡಿಗಳನುಳಿದು ಪೆರತೊಂದನರಿಯೆನೆಂದು ಆಚಾರ್ಯನಿಷ್ಠೆಯೊಳ್ ನೆಲಸಿ ನಿಂದ ಮಧುರಕವಿಯು ಮೆಂಬೀ ಪನ್ನಿರ್ವರುಂ ದಿವ್ಯಸೂರಿಗಳಾವಗಮನಿತೂಳಿಗಂಗಳುಂ ಗೆಯ್ವುದರಿಂ ನಿರ್ಭರರಾಗಿ ತಾಮವನ ಗುಣಾನುಭವದೊಳ್ ಮಗ್ನರೆನಿಸಿ ಮೈಮರೆದಿರ್ಪ ಪಾವು ಪಕ್ಕಿ ಪಡೆಯರೆಯರುಂ; ಮತ್ತಮೆಡಬಲದೊತ್ತಿನೊಳ್ಕುಳ್ಕಿರ್ದ್ದ ಉಳ್ಳ ಪೊಳ್ತೆಲ್ಲಮುಂ ತನ್ನ ಸ್ವರೂಪರೂಪಗುಣಂಗಳನನುಭವಿಸುತ್ತುಂ ತಣಿಯದೆ ಪೊಸಪೊಸತೆನಿಸಿ ಸವಿವ ಸಿರಿಪ್ರೊಡವಿ ನೀಳೆವಡದಿಯರುಂ ಬೆರಸು ಪಿರಿಯೋಲಗಂಗೊಂಬ ಪರ[ವಾ]ಸುದೇವರ ಠೀವಿಯಂ ನಿರವಿಸಿ ಕವಿವಾಸೆಯಚ್ಚರಿಮರವೆಯೆಳ್ಚರಳ್ಕರಾನಂದಂಗಳ ತೆರೆಗಳೊಳ್ ತೇಲ್ವ ಬಗೆಯಂ ಪದುಳಂಗೊಳಿಸಿ ಸಾಷ್ಟಾಂಗಮೆಱಗಿ ಕಿರಿದುಂ ದೂರಂ ನಡೆದು – ಅಲ್ಲಿ ಚಂಚಲತೆಯನುಳಿದು ಮಿಂಚುವಳ್ಳಿಗಳ್ಪುಂಜಮಾದಂತೆಯುಂ, ನಟ್ಟನಡುವಗಲ್ಗೆ ಬಂದ ಬೇಸಗೆಯನೇಸರ್ವಟ್ಟಿನಂತೆಯುಂ, ನಿಟ್ಟಿಸಲರಿದೆನಿಸಿದ

ಪ್ರಾಕೃತತೇಜೋಮಯವಾದ ಸುದರ್ಶನರಂ ದರ್ಶನಂಗೆಯ್ದು ಮಣಿದು ಆವೊತ್ತಿನೊಳ್ ಸಕಲಕಲ್ಯಾಣಗುಣರಪ್ಪ ಕಾಂಚೀಪೂರ್ಣರಂ ನಮಿಸಿ, ಮುಂತಣ್ಗೆ ನಡೆದು – ಅಲ್ಲಿ ಮುಂ ಪಾಲ್ಗಡಲಿಂ ಪೊರಮಡುವೆಡೆಯೊಳಡಿದೊ[ಡ*]ರ್ದ ಪವಳಗುಡಿಗಳ ಪಾಂಗನಂಗೀಕರಿಸಿದ ಕೆಂಬರಲ್ಗಳುಂ, ಅವರ ಕವಡು ಗೊನೆಯೊಳ್ಸಿಲ್ಕಿದ ಮುತ್ತುಗಳ ಬಿಡಯಮಂ ಬಿತ್ತರಿಪ ಬಟ್ಟುಗುರ್ಗಳುಂ, ಕೆಂದಾವರೆವನೆಯೊಳ್ ಬಂಡುಗೆಸರೊಳ್ಪತ್ತಿದ ಪೊಸಯೆಸಳೆಂಬ ಸಂದೆಯಮಂ ಸಮನಿಸಿರ್ಪ ಕೆಂದಳಮುಂ, ಸಿರಿಯಡಿಯಲರ್ದಾವರೆಯಂ ಸುತ್ತಿ ಮುತ್ತಿದ ಬಂಡುಣಿವಿಂಡನಂಡಲೆವ ನೀಲದ ಪೆಂಡೆಯಮುಂ, ಬೆನೊಳ್ಗಂದ ಚಂದಿರನ ಬೆಳ್ಗದಿರ್ವೆರ್ಂಯ್ಯೊಳ್ಪುದುಗಿದ ಸೊಗಸಂ ಬಗೆಗೊಳಿಪ ದುಗುಲವುಂ, ಪೊಂಜೆಳೆಮೆಯ್ಯ ಕಿರುಗುಡಿಗಳಲರ್ಮಿಡಿದಳೆದು ಪರ್ಬಿ ಪಡಲ್ವಟ್ಟಂತಿರ್ಪ ಕಿರುಗಂಟೆಗೆಜ್ಜೆಗಳಂ ತಳೆದ ಪೊಂಬಲೆಯುಡೆನೂಲುಂ, ಅಡಿಯುಮಂತಮುಮಿಲ್ಲೆಂಬ ವೇದದಂತೆ ಮಧ್ಯಮುಮಿಲ್ಲೆಂಬೆಮ್ಮ ವಂದಿಗರ ನುಡಿಯಂ ನನ್ನಿಗೆಯ್ವ ಪುಯ್ಯಡುವುಂ, ಸರ್ವಲೋಕಮಾತೆಯಪ್ಪ ತನ್ನ ಮಕ್ಕಳಂ ಪೊರೆಯಲ್ಕೆ ತಕ್ಕ ಪೆರ್ಮೊಲೆಯುಂ, ಪೊರ್ದುಗೆಗೊಳಿಸಲ್ಕೆ ಚೇತನೇಶ್ವರರಿರ್ವರಂ ತಿರ್ದುವ ಪುರುಷಕಾರಕೃತ್ಯವೆರಡರೊಳಳ್ಕಂ ತೀರ್ಚಿ ಬೇಳ್ಪ ಬಿನ್ನಣಂ ಮೊದಲಾದುವನಿತ್ತು ಭಕ್ತರನನುಗೊಳಿಪುದರ್ಕಭಯವರದಂಗಳೆರಡುಂ, ಕೋಪಮಂ ತಣ್ಪುಗೊಳಿಸಿ ಕೃಪೆಯನೆಳ್ಚರಿಸಿ ಈಶ್ವರನನನುಗೊಳಿಪುದರ್ಕೆ ತಕ್ಕ ಲೀಲಾಕಮಲವಹಂಗಳೆರಡುಮಾಗಿ ಪಚ್ಚುಗೊಂಡು ನಿರ್ವಹಿಪ ನಾಲ್ಕುಂ ಶ್ರೀಹಸ್ತಂಗಳುಂ, ತನ್ನ ಮಾಯಾಲೇಶದಿಂ ಮೂಱುಂ ಜಗಮಂ ಮೋಸಂಗೊಳಿಪ ಮುಕುಂದಂಗೆ ಮೋಹರಸಮಂ ಮುಳುಕುನೀರೆನಿಪ ಮುಗುಳ್ನಗೆಯುಂ, ಸೊರ್ಕಿ ಪಕ್ಕದೊಳಿರ್ಪಿನಿಯನೊಳಂ ಬೆದರುಗೊಂಡಿದಿರೊಳಿರ್ಪ ತನೆಯರೊಳಂ ತರುವಾಯಿಂ ಪ್ರಣಯಕರುಣಾರಸಂಗಳ್ ಕರೆಗಣ್ಮೆಕೊಂಕಿ ಕೂರ್ತು ಕುಡಿವರಿದುಂ ಕವಿದು ಕರಗಿ ಕದುಬುಗೊಂಡುಂ ತಣಿಯದ ನೋಟಂಗಳುಂ, ಪೆಣ್ತನದ ಸಾಜದಿಂದಮೆ ಆದೊಡಂ ಪುರುಷೋತ್ತಮನ ಚಿತ್ತಮನುನ್ಮತ್ತಂಗೆಯ್ದು ತನ್ನ ಮೈಸಿರಿಯಂ ನಿಟ್ಟಿಸಲ್ಕೆಂಬಂತೆ ನಸುಮಣಿದ ಸಿರಿಮೊಗಮುಮವಾದ ಯದುಗಿರಿನಾಯಕಿಯ ಸನ್ನಿಧಿಯಂ ಸಾರ್ದು ಸಾಷ್ಟಾಂಗಪ್ರಣಾಮಂ ಗೆಯ್ದೆಣಿಸಿದಂ: ಇವಳ್ಗಡ. ಪಾಲ್ಗಡಲನೇರಿ ನೋಂಪಿಯ ಸಂಪದಮುಂ, ಕಮಲವನದೊಳ್ಗಂಪಿನಗುಂಪುಂ, ವನಮಾಲಿಯೆರ್ದೆವನೆಯೆಳ್ ತೊಳಪ ಮಂಗಲರತ್ನದೀಪಮುಂ, ಪಳೆನುಡಿವೆಂಡಿರ ಬೈತಲೆವಣಿಯುಂ, ಎಲ್ಲಾ ಲೋಗರುಕ್ಕೆವದ ಪಕ್ಕೆಯುಂ, ಎಮ್ಮ ಭಾಗ್ಯದೇಳ್ಗೆಯುಂ, ಮತ್ತಂ ಶೀಲದ ನೆಲೆನೀಡುಂ, ದಯೆಯ ತಾಯ್ವನೆಯುಂ, ಚಾಗದಾಗರಮುಂ, ಬಿನ್ನಣದ ಬೆಳೆಗೈಯ್ಯುಂ, ಸೌಲಭ್ಯದ ಶಾಲೆಯುಂ, ಒಳ್ಪಿನೋದುವಳಿಯುಂ, ಒಳ್ನುಡಿಯ ಗುಡಿಯುಂ, ಮರುಕದ ಕರುವಾಡಮುಂ, [*ಪಸದನದ ಪಸರಮುಂ,] ಗೆಲ್ಲದ ಗರುಡಿಯುಂ, ಚದುರ

ನ್ನೆರ್ದೆಯೊಳಿವಳಡಿಯಲತಿಗೆ ಗುರುಪಂ ತೋರಿ ಪರತ್ವಮಂ ಪ್ರಕಟಿಸುವಂ. ಸಡಿಲ್ವ ಮುಡಿಯುಂ ಸರಿವ ಉಡೆತೊಡಿಗೆಗಳುಂ ಬೆಮರ್ವರ್ಗಮುಂ ಪೆರ್ಚುವ ಸುಯ್ಯೆಲರುಮಾಗಿ ಕಡಲಂ ಕಡೆವಾಗಳ್ತಾಂ ಪಟ್ಟಪಾಡನಿತುಮಮಂ ಇವಳಂ ಪಡೆದ ಸಂತಸಗಡಲ ಸೀರ್ಪನಿಯೊಳೆ ಕಳೆದಂ. ಪಾಲ್ಗಡಲ ನಡುಮಡುವಿನತ್ತಣಿಂ ಗಮ್ಮನೆ ಪೊಣ್ಮುವಾಗಳಿವಳ ಮೊಗಸಸಿಯಂ ತೋಳ್ಪಾಂಬಳ್ಳಿಗಳಂ ಮೊಲೆಸೊದೆಗೊಡಂಗಳಂ ಕಣ್ಗೊಳಿಸಿ ಮುನ್ನೊಗೆದ ಸಸಿ ಬಾಂಬಳ್ಳಿ ಸೊದೆಗೊಡಂಗಳನಿವರ್ಕೆ ದಿಟ್ಟಿದೋಸಂ ತಟ್ಟದಂತೆ ನಿವಾಳಿಸಿ ಕಳೆದುವೆಂದುಂ ಕಡೆಗಣಿಸಿರ್ಪಂ. ಈ ಜಗಮನಿತುಮನಿವಳೊತ್ತುಗಳೆವ ಬಿನದ ದಾಟದ ಫುರುಳೆನಿಸಿಯುಂ, ಪರಮಪದಮನಿವಳ ನೆಲೆವಾಳ್ತೆಯುರಮನೆಯೆನಿಸಿಯುಂ, ನಿತ್ಯಮುಕ್ತರನಿಬರನಿವಳೊಳಿಗದವರೆನಿಸಿಯುಂ, ತನ್ನುಳ್ಳೊಡಮೆಯುನಿನಳೊಡಮೆಯೆನಿಸಿಯುಂ, ತಣಿಯದೆ ತಾನುಮಿವಳ ಬಳಿಸಂದಿರ್ಕುಂ. ಸಾಸಿರ್ಮೊಗಕ್ಕೈಕಾಲ್ವೆತ್ತ ವಿಶ್ವರೂಪಮಂ ಪೊತ್ತುಂ ಇವಳ ಲೀಲೆಗಳಂ ಕಡೆಗಾಣಲಾರದೆ ಪೊಸಪೊಸತನನುಭವಿಸುತ್ತಾನಂದಮಯನೆನಿಸಿರ್ಕುಂ. ಮುಂ ಸೀತಾವತಾರದೊಳ್ ಸಿರಿಗೈಗಾಲ್ಮೊಗದಾವರೆಗಳುಂ ಕನ್ನೈದಿಲೆಗಳುಂ ನಾಸಾಚಂಪಕಮುಂ ಬಾಯ್ದೆರೆ ಬಂದುಗೆಯುಂ ಪಲ್ಮೊಲ್ಲೆಗಳುಮೆಂಬ ಪಲವುಂ ತೆರೆದ ಕಮ್ಮಲರ್ಗಳಂ ತಳೆದೆಸೆವ ಪೊಸವಗೆಯ ಪೊಂಜಳೆಯುಂತೆ ರಂಜಿಪ ಮೆಯ್ಯ ಸಿರಿಯೊಳಂ ಒಳ್ಗುಣಂಗಳೊಳ್ಗಿನೊಳಂ ಮಗ್ನನೆನಿಸಿ ಅವಳ್ಬೆಸಸಿದೊಡನೊಡಂಬಟ್ಟು ಸರ್ವಜ್ಞತೆಯನುಳಿದು ಮೇಗಣ್ಗೆ ಬರ್ಪುದನರಿಯದೆ ಕದುಬುಗೊಂಡು ಬಿಲ್ಲಂಬುವಿಡಿದು ಪೊಮ್ಮಿಗಮಂ ಬಳಿಸಂದಂ. ಇಂತು ಕಾಂತನಂ ತನ್ನ ಗುಣಂಗಳಿಂ ಬಸಂಗೆಯ್ದಿಪ ಇವಳಡಿದಾವರೆಯ ಪೊರ್ದುಗೆಯೊಂದುಂಟೆಂಬ ಬಲ್ಪಿಂದೈಸೆ ಆಮೆಮ್ಮ ಪಿಂತಣ ಕರ್ಮಕ್ಕಂಜದೆ ದಿಟವಿಡಿದಿರ್ಪುದು – ಎಂದು ಪಲವುಂ ಮೆಯ್ಮೆಗಳಂ ಭಾವಿಸುತ್ತೆ ಮತ್ತಮರೆ ಮುಗಿದ ಕಣ್ಮಲರ್ಗಳುಂ, ಸುರಿವ ಸೊಗದಾಲಿನೀರುಂ, ಸೆರೆಜಿಗಿದ ಕೊರಲೊಳ್ಸಿಲ್ಕಿದ ತಡವಡುವ ಅಸಿದನಿಯುಂ, ಕಡಬಂ ಪ್ರೂತಂತೆ ಮೈಯೊಳ್ ಪೊಣ್ಮಿದ ನವಿರುಮಾಗಿ ನುತಿಗೆಯ್ದನದೆಂತೆನೆ:

ಜಗನ್ಮಾತೆ, ನೀಂ ಪಾಲ್ಗಡಲೊಳ್ಪುಟ್ಟಿ ತಾವರೆಯೊಳ್ದಟ್ಟಡಿಯಿಟ್ಟು ಬಿಡುಗಣ್ಣರ ಮುಡಿದಂಡೆಗಳೊಳ್ನಡೆಗಲ್ತು ನಾರಾಯಣನೆರ್ದೆಯ ಎಳೆದಾಳಸಿ ಸರಂಗಳೊಳಳುಯ್ಯಲಾಡುತಿರ್ಪ ನಿನ್ನ ಮೆಲ್ಪಾನಾರ್ಬಣ್ಣಿಸುವರ್; ನೀಂ ಪುಟ್ಟಿದುದರಿಂ ಪಾಲ್ಗಡಲೊಳ್ಪಿಂಪುಂ, ನೆಲಸಿದುದರಿಂ ತಾವರೆಯೊಳ್ಕಂಪುಂ, ಸೋದರಮಾದುದರಿಂದಮರ್ದಿನೊಳಿಂಪುಂ, ಚಂದಿರನೊಳ್ತಣ್ಪುಂ ಸಮನಿಸಿರ್ಕುಂ. ಜಗನ್ಮಂಗಲಮೆನಿಪ ಶಾರ್ಙ್ಗಯುಂಗಮುಂ ನಿನ್ನ ಸಂಗತಿಯಿಂ ಮಂಗಲಮೆನಿಪುದು. ಅಲರ್ಗಂಪುಗಳುಂ ರನ್ನಗದಿರ್ಗಳುಂ ಪುದುಗಿದಂತೆ ಪುದುಗಿರ್ಪುದರಿಂ ನೀನುಮಿನಿಯನುಮೊಂದೆ ಪುರುಳೆಂಬರ್. ಮರುಕಮುಳ್ಳೊಡಂ ಮುಂತಣ

ಹಿತಮನೆಳಸಿ ಮಕ್ಕಳಂ ಶಿಕ್ಷಿಪುದು ತಂದೆಗೆ ಸಾಜಮಾದುದರಿಂದೆತ್ತಾನುಮೊರ್ಮೆ ಕನಲ್ದಿನಿಯುನ ಕನಲ್ಕೆ ಬಿಸುಪಂ ತಣ್ಪಿಸಿ ಎಮ್ಮಂ ಕಾಪಿಡವೇಳ್ಪುದು. ಮುಂ ಲಂಕೆಯೊಳ್ಸಿಂಗರದೋಂಟದೊಳ್ ನಿಮ್ಮಡಿಗಳಂ ಜರೆದು ನುಡಿದದ್ದರಿಸಿ ಬೆದರಿಸಿ ಕಾಡಿ ಕೈದುವಂ ನೆಗಪಿ ಕಕ್ಕಸಂಗೊಂಡ ರಕ್ಕಸನ ಪೆಂಡಿರಂ ಕಡಿ ಕಂಡಂಗೆಯ್ವೆನೆಂಬ ರಾಮದೂತನ ಬಿಗಿದ ಮುಷ್ಟಿಯಂ ಬಿರ್ಚಿಸಿದ ನಿನಗೆ ನೀಂ ಬೆಸಸಿದುದಂ ಹಸಾದಮೆಂದೆಸಗುವ ಮುಕುಂದನಂ ತಣ್ಪುಗೊಳಿಪುದರಿದಲ್ತೈಸೆ. ಕ್ಷಡುನೇಹದಿನೊರೆದ ಬಗೆ ವೊಲೆಯ ಮರುಕವಾಲಂ ಕೊರಲ್ವರೆಗಂ ತುಂಬುವನ್ನಮೀಂಟಿ ಸವಿಯೆ ಸೊರ್ಕೇರಿ ಸೊದೆಯನುಪ್ಪೆಸರ್ಗೆತ್ತು ಸೊದೆಯುಣಿಗಳಂ ಗಣಿಸದಿರ್ಪೆಂ. ಪರಿವ ಪಾವು ಉರಿವ ಕಿರ್ಚು ವೊದಲಾದವನರಿಯದೆಳಸುವೆಳಸಿಸುವಂ ತಡೆದು ಕಾಪಿಡುವಂತೆ ದುರ್ವ್ವಿಷಯಕ್ಕೆರಗದವೊಲೆಮ್ಮ ಪದುಳಂಗೊಳಿಪುದೆ ಲೇಸು. ಅಂತಲ್ಲದೊಡೆ ಮುಂತಣ್ಗೆ ಜಗದೀಶಂ ಎನ್ನಾಣತಿಯಂ ಮೀರಿದನೆಂದು ಕಡುಗನಲಿ ಕೈವಿಡಿದು ಖತಿಗೊಳ್ವಿನಮಾನುಮೆನ್ನ ಕೀಳ್ಗೆಯ್ಮೆಗಳಂ ನೆನದು ನಡನಡುಗಿ ಕಾತರಿಸಿ ಕಣ್ಗೆಡುವಿನಮೆಂಮೀರ್ವ್ವರುಮಂ ನಿಟ್ಟಿಸಿ ದೆಸೆಗೆಟ್ಟು ಅವನನೊಡಂಬಡಿಪುದರ್ಕೆ ನೀನಾವ ಬಗೆಯ ಸೊಗಸುನೋಟಂಗಳನಾವ ತೆರದ ಮೆಲ್ನುಡಿಗಳನಾವ ಪಾಂಗಿನ ಶೃಂಗಾರಲೀಲೆಗಳನೆಸಗುವೆಯೋ. ಏಂ ಕೋಟಲೆಗೊಂಬೆಯೋ. ಅರಿತರಿತಡಿಗಡಿಗಾನೆಸಗಿದ ದುಷ್ಕೃತಂಗಳನೆಣಿಸಿ ಕಾದೆಣ್ಣೆ ಸೋಂಕಿನೊಳ್ತಣ್ಣೀರು ಪರಿವಂತೆ ತಣ್ಣಗೆ ಬಿಸುಪೇರಿ ಮುಪ್ಪುರಿಗೊಂಡ ಪುರ್ಬುಮಗಿವ ಬಾಯ್ದೆರೆಯುಂ ಕಡಿವ ಪಲ್ಗಳುಂ ಕೆಂಪಡರ್ದ ಕಡೆಗಣ್ಣುಂ ಕಿಡಿಸೂಸುವ ನೆಟ್ಟಾಲಿಯುಂ ಕೆತ್ತುವ ಮೀಸೆಯುಮುಬ್ಬಸಂಗೊಳ್ವ ಸುಯ್ಯಲುರುಂ ನಸುನಡುಗುವ ಕೈಕಾಲ್ಗಳುಮಾಗಿ ನೆಗಪಿದ ಪೊಂಬೆತ್ತದಿಂ ಪೂಣ್ದು ನಡೆವೆಡೆಯೊಳ್ ಬಿರುಗಾಳಿಯೊಳ್ ತೆರೆಮಸಗೆ ಮಿತಿಮೀರಿಯುರ್ಕಿ ಕವಿದು ಬರ್ಪ ಕಡಲ ಕಡುಪಂ ತಡೆವ ವೇಲೆಯಂತೆ ನೀನುಮವಮೊಳ್ಪಡಿಬರಿಸಿ ಅಸ್ತ್ರಪ್ರತ್ಯಸ್ತ್ರನ್ಯಾಯದಿಂ ಭಯಪ್ರಣಯಂಗಳೊಂದುವೆರಸಿ ನಸುಮಣಿದ ಮೊಗಮುಂ ಬೆರ್ಚುವ ಮನಮುಂ ಬೆದರುನೋಟಮುಮಾಗಿ ನಿಂದವನ ಕೋಪಮಿನಿಸಿನಿಸುಂ ತಣ್ಪುಗೊಂಡಿಳಿತರ್ಪುದಂ ಕಂಡು, ಏನಿದೀಯರಿಯದ ಮಕ್ಕಳೊಳೀ ಪರಿಯ ಕೋಪಾಟೋಪಮುಚಿತಮಲ್ತು ಸಾಲ್ಗುಂ, ಇಂದು ಮೊದಲೆಂದೆಂದುಮಿವರ್ತಪ್ಪುಗಳನೆಸಗರ್, ಪಿಂತಣ ತಪ್ಪಂ ಮರೆತು ಸಲಪುವುದೆಂದು ನಲ್ವಾತುಗಳಂ ನುಡಿಯುತ್ತೆ ಮೆಲ್ಲಮೆಲ್ಲನೆ ಪತ್ತೆಸಾರ್ದವನ ನೆಗಪಿದ ಕೈಯಂ ನೊರ್ಗ್ಗಂ ಪ್ರೊಳಾರ್ದೆಯಂ ಪ್ಪುತ್ತೆ ಪೆರತೊರ್ಗೈಯಿಂದೆನ್ನಂ ಪಿಡಿದೆಳೆದವನಡಿದಾವರೆಯೊಳ್ಕೆಡಪಿ ಪುರ್ಬುಗಂಟಂ ಬಿರ್ಚಿಸಿ ದಿಟ್ಟಿಯಂ

ತಣ್ಪುಗೊಳಿಸಿ ನಗೆಯಂ ಮೊಳೆಯಿಸಿ ಬಗೆವನೆ, ಒಳಗೋಣೆಯೊಳ್ಮಲಗಿದ ದಯೆಯುನೆಳ್ಚರಿಸಿ ಕೃತಾರ್ಥೆಯಪ್ಪೆ. ನೀನೊಡತಿ ಯುಂ ತಾಯುಂ ದಯಾಲುವುಮಾದುದರಿಂದೆಮ್ಮವರೆನ್ನಂ ನಿನ್ನ ಕಯ್ಯೆಡೆಗೆಯ್ದರ್. ಎನ್ನ ಗುಣದೋಷಂಗಳನೆಣಿಸದೆ ಸಲಪುವೇಳ್ವುದೆಂದು ಸಾಷ್ಟಾಂಗವೆರಗಿ ತೀರ್ಥಪ್ರಸಾದಂಗೊಂಡು ಮುಂತಣ್ಗೆ ನಡೆದು – ಅಲ್ಲಿ ಪೊಂಬೆಟ್ಟುಗೊಂಡೇರಿದ ಮರ್ದುಂಡ ಕಾರ್ಮುಗಿಲಂ ಪೋಲ್ವ ಗರುಡಾರೂಡಾನಪ್ಪ ಗಜೇಂದ್ರವರದನಂ ವಂದಿಸಿ ಕಿರಿದುಂ ನೆಲನಂ ಕಳೆದು – ಅಲ್ಲಿ ಮನುಜಾವತಾರಕ್ಕಮನುಗುಣಮಾಗಿ ಸಾಸಿರ್ವೆಡೆಯಂಮರಸುವೆಡೆಯೊಳ್ ಮರೆದುಳಿಸಿದ ಮಾಸೇಸನ ಕೆಲವುಂ ಬೆಳ್ವೆಡೆಗಳಂತೆಯುಂ, ಒಳಗಿಟ್ಟಣಿಸಿದ ಸತ್ವಶುದ್ಧಿ ಪೊರಸೂಸಿದಂತೆಯುಮೆಸೆವ ವಿಮುಲೋರ್ಧ್ವಪುಂಡ್ರಂಗಳುಂ; ಶ್ರೀಮನ್ನಾರಾಯಣಂಗೆ ಭಕ್ತರೊಳ್ಪುಟ್ಟಿದನುರಾಗಮೀ ಭಕ್ತೋತ್ತಮರೊಳ್ಸಾಕಾರಮಾಗಿ ಮೆಯ್ಯಂ ಪತ್ತಿದಂತಿರ್ಪ ಸಿರಿಗಾವಿಯುಡೆಯುಂ; ಸತ್ವಗುಣಂ ಮುಪ್ಪುರಿಗೊಂಡಂತೆ ತೋರ್ಪ ಯಜ್ಞೋಪವೀತಮುಂ; ಭಗವದ್ವಿಷಯಮನುಳಿದು ಕೆಲಕ್ಕೆ ತೊಲಗದಂತೆ ತನ್ನ ಶಿಷ್ಯರ ಕರಣತ್ರಯಮಂ ನಿಗ್ರಹಿಪ್ಪುದರ್ಕಂ, ಮತ್ತಮೊಂದರೊಳೊಂದುವೆರೆದಿರ್ಪ ಮೂರುಂ ಗುಣಂಗಳಂ ದಂಡಿಪುದರ್ಕಂ, ಮೋಕ್ಷವಿರೋಧಿಯಪ್ಪ ತ್ರಿವರ್ಗಮಂ ತರುಬುವುದರ್ಕಂ ಕೊಂಡಂತೆಸೆವ ತ್ರಿದಂಡಮುಮಾಗಿ – ಮೆಯ್ವೆತ್ತ ವಿಷ್ಣುಶಕ್ತಿಯಂತೆಯುಂ, ಪ್ರಾಣಂ ಬೆತ್ತ ಸೇನೇಶನಾಣತಿಯಂತೆಯುಂ, ವ್ಯಕ್ತಿವಡೆದ ಶಠಾರಿಯ ಭಕ್ತಿಯಂತೆಯುಂ, ಸನ್ನಿದವಾದ ನಾಥಮುನಿಯ ಬಿನ್ನಣದಂತೆಯುಂ, ಸಾಕಾರವಾದ ಯಾಮುನಾರ್ಯರಣಿಕೆಯಂತೆಯುಂ, ಮತ್ತಂ ಶಮೆಯ ಸೀಮೆಯಂತೆಯುಂ, ದಮೆಯ ಭೂಮಿಯಂತೆಯುಂ, ದಯದ ಕಣದಂತೆಯುಂ, ವೈರಾಗ್ಯದೇಳ್ಗೆಯಂತೆಯುಂ, ಶ್ರೀವೈಷ್ಣವರ ಭಾಗ್ಯದಂತೆಯುಂ, ತೋರ್ಪ ರಾಮಾನುಜರಡಿಗೆರಗಿ ನೇಸರ ತೇಜದೊಳ್ಪಸಿಯದ ತಣ್ಪಂ ಬೆರಸಿದಂತಿರ್ಪ ಮೈಯ್ವೊಗರುಂ ಪಲವುಂ ಜಿಷ್ಣೆಗಳಪಡಿನೆಳಲಂ ತನ್ನೊಳೊಳಕೊಂಡ ರನ್ನಗನ್ನಡಿಯಂತಿರ್ಪ ಮೊಗಸಿರಿಯುಂ, ತೆರೆನೊರೆಯನುಳಿದಿರ್ಪಮರ್ದುಗಡಲ ಮಡುವಂ ಪಡಿಗೊಂಬ ಗಾಂಭೀರ್ಯಮುಂ, ಕರೆಗಣ್ಮಿ ಕಪಿವ ಕರುಣಾಮೃತಾಬ್ಧಿ ಕಲ್ಲೋಲಂಗಳಂ ಪೋಲ್ವ ಕುಳಿನೋರ್ಟಮುಂ, ಪೆಳ್ವಲ್ವೆಳಗಿನ ಚಿತ್ತರದಂತೆಸೆವ ನಸುನಗೆಯುಂ, ಶ್ರೀನಾರಾಯಣನ ಸೇವಾಸಮಯದೊಳ್ ಕೊರಲ್ಗೆ ಧರಿಸಿದ ಸಂಪಗೆಯ ದಂಡಿಗೆಯಂ ಪೋಲ್ವ ಸಿರಿದೋಳ್ಗಳುಂ, ಅವರ ಕೊನೆಯೊಳ್ ಬಿಗಿದ ಎರಡುಂ ತಾವರೆಗಳನೆಣೆಗೂಡಿಸಿದಂತೆ ಮುಗಿದ ಕೈಗಳುಂ ಪಳೆನುಡಿವೆಂಡಿರ ಕುರುಳ ಸಿಕ್ಕುಪಿಡಿಸಲ್ಕೊಂಡ ಸಿಕ್ಕುಗೆಯಂ ಪೋಲ್ವ ಮುಕ್ಕೋಲುಂ, ಎಳೆವಿಸಿಲ ಸೋಂಕಿನೊಳೆಸೆವ ಕೆಂದಾವರೆಗಳಂತೆಳಗಾಪಿಂಯುಡೆವಡೆದ ಸಿರಿಯುಡಿಯುವಾಗಿ ಪದಾಸನದೊಳಿರ್ಪಂದಮಂ ತನ್ನ ಮನದೊಳ್ಳಂದಿವಿಡಿದೆಣಿಸಿದಂ:

ಮುಂ ಮಹಾಶೇಷಂ ಪರಮಪದದೊಳ್ ವೈಕುಂಠನಾಥನ ಸೇವಾ ಸಾಮ್ರಾಜ್ಯದೊಳ್ತಣಿದಿರ್ದುಂ ಭಗವತ್ಸಂಕಲ್ಪಾನುಗುಣಮಾಗಿ ಕಲಿದೋಷದೂಷಿತರಪ್ಪ ಜನರ ಕಾಲುಷ್ಯಮಂ ಕಳೆದು ಭಗವಚ್ಛೇಷತ್ವಮನೆಳ್ಚರಿಸಿ ಸಲಪುವದರ್ಕವತರಿಸಿದಂ; ಶ್ರೀರಂಗನಾಥಂಗೆ ನಿತ್ಯಪಕ್ಷಮಾಸಸಂವತ್ಸರೋತ್ಸವಂಗಳಂ ಸಾಂಗಮಾಗಿ ನಡೆಸಿದಂ; ಶ್ರೀಕಾಂಚೀಪೂರ್ಣರ ಮುಖದೊಳ್ ಕಾಂಚೀನಾಥನತ್ತಣಿಂ ತತ್ವಹಿತ ಪುರುಷಾರ್ಥಂಗಳ ನೆಲೆಯಂ ತಿಳಿದಂ; ಶ್ರೀವೆಂಕಟೇಶಂಗೆ ಶಂಖ ಚಕ್ರಲಾಂಛನಂಗಳಂ ಸಮರ್ಪಿಸಿದಂ; ಸಿದ್ಧಾಶ್ರಮದೊಳ್ ಪೂರ್ಣ್ನನಡಿಗೆ ಮೂಲಮಂತ್ರಾರ್ಥಮಂ ಬಿನ್ನವಿಸಿದಂ; ಶ್ರೀಧನ್ವಿನೂತನಪುರದೊಳ್ ಶ್ರೀಗೋದಾದೇವಿಯರ್ಗೊಡವುಟ್ಟಿ[ದನೆ*]ನಿಸಿದಂ; ಅಂತಲ್ಲದೆ ಎಮ್ಮೀ ಯಾದವಾಚಲದೊಳ್ ಕುಲದೇವತೆಯಪ್ಪ ನಾರಾಯಣಂಗೆ ಪಡಿನೆಳಲೆನಿಸಿ ಉಕ್ಕೆವದೊಳ್ ಸಲ್ವ ಚಲ್ವರಾಯಂ ಢಿಳ್ಳೀಶ್ವರತನುಜೆ ವರನಂದಿಗೊಲ್ದು ಮೆಯ್ಮರೆದಿರೆ ಹಿತೋಪದೇಶಂಗೆಯ್ದು ಕರೆದು ತಂದು ತಂದೆಯೆನಿಸಿದಂ; ಅದರಿಂದೀ ಯತೀಂದ್ರರೆಮ್ಮ ಯಾದವರ್ಗೆ ಕುಲಗುರುವೆನಿಸಿದರೆಂದು ಸಂಬಂಧಮನನುವದಿಸಿ ಮತ್ತಂ ನುತಿಗೆಯ್ದನದೆಂತೆನೆ:

ಪರತತ್ವ ನಿರ್ಣಯಂಗೆಯ್ವುದರ್ಕೆ ಕೆಲವುಮನುವಾಕಂಗಳೊಳವಾದೊಡಂ ಪುರುಷಸೂಕ್ತಮೊಂದೆ ಪ್ರಧಾನಂ ಮಿಕ್ಕೆಲ್ಲಮುಮಿದರ್ಕನುಗುಣಮಾಗಿರ್ಕುಮೆಂಬ ನೆಲೆಯಂ, ಒರ್ವಳುಳಿಯದೆ ಮೂವತ್ತೆರಡುಮುಪನಿಷದ್ವಧುಗಳುಮೊಗ್ಗೊರಲಾಗಿ ಪುರುಷೋತ್ತಮನ ಪಾಣಿಗ್ರಹಣಂ ಗೆಯ್ದು ಪತಿವ್ರತೆಯರಾಗಿರ್ಪಿನಂ ದೇವತಾಂತರ ಸಂಬಂಧದಿಂದಿವರನಳಿಪಲ್ಕೆ ಪೂಣ್ದು ಬಲಾತ್ಕರಿಸುವ ಶೈವಪಾಶುಪತಾದಿ ದುರ್ವಾದಿಗಳಂ ನ್ಯಾಯಮಾರ್ಗದೊಳೆ ಖಂಡಿಸಿ ತರುಬಿ ಆ ಹದಿಬದೆಯರನಾವಗಂ ಕಾಪಿಡಲ್ಕೆ ಶ್ರೀಭಾಷ್ಯ ವೇದಾಂತದೀಪ ವೇದಾಂತಸಾರ ಗೀತಾಭಾಷ್ಯಾದಿ ಗ್ರಂಥಂಗಳಂ ನಿಯಮಿಸಿ ಪದುಳಂಗೊಳಿಸಿದೈ ಗಡ; ನಿನ್ನ ಭಗವದ್ವಿಷಯಾಭಿಯೋಗಮೆಂತುಟೋ; ಮತ್ತಮಾ ಜಗದೀಶ್ವರನ ವಿಭೂತಿಯೆನಿಪ ಪದಿನಾಲ್ಕುಂ ಲೋಕಂಗಳನವನ ರಾಜಧಾನಿಯಪ್ಪ ವೈಕುಂಠಮನವನರಮನೆಯಂ ಛತ್ರಚಾಮರಾದಿಚಿಹ್ನಂಗಳಂ ಮಿಕ್ಕುದೇನವನ ದಿವ್ಯಾಂಗಮುಮನಪಹರಿಸಿ ಪುಸಿಯೆಂಬ ಚಾರ್ವಾಕಬೌದ್ಧ ಜೈನ ಮಾಯಾವಾದಿಗಳ್ ಮುಂತಾದ ಸಾಸಿಗರಂ ಸದೆದುಳ್ಳೊಡಮೆಗಳೊಳೆಳ್ಳನಿತುಂ ಪೋಗದಂತೆ ಪರಿಪಾಲನಂಗೆಯ್ದೆ ಗಡಾ; ನಿನ್ನ ಭಗವದ್ದ್ರವ್ಯಾಭಿಮಾನಮೆಂತುಟೋ; ನಿಚ್ಚಲುಮೆಮ್ಮ ಚಲ್ವರಾಯಂ ತನ್ನುಳ್ಳ ಸಾಸಿರ್ವೆಸರ್ಗಳಂ ಕಿವಿಗೊಳಿಸದೆ ಯತಿರಾಜಕುಮಾರನೆಂಬ ಪೊಸವೆಸರನಾಲಿಸಿ ಮೆಯ್ಯುವಿರೇರಿ ಮೊಗಸಿರಿವಡೆಗುಂ; ಈ ಮಹಿಮೆಯನಾರ್ಬಣ್ಣಿಪರ್– ಎಂದೆರಗಿ ಹೃದ್ಯಮೆನೆ ಪಾದ್ಯಮನಾಸ್ವಾದಿಸಿ ಮುಂತಣ್ಗೆ ನಡೆದು ಪೊಂಬಳಯಿಗೆಗಂಬಮಂ ಬಲವಂದಲ್ಲಿ ಒಳವಾಗಿಲೊಳ್ ರನ್ನವಚ್ಚಂಗಳಂ ಪೊನ್ನುಡೆಗಳಂ ಪಣಂಗಳಂ

ಪಣ್ಣಾಯ್ಗಳಂ ಕಾಣ್ಗೆಗೊಂಡು ಭಕ್ತಿಭರದಿಂ ಪುಗುವ ನಾಡುಬೀಡುಗರುಂ, ಮತ್ತಂ ಸವಿಸವಿಯೆ ತಣಿವುದೋರುವಮರ್ದಂ ಪೋಲ್ವ ಚಲ್ವನಾರಾಯಣರ ಮೆಯ್ಸಿರಿಯಂ ನಿಟ್ಟಿಸಿ ಮನಂಗೊಳಿಸಿ ಮೊಗದೊಳ್ಪೊಸವೊಗರುಂ, ಕಣ್ಗಳೊಳ್ಪೊಗದಾಲಿನೀರುಂ ಕೊರಲೊಳ್ ಗದ್ಗದಮುಂ ಕಂಠದೊಳ್ ಪ್ರಸಾದಪೂಸರಮಂ ಕೈಯೊಳ್ ಸಾಸಿರ್ವ್ವೆಸರ ಪೂಜೆಯ ತೊಳಸಿಯುಂ ಮೆಯ್ಯೊಳ್ನವಿರುಮಾಗಿ ಪೊರಮಡುವವರು ಮೋರೊರ್ವ್ವರಂದಿರ್ಚ್ಚುವ ನೂಕುತಾಕಂ ನಿರವಿಸಿ ಕಿರಿದುಂ ಪೊಳ್ತು ನಿಂದು ಅಲ್ಲಿಯ ಸಂದಣಿ ನಸುಪರೆವುದುಂ; ಇದಿರೊಳ್ಕವಿದು ಪಾಯ್ವ ಜಗದೀಶ್ವರನ ಕಟಾಕ್ಷಾಮೃತ ಪ್ರವಾಹಮನಿದಿರೀಸುತ್ತೆ ಪೊಂಬಾಗಿಲನೊಳಪೊಕ್ಕು ಅಲ್ಲಿ ಪಜ್ತಿಗೊಂಡಿರ್ಕೆಲದೊಳ್ ದಿವ್ಯಪ್ರಬಂಧಾನುಸಂಧಾನಂ ಗೆಯ್ವ ಶ್ರೀವೈಷ್ಣವರ ಸಿರಿಗೊರಲುಲಿಯಿಂ ಶಬ್ದಮಯಮುಂ, ಮೇಲ್ಕಟ್ಟಿನ ಲಂಬಣದ ಪೂಸರಗಳಿಂ ಸುರಿವ ಜೇನ ಸರಿಯಿಂ ರಸಮಯಮುಂ, ಬಳಸಿದ ರನ್ನಗೋಡೆಗಳ್ಗೆ ಲೇಪಿಸಿದ ಪಚ್ಚೆಗಪ್ಪುರದ ತಣ್ಗಂಪಿನಿಂ ಗಂಧಮಯಮುಂ, ಪರಮಭಾಗವತರ ಸಿರಿಮೆಯ್ಯೊಳ್ತೊಳಪ ವಿಮಲೋರ್ಧ್ವಪುಂಡ್ರಚ್ಛಾಯೆಯಿಂ ಸತ್ವಮಯಮುಂ, ಮಣಿವ ಮನಗರಗುವೆರಗುವೇಳ್ವ ನಿಲ್ವ ನೆಲೆಗೊಳ್ವ ಕೈಮುಗಿವ ಕವಿವ ನಿಟ್ಟಿಸುವ ನಿರವಿಸುವ ಭಾವಿಸುವ ಬಗೆಗೊಳಿಸುವ ನಲಿವ ನವಿರೇರುವ ಅಚ್ಚರಿವಡುವಾಲಿನೀರ್ಗರೆವ ಸೊರ್ಕುವ ಸೊಗಂಬಡುವ ಭಕ್ತರನುಗೆಯ್ತಂಗಳಿಂ ಭಕ್ತಿಮಯಮುಂ, ಓರೊರ್ವರ್ಗೆರಗುವ ಇನಿವಾತು ನುಡಿವ ಒತ್ತಿಗೆ ಬರಿಸುವ ಒಳ್ಪುದೋರುವ ಒಡೆಯನೂಳಿಗಂಗೆಯಿಸುವ ಉಚಿತೋಪಚಾರದಿಂ ಸೌಜನ್ಯಮಯಮುಂ, ಪಿಡಿದ ಸೀಗುರಿ ಬೀಸಣಿಗೆಗಳನಿತ್ತು ತಾಂ ಪೊತ್ತಿರ್ಪ ಭೃಂಗಾರಪತದ್ಗ್ರಹಂಗಳಂ ಪಲ್ಲಟಂಗೆಯ್ವ ಮಾನವರ ಸೇವಾರಸಕ್ಕೊಲ್ಮೆಗೆಯ್ವ ನಾಲ್ಮೊಗಂ ಮೊದಲಾದ ದೇವನಿವಹದ ವಿನಯದಿಂ ಸೌಶೀಲ್ಯಮಯಮುಂ, ಇಟ್ಟಣಿಸಿ ಸಾಷ್ಟಾಂಗಮೆರಗಿ ನೆಟ್ಟನೇಳ್ವಿನಂ ಬಜ್ಜರಮುಗುಡದ ಸೂಸಕದ ಮೊಳೆಗಳೊಳ್ಸಿಲ್ಕಿದ ವಿರಕ್ತರ ಸ್ವಚ್ಛತರಪಟಚ್ಚರೋತ್ತರೀಯ ಶಕಲಮಂ ಪೂಸರಂಗೆತ್ತು ಸುತ್ತವಿಂದ್ರಾದಿದೇವತೆಗಳೆಸಕದಿಂ ವೈರಾಗ್ಯಮಯಮುಂ, ಭಗವತ್ಸೌಂದರ್ಯಾತಿಶಯದಿನೆಮೆಯಾಟಮನುಳಿದಿರ್ಪುದೊಂದೆ ತೆರನಾದೊಡಂ ದೇವಲೋಕದೊಳೆಂದೆಂದುಂ ಕಾಣದರ್ಚಾವತಾರ ಸೌಲಭ್ಯದೊಳಚ್ಚರಿವಡು ವರ್ದೇವರೆಂದು ತಿಳಿವುದರಿಂ ವಿವೇಕಮಯಮುಂ, ತತ್ತದವಸರದೊಳ್ ತೆರೆದೆಗೆದು ತೊಳಗುವಾಲತಿಯ ಪಲವುಂ ದೀವಿಗೆಗುಡಿಗಳ್ ಪಲವುಂ ರನ್ನಗಂಬಂಗಳೊಳ್ ಪಡಿನೆಳಲ್ಗೊಂಬುದರಿಂ ತೇಜೋಮಯಮುಂ, ಮುಂ ಭರದ್ವಾಜಾಶ್ರಮದೊಳಂ ಶಬರಿಯೆಲೆವನೆಯೊಳಂ ನಂದಮಂದಿರದೊಳಂ ಗೊಲ್ಲವಳ್ಳಿಯ ಗುಡಿಲ್ಗಳೊಳಂ ಗೋವರ್ಧನಾಗ್ರದೊಳಂ ಯತಿಪತ್ನಿಯರೊತ್ತಿನೊಳಂ

ಸುಚರಿತಸುತನಿದಿರೊಳಂ ಸವಿದ ಶಾಕಶಾಲ್ಯೋದನ ಸೂಪಾಪೂಪ ಪಾಯಸ ಪರಮಾನ್ನ ಫಲ ಮೂಲ ದಧಿ ದುಗ್ಧ ನವನೀತಂ ಮೊದಲಾದುವನಿತುಮನೊಂದೊಂದವಸರದೊಳ್ತನ್ನ ಮಹಿಶೂರನಗರದರಸರ್ ನಿವೇದನಂಗೆಯ್ದುದನಾರೋಗಿಸಿಯಾ ಅಮೃತಾನ್ನಮಂ ತನ್ನ ಭಕ್ತರ್ಗೆ ಸವಿದೋರ್ಪುದರಿಂದಮೃತಾಸ್ವಾದಮಯಮುಮಾಗಿರ್ಪ ರಂಗಮಂಟಪದೊಳ್ ಸಾಷ್ಟಾಂಗಪ್ರಣಾಮಂ ಗೆಯ್ದೆಳ್ದು ಮುಗಿದ ಕಯ್ಯಂ ಮಣಿದೊಡಲುಮಾಗಿ ಭಕ್ತಿಭರದೊಳ್ ಗಬ್ಬಗರದ ಬಾಗಿಲೊಳ್ ನಿಂದು – ಒಂದೆ ಸಮಯದೊಳುದಿಸಿದ ಸಾಸಿರ್ನೇಸರ್ಗಳ ಕಾಂತಿಯಂ ಕಳ್ಗಳ್ತಲೆಯೆನಿಸಿ ಮೆರೆವ ದಿವ್ಯಾದ್ಭುತ ಕಾಂತಿಯನಮರ್ದುಗಡಲೊಳ್ ತೊಳೆದು ಜೊನ್ನದೊಳ್ ತಣ್ಪಗೊಳಿಸಿ ಚೆಂಬೊನ್ನ ಕಾರ್ವಣಿಯ ಪೊಗರ್ಗ್ಗಳಿಂ ಬಣ್ಣಿಗೆಗೊಳಿಸಿ ಸಿರಿವಚ್ಚದ ಪಚ್ಚವಣಿಗಳ ಬೆಳಗಿನೊಳ್ಬೆರಸಿ ಮತ್ತೆ ಮತ್ತೆ ಬಿತ್ತರಂ ಬಡೆವುತ್ತೆ ಸುತ್ತಲುಂ ಪಚ್ಚೆಯ ಗೋಡೆಯಂತೆಯುಂ ಕೆಳಗಣ್ಗೆ ನೀಲದ ನೆಲಗಟ್ಟಿನಂತೆಯುಂ ಮೇಗಣ್ಗೆ ರಾಜಾವರ್ತದ ಮುಚ್ಚುಳ್ವಲಗೆಯಂತೆಯುಂ ಇದಿರೊಳ್ನಿಂದು ನಿಟ್ಟಿಪರ ದಿಟ್ಟಿಗಳ್ಗೆ ತಣ್ಗಾಡಗೆಯಂತೆಯುಂ ಮೆಯ್ಗೆ ಕತ್ತುರಿಯಣ್ಪಿನಂತೆಯುಂ ಕಾರ್ಬಟ್ಟೆಯುಡೆಯಂತೆಯುಂ ಕಾರಗಿಲ್ವೊಗೆಯಂತೆಯುಂ ಕವಿವುತ್ತಿದೆ. ಮತ್ತಂ ಬಾವನ್ನದ ಕಪ್ಪುರದ ಕುಂಕುಮದ ಕತ್ತುರಿಯ ಪಲವುಂ ಕಮ್ಮಲರ್ಗಳೊಳೆ ಪಾಲಸಂ ಕಳೆದು ಒಳ್ಗಂಪನೊಂದುಗೂಡಿಸಿದಂತೆಸೆವ ಸಿರಿಮೆಯ್ಯ ತನಿಗಂಪು- ಬೆಟ್ಟಿತ್ತಾದುದರಿಂ ಲೇಪಿಸುವಂತೆಯುಂ ತುಂಬುವಂತೆಯುಂ ಘ್ರಾಣಮಂ ತಣಿಯಿಸುತ್ತಿದೆ; ಎಂದಿಂತು ಕಾಂತಿಸೌಗಂಧ್ಯಂಗಳೊಳ್ಮುಳುಂಗಿ ತೇಲ್ದು ದಿವ್ಯಾಂಗ ಸಮುದಾಯಶೋಭೆಯಂ ನಿಟ್ಟಿಸುತ್ತೆ ನಿರವಿಸಿದಂ:

ಇಂದೀವಸ್ತುವೀತೆರನೆಂದು ತಿಳಿವುದರ್ಕ್ಕೆ ಯೋಗಿಗಳ ಬಗೆಗಂ ಪಳೆನುಡಿಗಮಡಕಮಾಗರ್ದಿಪುದರಿಂದಪ್ರಮೇಯಮೆಂದುಂ, ಕಿರಿದರ್ಕಂ ಕಿರಿದೆಂದುಂ, ಪಿರಿದರ್ಕಂ ಪಿರಿದೆಂದುಂ, ಎಲ್ಲಾ ಪುರುಳ್ಗಳೊಳಿರ್ಕುಮೆಂದುಂ, ಜಗಮಂ ಪಡೆವ ಪೊರೆವ ಅಳಿಪುವ ಬಿನದಗೆಯ್ಮೆಯೊಳ್ ಪೊಳ್ತುಗಳೆಗುಮೆಂದುಂ ಪೇಳ್ವರ್. ಮತ್ತಂ ಸಿರಿರಾಣಿಯುಲತುಗೆಗುಱುಪುಗೊಂಡಿರ್ಪುದರಿಂ ಪರತತ್ವಮೆಂದುಂ, ಪರಂಜ್ಯೋತಿಯೆಂದುಂ, ಪರಮಾತ್ಮನೆಂದುಂ, ಪರಬ್ರಹ್ಮಮೆಂದುಂ, ಪರಮಪದವಾಸನೆಂದುಂ, ಪರವಾಸುದೇವನೆಂದುಂ, ಶ್ರೀಮನ್ನಾರಾಯಣನೆಂದುಂ ಪೊಗಳ್ತೆ ವಡೆದಿರ್ಕುಂ ಅಕಟಕಟ, ನಿಟ್ಟಿಸಲುಂ ಮುಟ್ಟಲುಮಾಘ್ರಾಣಿಸಲುಂ ಸವಿಯಲುಂ ಕೇಳಲುಂ ಪೇಳಲುಂ ತಿಳಿಯಲುಂ ಜಾನಿಸಲುಂ ಕುರುಪುಗೊಳಲುಂ ಸಾಕ್ಷಾತ್ಕರಿಸಲುಮಾಳ್ಗೆಯ್ಯಲುಂ ಅತ್ಯಂತ ದುರ್ಲಭಮಾದ ವಸ್ತು-ಎಮ್ಮ ಭಾಗ್ಯೋದಯದಿಂ ಮುಂ ಬ್ರಹ್ಮಲೋಕದೊಳ್ ಪಲವುಂ ಕಾಲಮಿರ್ದು ಸನತ್ಕುಮಾರಂಗೊಲ್ದು ಅವನೊಡನುತ್ತರಬದರಿಕಾಶ್ರಮಮಂ ಸಾರ್ದು ಅಲ್ಲಿ ನರಸಖನಪ್ಪ ನಾರಾಯಣಮುನಿಯಿಂ ಪೂಜೆಗೊಂಡು ತಣಿದತ್ತಣಿಂ ಕಲಿದೋಷಂ

ಸೋಂಕದ ತಾಣವಂ ಕೂರ್ತೈತರ್ಪ ಮುನಿಗಳ್ಗೆ ಮೊದಲಿಗರಪ್ಪ ಸನತ್ಕುಮಾರರೊಡನೆ ಯಾದವಾಚಲಕ್ಕೆ ಬಂದು ಪರಬ್ರಹ್ಮಗರ್ಭಮಾಗಿ ವೇದಾಂತದಂತೆ ದುರ್ವಿಭಾವ್ಯಮಾದೊಡಮಿಲ್ಲಿ ರಾಮಾನುಜಾರ್ಯರಿಂ ಪರಿಚರ್ಯೆವಡೆದು ಸರ್ವಾತ್ಮಸೇವ್ಯಮೆನಿಸಿದಾನಂದಮಯ ವಿಮಾನದೊಳ್ ಸುಲಭಮಾಗಿಯುಂ ಸುವ್ಯಕ್ತಮಾಗಿಯುಂ ತೋರುತ್ತಿದೆ. ಮತ್ತಮೀವಸ್ತುವಂ ಭಾವಿಸೆ ಎರ್ದೆಯೊಳಿರ್ಪ ಸಿರಿರಾಣಿಯ ಮೆಯ್ವೊಗರ್ಪೊಣ್ಮಿದಂತೆಸೆವ ಪಳದಿಯುಡೆಯ ಪೊನ್ನೊಳ್ ಪುದುಗಿಸಿ ಪಚ್ಚೆವಣಿಯೊಳ್ಳವೆದ ಪಳೆನುಡಿವೆಂಡಿರ ತೊಂಡಿಲ್ವಚ್ಚದಂತೆಯುಂ, ಪೊಡವಿನೀಳೆಯರ ಸಿರಿಮೆಯ್ಯ ಕತ್ತುರಿಯಣ್ಣಿನಿಂ ಪೊಗರ್ವಡೆದ ಯಾದವಾದ್ರಿಯ ಮುಡಿಯ ಕನ್ನೆಯ್ದಿಲ ಬಾಸಿಗದಂತೆಯುಂ, ಕೆಂಜೆರಲ್ದಳಿರ್ಗಳಿಂ ದಿವ್ಯಾಯುಧಂಗಳೆಂಬ ಪೂದೊಂಬೆಗಳಂ ತಳೆದು ಕೆಳಗಣ್ಗಂ ಮೇಗಣ್ಗಮಿದಿರ್ಗ್ಗಂ ಪಾಯ್ದೆಸೆವ ನಿಡುದೋಳ್ಗೊಂಬುಗಳಿಂ ಪೊದಳ್ದ ಪಾರಿಜಾತದಂತೆಯುಂ, ಸಿರಿಯಡಿಗೈಗಣ್ಮೊಗದಾವರೆಗಳಿಂದೆಯುಂ ಸಿರಿಪೊಡವಿಯಂಚೆಗಳಿಂದೆಯುಂ ಚೆಲ್ವುವಡೆದಮೃತತಟಾಕದಂತೆಯುಂ, ರಸವಚ್ಚಂಗಳ ಬಣ್ಣಿಗೆವೆಳಗಿನಿಂದೆ ಇ[೦*]ದ್ರಧನುವಂ ಸಿರಿರಾಣಿಯ ಪೊಂಜೆಳೆಮೆಯ್ಯಿಂ ಮಿಂಚುವಳ್ಳಿಯುನೊಳ ಕೊಂಡೆಸೆವಮರ್ದುಂಡ ಕಾರ್ಮುಗಿಲಂತೆಯುಂ ತೋರ್ಕುಂ. ಮತ್ತಮೀವಸ್ತುವಂ ನಿಟ್ಟಿಪಿನಮೆನಗೆನ್ನ ಪೊನ್ನನೆನ್ನೊಡಮೆಯಂ ಎನ್ನೈಸಿರಿಯಂ ಎನ್ನರಮನೆ[ಯಂ*] ಎನ್ನಾಳ್ದನೆನ್ನ ತಾಯನೆನ್ನ ತಂದೆಯನೆನ್ನ ಪುಣ್ಯೋದಯಮನೆನ್ನ ಭಾಗ್ಯದ ಫಲವನೆನ್ನಿಷ್ಟಾರ್ಥಮನೆನ್ನೊಡಲನೆನ್ನ ಹರಣವನೆನ್ನಾತ್ಮವನೆನ್ನ ದೇಶಿಕನೆನ್ನ ಕುಲದೇವತೆಯಂ ಕಂಡಂತೆನ್ನ ಮನದೊಳಾನಂದದ ಪೊನ್ನಲ್ ಪೊಣ್ಮಿಯಿರ್ತ್ತಡಿಯಂ ಮೀರಿ ಪಾಂಪ್ಟುನ್ನಂ ತೇಲಿಸುತ್ತುಂ ತೆರೆಗಳಿಂದುಂಯ್ಯಲಾಡಿಸುತ್ತುಂ ಪರವಶಂಗೊಳಿಸುತ್ತಿದೆ. ಮತ್ತಂ ಮತ್ತಂ ಭಾವಿಸೆ ಪುರುಳ್ಗೆ ಪುರುಳುಮಾಭರಣಕ್ಕಾಭರಣಮುಂ, ಹರಣಕ್ಕೆ ಹರಣಮುಂ, ಚೈತನ್ಯಕ್ಕೆ ಚೈತನ್ಯಮುಂ, ಆತ್ಮಂಗಾತ್ಮನುಮಾಗಿರ್ಕುಂ ಮತ್ತಮೊಂದೊಂದವಯವದ ಸೌಂದರ್ಯಮಂ ನಿರವಿಸುವಿನಂ ಸಾಸುವೆಯಂ ಕೊರೆದು ಕಡಲಂ ತುಂಬಲಡಂಗದೆ ಪೊರವಾಡುವಂತೆ ಬಗೆಗಳವಡದೆ ಪೊರಸೂಸುವಾನಂದರಸಪ್ರವಾಹಮೆನೆ ನುತಿಗೆಯ್ವನದೆಂತೆನೆ:

ಈ ಸಿರಿಯಡಿಯ್ಯೆಸೆ; ಮುಂ ಜಗಮನಳೆವಾಗಳ್ ಬೊಮ್ಮಂ ಮೊದಲಾಗಿ ಪುಳುಗಳ್ವರೆಗಂ ಪಿರಿದು ಕಿರಿದೆಂದೆಣಿಸದೆ ಅನಿಬರ ಸಿರದೊಳಮಲರ್ದಾವರೆಯಂತೆಸೆದುದು. ಇದರುಂಗುಟದುಗುರ್ಗೊನೆಯಿಂ ಪರಿದ ಅಜಾಂಡದ ಪೊರವಳಯದ ಪೊಸನೀರೊಳ್ಪೆರಸಿ ನಾಲ್ಮೊಗಂ ತನ್ನ ಕೈಗಿಂಡಿಯ ನೀರೊಳ್ಕೊಳೆಯಲಾತೀರ್ಥದಿಂದೈಸೆ ಶಿವಂ ಶಿವನೆನಿಸಿದಂ; ಮೂಜಗಮುಂ ಪಾವನಮೆನಿಸಿದುದು; ಇದನ್ನೈಸೆ ಸುರರ್ ಮುಡಿಯೊಳಂ ಯೋಗಿಗಳ್ಗೆ ದಾವರೆಯೊಳಮಾಂತು ಸಂತಸಂಗೊಂಬರ್; ಇದರ ಸೋಂಕಿನಿಂದೈಸೆ ಕಲ್ಲರೆ ಕಣ್ದೆರೆಮುದು; ಸೀದ ಕಂಡಂ ಸಿಸುವಾದುದು; ಇದೈಸೆ ಕರ್ಮಜ್ಞಾನಭಕ್ತಿಗಳಂ

ಕಡೆಗಣಿಸಿ ತನ್ನಂ ನೆರೆ ನಂಬಿದರ್ಗೆ ಸಾಕ್ಷಾನ್ಮೋಕ್ಷೋಪಾಯಮಾದುದು; ಇದ್ದೈಸೆ ಸನಕಾದಿಗಳೆರ್ದೆಯೊಳ್ ಚಂಚಲವಾಗಿಯುಮೆನ್ನಿದಿರೊಳೀ ಪದ್ಮಪೀಠದೊಳ್ ಪದುಳಂಗೊಂಡಿರ್ಪುದರಿಂ ತನ್ನ ಸೌಲಭ್ಯಮನುದ್ಯಾಪಿಸಿದುದು; ಈ ಜಂಘಗಳ್ಪೆಸೆ ಶ್ರೀಭೂಮಿಕರಕಮಲಲಾಲಿಂತಂಗಳಾಗಿಯುಂ ಕುರುಪುರಿಗೆ ದೂದು ನಡೆದು ತನ್ನ ಭಕ್ತವಶ್ಯತೆಯಂ ಮರೆದುವು; ಈ ದುಂಡುದೊಡೆಗಳ್ಪೆಸೆ ನೀಳೆಗೆ ಲೀಲೋಪಧಾನಮಾಗಿಯುಂ ಮಧುಕೈಟಭರೆಂಬ ಕೀಟಂಗಳಂ ತೊತ್ತಳಂದುಳಿದು ತನ್ನ ದುಷ್ಟನಿಗ್ರಹಮಂ ಪ್ರಕಟಿಸಿದುವು; ಈ ಬಲಮುರಿವೊಕ್ಕುಳ್ಗೊಳನ್ಪೆಸೆ ತನ್ನೊಳ್ ಬೆಳೆದ ತಾವರೆಯಿಂ ನಾಲ್ಮೊಗನಂ ನಿರ್ಮಿಸಿ ಜಗತ್ಕಾರಣತ್ವಮಂ ನೆಲೆಗೆಯ್ದುದು; ಈ ತೆಳ್ವಸಿರ್ಪೆಸೆ ಪದಿನಾಲ್ಕುಂ ಲೋಕಂಗಳನೊಳಕೊಂಡುಂ ತುಂಬದೆ ಗೊಲ್ಲವಳ್ಳಿಯ ಗುಡಿಲ್ಗಳೊಳ್ ಕಳವುಗೊಂಡ ಪಾಲ್ಮೊಸರ್ಬೆಣ್ಣೆಗಳಿಂದೆಯುಂ ಸುಚರಿತಸುತನ ಭಿಕ್ಷಾನ್ನದಿಂದೆಯುಂ ತಣಿದು ಭಕ್ತ ಸಂಸ್ಪೃಷ್ಟ ವಸ್ತು ಪ್ರೀತಿಯಂ ಪ್ರಕಟಿಸಿದುದು; ಈ ಪೇರೆರ್ದೆಯ್ಪೆಸೆ ಲಕ್ಷ್ಮೀಕೌಸ್ತುಭವನಮಾಲೆಗಳನಿನಿಸಿನಿಸುಂ ಕೆಲಕ್ಕೆ ತೊಲಗಿಸಿ ಇಂಬುಗೊಳಿಸಿ ಭೃಗುಮುನಿಯಡಿಗುರುಪನಂಗೀಕರಿಸಿ ತನ್ನ ಸತ್ವಗುಣಮಂ ಬಿತ್ತರಿಸಿದುದು; ಈ ನಿಡುದೋಳ್ಗಳ್ಪೆಸೆ ದಿವ್ಯಮಹಿಷೀ ಸಂಶ್ಲೇಷದೊಳ್ ಸಾಜಮಾಗಿರ್ದುಂ ನರೆತೆರೆಸೆರೆಗಳಿಂ ನಿಚಿತಮಾದ ಕುಚೇಲನೊಡಲಂ ತಕ್ಕವಿಸಿ ಪೆರ್ಕಳಂಗೊಂಡು ತನ್ನ ವಾತ್ಸಲ್ಯಮಂ ಪೊಗಳ್ದುದು; ಈ ಸಿರಿಮೊಗಮ್ಮೆಸೆ ಯೋಗಿಗಳ ಬಗೆಗೆ ಸುಳಿವುದೋರದಿದರ್ುಂ ಎನ್ನಿದಿರೊಳ್ಮೊಳೆನಗೆಂಯುಂ ಕುಳಿನೋರ್ಟಮುಮಾಗಿ ನೆಲಸಿ ತನ್ನ ಸೌಶೀಲ್ಯಮಂ ಸೊಲ್ಲಿಸಿದುದು; ಈ ಸಿರಿಮುಡಿಯ್ಪೆಸೆ ಉಭಯವಿಭೂತಿಯೊಡೆತನಕ್ಕೆ ತಕ್ಕ ರನ್ನಮುಗುಡಮಂ ಧರಿಸಿಯುಂ ತಿರುಕುಳಿಪಾರ್ವರಡಿಗೆಜಿಗಿ ತನ್ನ ಸ್ವಾತಂತ್ರ್ಯಮಂ ತೋರಿದುದು. ಎಂದಿಂತು ದಿವ್ಯಾವಯವಂಗಳ ಚರಿತ್ರಮಂ ನಿರವಿಸಿ ಸೌಂದರ್ಯಮನೆರ್ದೆಯೊಳ್ ಬಂದಿಗೊಳಿಸಿ ಬಣ್ಣಿಸಿದನದೆಂತೆನೆ:

ಸಿರಿಮೊಗದಾವರೆಯೊಳ್ ಕಳೆಯಿಂದಮೋ ಕುರುಳ್ಗಳ್ತಲೆಯೊಳ್ ಕೇಣದಿಂದಮೋ ತನ್ನ ತಾಯ್ವನೆಯೆನಿಪ ಸಿರಿಗಣ್ಣೊಳ್ ಪ್ರಣಯದಿಂದಮೋ ಏತರಿಂದಾದೊಡಂ ಸೂರ್ಯನೆಂಯ್ತುಂದಿರ್ಪುದೆ ದಿಟಂ; ಆದೊಡಂ ಕಿರೀಟರತ್ನಂಗಳ್ಕೀರ್ತಿವಡೆದುವು; ಪಣೆವಟ್ಟದ ರನ್ನವೆಳಗಿಂಗಳ್ಕಿ ಕೆಳಗಣ್ಗೆ ನಡೆದಲ್ಲಿ ಎಳೆನಗೆಯ ಜೊನ್ನಮೆಳ್ಬಟ್ಟುವಿನಂ ಮೇಗಣ್ಗೆ ಪಾಯ್ದು ಸುಳಿಗೊಂಡು ನಟ್ಟನಡುವೆ ನೆಗೆವ ಸಿರಿವಣ್ವೆಳಗಿನಬ್ಬರಕ್ಕಿರ್ಬಗಿಯಾಗಿರ್ಕ್ಕೆಲಕ್ಕೆ ಸರಿವುತ್ತಲ್ಲಿಯುಂ ಸಿರಿಗೆಯ್ಗಳಿಂ ನೆಗಪಿದ ಸಂಕು ಪಾರುಂಬಳೆಗಳೆಂಬ ಸಸಿನೇಸರ್ಗಳಂ ಕಂಡು ಕಾತರಿಸಿ ಕುರುಳ್ಗಳ್ತಲೆ ನುಣ್ಬಣೆಯಂ ಪತ್ತಿ ಪದುಳದೊಳಿರ್ಕುಂ; ಆದೊಡಂ

ಸಿರಿಮೊಗಸಸಿ ಜಸಂಬಡೆದುದು; ಸಿರಿಮೆಯ್ಯ ತನಿವೊಗರೆಂಬ ಪನ್ನೀರ್ವೊನಲುಂ ಸಿರಿದೋಳ್ಗಳೆಂಬ ಪೆರ್ದೆರೆಗಳುಂ ಕೊರಲೋಳ್ ಧರಿಸಿದ ಮುತ್ತಿನ ಕಂಠಸರದ ನೆವದಿಂ ಪರಿದುವರ್ಪ ಬಾಂಬೊಳೆಯುಂ ಕೆಂಪುವಚ್ಚದ ಕದಿರ್ಗಳೆಂಬ ಪವಳಗುಡಿಗಳುಂ ಕೊರಲ್ಸಂಕುಮಾಗಿ ತೋರ್ಪ ಪೇರೆರ್ದೆಯಂ ಕಡಲ್ಗೆತ್ತು ಕೌಸ್ತುಭಮಂ ಸಿರಿಯರಸಿಯುಂ ನೆಲಸಿರ್ಕುಂ; ಆದೊಡಂ ಬಗೆಯೊಳೊಗೆದ ಸಸಿಯ ಸೋದರ ಸ್ನೇಹಂ ನೆಗಳ್ತೆವಡೆದುದು; ಒಳಗಿಡಿದ ಮೂರುಂ ಜಗದ ಭಾರದಿಂ ಸರಿಯದಂತೆ ರಸ್ನದ ಪೊಡೆಗಟ್ಟುಗಟ್ಟಿರ್ಪುದು; ಆದೊಡಂ ಬೆಣ್ಣೆಗಳವಿನೊಳ್ ಗೋಪಿ ಕಟ್ಟಿದ ಕಡೆದಾವು ಪೊಗಳ್ತೆವಡೆದುದು; ಎರ್ದೆಯೊಳಿರ್ಪ ರಾಣಿಯ ಮೆಯ್ವೊಗರಿಂದಮೆ ಪೊದೆದ ದು[ಗು*]ಲಂ ಪೊಂಬಣ್ಣಮಾದುದು; ಆದೊಡಂ ಪೀತಾಂಬರಂ ಪೆ[ಮೆ*]ರ್ವೆತ್ತುದು; ಉಡೆನೂಲ ಕೆಂಬೆರಲ್ಗಳ ಪೊಗರ್ಗಳಿಂದಮೆ ತೊಡೆಗಳ್ಕೆಂಪಡರ್ದುವು; ಆದೊಡಂ ಮುಂ ಪತ್ತಿದ ಮಧುಕೈಟಭರ ನೆತ್ತರ್ ನೆವಮಾದುದು; ಅಶರಣ್ಯಶರಣ್ಯಮೆನಿಪ ದಿವ್ಯಪಾದಾಂಬುಜಂಗಳ ಸೋಂಕಿನಿಂದಮೆ ಕಿಱುದೊಡೆಗಳ್ ನವಿರ್ದಳೆದುವು; ಆದೊಡಂ ಪಾದಪೀಠದೊಳಿರ್ಪ ಪೊಡವಿವಡದಿಯ ಮೆಯ್ಸೋಂಕು ಮೆಯ್ಮೆವೆತ್ತುದು. ಮತ್ತಂ ಪಾದಂಗಳೆಂಬ ಕಲ್ಪಪಾದಪಂಗಳ ಬೆರಲ್ಗೊಂಬುಗಳ ಪೂದೊಂಬೆಗಳೆಂಬ ನೆನಪಂ ನೆಗಳ್ಚುತ್ತೆ ಸಕಲಜ[ಗ]ಮನೇಕವೇಳೆಯೊಳ್ ಪಾವನಂಗೆಯ್ವ ತವಕದೊಳ್ಪತ್ತುಂ ಮೆಯ್ವೆತ್ತು ಪಾಯ್ವ ನಖರುಚಿ ಗಂಗಾಪ್ರವಾಹದೊಳ್ಮಿಂದೆನ್ನ ಕಂದುಗಳಂ ಕಳೆವೆಂ; ಪರಿಮಳಕ್ಕೆಳಸಿ ಕಾಲಿನೆಡೆಂಯೊಳ್ ಸುತ್ತುಮುತ್ತಿದ ತುಂಬಿಗಳಿಂದೆಸೆವ ಸಾಸಿರರ್ವೆಸರ ಪೂಜೆಯ ತಾವರೆಯೊಳ್ ಬೆರಸಿ ನೀಲದ ಪೆಂಡೆಯಂಗಳಂ ಧರಿಸಿದ ಸಿರಿಯಡಿಗಳನರಸಿ ಕುರುಪುಗೊಂಡೆರಗಿ ಕೃತಾರ್ಥನಪ್ಪೆಂ; ಪೊಡವಿವಡದಿಯ ಕೈಸೋಂಕಿನೊಳ್ ಕಂಟಕಿತಮಾಗಿರ್ಪುದರಿಂದಡಿದಾವರೆಯ ಪೇರ್ದಂಟೆನಿಪ ಜಂಘೆಗಳಂ ಕಂಡೆನ್ನ ಭವಪಥಜಾಂಘಿಕತ್ವಮಂ ಕಳೆವೆಂ; ಓರಡಿಯ ಪೊರ್ದುಗೆಯಿಂ ನೆಗಳ್ತೆವೆತ್ತ ಗಂಗೆಯಂ ಕೀಳ್ವಡಿಸಲೆಂದಿರ್ಮೆಯ್ದುಳೆದ ಎರಡುಂ ಸಿರಿಯಡಿಗಳ್ಗೆ ಪಾಯ್ವ ಜಗುನೆಯಂತಿರ್ಪ ತೋರದೊಡೆಗಳಂ ಸೇರಿ ಎನ್ನ ಬಗೆಯ ಬಡತನಮಂ ಪರಿಹರಿಸುವೆಂ; ವಲಿಗಳೆಂಬ ತೆರೆಗಳುಂ ನಾಭಿಯೆಂಬ ಸುಳಿಯುಮಾಗಿ ಪಾಯ್ವ ಶರೀರಕಾಂತಿ ಪ್ರವಾಹದೊಳ್ಮುಳುಂಗಿ ಎನ್ನ ತಾಪತ್ರಯಮಂ ತರುಬುವೆಂ; ಪೊದೆದ ದುಗುಲದ ತೆರೆಗಳುಂ ಮುತ್ತಿನ ಸರಂಗಳೆಂಬ ನೊರೆಗಳುಂ ಪೊಣ್ಮಿದ ಕೌಸ್ತುಭಮುಂ ಸಿರಿಯುಮಾಗಿರ್ಪುದರಿಂ ಕಡಲ ತಡಿಯಂ ಪೋಲ್ವ ಪೇರೆರ್ದೆಯೊಳ್ ನೆಲಸಿ ಅನಿಮಿಷತ್ವಮಂ ಪಡೆದೆನ್ನ ಕಣ್ಗಳಿಂದಮರ್ದುಂಡು ತಣಿವೆಂ; ಶ್ವೇತೋರ್ಧ್ವಪುಂಡ್ರದ ನೆವದೊಳ್ ನೆಗೆದ ಕೇದಗೆಯ ಕೊನೆಯೆಸಳ್ಗಳುಂ ನಿಡುಗಣ್ದಾವರೆಗಳುಂ

ನಾಸಿಗೆಂಯೆಂಬ ಸಂಪಗೆಂಯುಂ ಬಾಯ್ದೆರೆಂಯು ಬಂದುಗೆಂಯುಂ ಪಲ್ಮೊಲ್ಲೆಗಳುಮಮರ್ದಿ[ರ್*]ರೆ ಸಿರಿರಾಣಿಯ ಕೈಯೊಳ್ ಪಿಡಿದಾಡಲ್ಕೆಂದು ಕೊರಲ್ಗಾವಿನೊಳ್ ಕಟ್ಟಿದ ಪೊಸವಗೆಯ ಪೂಚಂಡಂ ಪೋಲ್ವ ಮೊಗದ ಸೌಗಂಧ್ಯಮನಾಘ್ರಾಣಿಸಿ ಮನದ ಜಾಡ್ಯಮಂ ಜಾರಿಸುವೆಂ. ಮತ್ತಂ ಪೊಸಪೊಸವೊಸರ್ಗ್ಗಳಿಂ ಪೊಂಗುವ ಮಗುಡಮುಂ ಪೊಳೆವ ಪಣೆಯುಂ ನಿಮಿರ್ದ ಪುರ್ಬುಂ ನೀಳ್ದ ಕಣ್ಣುಂ ಪೆರೆಗೆರೆನಾಮಮುಂ ಪೆಂಪುವಡೆದ ನಾಸಾಚಂಪಕಮುಂ ತೊಳಪಕದಂಪುಂ ತೊಂಡೆಬಾಯ್ದೆರೆಯುಂ ಮುದ್ದುನಗೆಯುಂ ಮೊನೆವಲ್ಲುಂ ಒಳ್ಗಿವಿಯುಂ ಒಲೆವ ಕುಂಡಲಮುಂ ದುಂಡುಗೊರಲುಂ ತೋರಗಂದಮುಂ ತಳ್ತತೋಳುಂ ತಾವರೆಗೆಯ್ಯುಂ ಬಲಮುರಿಸಂಕುಂ ಪಾರುಂಬಳೆಕೈದುಂ ಪೇರೆರ್ದೆಯುಂ ಕಂ[ಠ]ಸರಂಗಳುಂ ಕೌಸ್ತುಭಮಣಿಯುಂ ಸಿರಿವಚ್ಚಗುರುಪುಂ ಸಿರಿರಾಣಿಯುಂ ಪೊಸದೊಳಸಿಸರಮುಂ ಪೊನ್ನುಡೆಯುಂ ಪೇರೆರ್ದೆಯುಂ ಬೆಳ್ಜನ್ನನೂಲುಂ ರನ್ನವಚ್ಚಂಗಳುಂ ರಂಜಿಪ ಪೊಡೆಗಟ್ಟುಂ ತೆಳ್ವಸುರುಂ ತಿವಳಿಯುಂ ಬಡನಡುವುಂ ಬಂಣವುಡೆಯುಂ ಪೊನ್ನುಡೆನೂಲುಂ ಪೊದಳ್ದ ಕಾಂಚಿಯುಂ ಬಲ್ತೊಡೆಯುಂ ಬಟ್ಟ ಮೊಳಕಾಲುಂ ಸ್ನಿಗ್ಧಜಂಘೆಯುಂ ಸಿರಿಯಡಿಗಳುಮಾದ ದಿವ್ಯಮಂಗಲ ವಿಗ್ರಹಮಂ ನಿಟ್ಟಿಸಿ ತಣಿಯದೆ ಕಟ್ಟಾಸೆಯಿಂ ದಕ್ಕುಗೊಳಲ್ಕೆಳಸಿ ದಿಟ್ಟಿವಾಗಿಲಿಂದೊಳಪುಗಿಸಿ ಬಗೆವನೆಯೊಳಿರಿಸಿ ಭಾವಿಸುವಿನಂ – ಕನಸಿನಂತೆಯುಂ ಯೋಗಸಾಕ್ಷಾತ್ಕಾರದಂತೆಯುಮಲ್ಲದೆ ಪ್ರತ್ಯಕ್ಷಮಾಗಿ ಮುದ್ದುಮೊಗಮುಂ ಮೊಳೆನಗೆಯುಂ ಒಲ್ಮೆನೋಟಮುಂ ಒಳ್ಪಾತುಮಾಗಿ ನೆಲೆನಿಂದು – ಎಲೆಯರಸ, ನಿನ್ನ ಭಕ್ತಿಗೆ ಮೆಚ್ಚಿ ದಶರಥನಂತೆಯುಂ ವಸುದೇವನಂತೆಯುಂ ನಿನ್ನಂ ತಂದೆಗೆತ್ತು ನಿನ್ನೆರ್ದೆಯೊಳ್ ನೆಲಸಿದೆಂ. ನಿನಗೌರಸಪುತ್ರನಾಗಿ ಜನಿಸುವೆಂ. ನೀನುಮಂಜದೆ ಅಚ್ಚರಿವಡದೆ ಎನ್ನಂ ಎನ್ನ ವಾತ್ಸಲ್ಯಮುಮಂ ನೆನೆದು ಪದುಳಂಗೊಂಡು ನಿನ್ನೊಳ್ಗೆಳೆಯಳಹಿಯ ಸಿಂಗರಾರ್ಯ್ಯರ್ಗಂ ನಿನ್ನ ಮನದನ್ನಳಮೃತಾಂಬೆಗಮಲ್ಲದೆ ಪೆರರೊರ್ವರ್ಗಮರುಪದೆ ಮೌನದೊಳಿರ್ಪುದು. ಆನುಂ ನಿನ್ನರಮನೆಯ ಕೃಷ್ಣಾವತಾರದ ಚಾತುರ್ಯಮನೊಂದುವೆರಸಿ ಒಳ್ಪುಗೊಳಿಸಿ ಪಲವುಂ ದಿವ್ಯಾದ್ಭುತ ಚರಿತಂಗಳನೆಸಗಿ ದುಷ್ಟರನಿಬರಂ ಮೆಟ್ಟಿ ಶಿಷ್ಟರಂ ನೆಟ್ಟನೆ[ಲೆ]ಗೊಳಿಸಿ ಸಾತ್ವಿಕಧರ್ಮ್ಮಂಗಳಂ ಸ್ಥಾಪಿಸುವೆಂ. ಕಲಿದೋಷಮಂ ಕಳೆದು ಕೃತಯುಗದೊಳೆಂತಂತು ಸಕಲವರ್ಣಾಶ್ರಮಧರ್ಮಂಗಳಂ ಸಂಗತಿಗೊಳಿಸುವೆಂ – ಎಂದುಸಿರ್ವುದುಮರಸಂ ಹಸಾದಮೆಂದಾಣತಿಯಂ ಸಿರದೊಳಾಂತು ಕಣ್ದೆರೆವುದುಂ; ಅರ್ಚಕರ್ಕೊರಲ್ಗೆ ದುಂಡಮಲ್ಲಿಗೆ ದಂಡೆಯಂ ತಲೆಯೆರ್ದೆಭುಜಂಗಳ್ಗೆ ಶಡಗೋಪಮಂ ಕೈಗೆ ತೀರ್ಥಮಂ ಬಳಕ್ಕಭಯಹಸ್ತಮಂ ಕುಡೆ, ಅಂಗೀಕರಿಸಿ ಕೃತಾರ್ಥತೆವೆತ್ತು ಅತ್ತಣಿಂ ಪೊರಮಟ್ಟು ಜೆಲ್ವರ ಸನ್ನಿಧಿಯೊಳ್ ನಿಂದು ಕೈಮುಗಿದೆಣಿಸಿದಂ:

ಶ್ರೀಮನ್ನಾರಾಯಣಂ ತನ್ನ ಸನ್ನಿಧಿವರೆಗಮೆಯ್ತಂದು ವಂದನಂಗೆಯ್ವುದ ಕ್ಕಾರದ ಮುದುಪರುಂ ಮಕ್ಕಳುಂ ಪೆಳವರುಂ ಬೇನೆಯಡಸಿದರುಂ ದರ್ಶನಂಗೆಯ್ದು ಬರ್ದುಂಕಲೆಂದು ಉಕ್ಕೆವದೊಳ್ಪೀದಿಯಂ ಬಲವರ್ಪುದರ್ಕೆ ಪೊತ್ತ ಪೊಸವರಿಜೆದ್ಯೆಸೆ. ನೀಳ್ದ ಮಗುಡಮುಂ ನಸುಗವಿದ ನೊಸಲ್ವಟ್ಟಮುಂ ಸಿರಿಗುರುಳುಂ ನುಣ್ಬಣೆಯುಂ ಪೊಳೆವ ಕತ್ತುರಿಯ ತಿಲಕಮುಂ ಕುಡುವುರ್ವುಂ ಬಗಸೆಗಣ್ಣುಂ ಅರೆವಿರಿದ ಸಂಪಗೆ ನನೆಯಂ ಪಳಿವಮೂಗುಂ ಎಳೆನಗೆಯುಂ ಚೆಂಬಾಯ್ದೆರೆಯುಂ ಗೆರೆಗೊರಲುಂ ನೀಳ್ದ ತೋಳುಂ ನೆಗಪಿದ ಶಂಕಚಕ್ರಂಗಳುಂ ಒಯ್ಯರದೊಳೂರಿದ ಗದೆಯುಂ ನಸುವುಂಬರಿಸಿದಭಯಹಸ್ತಮುಂ ಬಡನಡುವಿನೊಳ್ಬಿಗಿದು ಕಟ್ಟಿದ ಪೊಂಬಟ್ಟೆದಟ್ಟಿಯುಂ ಪದ್ಮಪೀಠದೊಳ್ನೆಲಸಿದ ಪಾದಪದ್ಮಮುಮಾದ ನೆಲೆಯಂ ನಿಟ್ಟಿಸೆ – ಇರ್ಕೆಲದೊಳ್ ಭುಜವುಂ ಭುಜಂ ಸೋಂಕೆ ನಿಂದಿರ್ಪ ರಾಣಿಯರೊಡವೆರಸಿ ಕುಣಿಯುತೆಳಸಿದಂತೆಯುಂ ನಗುತ್ತೆ ನುಡಿಸುತ್ತೆ ವಂದು ಎನ್ನೊಡವೆರೆದಂತೆಯುಂ ಒಳಪುಗುವಂತೆಯುಂ ತೋರುತ್ತಿದೆ. ಮತ್ತಂ ಕಿರೀಟದೊಳೊಡೆತನಮುಂ ದಿಟ್ಟಿಯೊಳ್ಕಾರುಣ್ಯಮುಂ ನಸುನಗೆಯೊಳ್ವಾತ್ಸಲ್ಯಮುಂ ಕೈಗೊಳೊಳಭಯಪ್ರದಾನಮುಂ ಎರ್ದೆಯೊಳ್ಸಿರಿಯುಂ ಪೊಡೆಗಟ್ಟಿನೊಳ್ ಸೌಲಭ್ಯಮುಂ ಪೊಕ್ಕುಳೊಳ್ಜಗತ್ಕಾರಣತ್ವಮುಂ ಸಿರಿಯಡಿಗಳೊಳುಪಾಯಮುಂ ಇರ್ಕೆಲದ ರಾಣಿಯರೊಳ್ ಪುರುಷಾಕಾರತ್ವಮುಂ ಪ್ರತ್ಯಕ್ಷಮಾಗಿ ತೋರುತಿದೆ. ಮತ್ತಮೀವಸ್ತು ನಿಟ್ಟಿಸಿದೊಡನೆ ಕಣ್ಮನಂಗಳಂ ಕವರ್ದುಕೊಳುತಿದೆ; ಪಿಡುಗಣ್ಣರ್ಕುಡಿವಮರ್ದಿನಂತೆ ಬೆಡಗುದೋರದೆ ಎಪ್ಪೊಳ್ತುಮೆಡವಿಡದೆ ಸವಿದೊಡಂ ತಣಿವುಗುಡದ ಸವಿಯೇರುತಿದೆ; ಈ ವಸ್ತುವಂ ನಿಟ್ಟಿಪೆನ್ನ ಕಣ್ಗಳ್ ಪಲವಕ್ಕೆ, ಜಾನಿಪ ಮನಮುಂ ವಿಭುವಕ್ಕೆ, ಆಳ್ಗೆಯ್ವ ಮೆಯ್ಯುಮಿರ್ಮೆಯ್ಯುಂ ನೂರ್ಮೆಯ್ಯುಂ ಸಾಸಿರ್ಮೆಯ್ಯುಮಕ್ಕೆ; ಆದೊಡಂ ತಣಿವುದೋರ್ಪುದರಿದು, ಒಂದೊಂದವಯವದ ಸೌಂದರ್ಯಮೆ ಮೂಜಗಮಂ ಬೆಲೆಗೆಯ್ದು ಕೊಳಲೆಳಸುತ್ತಿದೆ; ಸರ್ವಾವಯಸೌಂದರ್ಯಮಂ ಭಾಷಿಸಲಾನೆನಿತರವಂ; ಆದೊಡಂ ಕಡಲಂ ಕರುಗೊಳಗುವಳ್ಳದೊಳಡಕಂ ಗೆಯ್ವ ಅಘಟಿತಘಟನಾಸಮರ್ಥನಪ್ಪ ಜಗತ್ಪತಿಯೆ ಸರ್ವಮಂ ನಿರ್ವಹಿಸುಗೆ; ತನ್ನಂ ನಂಬಿವರ ತಮಮಂ ತಳ್ಗಿಸಿ ಸತ್ವಮನೆಳ್ತರಂಗೊಳಿಸಿ ಬುದ್ಧಿಯಂ ಪ್ರಬುದ್ಧಮೆನಿಸಿ ಪಿರಿಯರೊಳ್ ಪೆರಕೆಗೊಳಿಸಿ ಸದಾಚಾರ್ಯಸಮಾಶ್ರಯಣಂ ಗೆಯ್ಸಿ ಮುಕ್ತಿವರೆಗಂ ಎಸಗಲ್ಕಕ್ಕುಪಕಾರಂಗಳನೆಸಗಿ ಸಲಪುಗುಂ; ತಾನೊಡೆಯನುವಾನೊಡ ಮೆಯುಮೆಂಬುದನರಿಯದಿರ್ದೊಡಮನಾದಿಕಾಲದಿಂದೀವರೆಗಮೆನ್ನನುಳಿಪಿ ಈ ಜನ್ಮದೊಳ್ ಯದುವಂಶದೊಳ್ತನ್ನ ಭಕ್ತರೆಂದು ನೆಗಳ್ದ ಮಹಿಶೂರಪುರದರಸುಗಳೊಳ್ ರಾಜರ್ಷಿಯೆನಿಪ ದೇವರಾಜರಸನ ಬಸಿರೊಳ್ಪರಿಸಿ ಆಚಾರ್ಯವರ್ಯರೆನಿಪ ರಾಮಾನುಜರಡಿಗಳಂ ಸೇವಿಸಿ ತನ್ನವನೆಂದಭಿಮಾನಿಸಿದಂ. ಈ ಮೇಲೆನ್ನಂ

ಸಲಪುವುದಚ್ಚರಿಯಲ್ತು; ಆದೊಡಮೆನ್ನ ಚಾಪಲ್ಯದಿಂ ಬಿನ್ನವಿಪೆಂ: ಎನ್ನೊಳ್ ತಪ್ಪೆನಿತಾನುಮುಳ್ಳೊಡನಿತುಮಂ ಸೈರಿಸಿ ದಯೆಯಿಂದೆನ್ನಂ ಸಲಪುವುದು – ಎಂದು ವಂದನಂಗೆಯ್ದು ತೀರ್ಥಪ್ರಸಾದಮಂ ಸ್ವೀಕರಿಸಿ ಪೊರಗಣ್ಗೆ ವಂದು, ಪಲವುಂ ವಾದ್ಯಘೋಷಂಗಳುಮನುಗ್ಗಡಿಪ ಕೈವಾರಿಗಳ ಕೈವಾರದ ದನಿಯುಮಂ ತಮ್ಮ ತಮ್ಮ ಸಿರಿವಾಳಿಗೆಗಳ ಬಾಗಿಲೊಳ್ನಿಂದು ಪರಸುವ ಹದಿಬದೆಯರ ಪರಕೆದನಿಯುಮನಾಲಿಸುತ್ತೆ ಸಂತಸದಿಂದರಮನೆಯಂ ಪೊಕ್ಕೊಳವಾಗಿಲೊಳ್ನಿಂದು, ಅಲ್ಲಿ ಸಾವಂತರಾಯರಂ ಪುರೋಹಿತಾಮಾತ್ಯಸೇನಾಪತಿ ಭೃತ್ಯವರ್ಗಮುಮಂ ಕಳುಪಿ, ಅಳಹಿಯಸಿಂಗರಾರ್ಯನೊಡನೊಳಚೌಕಿಯ ಪೊಂಜಗಲಿಯೊಳ್ಪುಳ್ಳಿರ್ಪುದುಂ; ಅರಸನ ಮನದ ಗೆಲ್ಲಮಂ ಕಳಕಳಿಪ ಮೊಗಸಿರಿಯುಮಂ ಕಂಡಳಹಿಯಸಿಂಗರಾರ್ಯಂ ನುಡಿದನದೆಂತೆನೆ:

ದೇವ, ಚಿತ್ತವಿಪುದು. ಈಗಳ್ ದೇವರಂ ನಿರವಿಸೆ ದೇವಲೋಕದಿಂ ದಿಳಿದಂತೆಯುಂ ಅಭೀಷ್ಟವರಮಂ ಪಡೆದಂತೆಯುಂ ಅಮೃತಪಾನಂ ಗೆಯ್ದಂತೆಯುಂ ದಿವ್ಯಶಕ್ತ್ಯಾವಿಷ್ಟನಾದಂತೆಯುಂ ದೇವತೆಯಂ ಬಸಂಗೆಯ್ದಂತೆಯುಂ ಸಾಕ್ಷಾದ್ದೇವತೆಯಂತೆಯುಂ ತೋರುತಿದೆ. ಇದರ್ಕೆ ಕಾರಣಮಲ್ಪಮಾಗಿರದು. ಎಂತಪ್ಪ ಸಂತಸದೊಳಂ ಕದುಬುಗೊಳದೆ ಕಡಲಮಡುವಿನಂತಿರ್ಪ ದೇವರ ಚಿತ್ತದೊಳ್ ಮೊಣ್ಮುವ ಸಂತಸದೆರೆಗಳ್ಮೊಗಸಿರಿಯೊಳ್ಪಡಿನೆಳಲ್ಗೊಳುತ್ತಿದೆ. ಇದಂ ತಿಳುಪಲ್ವೇಳ್ಪುದು –ಎಂಬುದುಂ; ಈ ಬೆಸಗೊಂಬ ಕಜ್ಜದ ಬಲ್ಪನಾರೈದು ಬಳಸಿದೂಳಿಗದವರ್ ಪಿಂದೆಗೆದು ದೂರದೊಳ್ನಿಶ್ಶಬ್ದಮಾಗಿ ನಿಂದಿರೆ ರಾಯನಿವನಂ ಪತ್ತೆವರಿಸಿ ಕಿವಿಯೊಳಾ ವೃತ್ತಾಂತಮನಿತುಮಂ ಪೇಳ್ವುದುಮಿವನುಂ ಕಿವಿವಟ್ಟೆಯೊಳ್ಪಾಯ್ದು ಬಗೆಗೆರೆಯಂ ತುಂಬಿದ ಸಂತಸ ಪೊನಲಂ ಕೋಡಿಗೊಳಿಸುವಂತೆ ನಲ್ನುಡಿಗಳಂ ನುಡಿದನದೆಂತೆನೆ: ಇಂದೈಸೆ ಜಗಂ ಸನಾಥಮಾದುದು; ಯದುಕುಲಮೇಳ್ಗೆವಡೆದುದು; ಸಂಸಾರಂ ಸಾರಮೆನಿಸಿದುದು; ರಾಜಧರ್ಮಂ ಪೆರ್ಮೆವೆತ್ತುದು; ಕನ್ನಡನಾಡುನ್ನತಿದಾಳ್ದುದು; ಪ್ರಜೆಯ ಸೌಖ್ಯಂ ಪ್ರಬಲಮಾಯ್ತು; ದೇವರೇಳ್ಗೆ ದಿಟಂಗೊಂಡುದು; ಪಾರ್ವರಾಸೆ ಪಣ್ತಳೆದುದು; ಎನ್ನಿಷ್ಟಾರ್ಥಮೀಡೇರಿದುವೆಂದು ನುಡಿದು ಪರಸಿ ಮನೆಗೆ ಪೋಪುದುಂ; ಅರಸನುಮಂತವುರಮಂ ಸಾರ್ದು, ಅಲ್ಲಿ ಇದಿರ್ವರ್ಪ ರಾ[ಣಿ*]ಯ ಕೈಲಾಗಿನೊಳ್ ಸೆಜ್ಜೆವನೆಯುಂ ಸೇರಿ, ಕಾಂಚನ[ಮ*ಯ] ಮಂಚದೊಳ್ಸುಳ್ಳಿರ್ದು ನಗುತ್ತೆ – ಎಲೆಯುರಸಿ ನಿನಗೊಂದೊಸಗೆಯಂ ಪೇಳ್ವೆನೆನಗೀವುಚಿತವಾವುದೆನೆ ರಾಣಿಯುಮೊಡನೆ ನಿಟ್ಟಿಸಿ ಮಣಿದ ದಿಟ್ಟಿಯುಂ ನಸುಬಾಗಿದ ಸಿರಮಂ ಮೊಳೆವ ನಗೆಯುಂ ಮೊಗದೋರ್ಪ ವಿನಯಮುಮಾಗಿ ಬಿನ್ನವಿಸಿದಳ್ :

ರಾಯ, ಚಿತ್ತವಿಪುದಾನುಂ ದೇವರೊಡವೆಯಾದುದರಿಂ ದೇವರೊಡೆತನ ದೊಳಡಕಮಾದುದಲ್ಲದೆ ಎನಗೆಂದು ಪೆರತೊಂದೊಡವೆಯುಂ ಪೆರತೊಂದೊಡೆ

ತನಮುಮಿಲ್ಲದೆ ಆನೀವುದೆತ್ತಣದು; ದೇವರ್ನಿರವಿಸಿದುದನಾಲಿಸಿ, ಎನ್ನ ಮನದೊಳ್ವೊಣ್ಮಿದ ಸಂತಸದಿಂ ದೇವರ ಸಂತಸಮನಿರ್ಮಡಿಗೊಳಿಸುವೆಂ ಎಂಬುದುಂ;

ಬಿನದಕ್ಕಂ ಬಿನಯಕ್ಕಂ ಬಿನ್ನಣಕ್ಕಂ ತಕ್ಕ ನುಡಿಯುಂ ಕೇಳ್ದು ಪೆರ್ಕಳಿಸಿ ಪೇಳ್ದಂ: ಎಲೆ ರಾಣಿ, ಶ್ರೀಮನ್ನಾರಾಯಣನ ಕೃಪೆಗೆ ನೆವಮುಮೆಲ್ಲೆಯುಮಿಲ್ಲದಿರ್ಪುದರಿಂದೆಯುಮೆಮ್ಮ ಯಾದವಕುಲದೊಳ್ ಪ್ರೀತ್ಯತಿಶಯದಿಂದೆಯುಂ ರಾಜರಸದೇವರಾಜ[ರ*]ಸರ ಭಕ್ತಿಪ್ರಕರ್ಷದಿಂದೆಯುಂ ಎಮ್ಮ ಭಾಗ್ಯೋದಯದಿಂದೆಯುಂ ಮುಂ ಪ್ರಶ್ನಿಸುತವರೊಳಂ ಅದಿತಿಕಶ್ಯಪರೊಳಂ ದೇವಕೀವಸುದೇವರೊಳಮಾವಿರ್ಭವಿಸಿದಂ ತಮ್ಮ ಬಸಿಱೊಳ್ಬಂದು ಜಗಮಂ ಸಲಪುವೆನೆಂದು ತನ್ನರ್ಚಾವತಾರ ಮರ್ಯಾದೆಯಂ ಮೀರಿ ಸಿರಿವಾಯ್ದೆರಿದು ನಿರವಿಸಿ ಎನ್ನೆರ್ದೆಯೊಳ್ಬಂದು ನಿಂದಂ ಎಂಬುದುಂ;

ರಾಣಿಯುಂ ನವಿರ್ದಳೆದಾಲಿನೀರ್ಗರೆದು ಕೊರಲ್ಸರಿಗಳಿಂ ಬಿಕ್ಕುತೆ ಬಿನ್ನವಿಸಿದಳ್: ಜಗದೀಶ್ವರಂ ಸರ್ವ[ತಂ*ತ್ರ] ಸ್ವತಂತ್ರನಾದುದರಿಂದೆಂತೆಸಗಿದೊಡಂ ತವಿಪರಾರ್; ಕಿರಿದಂ ಪಿರಿದೆನಿಸಿದೊಡಂ ಬೇಡೆಂದು ತಡೆವರಾರ್; ತಮ್ಮೊಳ್ತಮಗೆ ತಾರತಮ್ಯವುಂಟಾದೊಡಂ ನೇಸರ್ಮೂಡಿದೊಡನೆ ಬಿದ್ದುವುಂ ಬೆಳ್ಮುಗಿಲುಮೊಂದೆನಿಸುವಂತವನ ಮೆಯ್ಮೆಯಂ ನಿರವಿಸೆ ಪುಳುವುಂ ಬೊಮ್ಮನುಮೊಂದೇ ತೆರನೈಸೆ, ಆ ಸ್ವಾಮಿಯ ಕೃಪೆಯಿಂದೆಮ್ಮ ಜನ್ಮಂ ಸಫಲಮಾದುದು– ಎಂದೋರೊರ್ವರೀ ವಗೆಯ ಸಂತಸವಾತುಗಳಂ ಬಳೆಯಿಸುತ್ತಿರುಳಂ ಕಳೆದರ್.

ಪೊಳ್ತರೆಯೊಳೆಳ್ದರಸಂ ಮಿಂದು ಮುಡಿಯುಟ್ಟು ಸಂಧ್ಯಾವಂದನ ಮನಾಚರಿಸಿ ನಾಮತೀರ್ಥದ ಚೌಕಿಗೆ ಬಂದು ದೇವತಾಸನ್ನಿಧಿಯೊಳ್ಕುಳ್ಳಿರ್ದು ಅಳಸಿಯಸಿಂಗರಾಚಾರ್ಯ್ಯರಂ ಬರವೇಳ್ದು ಭರದಿಂ ಪಡಿಯರರಂ ಕಳುಪಿವಿನಂ; ಅವರಾಳ್ದನಾಣತಿವಿಡಿದು ಕಡುವೇಗದಿಂ ನಡೆತರುತ್ತೆ ಚಲ್ಲಿದ ನೀರಂ, ಬರೆದ ರಂಗವಲ್ಲಿಯ ಗೆರೆಗಳಂ, ಸಿರಿವೀಧಿಯ ಸಿಂಗರಮಂ ನಿಟ್ಟಿಸುತಂ ಬರೆ – ಪೊರವಾಗಿಲಿರ್ಕೆಲದ ಪೆರ್ಜಗಲಿಗಳೊಳ್ ಪಿಡಿದ ಪಲಾಶದಂಡಮುಂ, ಉಟ್ಟ ಬೆಳ್ಪಟ್ಟೆಯ ಮೇಲೆ ಮೂರುಂ ಬಳಸುಂ ಸುತ್ತಿದ ಮೌಂಜಿಯುಂ ವಿಮಲ ಯಜ್ಞೋಪವೀತಮುಂ ಪೊದೆದ ಕೃಷ್ಣಾಜಿನಮಂ ಧವಳೋರ್ಧ್ವಪುಂಡ್ರಮುಮಾಗಿ ಸತ್ವದ ಪಿತ್ತುಂ ಸತ್ಕರ್ಮದ ಮೊಳೆಯುಮೆನಿಪೆಳವಕ್ಕಳೋದುವ ವೇದ[ಂ*]ಗಳ ಪಾವನಧ್ವನಿಯುಂ; ಒಂದೆಡೆಯೊಳ್ತಳನೆ ಪಳಂಚುವ ಪನ್ನೆರಳ್ನಾಮಮುಂ ಪೊದೆದುಟ್ಟ ತಳಿರ್ಗಾವಿಯುಡೆಗಳುಂ ಧರಿಸಿದ ತೊಳಸಿತಾವರೆಮಣಿಗಳ ಮಳ್ಸರಂಗಳುಂ ಶಾಂತಿರಸಂ ತುಂಬಿ ತುಳುಂಕುವ ಮೊಗಸಿರಿಯು ಮಾದೆಡೆವರೆಯಾದ

ಕುವರರೋದುವ ದಿವ್ಯಪ್ರಬಂಧದ ಬಂಧುರಧ್ವನಿಯುಮೊಂದುವೆರಸಿ ಕಿವಿಗಾನಂದಂ ಬಡೆಯೆ ಕೇಳುತ್ತೇ[ರಿ*] ಬಾಗಿಲನೊಳಪೊಕ್ಕಾತೊಟ್ಟಿಯ ನಾಲ್ಕುಂ ದೆಸೆಯ ಜಗಲಿಗಳೊಳವೊಂದೆಸೆಂಯೊಳ್ಕಾವ್ಯಮನೋದುವರುವೊಂದೆಡೆ ಯೊಳ್ಕರ್ಕಶತರ್ಕಪ್ರವಚನಂಗಳಿಂ ತರ್ಕ್ಕಿಸುವರುವೊಂದೆಸೆಂಯೊಳ್ ಧರ್ಮಸಂಶಯಂಗಳಂ ನ್ಯಾಯಾನುಗೃಹೀತಧರ್ಮಶಾಸ್ತ್ರ ವಚನಂಗಳಿಂ ತೀರ್ಚುವರುವೊಂದೆಡೆಯೊಳ್ ಶ್ರೀಪಾಂಚರಾತ್ರೋದಿತ ಪಾಂಚಕಾಲಿಕ ಕ್ರಿಯಾಲಾಪಂಗಳನುಪನ್ಯಾಸಂ ಗೆಯ್ವರುಮಾಗಿರೆಯವರ್ಗ್ಗೆ ಕೈಮುಗಿದಾಲೋಚಿಸಿದರ್ – ಕಾಮನೀ ಠಾವನೊರ್ಮೆಯುಂ ಪೊಕ್ಕನಲ್ತು , ಕ್ರೋಧಮೀಧರೆಯೊಳಡಿಯಿಟ್ಟುದಲ್ತು, ಮೋಹಮೀಮಹಿಯಂ ನಿಟ್ಟಿಸಿದುದಲ್ತು, ಮದಮೀದೆಸೆಯಂ ಪೆಸರ್ಗೊಂಡುದಲ್ತು, ಮತ್ಸರಮೀಯುತ್ಸಂಗಮಂ ನೆನೆದುದಲ್ತು, ಶಮದಮಾದಿಗುಣಂಗಳನಿತುಮಿಲ್ಲಿ ಗುರುಕುಲವಾಸದಿಂದೊಳ್ಪುವೆತ್ತು ಜಗದೊಳ್ ಪೊಗಳ್ತೆವಡೆದುವು. ಮತ್ತಮಿದ ಕಲಿಯರಿಯದ ನೆಲನುಂ, ಕೇಣಂ ಕಾಣದ ಠಾಣಮುಂ, ಹಿಂಸೆ ಸಂಚರಿಸದ ಮನೆಯುಂ, ಹಿಸುಣ್ ಸುಳಿಯದ ಬಾಗಿಲುಂ, ಪುಸಿ ಪುಗದ ಅಗರಮುಂ, ಪೋರಟೆ ಪೊರ್ದದೆಡೆಯುಂ, ಠಕ್ಕರಿಯದ ಠಾವುಂ, ಬೆಕ್ಕಸಂ ಬೆರೆಯದಿರ್ಕೆಯುಂ, ಸಾಸಮಿಲ್ಲದ ದೇಶಮುಂ, ಮೋಸಂ ಸಲ್ಲದೆಲ್ಲೆಯುಮೆನಿಸುಗುಂ. ಮತ್ತಮೀ ಸಾತ್ವಿಕರ್ಗೆ ತೈಕ್ಷ್ಣ್ಯಂ ಬುದ್ಧಿಯೊಳಲ್ಲದೆ ಸ್ವಭಾವಮಂ ಭಜಿಸದು; ಭ್ರಮಣಂ ದೇಗುಲಮಂ ಬಲವಪ್ಪುದರೊಳಲ್ಲದೆ ಅರಿವನನುಸರಿಸದು; ಮಾಲಿನ್ಯಂ ಹೋಮಧೂಮದೊಳಲ್ಲದೆ ಚಿತ್ತಮಂ ಪತ್ತದು; ದೂಷಣಂ ಪೂರ್ವಪಕ್ಷವಿಷಯದೊಳಲ್ಲದೆ ಪರಗುಣಂಗಳೊಳ್ಸರಿಸದು; ಮುಖವಿಕಾರಂ ಮುದುಪತನದಿಂದಮಲ್ಲದೆ ವಿದ್ಯಾಧನಮದಂಗಳಿಂದೊದವದು; ದಂಡಗ್ರಹಣವಾಶ್ರಮಧರ್ಮಮಪ್ಪುದಲ್ಲದೆ ನಿಗ್ರಹಮಂ ನೆಗಳ್ಚದು. ಮತ್ತಮಿವರ್ತರ್ಕ್ಕದೊಳ್ ಗೌತಮ ಕಣಾದರಂ, ಶಬ್ದದೊಳ್ ಪಾಣಿನಿ ಪತಂಜಲಿಗಳಂ, ಮೀಮಾಂಸೆಯೊಳ್ ಜೈಮಿನಿ ಶಬರರಂ, ವೇದಾಂತದೊಳ್ ವ್ಯಾಸ ಬೋಧಾಯನರಂ ದೊರೆಗೊಂಡಿರ್ಪರೆಂದವರ್ಗೆ ವಂದಿಸಿಯೊಳವಾಗಿಲಂ ಪೊಕ್ಕು ಪೋಪಿನಂ; ಅಲ್ಲಿ ಸುಧಾಧವಳಿತಮಪ್ಪ ಪೆರ್ಜಗಲಿಯೊಳ್ ಬಳಸಿ ಪಾಸಿದ ರನ್ನಗಂಬಳಿಗಳ ನಡುವೆ ಪೊಂಬಲಗೆಯೊಳ್ತಾರಗೆಗಳ ನಡುವಣ ಪೊಂಬೆಟ್ಟಿ ನಂತೆಯುಂ, ಬೊಮ್ಮರ ನಡುವಣ ಪೊಂಬಸಿರನಂತೆಯುಂ, ದೇವತೆಗಳ ನಡುವಣ ವಾಸುದೇವನಂತೆಯುಂ ಬಳಸಿ ಕುಳ್ಳಿರ್ದು ಭಕ್ತಿವಿನಯ ವಿಶ್ವಾಸಂಗಳೊತ್ತಂಬರದಿಂದೇಕಾಗ್ರಚಿತ್ತರಾಗಿ ಪುಸ್ತಕಂಬಿಡಿದು ವಾಚಿಪಾಚಾರಸಂಪನ್ನರೆನಿಪ ಪಲವುಂ ಶಿಷ್ಯರ ನಡುವೆ ಶ್ರೀಭಾಷ್ಯಮಂ ಶ್ರುತಪ್ರಕಾಶಿಕಾ ವ್ಯಾಖ್ಯಾನರೀತಿಯಿಂದುಪನ್ಯಾಸಮನೆಸಗುತುಪದೇಶಂ ಗೆಯ್ವ ವೈಖರಿಯಂ ನಿಟ್ಟಿಸಿ ಮನದೊಳಾಳೋಚಿಸಿದರ್:

ಈ ಮಹಾನುಭಾವಂ ಪುಂಣ್ಣಮೆಯ ಚಂದಿರನಂತೆ ತಣ್ಣುವೆತ್ತಿರ್ದೊಡಂ ಮೆಯ್ಯೊಳ್ವಗರ್ ಮುಂಗಾರ ಮಿಂಚಿನಂತೆ ಪೊಳಂಚುತಿದೆ. ಈ ವೈಷ್ಣವರೇಂ ಧನ್ಯರೋ. ಆವಾಗಮಿವನೊಡನಿರ್ದಿವನೂಳಿಗಂಗೆಯ್ದಿವನುಪದೇಶಂ ಕೇಳ್ವರ್. ಈ ಊರುಗರೇಂ ಸುಕೃತಶಾಲಿಗಳೋ. ಮುಪ್ಪೊಳ್ತುಂ ಬಂದು ವಂದನಂಗೆಯ್ದಿವನಿಂ ಪರಕೆಗೊಂಬರ್. ಈ ನಾಡುಗರೇಂ ಭಾಗ್ಯವಂತರೋ. ತತ್ತದುತ್ಸವಂಗಳೊಳ್ ಚಲ್ವನಾರಾ[ಯ*]ಣ ರಾಮಾನುಜರೊಡನಿವನುಮಂ ದರ್ಶನಂಗೆಯ್ವರ್. ಮತ್ತಂ ಸರಸ್ವತಿಯುಮೇಂ ಪುಣ್ಯವತಿಯೋ. ಆವಗಂ ಪ್ರಸನ್ನಮಾಗಿ ಕರುಣಾಮೃತರಸದಿಂ ತುಂಬಿ ಮಾನಸಸರೋವರಮಂ ಪೋಲ್ವಿವನ ಮೊಗದಾವರೆಯೊಳ್ ನಲಿವುತಿರ್ಕುಂ. ಈ ಎಡೆಯೊಳ್ ಧರ್ಮಂ ನಾಲ್ಕುಂ ಚರಣಂಗಳಿಂ ಪೂರ್ಣಮಾಗಿರ್ಪುದರಿಂದಾವಗಂ ಕೃತಯುಗಮಲ್ಲದೆ ಯುಗಾಂತರಂಗಳ ನೆನಪಿಲ್ಲದಿರ್ಕುಂ. ನೆಲದೊಳೀ ಮಹಾನುಭಾವನುದಿಸಿರ್ಪುದರಿಂ ನೇಸರಂ ಪೊತ್ತಾಗಸದ ಗರ್ವಂ ಕಿರಿದಕ್ಕುಂ. ಇವನ ಬಲ್ಮೆಯಿಂ ಧರೆ ಚಲಿಸದಿರ್ಕುಂ. ಮತ್ತಮಿವನಿರವಂ ಭಾವಿಸೆ ಕೃಪೆಯ ಪೊನಲುಂ, ಸಂಸಾರಮೆಂಬ ಕಡಲನತ್ತಡಿಗಾಣಿಪ ಸೇತುವುಂ, ಆಸೆಯೆಂಬ ಬಿಸವಳ್ಳಿಗೆ ನಡುವೇಸಗೆಯುಂ, ಸಂತಸಮೆಂಬಮರ್ದಿಗೆ ಪೆರ್ಗಡಲುಂ, ಸಿದ್ಧಮಂತ್ರಂಗಳ್ಗೆ ಮಹಾರ್ಷಿಯುಂ, ಶಾಂತಿಯೆಂಬ ಪೆರ್ಮರಕ್ಕೆ ತಾಯ್ವೇರುಂ, ಆಚಾರಂಗಳ ನೆಲೆವೀಡುಂ, ಧರ್ಮಮೆಂಬ ಪಳಯಿಗೆಗೆ ಬಲ್ಗಾವುಂ, ಶಾಸ್ತ್ರಂಗಳೆಂಬ ಪೊನ್ನೊರೆಗಲ್ಲುಂ, ಮುಳಿಸೆಂಬ ಪಾವಿಗೆ ಗರುಡನುಂ, ಮೋಹಮೆಂಬ ಕಳ್ಗತ್ತಲೆ ಗಾದಿತ್ಯನುಂ, ಮಂಗಳದಂಗಳಮುಂ, ಸತ್ವಕ್ಕಾಶ್ರಯಮುಂ, ತಪಕ್ಕೆ ತಾಣಮುಂ, ನೇಮಕ್ಕೆ ನೆರವುಂ, ಸತ್ಯಕ್ಕೆ ಸಂಗಾತಿಯುಮೆನಿಸಿರ್ಕುಂ. ಮತ್ತ ಮಾಚಾರ್ಯಾಧಿರಾಜ್ಯಸೂಚಕಮಾದ ಪೊನ್ನ ಕಿರೀಟಮಂ ಪೋಲ್ವ ಪೀತಾಂಬರೋಷ್ಣೀಷಮುಂ, ಮಾನಸಪೂಜಾಸಮಯದೊಳ್ ಭಾವಿಸಿದಾ ತ್ರಿವಿಕ್ರಮನ ಪಾದದುಂಗುಟದತ್ತಣಿಂ ಮುಡಿವಣಿಯ ಮೇಲೆ ಬಿಳ್ದ ಗಂಗೆ ಇರ್ವೊನಲ್ಗೊಂಡು ಪರಿವಂತೆ ತೋರ್ಪ ವಿಮಲೋರ್ಧ್ವಪುಂಡ್ರಮುಂ, ಕರುಣಾರಸದ ಕೆರೆಗಳೆನಿಪ ಕಣ್ಗಳುಂ, ಅವರ ಕಾರ್ವಣಿಗಟ್ಟೆಗಳಂ ಪೋಲ್ವ ಪುರ್ಬುಗಳುಂ, ನಾಲ್ಮಡಿಸಿದಷ್ಟಾಕ್ಷರವರ್ಣಂಗಳಂ ಪೋಲ್ವ ಬೆಳ್ವಲ್ಗಳ ಬೆಳಕಿನಿಂ ಬಳೆದ ನಸುನಗೆಯುಂ, ಪಿಷ್ಟರರ್ದೆಯೊಳ್ ಚಿತ್ತಲ್ಕೆಂದು ಸಂಗ್ರಹಿಸಿದ ಸತ್ವಗುಣದ ಬಿತ್ತುಗಳಂತಿರ್ಪ ಮುತ್ತಿನ ಕಂಠಸರಂಗಳುಂ, ದುಗುಲಂಗಳುಮಾದ ದಿವ್ಯಾಕೃತಿಯಂ ನಿಟ್ಟಿಸುವಿನಂ ತಮಂ ತಳ್ಗುತ್ತಿದೆ. ಸತ್ವಂ ಚಿತ್ತರಿಸುತ್ತಿದೆ ಎಂದಚ್ಚರಿಗೊಳುತ್ತೆ ಭಕ್ತಿವಿನಯಂಗಳೊಡಗೂಡಿ ಪತ್ತೆಸಾರ್ದು ಸಾಷ್ಟಾಂಗ ಪ್ರಣಾಮಂಗೆಯ್ದು ಕೆಲದೊಳ್ನಿಂದು ಬಿನ್ನವಿಸಿದರ್: ಸ್ವಾಮೀ, ದೇವರವರಂ ಬರವೇಳಿಯಾಳಿದವ ರಾಣತಿಗೆಯ್ದುಮ್ಮಂ ಕಳುಪಿದರ್; ಎಂಬುದುಮಳಹಿಯಸಿಂಗರಾಚಾರ್ಯರ್ತವಕದಿಂದೆ

ಪೊಂದವಗದಿಂದೆಳ್ದು ಶಿಷ್ಯರ್ವೆರಸು ಸಿರಿವಾಳಿಗೆ ವಾಗಿಲಂ ಪೊರಮಟ್ಟಂದಳ ಮನೇರಿಯರಮನೆಗೆಯ್ದಿ ಮುದದಿಂ ರಾಯನ ಸಮುಖಮಂ ಸಾರ್ವನಂ;

ರಾಯ ಸಾಜದಿಂ ನಿರ್ಮಲವಾಗಿ ನೇಹದಿಂ ಕರಗಿ ಕವಿವ ದಿಟ್ಟಗಳಿಂದೀಯುಳಗಿಯಸಿಂಗರಾಚಾರ್ಯರಂ ದಯಾರಸದಿಂದಭಿಷೇಕಂ ಗೆಯ್ವಂತೆಯುಂ, ಸಂತಸಮನೊಡಲೊಳ್ತುಂಬುವಂತೆಯುಂ, ತಣ್ಪುಗೊಳಿ ಪಂತೆಯುಂ, ಪೆಂಪುವಡಿಪಂತೆಯುಂ ನಿಟ್ಟಿಸಿ ಸನಿಯಕ್ಕೆ ಬರಿಸುವುದುಂ; ಇವರ್‌- ಎಲೆ ಮಾರಾಯನೆ, ನಿನಗೆ ಧನಕನಕ ವಸ್ತುವಾಹನಾದಿಸಮೃದ್ಧಿಯುಂ ಕಳತ್ರಮಿತ್ರಬಂಧುಸಮೃದ್ಧಿಯುಂ ಆಯುವುಮಾರೋಗ್ಯಮುಮುಂಟಾಗಿರ್ಪುದರಿಂ ತಾಂ ಪರಸತಕ್ಕುದನಿತುಂ ಸಮೃದ್ಧಿಯಾಗಿರ್ಪುದು. ಆದೊಡಂ ನಿನ್ನಂತೆ ರೂಪಮುಂ ಗುಣಮುಮುಳ್ಳ ಕುಮಾರನಂ ಪಡೆದು ಜಗಮಂ ಸನಾಥಮೆನಿಸುವುದೆಂಬುದುಂ;

ರಾಯನಲರ್ವ ಮೊಗಮುಂ ನಗೆಮೊಳೆವ ಬಾಯ್ದೆರೆಯುಮಾಗಿ ಪರಕೆಯನೊಪ್ಪುಗೊಂಡವರಂ ಗದ್ದುಗೆಯೊತ್ತಿನೊಳ್ಕುಳ್ಳಿರಿಸಿ ನಿರವಿಸಿದಂ: ಅಯ್ಯಾ, ನೀವೆಸಗಿದ ಪರಕೆಗಳುಂ ತಿರುನಾರಾಯಣಸ್ವಾಮಿಯವರಾಣತಿಯುಮೊಂದೆ ತೆರ ತೋಳಿರ್ಪುದೆಂದು ಸನ್ನಿಧಿಯೊಳ್ನಡೆದ ವೃತ್ತಾಂತಮನಿತುಮಂ ಬಿತ್ತರಮಾಗಿ ಪೇಳ್ವುದುಂ; ಇವರಮೃತಾಸ್ವಾದನಗೆಯ್ದಂತೆ ಸಂತಸದೊಳ್ಕರೆವಾಲಿ ನೀರುಂ ಕವಿವ ನವಿರುಮಾಗಿ ನುಡಿದರ್: ಅಕಟಕಟೀ ಎಮ್ಮ ಮಹೀಶೂರರಸುಗಳೊಳೀ ಸಿರಿಯುರಸಂಗೆನಿತಭಿಮಾನವೋ; ಎನಿತು ಪಕ್ಷಪಾತವೋ; ಎನಿತು ಬಹುಮಾನಮೋ; ಎನಿತು ಮರುಕಮೋ; ಎನಿತು ಮನ್ನಣೆಯೋ. ಊರೊಳಂ ಮನೆಯೊಳಮೆರ್ದೆಯೊಳುಂ ನೆಲೆಗೊಂಡುಂ ಭಕ್ತರ ಮುಖದೊಳಮರ್ಚಕರ ಮುಖದೊಳಂ ಮಾತನಾಡಿಸಿ ಮನ್ನಿಸಿ ವರಂಗಳನಿತ್ತು ತಣಿಯದೆ ಸಾಕಾರಮಾಗಿ ನಿಮ್ಮೆರ್ದೆಯೊಳ್ನಿಂದೌರಸಪುತ್ರನಾಗಿ ಪುಟ್ಟುವನೆಂದು ಪೂಣ್ದಂ. ಪ್ರಜೆಯನಿತುಂ ಕಳಿದೋಷದೂಷಿತಮಾಗಿ ತಮ್ಮ ತಮ್ಮ ವರ್ಣಧರ್ಮಂಗಳನಾಶ್ರಮಧರ್ಮಂಗಳ ನಾಚರಿಸದೆ ತಮ್ಮ ಇಚ್ಚೆ ಬಂದಂತೆ ನಡೆವುತ್ತಿರೆ ಕಂಡು ಮರುಗಿ ಇವರೊಳ್ ಪೇಳ್ದಂತೆ ಕೇಳ್ವರನನುಗ್ರಹಿಸಿ ಕೇಳದ ದುರಾಗ್ರಹಿಗಳಂ ನಿಗ್ರಹಿಸಿ ಮೋಕ್ಷಧರ್ಮ್ಮಮಂ ನೆಲೆಗೊಳಿಸಲ್ಕವತರಿಸುವಂ. ಕೃಷ್ಣಾವತಾರದೊಳ್ ಸಾಂದೀಪನಿಗೆ ಬಂದ ಮೈಮೆ ಈಯವತಾರದೊಳೆನಗಂ ಬಂದಪುದು. ಈಯರ್ಥದೊಳಾಂ ಕಂಡುದೊಂದು ಕನಸಂ ಪೇಳ್ವೆನಾಲಿಪುದು. ನೀಮುಮಾನುಮಿರ್ವರುಂ ತಿರುನಾರಾಯಣನ ಸನ್ನಿಧಿಯೊಳ್ ನಿಂದು ಸೇವೆಗೆಯ್ವುತಿರ್ಪ[ನಂ], ತನ್ನ ದಿವ್ಯಾಂಗದತ್ತಣಿಂ ತನ್ನ ಪಡಿನೆಳಲೆನಿಸಿದ ಚೆಲ್ವರಾಯನಂ ಪೋಲ್ವದೊಂದು ಮಗುವಂ ತೆಗೆದೆನ್ನ ಕಯ್ಯೊಳೀವುದುಂ; ಆನುಂ ನಿಮಗಿತ್ತೆಂ. ಅನಿತರೊಳಪರರಾತ್ರಿಯೊಳೇಳ್ವ ಮಕ್ಕಳ ನಿಗಮಧ್ವನಿಯಿಂದೆಳ್ಚರ್ತು ಕಣ್ದೆರೆದಚ್ಚರಿವಟ್ಟೆನೆಂಬುದುಂ;

ರಾಯನುಮಳ್ತಿಯಿಂ ಕೈಮುಗಿದು – ಮುಂ ಸ್ವಾಮಿ ತಾನೆ ಬಂದೆ
ನ್ನೆರ್ದೆಯೊಳ್ನಿಂದುದರಿಂ ಸ್ವತಂತ್ರನಪ್ಪೆನೆಂಬ ಸಂದೆಯಂ ಸಮನಿಸಿರ್ದುದು.
ಈಗಳ್ ವೇದಾಂತವಿತ್ತುಗಳಾದ ನಿಮ್ಮ ಕೈವೊಕ್ಕೆನ್ನ ಕೈಗೆ ವಂದುದರಿಂದೆನಗೆ
ವಿಧೇಯನಾಗಿರ್ಪಂ. ಭಗವತ್ಪ್ರಸಾದಮುಂ ಭಾಗವತಪ್ರಸಾದ ಮೂಲಕಮಾಗಿ
ಬಂದೊಡೆ ನಿರುಪಾಧಿಕಮಕ್ಕುಂ ಎಂದು ಪೆರ್ಕಳಿಸುತ್ತೆ, ತಾಂ ಪೊದೆದಿರ್ದ
ಪೊಂದುಗುಲಮನಿವರ್ಗ್ಗೆ ಪೊದಿಸಿ, ತೊಟ್ಟಿರ್ದ ರನ್ನದೊಡವುಗಳಂ ತುಡಿಸಿ,
ಮುದದಿಂದಿವರಿತ್ತ ಪರಕೆಗಳ್ಗೆ ಹರಿಸಂದಳೆದು, ನಿತ್ಯನಿಯಮಮಪ್ಪ
ಗೀತಾಧ್ಯಾಯಾರ್ಥಮನಿವರಿಂ ಭಕ್ತಿಯುಕ್ತನಾಗಿ ಚಿತ್ತದೊಳ್ನೆಲೆಗೊಳಿಸಿ,
ದೇವಪೂಜೆಯಂ ರಚಿಸಿ, ತೀರ್ಥಮಂ ಸ್ವೀಕರಿಸಿ, ಆ ಬಳಿಕ್ಕಿವರಂ ಶ್ರೀಮಂದಿರಕ್ಕೆ
ಕಳುಪಿ, ತಾನುಮಂತವುರಮನೆಯ್ದಿ, ಅಮೃತಾನ್ನಮನಾಸ್ವಾದಿಸಿ, ನಲವಿಂ ರಾಣಿಗೆ
ಅಳಹಿಯಸಿಂಗರಾರ್ಯರ್ಕಂಡ ಕನಸಿನ ವೃತ್ತಾಂತಮಂ ತಿಳುಪಿ, ಸಂತಸಮಂ
ಪಚ್ಚುಗೊಟ್ಟು, ಬಳಿಕ್ಕೆ ಪೊರಗಣ್ಗೆ ವಂದಳಹಿಯಸಿಂಗರಾರ್ಯರಂ ಬರಿಸಿ
ಶ್ರೀರಾಮಾಯಣಭಾರತಾದಿತಿಹಾಸಪುರಾಣರಹಸ್ಯಾರ್ಥಂಗಳಂ ಕೇಳ್ದು, ಮತ್ತಮಾ
ಸ್ವಪ್ನದರ್ಶನ ವೃತ್ತಾಂತಮನೆ ಪೇಳ್ವಿನಂ; ಅದರ್ಕಿವರ್ ಮುಂ ತಾನೆ
ಪ್ರಸನ್ನನಾದುದರಿಂದೀಯವತಾದೊಳ್ ದುಷ್ಟನಿಗ್ರಹ ಶಿಷ್ಟಪರಿಪಾಲನಂ
ಗೆಯ್ವನೆಂದು ನಿಶ್ಚಯಿಸಿದೆಂ. ಮತ್ತಮೀಗಳಾರ್ಯಮುಖದೊಳ್ ಪ್ರಸನ್ನನಾದುದರಿಂ
ಮೋಕ್ಷಧರ್ಮಮಂ ನೆಲೆಗೊಳಿಸುವನಿದರ್ಕೆ ಸಂದೆಯಮಿಲ್ಲಂ; ಇವು ಮುಂತಾದ
ಸಂತಸವಾಕುಗಳಿಂದೀರ್ವರುಮನ್ಯೋನ್ಯಾಲಾಪಮನೆಸಗುತ್ತೆ ಪಲವುಂ
ಪೊಳ್ತುಗಳೆದು – ನಾಳೆ ಪೊಳ್ತರೆ ಪಟ್ಟಣಕ್ಕೆ ಪಯಣಮೆಂದು ದಳವಾಯಿಗೆ ತಿಳುಪಿ,
ಸೇನಾಪ್ರಯಾಣಸಂಜ್ಞಾಪಟಹವಾದನಮನಾಜ್ಞಾಪಿಸಿ, ತಾಮುಂ ಸಾಯಂ
ಸಂಧ್ಯಾವಂದನಾದಿ ರಾತ್ರಿಕರ್ಮಂಗಳಂ ನಿರ್ವರ್ತಿಸಿ, ರಾತ್ರಿಯಂ ಸುಖದೊಳ್ಕಳೆದು,
ಉದಯಕಾಲದೊಳ್ ಮಂಗಳಪಾಠಕರ ವೇಣುವೀಣಾಮಿಶ್ರಿತಮಾದ ಉಪ್ಪವಡದ
ಬಣ್ಣವಾಡುಗಳನಾಲಿಸುತ್ತೆಳ್ಚತ್ತು ನಿತ್ಯಕರ್ಮಂಗಳನಾಚರಿಸುವನ್ನಂ;
ಪಯಣಸನ್ನದಮಾಗಿ ಬಂದ ಅಳಗಿಯಸಿಂಗರಾರ್ಯರಂ ಸನಿಯಕ್ಕೆ ಬರಿಸಿ, ನುಡಿದಂ
– ಶುಭಕಾಲದೊಳ್ ಸಂತಸದ ಮೇಲೆ ಸಂತಸಮಪ್ಪುದೆಂಬ ಲೋಕವಾರ್ತೆ
ನಿಶ್ಚಿತಮಾದುದು; ಇಂದಿನಿರುಳ್ಕನಸಿನೊಳಾಂ ತಿರುನಾರಾ[ಯ*]ಣನಡಿಗೆರಗಿ ಕೈ
ಮುಗಿದು ನಿಲ್ವಿನಂ – ಎಲೆಯರಸ, ನಿನಗಿನ್ನೊಂದು ವರಮನೀವೆಂ ನಿನ್ನಭೀಷ್ಟಮಂ
ಪೇಳ್ವುದು – ಎಂದಾಣತಿಯೀವುದುಮಾನುಂ ವಿನಯಾವನತನಾಗಿ
ತನ್ನ ಕೆಳೆಯಳಹಿಯಸಿಂಗರಾರ್ಯಂಗೊಳ್ಳುವರನನಿತ್ತು ಮನ್ನಿಪುದೆಂದು ಬಿನ್ನತಿ
ಗೆಯ್ದೆಂ. ಅದರ್ಕೆ ನಸುನಗುತೆ – ಎಲೆಯರಸ, ಕೇಳಾನವತರಿಸಿದೊಡೆನ್ನಂ
ಬಳಿಸಲಲ್ಕೆನ್ನೊಡನಾಡಿ – ಈ ಸನ್ನೆಯಂ ನಿನ್ನ ಮನದೊಳ್ತಳೆದಿರ್ಪುದೆಂದು ತನ್ನ

ಸಿರಿವಾಯ್ದೆರೆದು ನಿರವಿಸಿದಂ ಎಂದು ಪೇಳ್ದ ರಾಯನೊಡನಿವನುಂ– ಆದೊಡಾಲಿಪುದು ಮಹಾರಾಜ, ನೀನಿನ್ನವರಂ ನರಪತಿಯಾಗಿರ್ದುದರಿಂ ನಿನ್ನಪರ ಶರೀರಮೆನಿಸಿದೆನಗೆ ನರರನಿಬರು ವಿಧೇಯರಾಗಿರ್ಪರ್. ಈಗಳೀ ನಾರಾಯಣಂ ನಿನ್ನ ದೇವರಾಜವೆಸರನನ್ವರ್ಥಂಗೆಯ್ದು ತಾನೆ ನಿನ್ನ ಕುವರನಪ್ಪುದರಿಂದವನ ಪರಿಜನಮೆನ್ನಂ ಬಳಿಸಲ್ವುದಚ್ಚರಿಯಲ್ತು ಎಂದು ಬಿನ್ನವಿಸಿದಂ.

ಅನಿತರೊಳ್ಮೌಹೂರ್ತಿಕರ್ ಪ್ರಯಾಣ ಮುಹೂರ್ತಮೆಂಬುದುಂ, ರಾಯನುಂ ಯಾತ್ರಾದಾನಾದಿಗಳನಿತ್ತು ಸಕಲ ಬಲಂಬೆರಸು ಪಯಣಗತಿಯೊಳ್ ಶ್ರೀರಂಗ ಪಟ್ಟಣಮಂ ಸಾರ್ದಲ್ಲಿ ರಾಜಧಾನಿಯೊಳರಸುಗೆಯ್ಯುತ್ತೆ ಸುಖದೊಳಿರ್ದಂ.

ಶ್ರೀಮನ್ನಾರಾಯಣನ ಪರಿಪೂರ್ಣಕೃಪೆಯಂ ಪಡೆದು, ದೊಡದೇವ ಮಹಾರಾಯಂ ಶ್ರೀರಂಗಪಟ್ಟಣ ರಾಜಧಾನಿಯೊಳ್ ರತ್ನಸಿಂಹಾಸನಾರೂಢನಾಗಿ ಸಾಮ್ರಾಜ್ಯಂ ಗೆಯ್ಯುತ್ತಿರೆ;

ಪ್ರಜೆಗಳ್ವೀರರೆನಿಸಿಯುಂ ವಿನಯವಂತರುಂ, ನಲ್ವಾತುಗರಾಗಿಯುಂ ನನ್ನಿಗರುಂ, ಚೆಲ್ವರಾಗಿಯುಂ ಪರದಾರವಿಮುಖರುಂ, ತಿರುಕುಳಿಗಳ ಬರವಂ ಬಯಸಿಯುಂ ಪೆರರಂ ಬಯಸದರುಂ, ಬಯಸಿದೊಡವೆಗಳಂ ಪುರುಳಂ ಪಡೆವುತುಂ ಧರ್ಮಪರರುಂ, ಅಳವಿಗರಾಗಿಯುಂ ಪಾಪಭೀರುಗಳುಂ ಎನಿಸಿರ್ಪರ್. ಮತ್ತಂ ಎಲ್ಲರೊಳಂ ಬಲರೆನಿಸಿ ಎಲ್ಲಾನಾಡೊಳಂ ಪೊಗಳ್ತೆವಡೆದು ಮೆಲ್ಸುಡಿಗರರಿ ವರಾರ್ಪರ್ ಒಳ್ನುಡೆದೊಡವುಗರ್ ಓಜೆಗಾರರ್ ಅಕ್ಕರಿಗರ್ ಓದುಗಾರರ್ ಸಂಗೀತಸಾಹಿತ್ಯನಿಪುಣರ್ ಭಾರತರಾಮಾಯಣಭಾಗವತವಿಷ್ಣುಪುರಾಣಾದಿ ಶ್ರವಣಪರರಾಗಿರ್ಪರ್. ಮತ್ತಂ ಬಿಲ್ಗಳಂತೆ ಕೋಟಿಸಾರರುಂ, ಸರಲ್ಗಳಂತೆ ಲಕ್ಷದಾನಾಸಕ್ತರುಂ, ಮೈನಾಕದಂತೆ ಪಕ್ಷಪಾತವರಿಯದರುಂ, ಧರ್ಮಶಾಸ್ತ್ರದಂತೆ ದೇಗುಲಗಳಂ ಪರಿಕಾಲುವೆಗಳಂ [ಕೆಱೆಗಳಂ] ಕಟ್ಟೆಗಳಂ ಕೊಳಂಗಳಂ ಬಾವಿಗಳನಾರವೆಗಳನರವಟ್ಟಿಗೆಗಳಂ ನೆಗಳ್ಚುವರುಂ, ತೆಂಗಾಳಿಯಂತಾವಗಂ ದಾಕ್ಷಿಣ್ಯಶಾಲಿಗಳುಂ, ಪಗಲಂತೆ ಮಿತ್ರಾನುವರ್ತಿಗಳುಮಾಗಿರ್ಪರ್. ಮತ್ತಂ ದೀಪದೊಳ್ ಸ್ನೇಹಹಾನಿಯುಂ, ಜಕ್ಕವಕ್ಕಿಯೊಳಗಲ್ಕೆಯುಂ, ರನ್ನದೊಳ್ಪರೀಕ್ಷೆಯುಂ, ನೈದಿಲೊಳ್ಮಿತ್ರದ್ವೇಷವುಂ, ತಾವರೆಯೊಳ್ ರಾಜದ್ವೇಷವುಂ, ಅಸಿಯೊಳ್ಕೋಶಾಸಕ್ತಿಯುಂ, ಕೈಪಿಡಿಯೊಳ್ಕರೆಯುಂ ಅಲರೊಳ್ಕಟ್ಟುಂ, ವಾರ್ಧಿಕದೊಳ್ದಂಡಗ್ರಹಣವುಂ, ಗಾರುಡದೊಳ್ ದ್ವಿಜನಿಗ್ರಹಣ ಮುಮಲ್ಲದಿವರೊಳ್ತೋರದು. ಇಂತು ಧರ್ಮದೊಳ್ ಪ್ರಜಾಪರಿಪಾಲನಂಗೆಯ್ವುತ್ತೆನ್ನ ಪ್ರಜೆಯೆನಿಸಲೆಳಸಿದ ತಿರುನಾರಾಯಣನ ಕಲ್ಯಾಣಗುಣಂಗಳನೆಣಿಸುತ್ತಿರೆ;

ಕಿರಿದುಂ ದಿನದೊಳರಸಿ ಸತ್ಕರ್ಮಮಂ ಗರ್ಭದೊಳ್ತಾಳ್ದ ಶ್ರುತಿಯಂತೆಯುಂ, ಜಸಮಂ ಪೊತ್ತ ರಾಜನೀತಿಯಂತೆಯುಂ, ಬಿನಯಮಂ ಪೊತ್ತ ಬಿಜ್ಜೆಯಂತೆಯುಂ, ನೇಸರಂ ಪೊತ್ತ ಮುಂಬಗಲಂತೆಯುಂ, ತುಂಬುವೆರೆಯಂ ಪೊತ್ತ ಪುಣ್ಣಮೆಯ ಸಂಜೆಯಂತೆಯುಂ ಪೊಡೆಯೊಳ್ ಶ್ರೀಮನ್ನಾರಾಯಣನಂ ಪೊತ್ತು ಪೊಗರೇರಿದಳ್. ಕಿರಿದಾದೊಡಂ ಪೆರವೊರೆಯಂ ಪೊರಲರಿಯದ ಬಳ್ಳಿ ತನ್ನ ಪೆರ್ಗಾಯಂ ಪೊರುವಂತೆ ರನ್ನದೊಡವುಗಳಂ ಪೊರಲರಿಯದಿರ್ದುಂ ಜಗದ್ಗುರುವನುದರದೊಳ್ ಪೊತ್ತಿರ್ಪಳ್. ದಿನದಿನದೊಳ್ಪಳೆವ ಗರ್ಭ ಭರದಿಂ ಮುನ್ನೀರುಂಡ ಮುಗಿಲಂತೆ ಮೆಲ್ಲಮೆಲ್ಲನೆ ನಡೆವುತ್ತೆ ಬಳಿವರುವರಸಂಚೆಗಳ ಬಿಡಯಮಂ ಬಿಡಿಸುವಳ್. ಒಳಗಿರ್ಪ ನಾರಾಯಣನ ಸಿರಿಗೈಯ್ಯಸಂಕಿನ ಬೆಳ್ಗದಿರ್ ಪೊಱಪೊಣ್ಮಿದುದೋ, ಬಗೆಯೊಳ್ಪುಟ್ಟಿದ ಚಂದಿರನ ದೀಪ್ತಿ ವ್ಯಾಪ್ತಮಾದುದೋ, ಪಾಸಿನ ಪಾವೆರೆಯನ ಕಾಂತಿ ಕರೆಗಣ್ಮಿದುದೋ, ಪಾಲ್ಗಡಲ ತೆರೆ ಪಸರಿದುದೋ, ಸತ್ವಗುಣಂ ಬಿತ್ತರಮಾದುದೋ – ಎನೆ ಮೆಯ್ಯೊಳ್ ಬೆಳ್ಗದಿರ್ವಡೆದಳ್. ಮತ್ತಮುದರದೊಳಿರ್ಪ ಸಿಸುವಿನ ಮೆಯ್ಮೆಗನುಗುಣಮಾಗಿ ಬಯಸುವಳ್. ಎಲೆ ಕೆಳದಿ, ಕಡಲ ಮುತ್ತುಗಳೆನಿತಂ ಪೊತ್ತೊಡಂ ತಣ್ಪುದೋರದು, ಕೊಳುಗುಳದೊಳ್ಕಡಿವಡೆದ ಪಗೆರಾಯರ ಪಟ್ಟದಾನೆಯ ಕುಂಭದಿಂದುದಿರ್ವ ಪೆರ್ಮುತ್ತುಗಳಿಂ ಕೋದ ತಾರಹಾರಂಗಳಂ ತಂದು ಧರಿಸೆಂಬಳ್. ಪತ್ತೆ ಸಾರ್ದೂಳಿಗಂ ಗೆಯ್ವ ಪೆರನಾಡ ರಾಣಿಯರ ಕೈಯ್ಯ ಕೈಪಿಡಿಯಂ ಕಡೆಗಣಿಸಿಯವರ ವೊಳಪ್ರವೆತ್ತ ಕದಂಪಿನೊಳ್ತನ್ನ ಮೊಗಸಸಿಯಂ ನಿಟ್ಟಿಸುವಳ್. ಪಂಜರದ ಗಿಳಿವರಿಗೊಂದೆರಳ್ವಾಳಿಂಬದ ಬಿತ್ತನಿತು ಬಳಲ್ದುಂ ಸಕಲಜನಕ್ಕಮಭೀಷ್ಟಫಲಂಗಳಂ ಕುಡಲೆಳಸುವಳ್. ಅಲರ್ವಾಸಿನೊಳೂರಿದೊಡಂ ಕಂದುವ ಚೆನ್ನಡಿಗಳಿಂ ಪಗೆರಾಯರ ಪಟ್ಟದರಸಿಯರ ಬೈತಲೆವಣಿಗಳಂ ಮೆಟ್ಟಲೆಳಸುವಳ್. ಪರಿಜನದೊಳ್ಕವಮಿಲ್ಲದೆ ದಯೆಗೆಯ್ವಳ್, ಎನಿತಾನುಂ ತಪ್ಪಂ ಸೈರಿಪಳ್, ಜಗಮನಿತುಮುಜ್ಜೀವಿಪ ಕಜ್ಜಂಗಳಂ ನಿರವಿಸುವಳ್. ಇಂತು ದೌಹೃದಮಂ ಪರಿಪಾಲಿಸುತ್ತೆ ನವಮಾಸಂಗಳಂ ಕಳೆದು ಜನನಮಿಾಗಳಾಗಳೆಂದಿರ್ಪಿನಂ; ಅರಸಿ ರಾಯನ ಪದಸರಸಿಜಂಗಳಂ ನಿಟ್ಟಿಸಲೆಳಸಿ ಕರೆಯಿಸೆ ವಂದ ರಾಯನುಂ ತನಗಿ[ದಿ]ರೇಳ್ವುದಂ ಮಾಣಿಸಿ ತಾನುಮಂ ಮೆಲ್ವಾಸಿನೊಳ್ಕುಳ್ಳಿರ್ದು ನುಡಿದಂ: ಎಲೆ ಅರಸಿ, ನಿನ್ನ ಮೊಗಸಿರಿ ಬೆಳ್ಪೇರಿದನ್ನಂ ಪಗೆರಾಣಿಯರ ಮೋರೆಗಳ್ಕರ್ಪೇರಿದುವು; ನಿನ್ನ ಸುಯ್ಯೆಲರನಿಸುಂ ಪಿರಿದಪ್ಪನ್ನಂ ಅವರ ಸುಯ್ಯೆಲರೆಡೆವರಿದುದು; ನಿನ್ನ ನಡೆ ಮೇಲ್ಪುವಡೆವನ್ನಂ ಅವರ್ಗೆ ನಿನ್ನೋಟಮೊದವಿದದು; ನಿನ್ನ ಬಳಲ್ನೋಟಂ ಬೆಳ್ಪೆಳಗುದೋರುವನ್ನಮವರ್ಗೆ ಕಣ್ಗಳ್ತಲೆಗವಿದುದು; ನೀಂ ಗಬ್ಬಮಂ ಪೊರುವನ್ನಂ ಪೊಡವಿ ತನ್ನ ಬಲ್ಪೊರೆಯನಿಳುಪಿದುದು. ಪಲವುಂ ಜೋಯಿಸರುಮೊಂದುವೆರಸಿ ಬಂದು – ನಿನ್ನ ಗರ್ಭದೊಳೊಗೆದ ಸಿಸು ಕಿರಿದುಂ ದಿವಸದೊಳೇಳ್ಗೆವಡೆದು ಪೊಡವಿಯ ಪೊಲ್ಲಿದರೆಲ್ಲರಂ ಪೊಯ್ದು ಕೆಡಪಿ ತಕ್ಕರಂ ಪೆರ್ಕಳಂಗೊಳಿಸಿ

ನೂರುಂಬರಿಸಂ ಸೊಗವಾಳ್ಗುಮೆಂದು ಪೇಳ್ವರ್ – ಎಂದಿಂತು ಸಂತಸವಾತುಗಳಂ ನುಡಿಯುತ್ತಿರೆ;

ಪಡಿಯರವೆಣ್ಣೊರ್ವಳ್ ಸಡಗರದೊಳ್ಬಂದು ತನ್ನ ಕೈಯ್ಯ ಪೊಂಬೆತ್ತದಿಂ ನೆಲಗಟ್ಟಿನ ಪಳುಕಿನರೆಯನೊಯ್ಯನೆ ಪೊಯ್ದು ದನಿಗೆಯ್ದೆರಗಿ ಕೈಮುಗಿದು ಪೆಂಪೇರಿದ ಮೊಗಸಿರಿಯುಂ ನಿಡುಗಣ್ಣುಮಾದ ಸಂತಸಗದುಬಿನೊಳ್ – ಜೀಯ ಪರಾಕು, ಚಿತ್ತವಿಸುವುದು ಪಿರಿಯೊಸಗೆಯೊಸಗೆ – ಎನೆ ರಾಯನುಂ – ಎಲೆ ಪೆಣ್ಣೆ ಕದುಬದೆ ಬಿನ್ನವಿಸಿದರ ಬಿತ್ತರಮಂ – ಎಂಬುದುಮವಳುಂ – ದೇವ, ಚಿತ್ತವಿಪುದು ದೇವರ ಕೆಳೆಯಳಹಿಯಸಿಂಗರಾರ್ಯನ ಧರ್ಮಪತ್ನಿ ಶಿಂಗಂಮಂಗೆ ಸುಮುಹೂರ್ತದೊಳ್ಗಂಡುಗುವರನಾದನೆಂದು ಬಿನ್ನವಿಸಿದಳ್.

ಅದಕ್ಕೆ ರಾಯನುಂ ರಾಣಿಯುಮತಿಹರ್ಷಿತರಾಗಿ ತಾಂ ತೊಟ್ಟ ತೊಡವುಗಳಮವಳ್ಗುಚಿತಮಿತ್ತು, ಮೇಲೆ ಬರ್ಪ ರಾಜಕುಮಾರ ಸೂರ್ಯೋದಯಕ್ಕಿದರುಣೋದಯಮೆಂದು ನಿರವಿಸಿ, ರಾಯನುಮೀಯುತ್ಸವಮಂ ಪೆರಿಪಾಲಿಸಲ್ಕೆಂದು ಪೊರಗಣ್ಗೆ ವಂದಳಹಿಯಸಿಂಗರಾರ್ಯರಂ ಕರೆಯಿಸಿ ಸಂತಸಮಿರ್ಪರ್ಗಂ ಸಮಾನಮಾಗಿರ್ಪುದರಿಂದೋರೊರ್ವರ್ಗೋರೊರ್ವರೊಸಗೆ ವೇಳ್ದು ಪಲವುಂ ಪೊಳ್ತಿಷ್ಟಾಲಾಪದೊಳಿರ್ಪಿನಂ;

ದಾನಕ್ಕಮುತ್ಸವಕ್ಕಂ ಪೊನ್ನುಡೆ ತೊಡವುಗಳನಿತ್ತಳಹಿಯಸಿಂಗರಾರ್ಯನ ಕಳುಪಿ, ರಾಯನುಮಂತಃಪುರಕ್ಕೆ ಪೋಪನೆಂದೆಣಿಸುವನಿತರೊಳೆ, ಮುಂ ತಾಂ ಕಳುಪಿದ ಒಳಊಳಿಗದ ಕುವರನೊರ್ವನೆಯ್ತಂದು ಕೈಮುಗಿದು ಕೆಲದೊಳ್ನಿಂದು ರಾಯನಿರವನಾರಯ್ದು, ಮೊಗಸಿರಿಯಿಂದನುಮತಿಯನೂಹಿಸಿ ಪತ್ತೆ ಸಾರ್ದು ವಿನಯದಿಂ ಬಿನ್ನವಿಸಿದಂ: ರಾಯ ಚಿತ್ತವಿಪುದಂತಃಪುರದೊಳ್ಬರ್ದೆಯರುಂ ದಾದಿಯುರುಂ ಬೀದಿವನೆಯಿಂ ಬಂದ ಐದೆಯರ್ಗಳುಮಾಗಿ ಪಿರಿದುಂ ಕಿರಿದುಮಲ್ಲದೊಂದು ನಲ್ವಗೆಯೊಳ್ಳಳಸಿದ ಭಿತ್ತಿಗಳ್ಗೆ ನವಸುಧಾಲೇಪಮುಂ, ಮೇಗಣ್ಗೆ ಬೆಳ್ವಟ್ಟೆಯ ಮೇಲ್ಕಟ್ಟುಂ ಮುತ್ತಿನಸರದ ಲಂಬಣಮುಂ, ನೆಲಕ್ಕೆ ತಾವರೆಯಂಚೆಗಿಳಿ ಸತ್ತಿಗೆ ಸೀಗುರಿ ಮೊದಲಾದ ಪಲವುಂ ತೆರದ ರಂಗವಲ್ಲಿಯುಮಾಗಿಯಲಂಕರಿಸಿ, ಮಂಜುವೆಟ್ಟಿನ ಗವಿಯ ಪಳುಕಿನ ಪಾಸರೆಯೆನೆ ಬಿತ್ತರಮಾಗಿ ಪಾಸಿದ ಮೆಲ್ಪಾಸಿನೊಳ್ಮುಂ ಕಡೆವಾಗಳ್ ಪಾಲ್ಗಡಲ ತೆರೆ [ನೊರೆ] ಯೊಳ್ತೀಲ್ವ ಸಿ[ರಿ]ಯರಸಿಯರಂ ಪೋಲ್ವ ರಾಣಿಯಂ ಬಳಸಿಯಚ್ಚರಿಸಿಯರಂತೆ ಕುಳ್ಳಿರ್ದು, ಮುಂ ದಶರಥ ರಾಣಿ ಕೌಸಲ್ಯೆ ರಾಮಚಂದ್ರನಂ ಪಡೆವಾಗಳ್ನಡೆಯುಂ ನುಡಿಯುಮಾಗಿರ್ದಳ್; ವಸುದೇವನರಸಿ ದೇವಕಿಯುಮಿಂತಿರ್ದಳ್; ಮತ್ತಮೆಮ್ಮರಮನೆಯ ದೇವರಾಜರಸರ ಮುದುಪ ದೇವರಾಜರಸರ ರಾಣಿಯರುಮಿಂತಿರ್ಪರೆಂದು ಸಂತಸವಾತುಗಳಿಂ ಪೊಳ್ತುಗಳೆಯುತಿರ್ದಪರ್.

ಊಳಿಗವೆಣ್ಗಳುಂ ಭಯಭಕ್ತಿಗಳಿಂ ಪುಟ್ಟಿದ ತವಕದೊಳೆಲೆಗೆ ಬೆಳಲರಂ ಬಿಳಿಯ ಸಾಸುವೆಯಂ ಕಳ[ವೆ]ಯರಳ್ಗಳೊಳ್ಬೆರಸಿ ಮನೆಯೊಳಮಂಗಳದೊಳಂ ಚಲ್ಲೆಂದುಂ, ಪಾವಿನ ಸೋಲೆಯಂ ಪಸುವಿನ ತುಪ್ಪಮಂ ಸಾಮ್ರಾಣಿಯೊಳ್ ಬೆರಸಿ ಪೊಗೆಗೊಳಿಪುದೆಂದುಂ, ಅಡಿಯಂ ತೊಳೆದಗ್ನಿಯಂ ಮುಟ್ಟಿದವರಲ್ಲದೀ ಮನೆಯಂ ಪುಗವೇಡೆಂದುಂ, ಮಾವುಬೇವಿನೆಲೆಗಳಿಂ ಪಚ್ಚೆದೋರಣಮಂ ದೊರೆಗೊಳಿಪುದೆಂದುಂ, ಬಾಗಿಲಿರ್ಕೆಲದ ಗೋಡೆಗಳೊಳ್ಸಂಕು ಪಾರುಂಬಳೆಗಳಂ ಬರೆಯಿಸೆಂದುಂ, ಜೋಯಿಸರ್ಗಳಿಗೆ ವಟ್ಟಲನೆಳ್ವರದೊಳ್ಕಾದಿರ್ಪುದೆಂದು ಪೇಳೆಂದುಂ, ಬಣ್ಣಗೊರಲ್ವೆದೆಯರ್ಸೋಬನವಾಡಂ ಪಾಡುಗೆಂದುಂ ಓದಾಳಿಗಳಿಂ ಸಾಸಿರ್ವೆಸರನೋದಿಪುದೆಂದುಂ, ಪೊಸಂತಿಲಪೊರಗಣಿರ್ಕೆಲದೊಳ್ ಪಲ್ಲವದೂರ್ವಾಲಂಕೃತಮಾದ ಪೂರ್ಣಕುಂಭಂಗಳನಿರಿಸುವುದೆಂದುಂ, ರಕ್ಷೆಗೆಯ್ವುದರ್ಕೆ ಶ್ರೀಮನ್ನಾರಾಯಣನ ಕರ್ಪುರದ ಸಿರಿಯಡಿವುಡಿಯಂ ತರ್ಪುದೆಂದುಂ, ಅರಸಿಯ ಕಡುನೇಹದ ಕೆಳದಿ ರಾಯನಡಿಯೆಡೆಗೆ ಪರಿದೊಸಗೆವೇಳ್ವುದೆಂದುಂ – ನುಡಿವುತ್ತಮತ್ತಲುಮಿತ್ತಲುಂ ಪರಿಯುತ್ತಿರ್ದಪರ್ ಎಂದು ಬಿನ್ನವಿಪುದುಂ;

ರಾಯನುಮಾಪ್ತ ಸಾಮಾಜಿಕರಂ ಜ್ಯೋತಿರ್ವಿದರಂ ಪುರೋಹಿತರುಮಂ ಬರಿಸಿಯವರೊಡನೆ – ಈ ವೇಳೆಯ ಪಂಚಾಂಗಶುದ್ಧಿಯಿರವೆಂತು, ಲಗ್ನಮಾವುದು, ಗ್ರಹಾನುಕೂಲ್ಯಮೇತೆರಂ ಎಂದು ವಿಚಾರಿಸುತ್ತಿರೆ;

ರಾಣಿಯ ಸಂಚಿಯೂಳಿಗದ ಕೆಳದಿಯೊರ್ವಳ್ ಸಂತಸದೊಳೆಯ್ತಂದು ವಂದನಂ ಗೆಯ್ದು ಮಹಾರಾಯಂಗೆ ಪಟ್ಟದ ಕುವರಂ ಪುಟ್ಟಿದನೆಂದು ಬಿನ್ನವಿಪ್ಪುವುದು ಮಾಯಮರ್ದು ನುಡಿ ರಾಯನ ಕಿವಿಯಂ ಪೊಕ್ಕು ಬಗೆಯೊಳ್ಪಸರಿಸಿ ತಾಂ ದೇವನೆಂದುಂ ಮೇಣ್ದೇವೇಂದ್ರನೆಂದುಂ ಮತ್ತಮಾ ನಾಲ್ಮೊಗನೆಂದುಂ ಎಣಿಸಿ ಪೆರ್ಕಳಂಗೊಂಡು ಭಂಡಾರದೊಳಿರ್ಪ ಪೆರ್ಮೊತ್ತದ ಪೊನ್ನ ರನ್ನದ ತೊಡವುಗಳನಾ ಕೆಳದಿಗಿತ್ತು ಕಳುಪಿ ಜಾತಕದಿರವನಾರಯ್ವುದುಂ; ಅತಿಹರ್ಷದಿಂ ಜೋಯಿಸಿಗರ್ – ದೇವ, ಚಿತ್ತವಿಪ್ಪುದು; ಲಗ್ನ ಹೋರಾದ್ರೇಕ್ಕಾಣಾದಿಭೇದಭಿನ್ನ ಸೂಕ್ಷ್ಮಕಾಲದ ಸ್ವರೂಪಂಗಳೊಳಿರ್ಪ ಗ್ರಹಾನುಕೂಲ್ಯಂಗಳುಮಂ ಭಾವಿಸೆ, ಸಂಹಿತಾರ್ಥೇದಂಗಳ ರಾಜಯೋಗಾಧ್ಯಾಯಂಗಳ ಶ್ಲೋಕಂಗಳನಿತರ್ಕಮಿಾ ಜಾತಕಮೊಂದೆ ಉದಾಹರಣೆಯಾಗಿರ್ಕುಂ ಆಮೆನಿತುಂ ಪೊಗಳ್ವೆವೆಂದು ಬಿನ್ನವಿಪ್ಪುದುಂ; ಅಳಿಯಸಿಂಗರಾರ್ಯರುಂ – ಈ ಜೋಯಿಸದಿರವಿಂತಿರ್ಕೆ. ಸಾಹಿತ್ಯಪರಿಪಾಟಿಯಿಂದಾನೊಂದು ತೆರದೊಳು ಜಾತಕಫಲಂಗಳಂ ಪೇಳ್ವೆಂ. ಈ ರಾಜಕುಮಾರಂ ತನ್ನ ಜಾತಕದೊಳ್ ಪಾರ್ಥಿವವರ್ಷದಿಂ ಸಕಲಪಾರ್ಥಿವೋತ್ತಮನುಂ, ದಕ್ಷಿಣಾಯನದಿಂ ದಕ್ಷಿಣದಿಕ್ಚಕ್ರವರ್ತಿಯುಂ,

ಆಶ್ವಯುಜ ಮಾಸದಿಂದಸಂಖ್ಯಾತಾಶ್ವಸೇನಾಧೀಶ್ವರನುಂ, ಶುದ್ಧಪಕ್ಷದಿಂದಂತ ರ್ಬಾಹ್ಯಪರಿಶುದ್ಧನುಂ, ವೈಷ್ಣವಭದ್ರತಿಥಿಯಿಂ ಸಕಲವೈಷ್ಣವಕುಲೋದ್ಧಾರಕನುಂ, ಚಂದ್ರವಾಸರದಿಂದಖಿಲಸಜ್ಜನಚಿತ್ತಾಹ್ಲಾದಕನುಮೆನಿಸುಗುಂ. ಮತ್ತಮೀ ಕುವರನಪರಿಮಿತ ಕನ್ಯಾದಾನಂ ಗೆಯ್ವುದರಿಂ ತಾನುಂ ದಾನಮಂ ಕೊಳಲ್ಕೆಳಸಿದಂತೆ ಸೂರ್ಯಂ ಕನ್ಯೆಗೆ ವಂದಿರ್ಕುಂ. ಮುಂ ತನ್ನ ವಂಶದ ಪುರೂರವ ನಹುಷ ಯಯಾತಿ ರಂತಿ ಶಶಿಬಿಂದು ಮುಂತಾದವರಂತೀಗಳವನುಮಖಂಡಭೂಮಂಡಲಾದಿ ಪತಿಯಕ್ಕುಂ, ಅದರ್ಕಾನೆ ಸಾಮ್ರಾಜ್ಯಪದಾಭಿಷೇಕಂಗೆಯ್ವೆನೆಂದು ಪೂಣ್ದಂತೆ ಚಂದಿರಂ ಮೆಯ್ಸಿರಿವಡೆದು ಕುಂಭಮಂ ಕೊಂಡಿರ್ಕುಂ. ಮತ್ತಮಿವಂ ತಾಂ ಪಲರ್ಮ್ಮೆ ಷೋಡಶಮಹಾದಾನಂ ಗೆಯ್ವುದಲ್ಲದೆ ತನ್ನಂ ಸೇರಿದ ವಿದ್ವತ್ಕವಿಗಳಿಂ ತುಲಾದಿದಾನಂಗಳಂ ಗೆಯಿಸುವನೆಂಬುದಂ ತಿಳುಪುವಂತೆ ಬುಧ ಕವಿಗಳ್ ಮಂಗಳಂ ಬೆರಸು ತುಲಾರೂಢರಾದರ್. ಈ ಕುವರನರಸುಗೆಯ್ವೆಡೆಯೊಳಧ್ಯಯ ನಾಧ್ಯಾಪಕಂಗನುಳಿದು ಮಿಥುನಭಾವದೊಳಿರೆ, ಗೌರವಂ ದಕ್ಕದೆಂದಳ್ಕಿದಂತೆ ಬೃಹಸ್ಪತಿಯುಂ ವೃಷಕರ್ಕಟಮಧ್ಯದೊಳ್ ಬೆದರುಗೊಂಡಿರ್ಕುಂ. ಇಂತಪ್ಪ ತೇಜಸ್ವಿಸುತನಾದೊಡಮಿವನರಸುಗೆಯ್ತದೊಳ್ಮಂದಂಗೆ ಮಂದಾಧಿಕಾರಮಿಲ್ಲದೆ ಮುಖ್ಯಾಧಿಕಾರಮಿಲ್ಲೆಂಬುದಂ ತೋರ್ಪಂತೆ ಶನೈಶ್ಚರಂ ಮೇಷಾಧಿಷ್ಠಿತನಾದಂ. ಈ ದಿನದೊಳ್ತಾಮಸರ್ಗೆ ಹಾನಿಯೆಂಬುದಂ ಕಾಣಿಪಂತೆ ರಾಹುಕೇತುಗಳ್ಕರ್ಕಟ ಮಕರಗ್ರಸ್ತರಾದರ್ – ಎಂದು ನುಡಿದ ಅಳಹಿಯಸಿಂಗರಾರ್ಯರ ಮಾತಂ ಕೇಳ್ದು ಸಂತಸಂಗೊಂಡು ರಾಯನುಂ ಕಳುಪತಕ್ಕ[ವ*]ರಂ ಕಳುಪಿ, ತಾನುಂ ತನ್ನೆಳೆಗುವರನ ಮುದ್ದುಮೊಗಮಂ ನೋಡಿ ದಾನಂಗಳನಿತ್ತು ಪಿತೃಋಣಮಂ ತೀರ್ಚುವನೆಂದು ಪುರೋಹಿತಪರಿಜನಂ ಬೆರಸು ಮುಂದೆ ನಡೆವ ಪಲವುಂ ಕಮ್ಮೆಣ್ಣೆಯ ಕೈದೀವಿಗೆಗಳ ಬೆಳಕಿನೊಳ್ನಡೆದು, ಸೂ[ತಿಕಾಗೃ]ಹದ ಬಾಗಿಲ ಪೊರಗಣ ಪೆರ್ಜಗಲಿಯೊಳ್ ರನ್ನವಣೆಯೊಳ್ಕುಳ್ಳಿರ್ದಲ್ಲಿ ಪೊಸಂತಿಲ ಸನಿಯದೊಳ್ ಸಾವಧಾನದೊಳ್ಕುಳ್ಳಿರ್ದ ಪಾರ್ವತಿ ಮುತ್ತೈದೆಯೊರ್ವಳುತ್ಸಂಗದೊಳ್ತನ್ನ ಮೆಯ್ವೊಗರಿಂ ಬಳಸಿದ ದೀವಿಗೆಗುಡಿಗಳನಿಳಿಕೆಗೆಯ್ಯುತ್ತೆ, ಮೆಯ್ಕೆಂಪಡದಿರ್ಪುದರಿಂ ಪೊಳ್ತರೆ ಕೆಂದಿರ್ಪುದಗದಿರ್ಗೊಂಡ ನೇಸರಂತೆಯುಂ, ಸಂಜೆಯೊಳ್ ಕೆಂಬೊಗರ್ವೆತ್ತುದಿಸುವ ಚಂದಿರನಂತೆಯುಂ, ಮೆಲ್ಲುವಡೆದ ಕಲ್ಪದ್ರುಮದ ಚೆಂದಳಿರ್ದೊಂಬೆಯಂತೆಯುಂ, ಆಗಳಲರ್ದ ಕೆಂದಾವರೆಯ ಬಿಂದದಂತೆಯುಂ, ಪೊಣ್ಮಿದ ಪೊಡವಿದ ಪೊಸವಗೆಯ ಲೋಹಿತಾಂಗನಂತೆಯುಂ ತೋರ್ಪ ಮೆಯ್ಯುಂ ಎಳವಿಸಿಲಿಂದೆ ಮೇಣ್ಣವಳಗುಡಿಗಳಿಂದೆ ಅಲ್ಲದೊಡೆ ಕೆಂಬರಲ್ಗಳಿಂದಾದೊಡಂ ಸಮೆದಂತಿರ್ಪ ಕೈಕಾಲ್ಬೆರಲ್ಗಳುಮಾಗಿ ತನ್ನುಳ್ಳ ನಾಲ್ದೋಳ್ಗಳಂ ತೋರದೆ ಯಶೋದೆಯುತ್ಸಂಗದೊಳ್ ಇರ್ದೊಳ್ವೆತ್ತಿರ್ದ್ದ ಆ ಶ್ರೀಕೃಷ್ಣನಂತೆ ಪಲವುಂ ಮಹಾಪುರುಷಲಕ್ಷಣಂ ಗಳಿಂದೆಸೆವೆಳೆಸಿಸುವಂ ನಿಟ್ಟಿಸುವೆಡೆಯೊಳಾಡದೆಮೆಯುಮಡಿಗಡಿಗೆ ತೊಡೆದಡಂ

ತೊರೆವ ಸೊಗದಾಲಿನೀರಿಂ ನನೆದ ನೆಟ್ಟಾಲಿಯುಮಾಗಿ ನೇಹರಸದಿಂದೊದವಿಂ ನುಡಿಸುವಂತೆಯುಂ ತಕ್ಕವಿಸುವಂತೆಯುಂ ಈಂಟುವಂತೆಯುಂ ನಿಟ್ಟಿಸಿ ನಿಟ್ಟಿಸಿ ಸಂತಸಂಬಡೆದಂ.

ಅಳಹಿಯಸಿಂಗರಾರ್‍ಯನುಂ ಈ ರಾಯಗುವರನ ಅಂಗಪ್ರತ್ಯಂಗದ ಚಕ್ರವರ್ತಿ ಲಕ್ಷಣಮಂ ನಿರವಿಸಿ ಪೇಳ್ದಂ – ಚಿತ್ತವಿಪುದು ಮಹಾರಾಯಂ. ಅರೆಬಿರಿದ ಕೆಂದಾವರೆಯಂ ಪೋಲ್ವ ಮುದ್ದುಮೊಗದೊಳ್ಕರಿದಾಗಿ ಸಣ್ಣನೆನಿಸಿದೆವೆ ಸಾಲ್ಗೊಂಡು ಕಿವಿವರೆಗಂ ನೀಳ್ದ ಬಗಸೆಗಣ್ಗಳ್ತಳತಳಿಸುತ್ತಿದೆ. ಕಪ್ಪುರದ ತಾವರೆಯ ಪರಿಮಳಂಗಳಂ ಬೆರಸಿದಂತೆಸೆವ ಚಂಬಾಯ ತನಿಗಂಪಂ ಸವಿಯಲ್ಕೆಂಬಂತೆ ನೀಳ್ದು ನಸುಬಾಗಿದ ಮೂಗು ಮಿಗೆ ಸೊಗಯಿಸುತ್ತಿದೆ. ಸರಿಗೆಯ ಪಳಯಿಗೆಯ ತಾವರೆಯ ಗೆರೆಗೊಂಡ ಮೆಲ್ಲಡಿಗಳೆಲ್ಲಾರಾಯರ ಮುಡಿವಣಿಗಳ ಸೋಂಕಿಂಗುಚಿತವಾಗಿದೆ. ಮುಗಿಲಮೊಳಗಿನಂತೆಯುಂ ಭೇರೀನಾದದಂತೆಯುಂ ಸಿರಿದನಿ ಪೆಂಪುವಡೆದಿದೆ. ಇದೆಲ್ಲಮುಂ ಚಕ್ರ ವರ್ತಿಲಕ್ಷಣಂಗಳ್. ಇಂತಿರ್ಪ ಕುವರನವತಾರದೊಳ್ದೇವರುಂ ಅಂತಃಪುರಮುಮಾಮುಂ ಊರುಗರುಂ ನಾಡುಬೀಡುಗರುಂ ಸಂತಸಂಗೊಂಬುದು ಸಾಜಮ್ಮೈಸೆ; ಚೇತನಾಚೇತನವಿಭಾಗಮಿಲ್ಲದೆ ಸಕಲಲೋಕ ಸಂತಸಮಂ ನಿರವಿಪುದು ದೇವರ್. ಪಿಂತಣ ರಾಯರುಡಿಸಿದ ಜಸಮೆಂಬ ದುಗುಲಂ ಪಳೆದಾಗಿ ಮಾಸಿದುದೀಗಳೀ ಕುವರಂ ಪೊಸಜಸದ ದುಗುಲಮನೀವನೆಂಬ ಸಂತಸದಿನೆಂಬಂತೆ ಪತ್ತುಂ ದಿಕ್ಕುಗಳುಂ ಪ್ರಸನ್ನಮಾದುವು. ಈ ಕುವರಂ ದಾಳಿಡುವೆಡೆಯೊಳ್ಪಗೆರಾಯರ ಪುರಂಗಳ ನೆನಗಾಹುತಿಗುಡುವನೆಂಬ ನಂಬುಗೆಯಿಂದಗ್ನಿ ಬಲಮುರಿಗೊಂಡು ಪೊಗೆಗಳೆದು ತೊಳಗಿದುದು. ಸಕಲಸಜ್ಜನರ ಮನದ ಕಾಲುಷ್ಯಮಂ ಕಳೆದು ಸುಪ್ರಸನ್ನಮಾದುದನಭಿನಯಿಪಂತೆ ಪಲವುಂ ಪೊಳೆಕೊಳಂಗಳ ನೀರ್ಗಳ್ಕದಡುಗಳೆದು ತಿಳಿದುವು. ತಮಂ ತಳ್ಗಿ ಸತ್ವಮೆಳ್ತರಮಾದಪುದೆಂಬುದಂ ತೋರ್ಪಂತಾಗಸದೊಳ್ ಕಳ್ತಲೆಗಳೆದು ಪೆರೆಯರಲ್ಗಳ್ಪೆಂಪುವಡೆದುವು. ಅನಿತುಂ ಜನಕ್ಕಮರಪುರುಳ್ಬಯಕೆ ಗಳನುಗೊಳಿಪ್ರವೆಂದೆಂಬುದನೆಳ್ಚರಿಪಂತೆ ಸಕಲ ಸಸ್ಯಂಗಳುಂ ಫಲಭರಿತಂಗಳಾದುವು. ತೆಂಕಲ್ನಾಡು ತೇಜಂಬಡೆದುದಂ ತಿಳಿಪುವಂತಗ್ಗಳಿಕೆ ವೆಗ್ಗಳಮಾದು[ದು*]. ಭಗವದವತಾರಮೆಂಬುದಂ ಪ್ರಕಟಿಸುವಂತೆ ದುಷ್ಟಜನಂ ದೂಳ್ಗೊಂಡು ಶಿಷ್ಟಜನಂ ಸಿರಿವೆತ್ತುದು – ಎಂದಿಂತು ಪೊಗಳ್ದು ಪರಕೆಗೆಯ್ದುದುಂ.

ರಾಯನುಮತಿಪರುಷದಿಂದೆಳ್ದಿವರೊಡನೆ ಪೊರಗಣ್ಗೆ ವಂದಲ್ಲಿ ಸಂಮೊಗದ ಜಿಜ್ಞವಳರ್ಗಮೂರುಗರ್ಗಂ ನಾಡುಬೀಡುಗರ್ಗಂ ಮಿಕ್ಕುದೇಂ ಪಾರ್ವರೆಂಬ ಪೆಸರುಳ್ಳರನಿಬರ್ಗ್ಗಂ ಅವರವರಂತರವರಿದಗರಂಗಳಂ ಬೆಳೆಗೆಯ್ಗಳನಾರವೆಗಳ ನಾನೆಕುದುರೆಗಳನುಡೆತೊಡವುಗಳಂ ಪೊನ್ಗಳನಿತ್ತು ಮನ್ನಿಸಿ ತಣಿಯಿಸಿ ಕಳುಪಿ ಸುಖದಿಂ ಪುತ್ರಜನ್ಮಮಹೋತ್ಸವಮಂ ಪರಿಪಾಲಿಸುತ್ತುಮಿರೆ;

ಸೂತಕಮಂ ಕಳೆದು ಸುಮುಹೂರ್ತದೊಳ್ ನಾಮಕರಣಮಹೋತ್ಸವಮನಾರಂಭಿಸಿ ಮುಂ ತನ್ನ ಮೇಲೆ ಪಿತೃಋಣಂ ಪ್ರವೃದ್ಧಮಾಗಿರ್ದುದರಿಂ ತತ್ತದುತ್ಸವಂಗಳೊಳಾನೆಸಗುವಾಭ್ಯುದಯಕಂಗಳನಿತುಮಾಸಾಲದ ಬಟ್ಟೆಗೆ ಸಾಲದಿರ್ಪುದು. ಈಗಳಾ ಋಣಂ ನಿಶ್ಶೇಷಮಾಗಿ ತೀರ್ಚಿ ಪೋದುದರಿಂದೀಯೆಸಗುವಾಭ್ಯುದಯುಕವನ್ವರ್ಥವಾದುದೆಂದು ಸಂತಸದೊಳೆಸಗಿ ಸುಮೂರ್ತದೊಳ್ ಶ್ರೀ ಚಿಕದೇವರಾಯನೆಂಬೊಳ್ವೆಸರನಿಟ್ಟಂ. ಆ ಪೆಸರ ಪರಿಕಿಸೆ ಸಕಲಲೋಕರಂಜಕನಾದುದರಿಂ ರಾಯನೆಂದುಂ. ಆವಗಂ ಲೀಲೆಯುಂ ಗೆಲ್ಲಮುವೊಳ್ನಡತೆಯುಂ ಪೊಗಳ್ತೆಯುಂ ಸಂತಸವುಂ ಸೊರ್ಕುಂ ಕಳೆಯುಮುಂಟಾಗಿರ್ಪುದರಿಂ ದೇವನೆಂದುಂ, ಇವನಿತುಂ ಚಿಕ್ಕಂದಿನೊಳೆಯನು [ಗೂ]ಡುವುದರಿಂ ಚಿಕದೇವರಾಯನೆನಿಸುಗುಮೆಂದುಮುಪೇಂದ್ರನವ ತಾರಮಪ್ಪದರಿಂ ಸಾಜವಾದ ಪೆಸರೆಂದುಂ ಬಿಜ್ಜೆವಳರ್ಪೆರ್ಕಳಂಗೊಂಬರ್. ಬಳಿಕ್ಕೆ ಪೇರುಕ್ಕೆವದೊಡನಳಹಿಯಸಿಂಗರಾರ್ಯರ ಕುವರಂಗಂ ರಾಯಗುವರನ ಕೆಳೆತನಕ್ಕೆ ತಕ್ಕಾರ್ಪುಮಳವುಂ ದೊರೆಕೊಂಡಿರ್ಪುದರಿಂದನ್ವರ್ಥಮಾದ ತಿರುಮಲೆಯಾರ್ಯನೆಂಬ -ನಲ್ವೆಸರನಿಟ್ಟು ಪಲವುಂ ರನ್ನ ಪೊನ್ನ ತೊಡವುಗಳನೊಳ್ಪುಡೆಗಳುಮನಿತ್ತು ಮನ್ನಣೆಗೆಯ್ದು ಸಂತಸದೊಳಿರೆ;

ದಿನಕ್ರಮದೊಳ್ಕುವಾರನುಂ ಚಂದಿರನಂತೆ ಬಳೆಯುತ್ತೆ ಪೊಂಜರಪಣಿಯೊಳ್ ಕಟ್ಟಿದ ರನ್ನದೊಟ್ಟಿಲೊಳ್ ದಿಟ್ಟಿದೋಸಂ ತಟ್ಟದಂತೆ ಎರಡುಂ ಮೆಲ್ಲದಂಪುಗಳೊಳಿಟ್ಟ ಕಾಡಗೆಂಯು ಬಟ್ಟುಂ, ಕೊರಲೊಳ್ಕಟ್ಟಿದ ಪಂಚಾಯುಧಮುದ್ರಾಂಕಿತಮಾದ ಕಿರುದಾಲಿಯುಂ, ಪಣೆಯೊಳ್ಕಾಪುಗೊಳಿಸಿದ ನಾರಾಯಣನ ಕಪ್ಪುರದ ಪಾದರೇಣು ಬಿಂದುವುಮಂದಂ ಬಡೆಯೆ ತನ್ನೊಳ್ತಾನೆ ನೆವಮಿಲ್ಲದೆ ನಗುತ್ತುಂ ಮೈಕೈಕಾಲ್ಗಳಂ ನೀಡುತ್ತುಂ ಮಲಂಗಿರುವ ಪಾಂಗಂ; ತನ್ನ ಕುಲವರ್ಧನನಪ್ಪ ಕುವರನಂ ಕಾಪಿಡಲ್ಕೆಂದು ರಾಗಾವಿಲನಪ್ಪ ಚಂದಿರನೆಯ್ತಂದನೆಂಬ ಸಂದೆಯವಂ ಸಮನಿಸುತ್ತೆ ನಿಲುಂಕಿಯುಂ ನಿಲುಕದಂತೆ ಜೋಲ್ವ ರನ್ನಸೆಂಡನಂಡಲೆವುದರ್ಕೆಳವಳ್ಳಿದೋಳ್ಗಳನಡಿಗಡಿಗೆ ನೆಗಪುವುದರಿಂದುದಯಾಚಲಶೃಂಗದೊಳ್ ಪತಂಗಮಂಡಲಕ್ಕೆ ಕೈನೀಡುತ್ತಂಗವಿಪ ಮರಿಸಿಂಗಮಂ ಪೋಲ್ವ ಚಲಮಂ; ಅಂತಃಪುರದಕಾಂತೆಯರೊರ್ವರ ಕೈಯಿಂದೊರೊರ್ವರಾಂತೊಳ್ಪೀಣೆಯಂತೆರ್ದೆಯೊಳಿಂಬುಗೊಳಿಸಿ ಸಂತಸದೊಳ್ ನುಡಿಸುವಿನಮಲರ್ದ ಬಿಸಜದಂತೆಸೆವ ಚೆಂಬಾಯಿಂದಿನಿರಸದಂತೆ ನಸುಜೊಲ್ಲು ಸುರಿಯೆ ತೊದಳ್ನುಡಿವ ಸೊಗಸಂ; ಪಳುಕಿ ನೆಡೆಗೋಡೆಯ ಮರೆಯೊಳಿರುವರ ಸಂಚೆವರಿಯಂ ಪಿಡಿಯಲ್ಕೆ ನೀಡಿದ ಕೈ ಸೋಂಕದೊಡಂ ಪಡಿನೆಳಲಂ ಕಂಡಂಜಿಯದಿತ್ತಲುಮತ್ತಲುಂ ಪರಿಯುತ್ತಿರೆ ತಾನುಂ ಪರಿಪರಿದು ಬೆಂಬಿಡದೆ

ಮೊಗಸಾಲೆಯ ಪೊಂಜಗಲಿಯ ಪಚ್ಚೆಗಂಬದ ಮುಂಭಾಗದೊಳ್ ಬಜ್ಜರಂಗಳಿಂ ಸಮೆದಂಚೆವರಿಯಂ ಪಿಡಿದೆಳೆದೆಳೆದು ಕೋಟಲೆಗೊಳ್ವ ಸಂಭ್ರಮಮುಂ; ಬೆದರುಗಣ್ಗಳುಂ ನುಣ್ಮಯ್ಯುಂ ಸಣ್ಣಗಾಲ್ಗಳುಮಾಗಿ ತನ್ನ ಕೊರಲ ಕಿರುಗಂಟೆಯ ದನಿಗೆ ಬೆರ್ಚಿದಂತೆಡೆಯೊಳ್ ನಿಲ್ಲದೆ ನೆಗೆವೆರಳೆಯ ಮರಿಯ ಪಿಂತಣೆರಡುಂ ಕಾಲ್ಗಳಂ ಪಿಡಿದು ಎಳೆವದಟಂ ಕಂಡುದಾದಿ ಕದುಬಿನೊಳ್ – ಬೇಡ ಬೇಡೆಲೆ ಕಂದ, ಬೇಡ ಬೇಡೆನ್ನಾನೆ, ಬೇಡ ಬೇಡೆನ್ನ ಮರಿಸಿಂಗವೆ, ಬೇಡ ಬೇಡ – ಎನುತ್ತೆ ಬಳಿವಿಡಿದು ತರುಬಿದೊಡಮವಳ ಕೆಯ್ಗೆ ಸಿಲ್ಕದಂಗಳದೊಳ್ ಬಳಬಳಿಸಿ ಬವಣಿಗೊಳಿಸಿ ಬಳಲಿಸುವ ಬಲ್ಪುಂ; ಎರಡುಂ ನಿಡುದೋಳ್ಗಳಂ ನೀಡಿ ಕರೆವ ಪಲವುಂ ರಾಯರ ಸಾಲ್ಗಳಂ ಕಡೆಗಣ್ಗಳಿಂ ಕಡೆಗಣಿಸಿ ಕೌತುಕದಿಂದೊಂದೆ ಸೂಳೊಳ್ಕವಿವ ದಿವ್ಯಾಸ್ಥಾನದ ಪಲವುಂ ಜನದ ನೇಹವಿಟ್ಟಿಗಳೆನಿಪ ಮಾವಳೆಯೊಳ್ ನನೆದೊಯ್ಯರದೊಳ್ತನ್ನ ರನ್ನದ ಸಿಂಗವಣೆಯಂ ಸೇರಿ ನಿಲ್ವಂದಮುಮಂ ನಿರವಿಸಿ ರಾಯಂ ವಿಭವದೊಳಿಂದ್ರನಂ ದೊರೆಗೊಂಡಿರ್ದುಂ ಕಣ್ಗಳಿಂದೆಯುಂ ದೊರೆಕೊಳಲೆಳಸಿದಂ.

ಇಂತು ಸಂತಸದೊಳ್ ಬಳೆವ ರಾಯಗುವರನೊಡನಳಹಿಯ ಸಿಂಗರಾರ್ಯನ ಕುವರಂ ತಿರುಮಲೆಯಾರ್ಯನೆಣೆದೊಟ್ಟಿಲೊಳ್ ಬಳೆದು ತಳರ್ನಡೆಯೊಳಂ ತೊದಲ್ನುಡಿಯೊಳಂ ಬಳಿಸಂದು ಪಲವುಂ ಬಾಲಲೀಲೆಯೊಳಂ ಪಡಿನೆಳಲಂತಿರ್ಕುಂ.

ಕ್ರಮದೊಳ್ ಚಿಕದೇವರಾಯನುಪನಯನಾದಿ ವರ್ಣಧರ್ಮ ಪರಿಕರ್ಮಿತನಾಗಿ ಬಿಜ್ಜೆಗಲ್ವೆಡೆಯೊಳ್ ಬುದ್ಧಿಕೌಶಲಮಂ ಕಂಡತಿಹರ್ಷ ದೊಳ್ಕಲಿಸುವುಪಾಧ್ಯಾಯರ ಬಿಜ್ಜೆಗಳನಿತುಮಂ ಕರೆಗಳೆದ ಕೈಪಿಡಿಯಂ ಪೋಲ್ವ ತನ್ನ ಚಿತ್ತದೊಳ್ಕೊಂಡು ಪೊಸಪೊಗರಂ ಪೊಣ್ಮಿಸಿದಂ. ಪಲವುಂ ಬಿಜ್ಜೆಗಲಿಸುವುಪಾಧ್ಯಾಯರ್ಗಳೊಳ್ಗಬ್ಬಂಗಲಿಸುವರ್ ಮಹಾರಾಯನ ಸನ್ನಿಧಿಗೆ ಬಂದು, ಸಂತಸದೊಳ್ – ದೇವ, ಚಿತ್ತವಿ[ಪು*]ದು. ಕುಮಾರ ಚಿಕದೇವರಾಯ ನೋದುವೆಡೆಯೊಳ್ ಶ್ವಾಸ ನಾದ ಘೋಷಾಲ್ಪಪ್ರಾಣ ಮಹಾಪ್ರಾಣತ್ವಂ ಗಳ್ತೋರ್ಪಡುವಂತಕ್ಕರಂಗಳಂ ತತ್ತದುಚಿತಸ್ಥಾನಪ್ರಯತ್ನಂಗಳಿಂದುಚ್ಚರಿಪವಾಕ್ಪಟುತ್ವಮುಂ, ಅಕ್ಕರಂಗಳೊಂದರ್ಕೊಂದು ಬೆರಸಿ ಸಂಕರವಾಗದಂತೆಯು ಮೊಂದರ್ಕೊಂದಗಲಿಯುಸಂಗತವಾಗದಂತೆಯುಂ ಅತಿವೇಗವುಂ ವಿಳಂಬಮುಮನುಳಿದು ಮಧ್ಯವೇಗದೊಳೋದುವ ವಾಚಕಶಕ್ತಿಯುಂ, ನುಡಿಯೊಳ್ ಪುದಿದರ್ಥಮಂಗಯ್ಯ ನೆಲ್ಲಿಯಕಾಯಂತೆ ತೋರ್ಪವೋಲ್ ಪದವಾಕ್ಯದ ವಿಚ್ಛಿತ್ತಿಯೊಳ್ನಿಲಿಸುವ ನೆಟ್ಟನೋದುವ ಅರ್ಥಾನುಗುಣಮಾಗಿ ಧ್ವನಿಯೊಳ್ಮೆಲ್ಪು ಬಲ್ಪು ನುಣ್ಪು ಬಿಣ್ಪುಗಳಂ ಸಮನಿಸುವೋದಾಳಿತನದೋಜೆಯುಂ, ಕೇಳ್ವ ಪುರುಳಂ

ಬಗೆಗೊಳಿಸಿ ಊಹಾಪೋಹಂಗೆಯ್ದು ಪ್ರಕರಣಕ್ಕಿದು ತಾತ್ಪರ್ಯಮೆಂಬುದಂ ನಿಶ್ಚಯಿಸಿ ಕುರುಪುಗೊಂಡು ಮರೆಯದೆ ನೆನೆದಿರ್ಪ ಧಾರಣಾಶಕ್ತಿಯುಂ, ಪೆರರ್ಗೆ ತಿಳಿಪುವೆಡೆಯೊಳ್ವದ ಪದಕ್ಕರ್ಥಮಂ ಬೇರ್ಪಡಿಸಿ ಬಿತ್ತರಿಸಿ ಪೆಂಪುಗೊಳಸಿಯುಂ ತಾತ್ಪರ್ಯಮನಿತಿನಿತುಮನೊಂದುಗೊಳಿಸಿಯೊಂದೆರಳ್ನುಡಿಯೊಳಡಕಂಗೆಯ್ದು ತಿಳಿಯೆ ಪೇಳ್ವರ್ಥಾಪಾದನ ಸಾಮರ್ಥ್ಯಮುಮಮತ್ಯದ್ಭುತಮಾಗಿರ್ಕುಂ. ಈ ಬುದ್ಧಿ ಕೌಶಲಮೆಲ್ಲಿಯುಂ ಕಂಡು ಕೇಳ್ದುದುಮಲ್ತು ಎಂದು ಪೊಗಳ್ದರ್.

ಪದವಾಕ್ಯಪ್ರಮಾಣಂಗಳನೋದಿಸುವರುಂ – ಚಿತ್ತವಿಪುದು ಮಹಾರಾಯಂ. ಈ ರಾಯಗುವರನೋದಿದೊಂದೊಂದುಂ ಪ್ರಕರಣಂಗಳೊಳ್ ಪೂರ್ವಪಕ್ಷ ಸಿದ್ಧಾಂತದ ಯುಕ್ತಿಗಳಿನಿತುಮಂ ಕ್ರೋಡೀಕರಿಸಿಯವರೊಳ್ವೊಟ್ಟುಗಳಂ ಕಳೆದು ಸಾರಂಗಳಂ ಸಂಗ್ರಹಿಸಿ ಅವರೊಳಮಿದು ಪ್ರಬಲಮಿದು ದುರ್ಬಲಮೆಂಬ ತಾರತಮ್ಯನಾರೈದು ಮೂಲಯುಕ್ತಿಗಳನೆ ಕುರುಪುಗೊಂಡಿರ್ಪ ಪಾಂಡಿತ್ಯಮಂ, ವಾದಕಥಾವಿನೋದದೊಳ್ ಪ್ರತಿವಾದದೊಳೆಸಗುವುಪನ್ಯಾಸಮನಾಲಿಸಿ ಅದರೊಳ್ ಪ್ರಕೃತೋಪಯೋಗಮಿಲ್ಲದ ಯುಕ್ತಿಗಳಂ ಬೇರ್ಪಡಿಸಿ ಕಳೆದು ಉಪಯುಕ್ತ ಮಾದುದರೊಳಂ ಸಾಧ್ಯಸಾಧನ ಸಮರ್ಥಂಗಳಲ್ಲಿ ಯುಕ್ತ್ಯಾಭಾಸಂಗಳಂ ಕಡೆಗಣಿಸಿ ಮೂಲಯುಕ್ತಿಯಂ ಕುರುಪುಗೊಂಡುದಂ ಪ್ರತಿಯುಕ್ತಿಯಿಂ ಜಯಿಸುವ ಕೌಶಲ ಮಂ, ಸ್ವಪಕ್ಷೋಪನ್ಯಾಸಂಗೆಯ್ವೆಡೆಯೊಳ್ ಪ್ರಕೃತಸಾಧ್ಯಸಾಧನದೊಳ್ಚೆರ್ಚು ಕುಂದುಮಿಲ್ಲದೆ ಸಮರ್ಥವಾದ ಮೂಲಯುಕ್ತಿಗಳನೆ ಪವಣ್ಗೆಯ್ದು ವಾದಿಯಂ ನಿರುತ್ತರಂಗೆಯ್ವ ನೈಪುಣ್ಯಂ ಮುಂತಾದ ಪಲವುಂ ವಾದಚಾತುರ್ಯಂಗಳಂ ಪೊಗಳ್ವೊಡೆನಿತಾನುಮೊಳವು. ಅವಂತಿರ್ಕೆ ಮುಂಬಗಳ್ ಅಮೋದಿಸಿದುದಂ ಮರುವಗಲ್ಕೇಳ್ವಿನಮವರೊಳೂಹಾಪೋಹಂಗೆಯ್ದು ತಾತ್ಪರ್ಯಮಂ ಗ್ರಹಿಸಿಯೊಳ್ಪುವಡಿಸಿ ತಿಳಿಯೆ ಪೇಳ್ವುದರಿಂದಧ್ಯಾಪಕಾಧ್ಯೈಕ ಭಾವಂ ಪಲ್ಲಟಮಾಗಿ ತೋರ್ಕುಮೆಂದು ಪೇಳ್ದು ಪೇರಚ್ಚರಿವಡಿಸಿದರ್.

ಪೌರಾಣಿಕರುಂ – ಆಮೋದುಗಲ್ತಂದು ಮೊದಲಿಂದುವರೆಗಂ ಪಲವುಂ ಪುರಾಣಂಗಳಂ ಪಲರ್ಮೆ ತಾಳಿಂ ತುದಿವರೆಗಮಾದ ಪಲವುಂ ವ್ಯಾಖ್ಯಾನಂಗಳಿಂ ದರ್ಥನಿಶ್ಚಯಂಗೆಯ್ದು ಪೆರರ್ಗೆ ಪಲವುಮಾವೃತ್ತಿಯೊಳ್ ಪೇಳ್ದಿರ್ಪವಾದೊಡಂ ಮಹಾದಾದಿಚತುರ್ಮುಖಾಂತಮಾದ ಸಮಷ್ಟಿಸೃಷ್ಟಿಯುಂ, ಅವನೊಡರ್ಚುವ ವ್ಯಷ್ಟಿ ಸೃಷ್ಟಿಯುಂ, ಮನ್ವಂತರಂಗಳಂ, ದೇವಮನುಷ್ಯಾದಿವಂಶಂಗಳಂ, ಆ ವಂಶದೊಳ್ ಪ್ರಸಿದ್ಧರಾದವರ ಪೆಸರ್ಗಳಂ, ಚರಿತಂಗಳಂ ತಿಳಿದಿರ್ಪುದಲ್ಲದೆ ಬಿತ್ತರದೊಳ್ ನೆನಪುದೋರದು. ಈ ಕುವರಂ ಸೃಷ್ಟಿಗೆಯ್ವ ನಾರಾಯಣ ನೆನಿಪ ಪರಬ್ರಹ್ಮದಿರವಂ, ಸೃಜಿಸಿದ ಪ್ರಕೃತಿಮಹದಹಂಕಾರಂಗಳುಂ ಪಂಚತನ್ಮಾತ್ರಗಳುಮೆಂಬೆಂಟುಂ ಪ್ರಕೃತಿಗಳುಂ ಏಕಾದಶೇಂದ್ರಿಯಂಗಳುಂ

ಪಂಚಮಹಾಭೂತಂಗಳುಮೆಂಬ ಪದಿನಾರುಂ ವಿಕಾರಂಗಳುಮೆಂಬಿರ್ಪತ್ತು ನಾಲ್ಕುಂ ತತ್ವಂಗಳ ಕ್ರಮಂಗಳಂ, ಅವರ ಗುಣಭೇದಂಗಳಂ, ಇವರಿಂ ಸಮೆದ ಅಜಾಂಡಮಂ, ಅದರೊಳೊಗೆದ ನಾಲ್ಮೊಗನ ತೆರನಂ, ಅವಂ ಪೊಣ್ಮಿಸಿದ ಮಾನಸಾಂಗಿಕ ಸೃಷ್ಟಿಭೇದಂಗಳಂ, ಅಲ್ಲಿ ಪುಟ್ಟಿದ ಸತ್ವರಜಸ್ತಮೋರೂಪಗುಣ ಭೇದಭಿನ್ನಂಗಳಾದ ದೇವಮನುಷ್ಯತಿರ್ಯಕ್‌ಸ್ಥಾವರರೂಪ ಪ್ರಾಣಿಗಳಂ, ಅವರೊಳ್ನವಪ್ರಜೇಶಮನ್ವಾದಿಗಳ ಮಿಥುನಸೃಷ್ಟಿಯಿಂದೊಗೆದ ವಂಶಭೇದಂಗಳಂ, ಅವರೊಳುದಿಸಿದ ದೇವತೆಗಳ ಋಷಿಗಳ ರಾಯರ ಪೆಸರ್ಗಳಂ, ಅವರವರೀ ಕಾಲದೊಳೀದೇಶದೊಳೀವೂರುಗಳೊಳಿರ್ದೀಚರಿತ್ರಂಗಳನೆಸಗಿದರೆಂಬುದಂ, ಅವನಿತರ್ಕಂ ಆಧಾರಮಾದ ಪದಿನಾಲ್ಕುಂ ಲೋಕಂಗಳ ವಿಸ್ತಾರಮಂ, ಅದರೊಳ್ ಭೂಲೋಕದ ಪಲವುಂ ದೀವಿಗಳೊಳಿರ್ಪ ಭೋಗಭೂಮಿಗಳಂ, ಪೊಳೆವೆಟ್ಟು ಗಳೊಳಂ ಮಂಜುವೆಟ್ಟಿನಿಂ ತೆಂಕಣ ಕಡಲ್ವರೆಗಮಗಲಮಾಗಿ ಮೂಡ ಪಡುವಣ ಮುನ್ನೀರ್ವರೆಗಂ ನೀಳ್ದ ಭಾರತವರ್ಷದೊಳೀ ಯೆಡೆಯೊಳೀಗಟ್ಟಮಿಾ ಬೆಟ್ಟುಗಳೀ ಪೊಳೆಗಳ್ ಪೊಳಲ್ಗಳ್ ಇವನಾಳ್ದ ದೊರೆಗಳ ಪೆಸರಿದಿವರ ಸಾಸಮಿದು ಇವರಾಳ್ದ ಕಾಲಮಿನಿತೀಗಟ್ಟ ಬೆಟ್ಟುಪಟ್ಟಣ ಪೊಳೆಗಳೊಂದರ್ಕೊಂದಿನಿತಿನಿತು ಗಾವುದ ದೊಳಿರ್ಕುಮೆಂಬಿವು ಮುಂತಾದ ವಿಶೇಷಂಗಳನಿತುಮಂ, ತತ್ತತ್ಪುರಾಣಂಗಳ ಸೂಕ್ಷ್ಮಾರ್ಥ ಗ್ರಹಣದಿಂದೆಯುಂ ಆಯಾ ನೆಲೆಗಳಂ ಬಲ್ಲವರಿಂದೆಯುಂ ತಿಳಿದು ಬಗೆಯೊಳ್ವಂದಿವಿಡಿದುಮದರೊಳೇನಾನುಮೊಂದು ಸಂದೆಯಂ ತೋರಿ ಬಂದೆಮ್ಮಂ ಬೆಸಗೊಳ್ವನಂ ಎಮಗೆ ನೆನೆಪಿಲ್ಲದಿರ್ದೊಡಂ ಪೆರ್ಮೆಯಿಂ ದೊಳಗುಗುಡದೆ ಇದಂ ಪಿಂತಣ್ಗೆ ಪೇಳ್ದೆವೆಂದುಂ ಮುಂತಣ್ಗೆ ಪೇಳ್ವೆವೆಂದುಂ ಈ ತೆರದ ಬರಿಸಂದೆಯಮಂ ಕೇಳಲಾಗದೆಂದುಂ ಕೆಕ್ಕರಿಸಿ ನೋಡಿಯುಂ ಬೆದರಿಸಿ ನುಡಿದುಂ ದಂಧನಂಗೆಯ್ದುಂ ಕಾಲಮಂ ಕಳೆವೆವು ಎಮಗಿನ್ನು ತೆರನಾವುದೆಂದೊರೆದಾನಂದಂ ಬಡಿಸಿದರ್.

ವೈಣಿಕರ್ – ತಮ್ಮ ಜನ್ಮಂಗಳಿಂದು ಸಫಲಮಾದುವು; ವೀಣಾವಾದ್ಯ ಮನವದ್ಯಮೆಂಬುದಿಂದು ನಿಶ್ಚಿತಮಾದುದು; ಗಾನಂ ಮನೋಹಾರಿಯೆಂಬು ದನುಭವಕ್ಕೆ ಬಂದುದು; ರೈವತಕರಾಯಂ ಬ್ರಹ್ಮಸಭೆಯೊಳ್ಗಾಂಧರ್ವಮನಾಲಿಸುತ್ತೆ ಪೋದ ಪೊಳ್ತರಿಯದಾದೆನೆಂಬುದುಂ ಯುಕ್ತಮೆನಿಸಿಪು[೯*]ದು; ಗೋಕುಲದೊಳ್ ಕೃಷ್ಣಂ ಕೊಳಲ್ಗೊಳ್ವಿನಮಾದನಿಯಂ ಸವಿದು ಮೆಯ್ಮರೆದು ಪಸುಪುಲಿಗಳಾನೆ ಸಿಂಗಂಗಳ್ಮೊದಲಾದುವು ತಮ್ಮ ತಮ್ಮ ಬಿಗುರ್ಪು ಬೇರಂಗಳನುಳಿದೊಂದು ವೆರಸಿರ್ಪು ವು; ಅಚ್ಚರಸಿಯರುಮಚ್ಚರಿವಡೆದು ಗೋವಳಗನ್ನೆಯರೊಡನೆಳ್ಚರೊಳಿರ್ಪರ್; ಮರಂಗಳುಂ ಮಾನಿಸರಂತೆ ನಪಿರ್ದಳೆದಿರ್ಪುವೆಂಬಿವುಂ ಕರಬದರ ಸದೃಶಮಾದು ವು. ಈ ಅತಿಶಯಮನಿತೆಂದು ಬಣ್ಣಿಪೆವು; ಬಿಜ್ಜೆವನೆಯೊಳ್ಕವರಂ ಬೀಣೆಗೊಳ್ವನಮನಿತುಂ ತಂತಿಗಳೊಳಂ ಕೊರಲೊಳವೊಂದೆ ನುಣ್ದನಿ ಪೊಣ್ಮಿತೆಂಬಂತೆ ಕೂಡಿದ ಶ್ರುತಿಯ ಸೊಬಗುಂ, ಕತ್ತುರಿಯ ವೀಣೆಯಂ

ಬಿರ್ಚಿದೊಡನುಣ್ಮುವ ತನಿಗಂಪಿನಂತೆ ಗಮ್ಮನೆ ಕವಿವ ನಾದಮುಂ, ಗಿಳಿಮೂಗಂ ಪೋಲ್ವ ಬಲಗೆಯ್ಯುಗುರ್ಗಳಿಂ ತಂತಿಗಳಂ ಪಿಡಿವ ಮಿಾಂಟುವ ಸೈಪಿನಿಂದೆಯುಂ ಪೆರಗೆಯ್ವೆರಲ್ಗಳೊಳಾಹತ ಪ್ರತ್ಯಾಹತ ಸ್ಫುರಿತ ಕಂಪಿತಾದಿ ಗಮಕಂಗಳಂ ಪವಣ್ಗೆಯ್ವ ಚಾತುರ್ಯದಿಂದೆಯುಂ ಸ್ವರಂಗಳ್ತಕ್ಕತಕ್ಕೆಡೆಯೊಳ್ ಮೆಲ್ಪುಂ ಬಲ್ಪುಂ ನುಣ್ಪುಂ ಬಿಣ್ಪುಂ ಪಡೆದು ಒಳ್ವಡದಿಯೊಡಲಂತೆಲ್ಲೆಡೆಯೊಳಂ ಚೆಲ್ವುವೆತ್ತು ಮನಂಗೊಳಿಸುವುವು. ಕ್ರಮದೊಳೊಂದರ್ಕೊಂದು ಪೆರ್ಚುಗೆವಡೆದು ಬಳೆವ ತಾನಂಗಳ್ ತತ್ತದುಚಿತ ಸ್ಥಾನಂಗಳೊಳ್ಬಿಗುಪೇರುವ ತೂಗುವ ತೊನೆವ ನಯಂಬಡೆವ ನಿಡಿದೆನಿಸುವ ಸೊಂಪುಗೊಳುವ ಪೆಂಪುವಡೆವ ಜೀವಸ್ವರಂಗಳೊಳ್ ನಿಂತು ನಿಂತು ನೆರವೇರುವ ಸೊಗಸು ನಿರವಿಸಲರಿದು. ಮತ್ತಮಾನಾದಂ ಬಿಜ್ಜೆವನೆಯೊಳ್ ಬಂದು ನಲಿದು ನರ್ತಿಸುವ ಸರಸತಿಯ ಕಾಲಂದುಗೆ ಕಿರುಗೆಜ್ಜೆಗಳಿಂ ದನಿಯಂ ಅವಳ ಮುಂಗೆಯ್ಯೊಳಿರ್ದು ನುಡಿವರಗಿಳಿಯ ಮುದ್ದುದನಿಯುಂ, ಕನ್ನೆವುರದ ಚೆನ್ನೆಯ್ದಿಲಿಂದೊಸರ್ವಿನಿರಸಕ್ಕೆ ಮುಸುಱುವ ಪೆಣ್ದುಂಬಿಗಳ ನುಣ್ದನಿಯುಮೊಂದುವರೆದು ಮುಪ್ಪುರಿಗೊಂಡಂತೆ ಮೋಹರಂ ಬಡೆದಿರ್ಕುಂ: ಅದೇಂ ವಿಚಿತ್ರಮೋ, ತಂತಿಯನಲೆಗೆಯ್ದುವೆರಲ್ಗಳ್ ಅಂದು ಹೃದಯದಾನಂದದ ನಾಡಿಗಳೊಳಾಡುವಂತೆ ಮನಮಂ ಸೋಲಿಸಿ ಸೊರಗಿಸಿ ಸೊರ್ಕೇರಿಸಿ ಸೊಗಂಬಡಿಸೆ ಆಮುಮಲುಗದಂಗಮುಮಾಡದೆಮೆಯುಮಾಗಿ ಚಿತ್ರಿಸಿದಂತಿರ್ದುಂ ಪೊಣ್ಮುವ ನವಿರಿಂದೆಯುಂ ಪೊನಲಿಡುವಾಲಿನೀರಿಂದೆಯುಂ ಬಿಗಿವ ಕೊರಲ ಸೆರೆಗಳಿಂದೆಯುಂ ಬಿಡದೆ ಕಿವಿವಾಂಯೊಳ್ಕಾಪುಗೊಂಡಿರ್ಪ ಮನೋವೃತ್ತಿಯಿಂದೆಯುಂ ಚೇತನರೆನಿಸಿರ್ಪವು. ಕಿವಿವೆಡೆಯೊಳ್ತುಂಬಿದ ನಾದಮೆರ್ದೆಗಿಳಿದು ಹೃತ್ಕಮಲಮಂ ವ್ಯಾಪಿಸೆ ಚೈತನ್ಯಂ ತದಾತ್ಮಕಮಾಗಿ ಪರಿಣತಮಾದುದರಿಂದ ಪ್ರಪಂಚಮನಿತುಂ ನಾದಮಯಮಾಗಿ ತೋರ್ಪುದು. ಬೇರಂ ತುದಿಯಂ ಬಿರಿದುದಂ ಬೆಂಡಾದುದಂ ಕಳೆದಾಯ್ದು ಪೊರೆಯೆತ್ತಿದೊಳ್ಗರ್ಬಿನ ಸೀಯುಂ, ಪಿರಿದುಂ ಕಾಸಿ ಸಕ್ಕರೆವೆರಸಿದ ಚೆಲುವಾಲ ಸವಿಯುಂ, ಆಗಳಳಿದು ತಂದು ಪಿಳಿದು ಪೊಸಜೇನ ಸರಿಯಿಂಪುಂ, ಕಾಲದೊಳ್ಮೊಹರಿಸಿ ಬಳೆದು ಪದದೊಳ್ಪಣ್ತಿನಿದೆನಿಸಿ ನೆಗಳ್ದ ಮಾವಂಣಿನ ಮಾಧುರ್ಯಮುಮಿದರ ಸಾಸಿರದ ಸಾಸಿರದೊಳೊಂದುಂ ಪಾಲಿಂಗೆ ಬಾರದು. ನಾದಮಾಗಿಯುಂ ಕಿವಿಯೊಂದರೊಳೆ ಸಂದಿರ್ಪುದಲ್ತು, ಸಕಲೇಂದ್ರಿಯಂಗಳನೊಂದೆ ವೇಳೆಯೊಳಾನಂದ ಸಾಗರದೊಳ್ಮುಳುಂಗಿಪುದು. ಸುಗ್ಗಿಯೊಳ್ಪೂತ ಮಲ್ಲಿಗೆಯ ಪೊಸಪೂದೊಂಬೆಯೊಳ್ ಪೊದಳ್ದು ಪೊಣ್ಮುವ ತನಿಗಂಪಿನಂತೆಯುಂ, ಆ ಕಂಪಂ ಕವರ್ದು ಸೊರ್ಕಿ ಸುತ್ತುಂಪರಿವ ತುಂಬಿಗಳೆರಂಕೆವೊಯ್ಲಿಂ ಮುಂ ಬಾವನ್ನಗಾಡೊಳ್ ಪಾವುಗಳ್ ನುಂಗಿದುದರಿಂ ಬಡತನಮಂ ಕಳೆದು ಬಳೆದು ಮಾಂದೋಪಿನೊಳ್ ಸುರಿವ ಪೂಜೇನ ಸರಿಯೊಳ್ನನೆದೊಯ್ಯನೆ ತೀಡುವ ತೆಂಗಾಳಿಯ ಸೋಂಕಿನಂತೆಯುಂ, ಆ ಸೋಂಕಿನಿಂ ಮುಂ ಬಗೆಯೊಳೊಗೆದ ಮದನಾಗ್ನಿ ದಳ್ಳುರಿಗೊಂಡು

ಪೊರಪೊಣ್ಮೆವಿನಮದರ್ಕೆ ತಳಿರ್ದೊಂಬೆಗಳಂ ತಾವರೆದಂಟುಗಳಂ ಪೊತ್ತುಂ ಪನ್ನೀರೊಳ್ನೆದುಂ ಮಲರ್ವಾಸಿನೊಳ್ಪೊರಳ್ದುಂ ತಣ್ಬುಗಾಣದ ಬಿರಯಿಗಳಾವಿರಹಂ ಕಳಿದೊಡಗೂಡುವಾಗಳ್ತಮ್ಮ ತಮ್ಮ ಮೆಯ್ಬಿಸುಪಡಂಗಿ ತಣ್ಬುಗೊಳ್ವವರೆಗಂ ತಮ್ಮ ತಮ್ಮ ತೋಳ್ಗಳ್ತಣಿವ ವರೆಗಂ ಮಿಕ್ಕುದೇಂ ಪೊಳ್ತರೆವರೆಗಮಳ್ಕರಿಂ ದೆಸಗುವ ತಕ್ಕೆಂಯೊಳ್ಮತ್ತೆಮತ್ತೇರುವ ಬಿಗುಪಿನಂತೆಯುಂ ಸೊಗವುಂ ಸೂರೆಗುಡುತಿರ್ಪ್ಪುದು. ಎಂತಪ್ಪ ಕಲ್ಲೆರ್ದೆಯವರಾದೊಡಂ ಈತಾನಮನಾಲಿಸುವಿನಂ ಪಗಲಂ ಕಂಡ ಜಕ್ಕವಕ್ಕಿಯಂತೆಯುಂ, ಜೊನ್ನಮಮಿಾಂಟುವ ಚಕೋರದಂತೆಯುಂ, ಕಾರ್ಗಾಲದ ಸೋಗೆಯಂತೆಯುಂ, ಮುಂಬನಿಯುಂಡ ಚಾದಗೆಯಂತೆಯುಂ, ನಿಧಿಯಂ ಕಂಡ ಬಡವನಂತೆಯುಂ, ವರಮಂ ಪಡೆದ ತಪಸ್ವಿಯಂತೆಯುಂ, ಸಿದ್ಧಿಯಂ ಪಡೆದ ಯೋಗಿಯಂತೆಯುಂ, ಇಷ್ಟದೇವತಾ ಸಾಕ್ಷಾತ್ಕಾರಮಂ ಪಡೆದುಪಾಸಕನಂತೆಯುಂ, ನಲಿದು ನಲವೇರಿ ಪಿಳ್ಗಿ ಪೆರ್ಕಳಂಗೊಂಡು ಸೊರ್ಕಿ ಸೊರಗುವರ್. ಮೆಲ್ಲೆರ್ದೆಯವರಾಲಿಸಿದೊಡಾಲಿಸುವ ಮುನ್ನಮೆ ಮನಂಗರಗಿ ಹರವಸಗೊಂಡೆಸೆಗತಕ್ಕುದಿದು ಮಿಕ್ಕುದಿದೆಂಬ ವಿವೇಕಮನುಳಿದು ರಸಾವೇಶದಿಂದೀತಾನದ ಸವಿಯಂ ಸೇರೆಯೊಳ್ಕೊಗೆ ಮೊಗೆದೀಂಟಲುಂ ಮೆಯ್ಗೆಲ್ಲ ಮನಣ್ಬುಗೊಳಲುಂ ಮುಡಿಗೆ ಸೂಡಲುಂ ಕಿವಿವೊಡೆಯೊಳ್ತುಂಬಿಕೊಳಲು ಮೆಳಸಿದಂತೆ ಪಲವುಂ ಕೋಟಲೆಗೊಳ್ವರ್. ಅದವರ ತಪ್ಪಲ್ತು. ಬೆಳ್ವುಮಾಸದ ಪೊಚ್ಚ ಪೊಸಪೂಗಳಂ ಪವಣ್ಗೊಳಿಸಿ ಕೋದೆತ್ತಿದ ವಕುಳಸ್ವರದಂತೆಯುಂ, ಸವಣದೊಳೀಳ್ದ ಪೊಸಮಿಸುನಿಯ ಸಲಗೆಯಂತೆಯುಂ, ಎಡೆವರಿಯದೊಂದೆ ತೆರದೊಳ್ಸುರಿವ ಪೊಸಜೇನ ಪೊನಲಂತೆಯುಮಾದ್ಯಂತದೊಳೇಕನಾದಮೆನಿಸುವ ತಾನದ ಸವಿಯು ಬಲ್ಪಿನ ತಪ್ಪೆಂದು ತಿಳಿಯುವೇಳ್ವುದು. ಈಗಳೀ ಮಾನವಲೋಕದೊಳ್ನೆಗ[ಳ್ತೆ*]ವೆತ್ತ ವೀಣೆಗಾರರುಂ ಮುನ್ನಿರ್ದವರುಮಿಾ ತೆರದೊಳ್ಬಿಗುಪ್ರಮೊಲವಂ ಕಳೆಯುಂ ನಾದಮುಂ ಪೊಸವಗೆಯ ತಾನಂಗಳಂ ಸಂದರ್ಭಿಸಿದುದಿಲ್ಲೆಂಬುದು ವಿದಿತಮ್ಮೈಸೆ. ಕಿನ್ನರರುಂ ಗಂಧರ್ವರುಂ ಅವರೊಳ್ ಪೊಗಳ್ತೆವೆತ್ತ ಹಾಹಾಹೂಹೂ ಪ್ರಭೃತಿಗಳುಂ ತುಂಬುರು ನಾರದರುಂ ಆ ಸರಸ್ವತಿ ತಾನುಂ ಪವಣಿಸಿದುದಿಲ್ಲೆಂಬುದುಂ ನಿಕ್ಕುವಂ. ಮೇಣುಂಟಾದೊಡೆ ನಾಡೊಳ್ನೆಗಳ್ತೆವಡೆಯದಿರ್ಕುಮೆ; ಅನಾದಿಕಾಲದೊಳಿಲ್ಲದ ಸಾಹಿತ್ಯದ ರಕ್ತಿ ವಿಶೇಷಂ ವಾಲ್ಮೀಕಿಯಿನುಣ್ಮಿದಂತೆ, ಸಂಗೀತದ ರಕ್ತಿವಿಶೇಷಮುಮಿಾಗಳೀ ರಾಯುಗುವರನಿಂ ಪೊಣ್ಮಿದುದು. ಮುಂ ಸ್ವರಭೇದಮಂ ಲಯಭೇದಮಂ ರಾಗಭೇದಮನರ[ಯ*]ದ ಪಸುಗಳಂ ಪೊಮ್ಮರಿಯುಂ ಮೊಸಗೊಂಡುದು ಬಿಜ್ಜೆಯ ಬಿನ್ನಣಮುಳ್ಳೆಂದಾಕೃಷ್ಣನೀಗಳೀ ಪೊಸವರಿಜಿನೊಳ್ಬಿಜ್ಜೆವಳರನಿಬರು ಮಚ್ಚರಿ ಪಡುವಂತಾನಂದಲತಾಪ್ರತಾನಂಗಳೆನಿಪ ತಾನಂಗಳಂ ಬಿತ್ತರಿಸಿದಂ: ಅಲ್ಲದೊಡಿವು ಗಾಂಧರ್ವಾಸ್ತ್ರಮಂತ್ರದಂತನಿಬರಂ ಮರವಡಸಿ ಮೆಯ್ಮರೆಯಿಸುವ

ತೆರನಾವುದೀ ಜಗನ್ಮೋಹನಮಾದ ತಾನದಿರವಿಂತಿರ್ಕೆ. ಈ ರಾಯಗುವರಂ ವೀಣೆಯಂ ಬಾಜಿಸಲ್ಪೊಣ್ದ ತಾಣಕಮುಮಾಮೆಯ್ಸಿರಿಯುಮಾಮೊಗರಸಮುಮೆನ್ನಯ ನಯನಾನಂದಮಾಗಿರ್ಪುದು. ಸಂತಸದೊಳೊಯ್ಯನೆ ಕೈಯೊಳ್ಪಿಡಿದೊತ್ತಿಗೆ ಬಳಿಸಿ ತೊಡೆಯ ಮೇಲಿರಿಸಿ ಪೇರೆರ್ದೆಯಂ ಸಾರ್ಚಿ ನೇಹಂಬೆರಸು ಮೆಯ್ದುಡಹಿ ರಾಗಾಲಾಪನಂ ಗೆಯ್ಯಿಸಿಯಾಲಿಸುತ್ತಲರ್ಪ ಮೊಗಮುಂ ಅಲೆವ ಕಣ್ಣುಂ ಸುರಿವಾಲಿನೀರುಮಾಗಿ ತಕ್ಕೆಡೆಗಳನುಗುರ್ಗ್ಗಳಿಂದೊತ್ತುವ ಸೈಪುಂ ಆ ಕಳಾವತಿವೀಣೆ ಜಯಲಕ್ಷ್ಮಿಯಂತಿವನ ಭುಜಸಂಗದಿಂ ಸೊರ್ಕ್ಕಿ ಕಳರವ್ಪೋದಾರಮಾದ ನಾದಂಗಳನೊ [ದ*]ವಿಪ ಸೊಗಸುಮಂ ನಿರವಿಸಿ, ಸಾಕ್ಷಾತ್ಕೃಷ್ಣಾವತಾರಮೆಂಬುದೇ ನಿಶ್ಚಿತಂ ಎಂದು ಬಿನ್ನವಿಸಿಯಾನಂದಂಬಡಿಸಿದರ್.

ಗರುಡಿಯೊಳ್ ಸಾದಕಮಂ ಕಲಿಸುವ ಜಟ್ಟಿಗಳ್ – ಚಿತ್ತವಿಪುದು ಮಹಾರಾಯಂ. ಗರುಡಿಯೊಳನಿಬರುಂ ತಾಂತಾಮೆಸಗುವ ಸಾದಕಂಗಳನುಳಿದು ಚಿತ್ತರದ ಬೊಂಬೆಗಳಂತೆ ನೆಟ್ಟಾಲಿಯನಲುಗದೆ ನಿಟ್ಟಿಸುತ್ತಿರೆ – ಈ ರಾಯಗುವರಂ ಕಂಬ ಕೋಣತಂಗಳಂ ಲಾಲಿಸುವ ಚಳಕಮುಂ, ಆನೆಯ ಸೊಂಡಿಲಂತೆಯುಂ ಪೆರ್ಬಾವಿನಂತೆಯುಂ ಪತ್ತಿಸುತ್ತಿ ಬಿಗುಪೇರುವ ತೋಳ್ತೊಡೆಗಳ ದೇಸೆಯುಂ ಮತ್ತಂ ಸಂಗರಣಂಗಳನೆತ್ತುವೆಡೆಯೊಳ್ ಗೋವರ್ಧನಮನೆತ್ತಿ ನಿಂದ ಆ ಗೋಪಾಲನ ಪಾಂಗಿನೊಳ್ತೊಳಪ ಮೊಗಮುಂ ತೋರ್ಪ ಪೇರೆರ್ದೆಯುಂ, ಒಯ್ಯಾರದೊಳೂರಿದ ಸಿರಿಯಡಿಗಳುಮಾಗಿ ನಿಂದ ನೆಲೆಯೊಳೊಂದೊಂದು ತೋಳ್ಗಳಂ ತಿರುಗಿಸಿ ನೆಗಪುವ ಸೈಪಿನಿಂದೆ ಎಡಬಲದೊಳಿನಿಸಿನಿಸುಂ ಮುರಿಗೊಂಬಸಿನಡುವುಮೊಸರಿಸುವ ಮೆಯ್ಯುಂ, ಒಲೆವ ಕೊರಲುಮಾದ ಮೆಯ್ಸಿರಿ ಜಟ್ಟಿಗರುಡಿಗಳೊಳಂ ನಟ್ಟುವ ಗರುಡಿಗಳೊಳಂ ಕಂಡುದಲ್ತು; ನಿಟ್ಟಿಪರ ದಿಟ್ಟಿಗಳಲ್ಲಿಯೆ ನೆಟ್ಟಂತೆ ನೆಲೆಗೊಂಬುವು. ಆ ರೇಖೆಯುಮಾತಾಣಕಮುಂ ಜಗನ್ಮೋಹನಮಾಗಿರ್ಪುವು. ಆದೊಡಮವರಿಂ ಕಾಳೆಗಕ್ಕುಪಕಾರಮಿಲ್ಲೆಂಬುದರಿಂದವಂ ಬಿತ್ತರಿಸದುಳಿಪಿ ಬೇಳ್ಪ ಮೆಯ್ಯ ಬಲ್ಪಂ ದಿಟ್ಟಿಯಸುಯ್ದಾನಮಂ ಗೆಯ್ಮೆಯ ಚಳಕಮಂ ನಿರವಿಸಲ್ಕವು ಲೋಕಾತೀತವಾಗಿರ್ಪುವು. ಇವರ್ಮಡಿ ಬಲ್ಮೆಗಾರರಂ ಕಳಿದು ಕೀಳ್ಗೆಯ್ವುದರಿಂ ಹಂತಕಾರಿಗಳನಿಬರುಂ ಪಿಂದೆಗೆಯೆ, ರೋಸದಿಂದೊರ್ಮ್ಮೆ ಜಗಜಟ್ಟಿಯಿದಿರ್ಚಿಮುಂ ಮಧುರೆಯೊಳ್ ಕುವಲಯಾಪೀಡಕ್ಕಂ ಚಾಣೂರಂಗಂ ಮಾರ್ಮಲೆತಂತೆ ದಂಡೆಯಂ ಪೂಡಿ ಸಾಧಕದೊದವಂ ಮರೆವುತ್ತೆಡಕ್ಕಂ ಬಲಕ್ಕಂ ಪಿನ್ತಣ್ಗಂ ಒಯ್ಯನೊಂದೊಂದು ಪಜ್ಜೆಯಂ ತೆಗೆದಾಸೆಯಂ ಕೊಟ್ಟು, ಮೇಣವಂ ಕವಿದು ಬರ್ಪುದುಮಿದಿರ್ಚಿ ನಿಂದು ಚಳಕದೊಳ್ ಪುಸಿಗೆಯ್ಯಂ ತೋರೆ, ಅದರ್ಕವಂ ತನ್ನುಳ್ಳ ಬಲ್ಪನಿತರೊಳಂ ಮುಂತಣ್ಗೆ ನಿಂತುಂಬುಗೆಯ್ಯಿಕ್ಕುವಿನಂ, ಮುಂ ಕುವಲಯಾಪೀಡದ ಕೋಡಂ ಪೊರತಟ್ಟಿದಂತೆ ತಪ್ಪಿಸಿ ತನ್ನ ಕೈದಳಮಂ ಅವನ ಮೊಗಕ್ಕೆ ಸಾರ್ಚುವಿನಂ ಅವನ ಬಲ್ಮೆಯವಂಗೆ ಪಗೆಯಾಗಿ ಮೂಗಿನ ಸೆರೆಯೊಡೆದು

ಪೊಸನೆತ್ತರ್ಪೊನಲಿಡೆ ಥೆಂಥೆಣಿಸಿ ಪಿಂತಣ್ಗೆ ಸರಿದು ಗೋಡೆಯಂ ನೆಮ್ಮಿನಿಂದು ಬವಣಿಗಳೆದಚ್ಚರಿಟ್ಟು ಕೈಮುಗಿದು ಕಾಲ್ಗೆಱಗಿ ಸಾಕ್ಷಾತ್ಕೃಷ್ಣನೆಂದು. ನಿರವಿಸಿ ನಾಣ್ಚದೆ ನಲವೇರಿದಂ. ಮತ್ತಮೊರ್ವ ನಡುಗರುಡಿಯ ಪೂಜೆಯ ಬಿರುದಿನ ಕೈಮೆಗಾರನೊರ್ವಂ ತನ್ನೊಡಲ ಪೆರ್ಮೆಯಂ ಕೈಮೆಯ ಬಲ್ಪಂ ನಂಬಿ ಪೆಣಗಲ್ಕೆಂದು ಕೆಮ್ಮಣ್ಣಕಳನಂ ಪೊಕ್ಕುಸರಿಬಿತ್ತರದೊಳ್ ನಿಲ್ವಿನಂ, ಪಾರುಗಟ್ಟಿಗೆಯವನುರ್ಬಿನೊಳೆರಗುವ ಸೊರ್ಕಾನೆಯ ನಿಗ್ಗವಕ್ಕೆರ್ದೆಯೊಡ್ಡಿ ಸೋಂಕದ ಮುನ್ನಮೆಯೊರ್ಮೆಯ್ಯೊಳೊಲೆದು ತಪ್ಪಿಸಿ ಎಡಗೆಡಪುವಂತೆ ಕೆಡಪಿ ಬೆನ್ನೇರಿಯುರಾಟದೊಳ್ಬಿಗಿದು ತನ್ನ ಸಾದಕದ ಚಳಕಮಂ ಮೆರೆಯಲ್ಕೆ ಸಡಿಲವಿತ್ತದನವಂ ನೂಂಕುವನಿತರೊಳೆ ಪೆರತೊಂದರಿಂ ಪೆರತೊಂದೀ ತೆರದೊಳೊಂದೆರಳ್ಗಳಿಗೆವರೆಗಂ ಪತ್ತಿದ ಮೆಯ್ಬಿರ್ಚದೆ ಬಳಲ್ಚಿ ಬಸವಳಿಸಿ ಕಡೆಯೊಳ್ ಡೊಕ್ಕರದೊಳ್ಬಿಗುಪೇರಿಸುವುದುಂ; ಅವನುಂ ಕವಿವ ಕಣ್ಗಳ್ತಲೆಯುಂ ಸಡಿಲ್ದ ಕೈಕಾಲ್ಗಳುಮಾಗಿಯೆ ಮರೆತೊರಗಿದಂ. ಇದನೀ ಗರುಡಿವೊಕ್ಕರನಿಬರುಂ ಅರಿತಿರ್ಪ್ಪರ್. ಈ ನುಡಿಗಳೊಳೇನಾನುಂ ಇಚ್ಚಕಂ ಬೆರಸಿರ್ಪುದೆಂದು ತಿಳಿಯಲ್ತಕ್ಕುದಲ್ತು. ಈಯರ್ಥದೊಳೆಮ್ಮ ಕುಲದೇವತೆ ನಿಂಬಜೆಯಡಿಗಳುಮೆಮ್ಮ ಗರುಡಿಯ ಕೃಷ್ಣನಡಿಗಳುಮೆ ಸಾಕ್ಷಿ ಎಂದು ತಿಳುಪಿದರ್.

ಇಂತು ನುಡಿವ ಪಲವುಂ ಬಿಜ್ಜವಳರ ನುಡಿಗಳಿಂದುರ್ಕುವ ಸಂತಸದ ಸೊರ್ಕಿನೊಳ್ಕೆರ್ಕಳಗೊಂಡು ಒಡನೆಳ್ಚರದೊಳಚ್ಚರಿವಡುತ್ತಾಳೋಚಿಸಿದಂ: ಲೋಗರೊಂದು ವಸ್ತುವನುತ್ತಮವೆಂದು ತಿಳಿದದರ ಗುಣಂಗಳ್ಗೆ [ಸಂತ*] ಸಂಬಡುತ್ತಿರ್ದೊಡಂ, ಆ ವಸ್ತುವಿನೊಳ್ವಿಶೇಷಸಂಬಂಧಮಾದವರ್ಗೆ ಸಂತ ಸಮುಮತಿಶಯಮಾಗಿರ್ಪುದೆಂಬುದಪರೋಕ್ಷಮಾದುದು. ಸಸಿನೇಸರ್ಗಳುಂ ಕಾರ್ಮುಗಿಲುಂ ಜಗದಾನಂದಕರಂಗಳಾದೊಡಂ ಎಣೆವಕ್ಕಿಗಂ ತಣ್ಗದಿರ್ವಕ್ಕಿಗಂ ಸೋಗೆಗಂ ಸಂತಸಂ ಪಿರಿದಪ್ಪುದೆಂಬುದುಂ ಯುಕ್ತಮೆನಿಸಿದುದು. ಭಾರ್ಗವರಾಮಂ ದಿಗ್ವಿಜಯಂಗೆಯ್ದನೆನೆ ಪಾರ್ವರುಂ, ರಘುರಾಮಂ ನೆಗಳ್ತೆವೆತ್ತನೆನೆ ಎಮ್ಮರಮಕ್ಕಳುಂ ಪೆರ್ಕಳಂಗೊಂಬುದು ತಕ್ಕುದೆನಿಸಿದುದು. ರಾವಣಂ ಸೀತಾದೇವಿಯರಂ ಕೊಂಡೊಯ್ದನೆನೆ ಕುಲಶೇಖರಂ ದಂಡೆತ್ತಿದನೆಂಬುದುಮುಪಪನ್ನಮೆನಿಸಿದುದು. ಕೃಷ್ಣಂ ಬೆಣ್ಣೆಗಳವಿನೊಳ್ಕಡೆದಾವಿಂದೊರಲೊಳ್ಕಟ್ಟುವಡೆದನೆಂಬುದನೆರ್ದೆಗೊಳಿಸಿ ಪರಾಂಕುಶಂ ಮೋಹಂಬಡೆದನೆಂಬುದುಚಿತಮಾದುದು. ಶ್ರೀಮನ್ನಾರಾಯಣಂ ಸರ್ವಜ್ಞಂ ಸರ್ವಶಕ್ತಂಸಕಲವಿದ್ಯಾಪ್ರವರ್ತ್ತಕನೆಂಬುದಂ ತಿಳಿದಿ ರ್ದೊಡಮಿಾಯವತಾರ ದೊಳ್ ಬಿಜ್ಜೆಗಲ್ತಂ ವಿನಯಂ ಬಡೆದಂ ಬೀರನೆನಿಸಿದಂ ಪೆಂಪುವಡೆದನೆಂದು ಪೇಳ್ವೊಡಮಚ್ಚರಿಯುಮಾನಂದಮುಂ ಸಂದಣಿಸುತ್ತಿದೆ. ರಕ್ಷ್ಯರಕ್ಷಕ ಭಾವಂ ಮೊದಲಾದ ಪಲವುಮದೃಷ್ಟಸಂಬಂಧಂಗಳತ್ತಣಿಂದೀ ಪಿತೃಪುತ್ರಭಾವರೂಪಮಾದ ದೃಷ್ಟಸಂಬಂಧಮೆ ಪ್ರೀತಿವಿಶೇಷಹೇತುವಾದುದರಿಂ ಶ್ಲಾಘ್ಯಮಾದುದು. ಅದರಿಂದೈಸೆ

ಶುಕ ವ್ಯಾಸ ಪರಾಶರಾದಿಗಳುಂ ತಮ್ಮ ಋಷಿಜನ್ಮಮಂ ಕಡೆಗಣಿಸಿ ಕುಂದಕದಂಬಗೋಪಿಕಾದಿ ಜನ್ಮಂಗಳನೆಳಸಿದರ್. ಅದರಿಂದಾನುಮೆನ್ನ ಕುಲದೇವತೆಯೆಂಬುದಂ ಕೂರದೆ ಕುವರನೆಂದೇ ಕೊಂಡಾಡುವೆನೆಂದು ನಿಶ್ಚಯಿಂಗೆಯ್ದು ನಂದನಂತಾನಂದದೊಳಿರ್ದ್ದರ್.

ಮತ್ತಮಾ ರಾಯಗುವರಂ ಧರ್ಮಶಾಸ್ತ್ರದೊಳಂ ರಾಜನೀತಿಯೊಳಂ ಬಿಲ್ಕತ್ತಿ ಮೊದಲಾದ ಪಲವುಂ ಕೈದುಗೈಯ್ಮೆಯೊಳಂ, ಆನೆ ಕುದುರೆಗಳೇರಾಟದೊಳಂ, ಸಂಗೀತಶಾಸ್ತ್ರದೊಳಂ, ನಾಟಕಾಲಂಕಾರಗಳೊಳಂ, ಪಲವುಂ ದೇಶಭಾಷೆಗಳೊಳಂ, ಪಲವುಂ ಕಲಾವಿದ್ಯೆಗಳೊಳಂ ಪ್ರವೀಣನೆನಿಸಿದಂ. ತಿರುಮಲಾರ್ಯನುಮವನ ಪಡಿನೆಳಲಂತೆ ಎಲ್ಲಾ ವಿದ್ಯೆಗಳೊಳಂ ಬಳಿಸಂದು ಬಣ್ಣಂಬಡೆದಂ. ಬಳಿಕ್ಕೆ ರಾಯಗುವರನೊಡಲೊಳೆಳವೆ ಇನಿಸಿನಿಸುಂ ಪಿಂದೆಗೆಯೆ ಜವ್ವನಮಡಿಯಿಟ್ಟುದದೆಂತೆನೆ:

ತನ್ನ ಕೆಳೆಗಾವಂಗಿನ್ನೇಳ್ಗೆಯುಪ್ಪುದೆಂದು ಬಗೆದು ಮೊಗಸಸಿ ಪೊಗರೇರಿದುದು. ಮೊಗದೊಳ್ನೆಲೆಗೊಂಡ ಸರಸತಿಯ ಕನ್ನವುರದ ಕನ್ನೈದಿಲ್ಪಡಿ ನೆಳಲ್ಗೊಂಡಂತೆಸೆವೆಳಬವರಿಯೊಳ್ತನಗಿದಿರಾದುದೆಂದು ಮುನಿದಂತೆ ಕಣ್ಗಡೆ ಕೆಂಗೆರೆಗೊಂಡುದು. ಸವಿನುಡಿಯಿಂಚರಿಯಂ ಸುರಿವ ಚೆಂಬಾಯ್ದೆರೆಗಳಂ ಬಂದುಗೆಗೆತ್ತು ಬಳಸಿ ಮುಸುರಿದ ಪರಮೆವರಿಗಳೆನೆ ಮೀಸೆ ಮೈಸಿರಿವೆತ್ತುದು. ಇವಂ ಕಿರಿದು ದಿನದೊಳೆ ಪಗೆರಾಯರ ಪೊಳಲ ಪೆರ್ಬಾಗಿಲಂ ಮುರಿವನೆಂದಳ್ಕಿ ಅದರ ಪೆರ್ಮೆ ಸಾರ್ದುದೆಂಬಂತೆರ್ದೆ ಬಿತ್ತರಮಾದುದು. ಅಲ್ಲಿಯ ಪೇರಗುಳಿಯ ದುಂಡುದೊಲೆಗಳ ಬಲ್ಪು ಬಳಿಸಂದಂತೆ ತೋಳ್ಗಳ್ತೋರಮಾದುದು. ನಾಲ್ದೆಸೆಯಂ ಗೆಲಲೆಳಸಿದೊಡನೆನ್ನಂ ಬಿಗಿದು ಕಟ್ಟುವನೆಂಬ ಚಿಂತೆಯೊಳ್ನಡು ಬಡವಾದುದು. ಎಂತಪ್ಪ ನೆರೆರಾವುತರು ಮೇರಲರಿದೆನಿಪ ಕಡುಪಿನ ವಾರುವಂಗಳೆ ಮಗೊಳಗಪ್ಪುವೆಂಬ ಗರ್ವದಿಂ ತೊಡೆಗಳ್ ಪೆಂಪುವಡೆದವು. ಈ ತೆರದೊಳ್ತೋರ ದೊಡೆಯುಂ ಬಡನಡುವುಂ ಪೇರೆರ್ದೆಯುಂ ದುಂಡುದೋಳುಂ ಬಲ್ಗಂದಮುಂ ಪವಣ್ಮೀಸೆಯುಂ ಪೊಳೆವ ಮೊಗಮುಂ ಪೊಗರೇರುವ ಮನಮುಮಾದ ಪೊಸ ಜೌವ್ವನದಿರವಂ ನಿರವಿಸಿ, ರಾಯಂ ಮನದೊಳಾಲೋಚಿಸಿದಂ: ಎಮ್ಮ ಕುಲದೊಳ್ ನೆಗಳ್ದ ರಾಯರನಿಬರುಂ ಎಳವೆಯೊಳ್ಬಿಜ್ಜೆಗಲ್ತು ಜವ್ವನದೊಳ್ನಾಲ್ದೆಸೆಯುಂ ಗೆಲ್ದು ಪೊರ್ದಿದರಂ ಪೊರೆದು, ದೇವರಂ ಪಾರ್ವರಂ ತೇಜಂಬಡಿಸಿ, ನಾಡಂ ಕಾಪಿಟ್ಟು ಬಳಿಕ್ಕೆ ಬರ್ದಿನೊಳ್ತಾಂ ಪೊತ್ತ ಪೊರೆಯಂ ತಮ್ಮೊಳ್ಗುವರೊಳಿಳಿಪಿ ನಿಚ್ಚಸಿರಿಯನೆಳಸಿ ನೇಮಂಗೊಂಬರ್. ಆನುಮಂತೆಸಗಲ್ವೇಳ್ಪುದೆಂದೆಣಿಸಿ ಅಳಹಿಯ ಸಿಂಗರಾರ್ಯನಂ ಬರಿಸಿ ನುಡಿದಂ: ಆನೊಂದು ಕಜ್ಜಮಂ ಪೇಳ್ವೆಂ; ಪಡಿನುಡಿಗುಡದೆಯದನಂಗೀಕರಿಪುದು; ಎನ್ನ ಕೆಳೆಯೆಂನೊಡನಾಡಿಯೆನ್ನಪಡಿನೆಳಲೆನ್ನೊಡವೆಯೆನ್ನ ಹರಣಮೆನಿಸಿದೆನ್ನನಂತರ

ಸೋದರಂ ಚಿಕದೇವೈಯ್ಯರಸಂ ಪರಸಂಪದಮಂ ಪಡೆದ ಬಳಿಕ್ಕೆನ್ನ ಪೊತ್ತ ಪೊರೆಯ ನಿಳಿಪಲ್ಕೆಡೆಗಾಣದೆನ್ನ ಮನದ ತಲ್ಲಳಮನವಂಗನಂತರಜಾತನಪ್ಪ ದೇವರಾಜನಿಂದು ತೀರ್ಚಿದಂ. ಇವನ ವಿನಯಮನಿವನ ವಿವೇಕಮನಿವನ ಪ್ರಜಾನುರಾಗಮನಿವನ ಸೌಭ್ರಾತ್ರಮನಿವನ ಸ್ಥೈರ್ಯಧೈರ್ಯಶೌರ್ಯಾದಿಗುಣಂಗಳುಮಂ ನಿರವಿಸೆ, ಎಮ್ಮ ಪಿರಿಯಚಾಮರಾಜರಸ ನರಸರಾಜರಸ ಮುದುಪ ದೇವರಾಜರಸರ್ಗ್ಗೆ ಸರಿಮಿಗಿಲೆನಿಸುಗುಂ. ಅದರಿಂದಿವಂಗೆ ಪಿರಿಯರಸುತನಮನಿತ್ತು, ಇವನ ಮೆಯ್ಗಾಪಿನೊಳಿವನನುಜಾತನಪ್ಪ ಮರಿಯದೇವರಾಜರಸನಂ ನಿಯಮಿಸಿ, ಕಿರಿಯರಸುತನಮಂ ಕುಮಾರ ಚಿಕದೇವರಾಯಂಗಮರಿಸಿ, ಇವನನುಜಂ ಕಂಠೀರವಯ್ಯರಸನಂ ಇವನ ಕಾಪಿನೊಳಿರಿಸಿ, ಆನುಂ ತೀರ್ಥಯಾತ್ರಾದಿ ತಪಸ್ಸಾಮ್ರಾಜ್ಯಮನನುಭವಿಪೆಂ ಎಂಬುದಂ ಕೇಳ್ದು ಅಳಹಿಯ ಸಿಂಗರಾರ್ಯಂ ನುಡಿದಂ: ಎಲೆ ಮಹಾರಾಯ, ನೀನಿನ್ನುಂ ಪಲವುಂ ಬರಿಸಂ ಅರಸುಗೆಯ್ವುದೆ ಲೇಸು. ಆದೊಡಂ ಪಡಿನುಡಿಗುಡದೆ ಸಮ್ಮತಿಪುದೆಂದು ನಿರವಿಸಿದುದರಿಂದೊಡಂಬಟ್ಟು ನುಡಿವೆಂ. ನಿನ್ನನುಜಂ ದೇವರಾಜಂ ಮಹಾರಾಜಲಕ್ಷಣಸಂಪನ್ನನೆನಿಸಿ ನಳ ನಹುಷ ಯಯಾತಿ ದುಂದುಮಾರ ಭಗೀರಥರಂ ದೊರೆಗೊಂಡು ಮತಿವಂತನುತ್ಸಾಹಿಯುಂ ನೀತಿಶಾಸ್ತ್ರನಿಪುಣನುಂ ಸಕಲಧರ್ಮಜ್ಞನುಂ ದಯಾಲುವುಂ ದಾಕ್ಷಿಣ್ಯಪರನುಮೆಂದು ಸಕಲಪ್ರಜೆಗಳುಮಾನಂದಂಬಡೆವರ್. ಪ್ರಜಾನುರಾಗದಿಂದಮೆ ರಾಯರ್ಗೆ ಜಯಮುಂ ಜಸಮುಂ ಪಸರಿಸುಗುಂ. ಅದರಿಂದೆ ದೇವರಾಜರಸಂಗೆ ಮಹಾರಾಜಪದಮನೀವುದೆ ಲೇಸು ಎಂಬುದುಂ;

ರಾಯನುಮತಿಹರುಷದಿಂ ಸುಮುಹೂರ್ತದೊಳ್ ಪಟ್ಟಾಭಿಷೇಕಂಗೆಯ್ದು ನುಡಿದಂ: ಎಲೆ ತಮ್ಮ, ಯಾದವಮಹೀಶೂರವಂಶಕಲಶಾಂಬುಧಿಯೊಳ್ಕಲಾಧರನಂತು ಉದಿಸಿದ್ಯೆ. ತಣ್ಗದಿರ್ಗಳಂ ಪೋಲ್ವ ನಿನ್ನ ಗುಣಗಳಿಂದಖಿಲ ಪ್ರಜೆಗಳುಮಾಹ್ಲಾದಂಬಡೆದಿರ್ಪರ್. ಆನುಮೆನ್ನ ಪೊರೆಯಂ ನಿನ್ನೊಳಿಳಿಪಿದೆಂ. ಇನ್ನೆವರಮರಸುಗೆಯ್ದುದುಮಿಂದು ಸರಸಮಾದುದು. ಸಕಲಶ್ರೇಯಂಗಳುಂ ಸಾರ್ದುವು. ಪುರಾಕೃತ ಪುಣ್ಯಫಲಂಗಳುಂ ಪೊಣ್ಮಿದುದು. ಕುಲದೇವತೆಗಳುಂ ಪ್ರಸನ್ನಮಾದುದು. ಅಕಟಕಟ ಪ್ರಜೆಗಳೇಂ ಸುಕೃತಶಾಲಿಗಳೋ; ಭದ್ರಗುಣಂಗಳಿಂ ರಾಮಭದ್ರನಂ ಪೋಲ್ತಿನಂ ಪರಿಪಾಲಿಸುವ್ಯೆ. ಪೊಡವಿಯೇಂ ಪುಣ್ಯವತಿಯೋ; ಪೇರಾವೆಯೆಂಬ ಪಾಸರೆಯೊಳಂ ದೆಸೆಯಾನೆಗಳ ಕುಂಭಂಗಳೆಂಬ ಗುಂಡುಗಲ್ಗಳೊಳಂ ಪಾವೆರೆಯನ ಪೆಡೆವಣಿಗಳೆನಿಪ ಪೆಡಗಲ್ಲೊಳಂ ಜನ್ನವಂದಿಯ ಕೂರ್ಗೋರೆಯೊಳಂ ಕುಳ್ಳಿರ್ಪ ಕೋಟಲೆಯಂ ಮರೆತು ನಿನ್ನ ದುಂಡುದೋಳೊಳ್ ನೆಲೆನೆಲಸಿ ಸೊಗಂಬಡೆದುದು. ನೀಂ ಸಕಲಶಾಸ್ತ್ರಂಗಳನೋದಿ ತಿಳಿಯತಕ್ಕುವನಿತುಮಂ ತಿಳಿದಿರ್ಪ ನಿನಗಾನುಪದೇಶಂ ಗೆಯ್ವುದೇನುಳಿದಿರ್ಪುದು; ಆದೊಡಂ ಪ್ರೀತಿಯಿಂ ಪುನರುಕ್ತಮೆನಿಸಿ ಪೇಳ್ವೆಂ. ಪಟ್ಟವಣೆಯೇರಿದುದರ್ಕೆ ಪುರುಳ್ಗೊಂಬುದುಂ ಭೋಗಿಪ್ಪುದುಮೇ ಫಲಮೆಂದೆಣಿಸದೆ ದೇವರಂ ಪಾರ್ವರಂ

ಪೊರೆದವರ ಸೇವೆಗೆಯ್ವುದುಂ, ಮಕ್ಕಳೊಳ್ತಂ ಮರುಕದಿಂ ಪ್ರಜೆಯಂ ಕಾಪಿಡುವುದುಮದರಿಂ ಬರ್ಪ ಪುರುಳುಂ ಬಲ್ಪುಂ ಗೆಲ್ಲಮುಮದರಿಂ ಬಳೆದ ದೇಶ ಕೋಶಂಗಳುಮದರಿಂದೆಸೆಗುವ ತ್ಯಾಗಭೋಗಂಗಳುಮದರಿಂ ಬರ್ಪ ಕೀರ್ತಿ ಸುಕೃತಂಗಳುಮೇ ಫಲಮೆಂದೆಣಿಸುವುದು ಎಂದು ನಿರವಿಸಿ ತನ್ನ ಕಿರಿಯನುಜಂ ಮರಿಯ ದೇವರಾಜರಸನಂ ತನ್ನಣುಗರಪ್ಪ ಚಿಕದೇವರಾಜ ಕಂಠೀರವ ರಾಜರುಮಂ ಕೈಯೆಡೆಗೊಟ್ಟು, ತೆಂಕಣ ನಾಡೊಳ್ ಕೌಂಡಿನಿಯೆಂಬ ಪೊಳೆಯ ತಡಿಯೊಳ್ ಪಲವುಂ ಕಾಲಂ ತಪಂಗೆಯ್ದು ಪರವಾಸುದೇವನ ಪದಮಂ ಸಾರ್ದಂ.

ಬಳಿಕೀ ದೇವರಾಜಂ ಸಾಕ್ಷಾದ್ದೇವರಾಜನಂತೆ ಸುಧರ್ಮಾಧಿಷ್ಠಿತನುಂ, ಪಾವಕನಂತೆ ಶುಚಿಯುಂ ತೇಜಸ್ವಿಯುಂ, ಧರ್ಮರಾಜನಂತೆ ದಂಡಧರನುಂ ಸಮವರ್ತಿಯುಂ, ನಿರಋತಿಯಂತೆ ದೇವತಾಗಣಮಧ್ಯ ಗಣನೀಯನುಂ ಪುಣ್ಯಜನಾನುಯಾತನುಂ, ವರುಣನಂತೆ ಸತತಪ್ರತ್ಯಂಗನರ್ತಿನಿಜಲಕ್ಷ್ಮೀಕನುಂ ಪ್ರಚೇತಸನುಂ, ಮಾರುತನಂತೆ ಜಗತ್ಪ್ರಾಣನುಂ ಪವಮಾನನುಂ, ಕುಬೇರನಂತೆ ರಾಜರಾಜನುಂ ಧನದನುಮಿಾಶಾನನಂತೆ ಸರ್ವಜ್ಞನುಂ ಶಂಕರನುಮೆನಿಸಿ ನೆಗಳ್ದುಂ. ಮತ್ತಂ ಪುರುಷೋತ್ತಮನವತರಣದ ಮತ್ಸ್ಯದಂತೆ ಪಳನುಡಿಗಳಂ ಪದುಳಂಗೊಳಿಸುವಂ; ಕೂರ್ಮನಂತೆ ಗೋತ್ರಮನೆಳ್ತರಂಬಡಿಸುವಂ; ಮಹಾವರಾಹನಂತೆ ಪೊಡವಿಯಂ ಪೊಗರೇರಿಸುವಂ; ನೃಸಿಂಹನಂತೆ ಬಲ್ವಗೆಗಳ ಎರ್ದೆಯ ನಿರ್ಬಗಿಗೆಯ್ವಂ; ವಾಮನನಂತೇಕಪದದೊಳೆ ಭೂಮಂಡಲ ಮನಿತುಮನಾಕ್ರಮಿಸುವಂ; ಭಾರ್ಗವನಂತೆ ದುಷ್ಟರಾಜನ್ಯರಂ ದೂರೀಕರಿಸುವಂ; ರಾಮಚಂದ್ರನಂತೆ ಧರ್ಮದಿಂ ರಾಜ್ಯಮನಾಳ್ವಂ; ಹಲಿಯಂತೆ ಬಲಭದ್ರನೆನಿಸುವಂ; ಕೃಷ್ಣನಂತೆ ಧರ್ಮಪ್ರತಿಷ್ಠಾಪನಂ ಗೆಯ್ವಂ; ಕಲ್ಕಿಯಂತೆ ಪಾಷಂಡರಂ ಪರಿಹರಿಸುವಂ. ಮತ್ತಂ ತಾಂ ಪಲವುಂ ರಿಪುಪುರಂಗಳಂ ಜಯಿಸಿದುದರಿಂ ಮುಪ್ಪೊಳಲಂ ಗೆಲ್ದ ಹರನಂ ಪರಿಹಾಸಂಗೆಯ್ವಂ; ತಾಂ ಶಕ್ತಿತ್ರಯ ಸಂಪನ್ನನಾದುದರಿನೇಕ ಶಕ್ತಿಧರನಪ್ಪ ಕುಮಾರನಂ ಕಡೆಗಣಿಸುವಂ; ತಾನನವರತ ಪ್ರತಾಪಶಾಲಿಯಾದುದರಿಂ ಪೊಳ್ತಿಂಗೊಂದು ತೆರನಪ್ಪ ದಿವಾಕರನಂ ಧಿಕ್ಕರಿಸುವಂ; ತಾಂ ಸಕಲರತ್ನಂಗಳಂ ಸಂಗ್ರಹಿಸಿ ಅವರಿಂ ಕಜ್ಜಂಗೊಂಬುದರಿಂ ಜಡನಪ್ಪ ರತ್ನಾಕರನಂ ಜರೆವಂ; ತಾಂ ತೇಜಸ್ವಿಂಬಾಗಿಯುಂ ಸನ್ಮಾರ್ಗಪ್ರವರ್ತಕನಾದುದರಿಂ ಕೃಷ್ಣ ವರ್ತ್ಮನಪ್ಪಗ್ನಿಯನವಜ್ಞೆಗೆಯ್ವಂ; ತನ್ನವರನಿಬರುಮುಟ್ಟು ತೊಟ್ಟು ತನ್ನಂತಿರ್ಪುದರಿಂ ಕೆಳೆಯೊರ್ವನಂ ಕಪಾಲಿಯುಂ ಕೃತ್ತಿವಾಸಿಯುಮೆನಿಸಿ ತೋರಿಸುವ ಕುಬೇರನಂ ಕುತ್ಸೆಗೆಯ್ವಂ; ತಾಂ ಗೋತ್ರೋದ್ಧರಣಂ ಗೆಯ್ವುದರಿಂ ಗೋತ್ರಾರಿಯಪ್ಪ ದೇವರಾಜನಂ ತೆಳ್ಪನೆನಿಸುವಂ; ತಾಂ ವ್ಯಸನ ಪರಾಙ್ಮುಖನಾದುದರಿಂ ಪಗಡೆಯೊಳ್ಪರಿಭವಂಬಡೆದ ನಳನನಿಳಿಕೆಗೆಯ್ವಂ; ತಾಂ ಸತ್ಯದೊಳ್ ಸಾರ್ವಭೌಮನಪ್ಪುದರಿಂ ನನ್ನಿಯಿಂದಲುಗಿದ ಹರಿಶ್ಚಂದ್ರನಂ ಹಳಿವಂ; ತಾಂ ಸನಾತನ ಧರ್ಮಮಪ್ಪ ಕೃಷ್ಣನಂ ನಂಬಿ

ನೆಲೆಗೊಂಡಿರ್ಪುದರಿಂ ಧರ್ಮಾಂತರತತ್ಪರನಪ್ಪರ್ಜುನನಂತರ್ಜಿಸುವಂ. ಮತ್ತಂ ಶುಚಿಯಾಗಿಯುಂ ಪ್ರಜೆಗಳಂ ರಂಜಿಸುವಂ; ನಿರ್ಮಲನಾಗಿಯುಂ ವೈರಿಗಳ ಮುಖದೊಳ್ ಮಾಲಿನ್ಯಮಂ ಮಾಳ್ಪಂ; ನಿರ್ಭಯನಾಗಿಯುಂ ಮಲೆಪರ್ಗೆ ಭಯಮನೀವಂ; ಮಹೀಭೃತ್ತಾಗಿಯುಂ ಮೃದುಪ್ರಕೃತಿಯೆನಿಸುವಂ; ದಾನಪತಿಯಾಗಿಯುಂ ಮದರಹಿತನೆನಿಸುಗುಂ; ಸನ್ಮಾರ್ಗನಿರತನಾಗಿಯುಂ ಪರದುರ್ಗಾಕ್ರಮಣ ನಿಪುಣನಕ್ಕುಂ; ಘನವಾಗಿಮಚಂಚಲನಕ್ಕುಂ; ದೇವರಾಜನಾಗಿಯುಂ ನರಪತಿಯೆನಿಸಿ ನೆಗಳ್ಗುಂ.

ಇಂತಿರ್ಪ ಮಹಾರಾಯಂ ಧರೆಯಂ ಧರ್ಮದೊಳ್ಪಾಲಿಪುದರ್ಕೆಣ್ದೆಸೆಗಳಂ ಗೆಲ್ವುದರ್ಕಂ ನೆರವಾಗಿ ಮುಂ ಪಿರಿಯಣ್ಣಂ ಪೇಳ್ದಂತೆ ಚಿಕದೇವರಾಯನಂ ಯೌವರಾಜ್ಯದಿಂದಲಂಕರಿಸಿದಂತೆ ಇವನುಮುಪೇಂದ್ರನಂತೆ ಅರಸುಗೆಯ್ಮೆಯ ಪೊರೆಯನಿತುಮಂ ಪೊತ್ತುಂ ಜೈತ್ರಯಾತ್ರೋತ್ಸವಂಗಳ ನೊಡರ್ಚುತಿರೆ; ರಾಯನಂ ಮಹೇಂದ್ರನಂತೆ ನಿರ್ಭರನಾಗಿ ದಿವ್ಯಭೋಗಂಗಳನನುಭವಿಸುತ್ತಿರೆ; ಒರ್ಮೆ ಮಾನೌಮಿಯುಕ್ಕಿವದೊಳೆಣ್ದೆಸೆಯ ದೊರೆಗಳನಿಬರುಂ ಕಪ್ಪಕಾಣ್ಕೆಗಳಂ ತಂದೊಪ್ಪಿಸುವೆಡೆಯೊಳ್ ಇರ್ಕೇರಿಯೊಳ್ ಶಿವಪ್ಪನಾಯಕಂ ತನ್ನಾಳ್ದನಪ್ಪ ವೀರಭದ್ರನಾಯಕನೊಳ್ ದ್ರೋಹಮನೆಣಿಸಿ ಅವನಂ ಕವಡಿನೊಳ್ ಮಡುಪಿ ಆ ದೊರೆತನಮಂ ಕೊಂಡು ತಾನುಂ ಪಾವುಡಮಂ ಕಾಣ್ಕೆಗಳಂ ಕಳುಪುವಿನಂ, ಅವನ ತಪ್ಪುಗೆಯ್ಮೆಗಳನೆಣಿಸಿ ನೀಳ್ಕರಿಸಿ ಬಂದ ಗುರಿವಾನಸನಂ ಬಂದಂತೆ ಕಳುಪಲೊಡಮದರ್ಕಾದೊರೆ ಪಿರಿದುಂ ಬಿಗುರ್ತು ನೆರವನರಸಿ ಮುಂ ತನ್ನಂತೆ ಬಿಜ್ಜಾನಗರಿಯ ದೊರೆತನಮನಾಳ್ದ ತೆಲುಂಗರಾಯರ ಬಗೆಯೊಳೊರ್ವಂ ಶ್ರೀರಂಗರಾಯನೆನಿಸುವಂ ತನ್ನ ಬೇಲೂರ್ಚಂದ್ರಗಿರಿ ಮುಂತಾದ ಕೋಂಟೆ ದುರ್ಗಂಗಳಂ ತುರುಕರ್ಗೆ ಸೂರೆಗೊಟ್ಟು ತಾನುಂ ತಂನ್ನ ಪರಿಜನಂ ಬೆರಸು ಪಿರಿಯ ತಿರುಕುಳಿಯೆನಿಸಿ ಚೆಂಜಿತಂಜಾವೂರ್ಮಧುರೆಯ ಮನೆಗಳೊಳೆರೆದು ಅವರಿತ್ತುದಂ ತುತ್ತಿಯವರಂ ಬೆಸರಿಸಿಯತ್ತಣಿಂದೆಳ್ದಿತ್ತಲುಮತ್ತಲುಂ ಪರಿದು ಎತ್ತಲುಂ ನೆಲೆಗಾಣದಿರೆಯವನನರಸಿ ಕಂಡು ಕಾಲ್ಗೆರಗಿಯೊಡಗೊಂಡುಬಂದು ತನ್ನ ಪಯಿಂದಣ ಕಡೆಗಡಿಂಯೆನಿಸುವ ಹಾಸನಬೇಲೂರ್ಗಳನಿತ್ತು ನೆಲೆಗೊಳಿಸಿಯವನತ್ತಣಿಂದೈಗೂರು ತರಿಯಕೆರೆ ಹರಪನಹಳ್ಳಿ ಚಿಂತನಕಲ್ಮದ್ದಗಿರಿ ನಿಡುಗಲ್ಮುಂತಾದ ಪಲವುಂ ಹಟ್ಟಿಕೊಟ್ಟದ ದೊರೆಗಳ ಬಲಮಂ ತನ್ನ ಮೂಲಬಲಮಂ ತನ್ನಂ ಸೇರಿದ ತುಳುವ ಕೊಂಕಣ ಕೊಡಗು ಮಲಯಾಳಂಗಳ ಮೂಲಬಲಮುಮಂ ಕೊಂಡು ಪಟ್ಟಣಕ್ಕೆ ನಡೆತಂದು*

ಇತಿ ಶ್ರೀರಂಗರಾಯರ ವಂಶಪ್ರಭಾವ ಚಿಕದೇವರಾಜರ ವಂಶದಾ ಪ್ರಭಾವ ಯಾದವಗಿರಿ ಮಹಾತ್ಮೆ ಸಹಾ ಇದನು ೧೦೦೦ ರಕ್ಕೆ ಮಂಗಳ ಶ್ರೀ ಶ್ರೀ

ಅನುಬಂಧಗಳು

ಟಿಪ್ಪಣಿಗಳು

ಅದಿತಿ-ಕಶ್ಯಪರು : ಕಶ್ಯಪನು ಮರೀಚಿಯ ಮಗ, ಅದಿತಿ ಮೊದಲಾದ ಹದಿಮೂರು ಜನ ದಕ್ಷಪುತ್ರಿಯರು ಈತನ ಹೆಂಡಂದಿರು. ಇವರು ದೇವತೆಗಳು, ದಾನವರು, ಮಾನವರು, ಪಶು-ಪಕ್ಷಿಗಳ ಸೃಷ್ಟಿಗೆ ಕಾರಣಕರ್ತರು. ಆದಿತ್ಯ ದೇವತೆಗಳೂ ಇಂದ್ರ ವಿಷ್ಣುಗಳೂ ಇವರ ಮಕ್ಕಳು.

ಆವರಣಗಳು : ಒಂದಾದಮೇಲೆ ಒಂದರಂತೆ ಭೂಮಂಡಲ (ಅಥವಾ ಬ್ರಹ್ಮಾಂಡ)ದ ಸುತ್ತ ಇರುವ ಆವರಣಗಳು. ಇವು, ಲವಣ, ಇಕ್ಷು, ಸುರಾ, ಸರ್ಪಿಸ್, ದಧಿ, ಕ್ಷೀರ ಮತ್ತು ನೀರು ಎಂದು ಏಳು ಇವೆಯೆಂಬುದು ನಮ್ಮ ಪುರಾಣಗಳ ಹೇಳಿಕೆ.

ಕಲ್ಲಟಿ ಕಣ್ದೆರೆದುದು : ಶಿಲಾರೂಪದ ಅಹಲ್ಯೆ ಸಜೀವಗೊಂಡಳು.

ಆಹತ-ಪ್ರತ್ಯಾಹತ : ಸಂಗೀತದ ೧೫ ಗಮಕಗಳೆಂದು ಹೇಳಲಾಗುತ್ತದೆ. ಕಂಪಿತ, ಸ್ಫುರಿತ, ಲೀನ, ತ್ರಿಭಿನ್ನ, ತಿರಿಪ, ಅಂದೋಲಿತ, ವಲಿ, ಕುರುಲ, ಆಹತ, ಉಲ್ಲಾಸಿತ, ಪ್ಲಾವಿತ, ಹುಂಫಿತ, ಮುದ್ರಿತ, ನಾಮಿತ, ಮಿಶ್ರಿತ.

ಕುಂದ-ಕದಂಬ : ಪರಬ್ರಹ್ಮನ ಅವತಾರ ವೈಭವವನ್ನು ಆನಂದಿಸಲು ಗಿಡಮರಬಳ್ಳಿಗಳು ಗೋಪಿಕೆಯರಾದಿಯಾಗಿ ರೂಪಧರಿಸಿ ಅನೇಕ ಋಷಿ-ಮುನಿಗಳೂ ದೇವತೆಗಳೂ ಭೂಲೋಕದಲ್ಲಿ ಅವತರಿಸಿದರೆಂದು ಭಾಗವತ-ಪುರಾಣಾದಿಗಳ ನಂಬಿಕೆ.

ಕಾಂಚೀಪೂರ್ಣ : ಯಾಮುನಾಚಾರ್ಯರ ಶಿಷ್ಯರಲ್ಲಿ ಒಬ್ಬ ಕಂಚಿಯ ವಿಷ್ಣು ದೇವಸ್ಥಾನದಲ್ಲಿ ಕೈಂಕರ್ಯವೆಸಗುತ್ತಿದ್ದನು. ಶ್ರೀರಾಮಾನುಜಾಚಾರ್ಯರಿಗೆ ಶ್ರೀವೈಷ್ಣವ ಮತದ ತತ್ವರಹಸ್ಯಗಳನ್ನು ತಿಳಿಸುತ್ತಿದ್ದವರಲ್ಲಿ ಈತನೂ ಒಬ್ಬ, ವೈಶ್ಯ ಜಾತಿಯವನು. ವರದರಾಜಸ್ವಾಮಿ ಪ್ರತ್ಯಕ್ಷ ಈತನೊಡನೆ ಮಾತನಾಡುತ್ತಿದ್ದನೆಂದು ನಂಬಿಕೆ.

ಕುರುಂಬರಾಯರು : ವಿಜಯನಗರ ಸಂಸ್ಥಾಪಕರಾದ ಹಕ್ಕ–ಬುಕ್ಕರು ಜಾತಿಯಿಂದ ಕುರುಬರಾಗಿದ್ದರು. ಸಂಗಮವಂಶವೆಂತಲೂ ಯಾದವವಂಶವೆಂತಲೂ ಶಾಸನಗಳಲ್ಲಿ ಇವರ ವಂಶವನ್ನು ಸಾಮಾನ್ಯವಾಗಿ ಹೆಸರಿಸಲಾಗುತ್ತದೆ.

ಕೊಂಚವೆಟ್ಟು–ಕ್ರೌಂಚಪರ್ವತ : ಹಿಮಾಲಯನ ಮೊಮ್ಮಗನೂ ಮೈನಾಕನ ಮಗನೂ ಆದ ಒಂದು ಪರ್ವತ. ಷಣ್ಮುಖನಿಂದ ಹತವಾದಂತೆ ಕಥೆಯಿದೆ.

ಚೇತನೆ–ಈಶ್ವರರು : ವ್ಯೂಹದಲ್ಲಿ ನಾಲ್ಕನೆಯವನಾದ ಅನಿರುದ್ಧನಿಗೆ ಈಶ್ವರನೆಂದು ಹೆಸರಿದೆ. ಶುದ್ಧರೂಪದ ಸೃಷ್ಟಿ ಪ್ರಾರಂಭಗೊಳ್ಳುವುದು ಈಶ್ವರ ಮತ್ತು ಚೇತನೆಯರಿಂದ. ಈಶ್ವರರೂಪೀ ವಿಷ್ಣು ಬ್ರಹ್ಮಾಂಡಕ್ಕೆ ಒಡೆಯ.

ಚೋಳನ ಗರ್ವನ ಗರ್ವದೊಡನೆ...ಇಲಿಕೆತೆಗೆಯ್ದಂ : ಶೈವನಾದ ಕುಲೋತ್ತುಂಗ ಚೋಳ ದೊರೆ (ರಾಮಾನುಜರ ಸಮಕಾಲೀನ)ಯು ಶ್ರೀವೈಷ್ಣವರಿಂದ 'ಶಿವಾತ್ಪರಮಂ ನಾಸ್ತಿ' ಎಂದು ಒತ್ತಾಯದಿಂದ ಬರೆಯಿಸಿಕೊಳ್ಳತೊಡಗಿದನು. ಅದೇ ರೀತಿ ರಾಮಾನುಜರಿಂದಲೂ ಬರೆಯಿಸಿಕೊಳ್ಳಬೇಕೆಂಬುದು ಅವನ ಬಯಕೆ. ಅದಕ್ಕಾಗಿ ಅವರನ್ನು ಹಿಡಿದು ತರಲು ಶ್ರೀರಂಗಕ್ಕೆ ದೂತರು ಬಂದರು. ಅವರ ಕೈಗೆ ಮಹಾಪೂರ್ಣ ಮತ್ತು ಶ್ರೀವತ್ಸಾಂಕರು ಸಿಕ್ಕಿಕೊಂಡರು. ರಾಜನು ಅವರನ್ನು ಒತ್ತಾಯಿಸಿ ಶಿವಪಾರಮ್ಯದ ವಚನ ಬರೆದುಕೊಡಲು ಹೇಳಿದನು. ಅವರಿಬ್ಬರೂ ಒಪ್ಪದಿರಲು ರಾಜನು ಅವರನ್ನು ತೀವ್ರವಾಗಿ ಹಿಂಸಿಸಿದನು ಎಂದು ಪ್ರತೀತಿ.

ಜನಮೇಜಯ : ಜನಮೇಜಯನು ಪರೀಕ್ಷಿತನ ಮಗ. ಅಭಿಮನ್ಯು–ಉತ್ತರೆಯರ ಮಗನಾದ ಪರೀಕ್ಷಿತನು ಸರ್ಪ ಕಚ್ಚಿ ಸಾಯಲು ಜನಮೇಜಯ ಅದರ ಸೇಡಿಗಾಗಿ ಸರ್ಪಯಾಗ ಮಾಡಲು ಪ್ರಾರಂಭಿಸಿದನು. ಅದು ಅಪೂರ್ಣಗೊಂಡುದರ ಪ್ರಾಯಶ್ಚಿತ್ತಕ್ಕಾಗಿ ಮಹಾಭಾರತವನ್ನು ಕೇಳಿದನು.

ಜಯವಿಜಯ : ವಿಷ್ಣುವಿನ ದ್ವಾರಪಾಲಕರು.

ತಿರುಕುರುಂಗುಡಿ ನಂಬಿಗೆ ಉಪದೇಶವಿತ್ತುದು : ಮದ್ರಾಸಿನ ಸಮೀಪದಲ್ಲಿ ತಿರುಕುರುಂಗುಡಿ ಎಂಬ ಊರಿದೆ. ರಾಮಾನುಜರು ಸಂಚಾರ ಮಾಡುತ್ತ ತಿರುಕುರುಂಗುಡಿಗೆ ಬಂದರು. ಅಲ್ಲಿಯ ದೇವತೆಯಾದ ಕುರುಂಗುಡಿ ನಂಬಿಯು ಅರ್ಚಕನ ಮುಖಾಂತರ ರಾಮಾನುಜರು ಸಾಧಿಸಿದ ಮತಪ್ರಸಾರ ಕಾರ್ಯವನ್ನು ಮೆಚ್ಚಿ, ತಾನು ಹಲವು ಅವತಾರ ತಾಳಿ ಸಾಧಿಸಲಾಗದ ಕಾರ್ಯವನ್ನು ನೀವು ಸಾಧಿಸಿದ್ದು ಹೇಗೆ ಎಂದು ಪ್ರಶ್ನಿಸಿದನು. ಆಚಾರ್ಯರು ತಾವು ಹೀಗೆ ಕೇಳಿದರೆ ಹೇಳಲಾಗುವುದಿಲ್ಲವೆಂದೂ ಪ್ರತ್ಯಕ್ಷ ಕಾಣಿಸಿಕೊಂಡರೆ ಹೇಳುವುದಾಗಿಯೂ

ಹೇಳಿದರು. ಆಗ ಪರಮಾತ್ಮನು ಪ್ರತ್ಯಕ್ಷನಾದನು. ಆಚಾರ್ಯರು ತಾವು ಆ ಕಾರ್ಯ ಸಾಧಿಸಿದ್ದು ಮಂತ್ರದ್ವಯದ ಬಲದಿಂದ ಎಂದು ಶಿಷ್ಯನಂತೆ ಕುಳಿತುಕೊಂಡಿದ್ದ ಪರಮಾತ್ಮನಿಗೆ ಕಿವಿಯಲ್ಲಿ ಉಸುರಿದರು.

ದೇಹದ ಮೃಗ ಹಕ್ಕಿಗಳು : ಬೇಟೆಗಾಗಿ ಸಾಕಿದ ಪ್ರಾಣಿಪಕ್ಷಿಗಳು.

ಧ್ವನಿನೂತನಪುರ : ಶ್ರೀವಿಲ್ಲಿಪುತ್ತೂರು. ವಿಷ್ಣುಚಿತ್ತರ ಊರು. ಗೋದಾದೇವಿಯು ಶ್ರೀವಿಷ್ಣು ತನ್ನ ಪತಿಯಾಗಲೆಂದು ಹರಕೆ ಹೊತ್ತಿದ್ದಳೆಂದೂ ಆ ಹರಕೆಯನ್ನು ರಾಮಾನುಜರು ಇಲ್ಲಿ ತಾವು ತೀರಿಸಿದ್ದರಿಂದ ರಾಮಾನುಜರು ಗೋದಾದೇವಿಗೆ ಸಹೋದರರಾದರೆಂಬ ಸಂಬಂಧ ಕಲ್ಪಿತವಾಯಿತು.

ನಾಥಮುನಿ : ಸಂಸ್ಕೃತ, ತಮಿಳುಗಳಲ್ಲಿ ಉದ್ದಾಮ ಪಂಡಿತನಾಗಿದ್ದ ಈತ ಯೋಗದಲ್ಲಿ ನಿಷ್ಣಾತನಾಗಿ ಯೋಗರಹಸ್ಯ, ನ್ಯಾಯತತ್ತ್ವ ಮುಂತಾದ ಗ್ರಂಥಗಳನ್ನು ರಚಿಸಿದನು. ಶಠಕೋಪನು ರಚಿಸಿದ ಪದ್ಯಗಳನ್ನು ಸಂಕಲಿಸಿದನು.

ಪದವಾಕ್ಯ ಪ್ರಮಾಣ : ವ್ಯಾಕರಣ, ತರ್ಕ ಮತ್ತು (ಪೂರ್ವ–ಉತ್ತರ) ಮೀಮಾಂಸೆಗಳನ್ನು ಸಂಯುಕ್ತವಾಗಿ ಪದವಾಕ್ಯ ಪ್ರಮಾಣಗಳೆಂದು ಕರೆಯಲಾಗುತ್ತದೆ. ಕೆಲವರ ಅಭಿಪ್ರಾಯದಲ್ಲಿ ವಾಕ್ಯವೆಂದರೆ ಮೀಮಾಂಸೆಯೆಂದೂ ಪ್ರಮಾಣವೆಂದರೆ ತರ್ಕವೆಂದೂ ಅರ್ಥ.

ಪರವಿಭವ ವ್ಯೂಹಾದಿ ಮೂರ್ತಿಗಳು : ವ್ಯೂಹ ಚತುಷ್ಟಯ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಈ ನಾಲ್ಕು ರೀತಿಯ ಪರಮಾತ್ಮನ ರೂಪಗಳು. ಇವುಗಳಿಂದ ಸೃಷ್ಟಿರಚನೆಯಾಗುವುದು.

ಪೂರ್ಣ–ಮಹಾಪೂರ್ಣ : ಯಾಮುನಾಚಾರ್ಯರ ಪ್ರಮುಖ ಶಿಷ್ಯರಲ್ಲಿ ಇವನೂ ಒಬ್ಬ. ರಾಮಾನುಜಾಚಾರ್ಯರಿಗೆ ಮಂತ್ರೋಪದೇಶ ಮಾಡಿದವನು.

ಪ್ರಭಾಸ ಕ್ಷೇತ್ರ : ದ್ವಾರಕೆಯ ಸಮೀಪದ ಒಂದು ಕ್ಷೇತ್ರ. ಕೃಷ್ಣನು ಸಮುದ್ರ ಪ್ರವೇಶಿಸಿ ಬ್ರಾಹ್ಮಣ ಕುಮಾರನ(ರ)ನ್ನು ಬಿಡಿಸಿ ತಂದುದು ಇಲ್ಲಿಯೇ. (ನೋ. ಸಾಂದೀಪನಿ)

ಪ್ರಶ್ನಿ–ಸುತಪ : ಅದಿತಿ–ಕಶ್ಯಪರ ರೂಪಾಂತರಗಳು. ಆದರೆ ತಿರುಮಲಾರ್ಯನ ಪ್ರಕಾರ ಬೇರೆ ಬೇರೆ.

ಭೃಗುಮುನಿಯ ಪಾದ ಧರಿಸಿದ್ದು : ತ್ರಿಮೂರ್ತಿಗಳಲ್ಲಿ ಬ್ರಾಹ್ಮಣರಿಗೆ ಪೂಜ್ಯನಾದವನು ಯಾರು ಎಂಬುದನ್ನು ನಿರ್ಧರಿಸಲು ಭೃಗುಮುನಿ ನಿಯಮಿತನಾದನು. ಬ್ರಹ್ಮ ಮತ್ತು ಶಿವರು ಬೇರೆ ಬೇರೆ ಪರೀಕ್ಷೆಗಳಿಂದ ಅಯೋಗ್ಯರೆನಿಸಿದರು.

ಭೃಗು ಮಲಗಿಕೊಂಡಿದ್ದ ವಿಷ್ಣುವಿನಲ್ಲಿಗೆ ಹೋಗಿ ಅವನ ಎದೆಯ ಮೇಲೆ ತನ್ನ ಪಾದವೂರಿದನು. ಬ್ರಹ್ಮ-ಶಿವರಂತೆ, ಕೋಪಿಸಿಕೊಳ್ಳುವ ಬದಲು 'ನಿನ್ನ ಪಾದಕ್ಕೆ ನೋವಾಯಿತೆ?' ಎಂದು ಆರ್ದ್ರನಾಗಿ ಕೇಳಿದನು ಮತ್ತು ಅದನ್ನು ಒತ್ತತೊಡಗಿದನು. ಇದರಿಂದ ಸುಪ್ರೀತನಾದ ಭೃಗು ಶ್ರೀವಿಷ್ಣುವೇ ಪೂಜ್ಯ ದೇವತೆಯೆಂದು ಸಾರಿದನು.

ಮಹದಾದಿಸೃಷ್ಟಿ : ಕೂಟಸ್ಥಪುರುಷ ಮತ್ತು ಮಾಯಾಶಕ್ತಿಯಿಂದ (ಅಧಃ) ಸೃಷ್ಟಿ ಪ್ರಾರಂಭಗೊಳ್ಳುವಾಗ ಮಹತ್, ಅಹಂಕಾರಾದಿ ತತ್ವಗಳು ಹುಟ್ಟುವವೆಂದೂ ಅಲ್ಲಿಂದ ಬೆಳವಣಿಗೆ ಮುಂದುವರಿಯುವುದೆಂದೂ ಶ್ರೀವೈಷ್ಣವ ಮತದ ನಂಬಿಕೆ.

ಮಾನೌಮಿಯೊಸಗೆ : ಮಹಾನವಮಿ ಹಬ್ಬ, ವಿಜಯನಗರದ ರಾಜರು ಪರಂಪರೆಯಿಂದ ಆಚರಿಸುತ್ತಿದ್ದ ಬಹು ಪ್ರಸಿದ್ಧವಾದ ಉತ್ಸವ.

ಮೈನಾಕನ ಪಕ್ಷಪಾತ : ಸಾಗರರಾಜನ ಮಿತ್ರನಾದ ಪರ್ವತ. ಹಿಮಾಲಯನ ಮಗ. ಇಂದ್ರನ ದಾಳಿಯಿಂದ ತನ್ನ ರೆಕ್ಕೆಗಳನ್ನು ಉಳಿಸಿಕೊಂಡು ಸಾಗರದಲ್ಲಿ ಅಡಗಿದನು. ಹನುಮಂತ ಸಾಗರೋಲ್ಲಂಘನ ಮಾಡಿದಾಗ ಆಕಾಶದಲ್ಲಿಯೇ ಆತನನ್ನು ಸನ್ಮಾನಿಸಿ ಸಜ್ಜನ ಪಕ್ಷಪಾತವನ್ನು ತೋರಿದನು.

ಯಾಮುನಾಚಾರ್ಯರ ಇಚ್ಛೆಗಳು : ೧. ಬ್ರಹ್ಮಸೂತ್ರಗಳಿಗೆ ಶ್ರೀವೈಷ್ಣವ ಪರವಾದ ಭಾಷ್ಯಗಳನ್ನು ಬರೆಯುವುದು. ೨. ವಿಷ್ಣು ಪುರಾಣದ ಕರ್ತೃ ಪರಾಶರರ ಹೆಸರನ್ನು ಶಾಶ್ವತಗೊಳಿಸುವುದು. ೩. ಶಠಕೋಪನ ಹೆಸರನ್ನು ಶಾಶ್ವತಗೊಳಿಸುವುದು. ಇವು ಮೂರೂ ಯಾಮುನಾಚಾರ್ಯರ ಇಚ್ಛೆಗಳಾಗಿದ್ದವು. ಮರಣ ಸಮಯದಲ್ಲಿ ರಾಮಾನುಜರನ್ನು ಕಾಣಬೇಕೆಂದಿದ್ದ ಅವರ ಬಯಕೆ ಈಡೇರದೆ ಹೋಯಿತು. ಆದರೂ ರಾಮಾನುಜರು ಅವರ ಅಂತ್ಯವಿಧಿಯ ಕಾಲಕ್ಕೆ ಉಪಸ್ಥಿತರಾದರು. ಶವದ ಮೂರು ಬೆರಳುಗಳು ಮುಚ್ಚಿದ್ದುದರಿಂದ ಅವರ ಮೂರು ಬಯಕೆಗಳು ರಾಮಾನುಜಾಚಾರ್ಯರಿಗೆ ಗೊತ್ತಾದವು. ಅವನ್ನು ತಾವು ಈಡೇರಿಸುವುದಾಗಿ ಪ್ರತಿಜ್ಞೆ ಮಾಡಿ ಅದರಂತೆ ತಾವು ಮತ್ತು ತಮ್ಮ ಶಿಷ್ಯರಿಂದ ಮೂರೂ ಕಾರ್ಯಗಳನ್ನು ಪೂರ್ಣಗೊಳಿಸಿದರು.

ವರನಂದಿ : ಇವಳು ದಿಲ್ಲಿಯ ಬಾದಶಹನ ಮಗಳು. ಇವಳಲ್ಲಿ ಚೆಲುವನಾರಾಯಣನ ವಿಗ್ರಹವಿದ್ದುದು ರಾಮಾನುಜರಿಗೆ ಗೊತ್ತಾಯಿತು. ಆ ವಿಗ್ರಹವನ್ನು ತಮ್ಮ ಉತ್ತರ ಭಾರತ ಯಾತ್ರೆಯಲ್ಲಿ ಸಂಪಾದಿಸಿ ತಂದು ಮೇಲುಕೋಟೆಯಲ್ಲಿ ಸ್ಥಾಪಿಸಿದರು. ಇವಳನ್ನು ಬೀಬಿ ನಾಚ್ಚಿಯಾರ್ ಎಂದು ಕರೆಯುವುದು ರೂಢಿ.

ವೈಶಂಪಾಯನ : ಜನಮೇಜಯನ ಪುರೋಹಿತನಾದ ಋಷಿ. ವ್ಯಾಸರ ಶಿಷ್ಯ.

ವೆಂಕಟೇಶ್ವರನಿಗೆ ಶಂಖ ಚಕ್ರ : ತಿರುಪತಿಯ ದೇವರ ಬಗ್ಗೆ ವಿವಾದ ಉಂಟಾದಾಗ ದೇವರಿಗೆ ಶಿವ ಮತ್ತು ವಿಷ್ಣು ಪರವಾದ ಲಾಂಛನಗಳನ್ನು ಇಟ್ಟು ದೇವಾಲಯಕ್ಕೆ ಕೀಲಿ ಹಾಕಲಾಯಿತು. ಮರುದಿನ ಬಾಗಿಲು ತೆರೆದು ನೋಡಿದಾಗ ಶಂಖ-ಚಕ್ರಗಳು ದೇವರ ಹಸ್ತದಲ್ಲಿದ್ದುದರಿಂದ ತಿರುಪತಿಯ ದೇವರು ವೈಷ್ಣವದೇವರೆಂದು ಸಿದ್ಧವಾಯಿತು. ಈ ಕಾರ್ಯ ರಾಮಾನುಜರ ಸಮಕ್ಷಮದಲ್ಲಿ ನಡೆದುದರಿಂದ ಶಂಖ ಚಕ್ರಗಳು ಅವರಿಂದಲೇ ವೆಂಕಟೇಶನಿಗೆ ಅರ್ಪಿತವಾದುವೆಂದು ಪ್ರತೀತಿ.

ಶ್ರೀವತ್ಸಾಂಕ : ಕೂರೇಶ ಅಥವಾ ಕೂರಕುಲವಲ್ಲಭನೆಂದು ಹೆಸರಾದ ಒಬ್ಬ ಶ್ರೀಮಂತ ಬ್ರಾಹ್ಮಣ. ತನ್ನ ಸಂಪತ್ತೆಲ್ಲವನ್ನು ದಾನಮಾಡಿ ಶ್ರೀರಂಗಕ್ಕೆ ಬಂದು ನಿಂತನು. ರಾಮಾನುಜರ ಶಿಷ್ಯನಾಗಿ ಅವರೊಡನೆ ಉತ್ತರ ಭಾರತದ ಪ್ರವಾಸ ಕೈಗೊಂಡನು. ಶ್ರೀಭಾಷ್ಯಾದಿ ಗ್ರಂಥರಚನೆಯಲ್ಲೂ ಶ್ರೀವೈಷ್ಣವಮತ ಪ್ರಚಾರದಲ್ಲೂ ಅವರಿಗೆ ಸಹಾಯ ಮಾಡಿದನು.

ಶ್ರೀಶೈಲಾರ್ಯ : ತೆಂಗಲೆ ಸಂಪ್ರದಾಯದ ಶ್ರೀವೈಷ್ಣವರ ಗುರುಗಳು.

ಸಿದ್ಧಾಶ್ರಮ : ಚೆಂಗಲ್‌ಪೇಟೆ ಜಿಲ್ಲೆಯ ಮಧುರಾಂತಕಂ ದೇವಸ್ಥಾನ. ಇಲ್ಲಿ ಪೆರಿಯ ನಂಬಿ ಅಥವಾ ಮಹಾಪೂರ್ಣನೆಂಬ ಯಾಮುನಾಚಾರ್ಯರ ಪ್ರಸಿದ್ಧ ಶಿಷ್ಯನು ದೇವರ ಸೇವೆ ಮಾಡುತ್ತ ವಾಸಿಸುತ್ತಿದ್ದನು, ರಾಮಾನುಜರಿಗೆ ಸಂಸ್ಕಾರವಿತ್ತು; ರಹಸ್ಯಾರ್ಥಗಳನು ಬೋಧಿಸಿದನು.

ಸೀದಕಂಡ ಶಿಶುವಾದುದು : ಅಶ್ವತ್ಥಾಮನು ಪ್ರಯೋಗಿಸಿದ ಅಸ್ತ್ರದಿಂದ ಉತ್ತರೆ ಗರ್ಭದ ಮೇಲೂ ಪರಿಣಾಮವಾಯಿತು. ಅದರ ಅಳಿವನ್ನು ತಪ್ಪಿಸುವುದಾಗಿ ಕೃಷ್ಣನು ಪ್ರತಿಜ್ಞೆ ಮಾಡಿದ್ದನು ಪ್ರಸವವಾಗುತ್ತಲೇ ತೀರಿಹೋಗಿದ್ದ ಆ ಕೂಸು ಕೃಷ್ಣನ ಮಹಿಮೆಯಿಂದ ಪುನರ್ ಜನ್ಮಪಡೆಯಿತು.

ಸ್ವಸ್ತಿ ಸಮಸ್ತ .... ಬಿರುದ(ದೆ)ಂತೆಂಬರ ಗಂಡ : ಇದು ಮೈಸೂರು ದೊರೆಗಳ ಬಿರುದಾವಳಿ

ಹನ್ನೆರಡು ಜನಆಳ್ವಾರರು : ಮೊದಲ ಮೂವರು ಸೂರಿಗಳು : ಸರೋಯೋಗಿ, ಭೂತಯೋಗಿ ಮತ್ತು ಮಹಾಯೋಗಿ ಅಥವಾ ಪೊಯ್ಗೈಯಾಳ್ವಾರ್, ಪುದತ್ತಾಳ್ವಾರ್ ಮತ್ತು ಪೇಯಾಳ್ವಾರ್ ಎಂಬ ಮೂವರು ಆಳ್ವಾರರು. ಇವರು ಆಯೋನಿಜರೆಂದು ಶ್ರೀವೈಷ್ಣವರ ನಂಬಿಕೆ. ಮೊದಲನೆಯವರು ಕಂಚಿಯ ಸರೋವರದ ಒಂದು ಸುವರ್ಣಕಮಲದಲ್ಲಿ ಜನಿಸಿದರು.

ಎರಡನೆಯವರು ಮಲ್ಲಾಪುರಿಯಲ್ಲಿಯೂ ಮೂರನೆಯವರು ಮೈಲಾಪುರಿಯಲ್ಲೂ ಹುಟ್ಟಿದರು. ಮೂವರೂ ಭೂಪ್ರದಕ್ಷಿಣೆ ಮಾಡುತ್ತ, ದಿವ್ಯಜ್ಞಾನಿಗಳಾಗಿ ಭಗವದ್ಗುಣಾನುಭವ ಗೈಯುತ್ತಿದ್ದರು. ಮೂವರೂ ಶ್ರೀವಲ್ಲಿಕ್ಕೇಣಿ ಎಂಬಲ್ಲಿ ಸಂಧಿಸಿ ಕೆಲದಿನ ಒಟ್ಟಾಗಿದ್ದು ಪುನಃ ಯಾತ್ರೆ ಹೋದರು. ಶ್ರೀಕೋವಿಲೂರು ಅಥವಾ ಗೋವಲೂರಲ್ಲಿ ಒಬ್ಬ ಭಕ್ತನ ಮನೆಯಲ್ಲಿ ಸೇರಿದರು. ಮಳೆಹುಯ್ಯುತ್ತಿದ್ದುದರಿಂದ ರಾತ್ರಿಯನ್ನು ಕಳೆಯಲು ಪೊಯ್ಗೈಯಾಟ್ವಾರರು ಆ ಮನೆಯನ್ನು ಮೊದಲು ಪ್ರವೇಶಿಸಿ ಮಲಗಿಕೊಂಡರು. ತರುವಾಯ ಪೂದತ್ತಾಟ್ವಾರರು ಅಲ್ಲಿಗೆ ಬಂದರು. ಅಲ್ಲಿ ಹೆಚ್ಚು ಸ್ಥಳವಿಲ್ಲದ್ದರಿಂದ ಮುಂಚೆ ಮಲಗಿದ್ದ ಪೊಯ್ಗೈಯಾಟ್ವಾರರು ಎದ್ದು ಕುಳಿತು ಅವರಿಗೆ ಸ್ಥಳಮಾಡಿಕೊಟ್ಟು ತಮ್ಮ ಸೌಜನ್ಯ ತೋರಿದರು. ಅಷ್ಟರಲ್ಲಿ ಪೇಯಾಟ್ವಾರರೂ ಅದೇ ಮನೆಗೆ ಬಂದರು. ಅಂಥ ಇಕ್ಕಟ್ಟಿನ ಸ್ಥಳದಲ್ಲಿ ಮೂವರೂ ಸಂತೋಷದಿಂದ ಹೇಗೊ ಕಾಲಕಳೆಯುತ್ತಿರುವಷ್ಟರಲ್ಲಿ ಸಾಕ್ಷಾತ್ ವಿಷ್ಣು ಲಕ್ಷ್ಮೀಸಮೇತನಾಗಿ ಅಲ್ಲಿ ಅವರ ಸೌಜನ್ಯವನ್ನು ಅನುಭವಿಸಲು ಬಂದನು. ಬಂದವರು ಯಾರೆಂದು ತಿಳಿಯಬಯಸಿ ಪೊಯ್ಗೈಯಾಟ್ವಾರರು ಭೂಮಿಯನ್ನು ಪ್ರಣತೆಯನ್ನಾಗಿಸಿ ಸಮುದ್ರವನ್ನು ತುಪ್ಪಗೈದು ಸೂರ್ಯನನ್ನೇ ಜ್ಯೋತಿಯನ್ನಾಗಿಸಿದರು. ಪೂದತ್ತರು ಭಕ್ತಿಯೆಂಬ ಪಾತ್ರೆಯಲ್ಲಿ ಶ್ರದ್ಧೆಯ ತುಪ್ಪವಿಟ್ಟು ಜ್ಞಾನವನ್ನು ಜ್ಯೋತಿಯನ್ನಾಗಿಸಿದರು. ಪೇಯಾಟ್ವಾರರು ಭಗವಂತನನ್ನು ಮೊದಲು ಕಂಡು ಸಂತೋಷಗೊಂಡರು. ಹೀಗೆ ಮೂವರು ಭಗವಂತನನ್ನು ಪ್ರತ್ಯಕ್ಷ ಕಂಡು ಪ್ರಬಂಧಗಳ ಮುಖಾಂತರ ಸ್ತುತಿಗೈದರು. ಕೊನೆಯಲ್ಲಿ ಭಗವಂತನೊಡನೆ ಐಕ್ಯ ಪಡೆದರು.

ಭಕ್ತಿಸಾರರು : ಇವರು ತಿರುಮಟಿಶಿ ಎಂಬ ಊರಲ್ಲಿ ಋಷಿ ದಂಪತಿಗಳಿಗೆ ಜನಿಸಿದರು. ಜನಿಸಿದಾಗ ಮಾಂಸದ ಮುದ್ದೆಯಂತಿದ್ದುದರಿಂದ ಅವರು ಅದನ್ನು ಬೆತ್ತದ ಮೆಳೆಯಲ್ಲಿ ಚೆಲ್ಲಿ ಕೊಟ್ಟರು. ತಿರುವಾಳ್‌ಶಾರ್ವನೆಂಬ ಮೇದರವನು ಬೆತ್ತ ಕೊಯ್ಯಲೆಂದು ಅಲ್ಲಿಗೆ ಬಂದು ಅಳುತ್ತಿರುವ ಕೂಸನ್ನು ಕಂಡನು. ನಿಪುತ್ರಕನಾದ ಅವನು ಸಂತಸದಿಂದ ಅದನ್ನು ಎತ್ತಿ ತಂದು ತನ್ನ ಹೆಂಡತಿಯಾದ ಪಂಗಯಚೆಲ್ವಿಯ ಕೈಗೆ ಕೊಟ್ಟನು. ಅವಳು ಮೊಲೆಯೂಡ ಬಯಸಿದಾಗ ಕೂಸು ಮೊಲೆ ಕುಡಿಯಲಿಲ್ಲ. ಮೊದಲೇ ಪರಮಾತ್ಮನು ಆ ಕೂಸನ್ನು ದಯಾದೃಷ್ಟಿಯಿಂದ ನೋಡಿದ್ದುದರಿಂದ ಅದಕ್ಕೆ ಸಾಮಾನ್ಯ ಕೂಸುಗಳಿಗಿರುವಂಥ ಹಸಿವು ಬಾಯಾರಿಕೆಗಳಿರಲಿಲ್ಲ. ಆದರೂ ಆ ಕೂಸು ತೇಜಸ್ವಿಯಾಗಿ ಬೆಳೆಯುತ್ತಿರುವಲ್ಲಿ ಅಂತ್ಯಜ ದಂಪತಿ ಅಲ್ಲಿಗೆ

ಬಂದರು. ಅವರು ಆ ಕೂಸನ್ನು ಸ್ತುತಿಸಿ ಅದರ ಮುಂದೆ ಹಾಲನ್ನಿಟ್ಟರು. ಕೂಸು ಅರ್ಧದಷ್ಟು ಕುಡಿದು ಉಳಿದುದನ್ನು 'ನಿನ್ನ ಹೆಂಡತಿಗೆ ಕೊಡು' ಎಂದು ಹೇಳಿತು. ಅದೇ ರೀತಿ ಅಂತ್ಯಜನು ತನ್ನ ಹೆಂಡತಿಗೆ ಕೊಡಲು ಅವಳು ಅದನ್ನು ಸೇವಿಸಿ ತಾನು ಗರ್ಭ ಧರಿಸಿದಳು ಮತ್ತು ಕಣಿಕಣ್ಣನೆಂಬ ಮಗನಿಗೆ ಜನ್ಮವಿತ್ತಳು. ಅವನು ತನ್ನ ಜನನಕ್ಕೆ ಕಾರಣವಾದ ಋಷಿ ಕುಮಾರನ ಸೇವೆಗಾಗಿ ಅವನಲ್ಲಿಯೇ ಬಂದು ನಿಂತನು. ಭಕ್ತಿಸಾರರು ತಿರುವಲ್ಲಿಕ್ಕೇಣಿ ಎಂಬಲ್ಲಿಗೆ ಬಂದು ಪೇಯಾಟ್ವಾರರ ಸನ್ನಿಧಿಯಲ್ಲಿ ಜ್ಞಾನೋಪದೇಶ ಹೊಂದಿದರು. ಏಳು ನೂರು ವರ್ಷಗಳವರೆಗೆ ವಿಷ್ಣುಧ್ಯಾನನಿರತರಾಗಿದ್ದರು. ಒಮ್ಮೆ ಆಕಾಶದಲ್ಲಿ ಪಾರ್ವತೀಸಮೇತನಾಗಿ ಸಂಚರಿಸುತ್ತಿದ್ದ ಶಿವನು ಇವರನ್ನು ಕಂಡು ಮೆಚ್ಚಿ ನೋಡುವ ಸಂಭ್ರಮದಿಂದ ಭೂಮಿಗಿಳಿದನು. ಅವನು ಬೇಡಿದ ವರವೀಯುವುದಾಗಿ ತಿಳಿಸಿದನು. ಇವರು ಅದನ್ನು ನಿರಾಕರಿಸಿ 'ಮೋಕ್ಷವೀಯುವುದು ಸಾಧ್ಯವೆ' ಎಂದು ಕೇಳಿದರು. ಶಿವನು ಅದು ತನ್ನಿಂದ ಸಾಧ್ಯವಿಲ್ಲವೆಂತಲೂ ಬೇಕಾದ ಬೇರೆ ವರವೀಯುವೆನೆಂತಲೂ ತಿಳಿಸಿದನು. ಇವರು ನಕ್ಕು 'ಹಾಗಾದರೆ ಕಂತೆ ಹೊಲಿಯುವುದಕ್ಕೆ ಸೂಜಿಯೊಡನೆ ದಾರವೂ ಬರಲಿ' ಎಂದು ಬೇಡಿದರು. ಶಿವನು ಇದರಿಂದ ಕೋಪಗೊಂಡು ತನ್ನ ಉರಿಗಣ್ಣು ತೆರೆದನು. ಇವರೂ ತಮ್ಮ ಎಡಗಾಲನ್ನೆತ್ತಿದರು. ಶಿವನಿಂದ ಹೊರಟ ಉರಿಗಣ್ಣಿನ ಜ್ವಾಲೆ ಮಸುಳಿಸಿ ಇವರ ಪಾದಜ್ವಾಲೆ ಶಿವನನ್ನು ಆವರಿಸಿ ಘಾಸಿಗೊಳಿಸಿತು. ಹೆದರಿದ ಶಿವನು ಕೈಲಾಸಕ್ಕೆ ಹೊರಟುಹೋದನು. ಇದೇ ರೀತಿ ಭಕ್ತಿಸಾರರು ಹಲವು ಪವಾಡಗಳನ್ನು ಮಾಡಿದರು. ಕೊನೆಯಲ್ಲಿ ಕುಂಭಕೋಣಕ್ಕೆ ಬಂದು ಅಲ್ಲಿಯ ವಿಷ್ಣುವನ್ನು ಭಜಿಸಿ ಮೋಕ್ಷ ಹೊಂದಿದರು.

ಶಠಕೋಪರು : ಇವರು ಹುಟ್ಟುತ್ತಲೇ ಮಾಂಸದ ಮುದ್ದೆಯಾಗಿದ್ದುದರಿಂದ ತಂದೆ–ತಾಯಿಗಳು ಆ ಮುದ್ದೆಯನ್ನು ತೊಟ್ಟಿಲಲ್ಲಿಟ್ಟು ತಂದು ತಿರುಕ್ಕುರುಂಗುಡಿಯ ದೇವಾಲಯದಲ್ಲಿ ದೇವರಿಗೆ ಅರ್ಪಿಸಿದರು. ಆ ಮುದ್ದೆ ಬಾಲಕನ ರೂಪಧರಿಸಿ ಸಮೀಪದ ಗಿಡದ ಹೊದರಿನಲ್ಲಿ ಸೇರಿಕೊಂಡಿತು. ಅವರೇ ಶಠಕೋಪರು. ಮಧುರಕವಿಯಾಟ್ವಾರರು ಇವರನ್ನು ಸಂದರ್ಶಿಸುವವರೆಗೂ ಅಲ್ಲಿಯೇ ಇದ್ದು ನಿರಾಹಾರಿಗಳಾಗಿದ್ದರು. 'ತಿರುವಾಯ್ಮೊಟಿ'ಯ ಕರ್ತೃ ಇವರೇ.

ಕೊಲ್ಲಿನಗರದ ಕುಲಶೇಖರಾಟ್ವಾರರು : ಕೇರಳದ ವಂಜಿಕ್ಕಳ ಅಥವಾ ಕೊಲ್ಲಿನಗರದ ಚೇರ ರಾಜಕುಲದಲ್ಲಿ ಹುಟ್ಟಿದರು. ತಂದೆಯಿಂದ ಪಟ್ಟಾಭಿಷಿಕ್ತರಾದ ಮೇಲೆ ಒಮ್ಮೆ ರಾಮಾಯಣ ಕೇಳುತ್ತಿದ್ದರು. ರಾವಣನು ಸೀತೆಯನ್ನು ಕದ್ದೊಯ್ದನೆಂದೂ ಅದಕ್ಕೆ ರಾಮನು ವಾನರಸೈನ್ಯಸಮೇತ ಲಂಕೆಯ

ಮೇಲೆ ದಾಳಿ ಮಾಡಲು ಸಿದ್ಧನಾದನೆಂದೂ ಪುರಾಣಿಕರು ಹೇಳಿದರು. ಅದನ್ನು ಕೇಳುವುದೇ ತಡ ಕುಲಶೇಖರರು ರಾಮನಿಗೆ ಸಹಾಯಕರಾಗಿ ಹೊರಡಲು ಸಿದ್ಧರಾಗಿ ತಮ್ಮ ಸೈನ್ಯಕ್ಕೆ ಅದೇ ರೀತಿ ಅಜ್ಞಾಪಿಸಿಬಿಟ್ಟರು. ಹೀಗೆ ಸನ್ನದ್ಧರಾಗಿ ಹೊರಟ ಕುಲಶೇಖರರನ್ನು ಕಂಡು ದಿಗ್ಭ್ರಾಂತರಾದ ಪರಿವಾರದವರು ಪುರಾಣಿಕರಿಗೆ 'ರಾಮನು ಯುದ್ಧದಲ್ಲಿ ವಿಜಯಿಯಾಗಿ ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾಗಿರುವನೆಂದೂ ರಾಮ-ಸೀತೆಯರು ಈಗ ಸುಖವಾಗಿದ್ದಾರೆಂದೂ' ತಿಳಿಸುವಂತೆ ಹೇಳಿದರು. ಪುರಾಣಿಕರು ಅದೇ ಪ್ರಕಾರ ಹೇಳಲು ಕುಲಶೇಖರರು "ಸ್ವಾಮಿಗೆ ಜಯವಾಯಿತೆ?" ಎನ್ನುತ್ತ ಸೈನ್ಯಸಮೇತ ಪಟ್ಟಣಕ್ಕೆ ಪುನಃ ಬಂದರು !

ವೈಷ್ಣವರು ಕಳವು ಮಾಡುವವರಲ್ಲ : ಕುಲಶೇಖರರ ಭಕ್ತಿಪರವಶತೆಯಿಂದಾಗಿ ಮಂತ್ರಿ ಮೊದಲಾದವರಿಗೆ ರಾಜ್ಯಭಾರ ಮಾಡುವುದೇ ಕಷ್ಟವಾಗತೊಡಗಿತು. ಇದನ್ನು ಏನಾದರೂ ಉಪಾಯದಿಂದ ತಪ್ಪಿಸಬೇಕೆಂದು ಅವರು ನಿರ್ಧರಿಸಿದರು. ರಾಜನ ಈ ವರ್ತನೆಗೆ ಆತನ ಅರಮನೆಯಲ್ಲಿ ಯಾವತ್ತೂ ಇರುವ ವೈಷ್ಣವರೇ ಕಾರಣರೆಂದು ಅವರು ಭಾವಿಸಿದ್ದರು. ಕಾರಣ ಒಂದು ದಿನ ರಾಜನ ಆಭರಣವೊಂದನ್ನು ಮುಚ್ಚಿಟ್ಟರು. ಸ್ನಾನಾನಂತರ ಪೂಜೆಯಾದ ಮೇಲೆ ರಾಜನು ಆ ಆಭರಣವನ್ನು ತರಲು ಅಜ್ಞಾಪಿಸಿದನು. ಪರಿಚಾರಕರು ಅದು ಕಳುವಾಗಿದೆಯೆಂದೂ ಅರಮನೆಯಲ್ಲಿ ಯಾವತ್ತೂ ಇರುವ ವೈಷ್ಣವರೇ ಅದನ್ನು ಕದ್ದಿರಬೇಕೆಂದೂ ತಿಳಿಸಿದರು. ಅದನ್ನು ಕೇಳಿದ ಕುಲಶೇಖರನು 'ವೈಷ್ಣವರು ಕಳವು ಮಾಡುವವರಲ್ಲ. ಈ ಮಾತಿಗೆ ನಾನೇ ಸಾಕ್ಷಿ' ಎಂದು ಹೇಳಿ ಹಾವಿದ್ದ ಕೊಡದಲ್ಲಿ ಕೈಹಾಕಿದರು. ಇದನ್ನು ಕಂಡ ಮಂತ್ರಿ ಮೊದಲಾದವರು ಹೆದರಿದರು.

ವಿಷ್ಣುಚಿತ್ತರು ಅಥವಾ ಪೆರಿಯಾಳ್ವಾರರು : ಪಾಂಡ್ಯರಾಜನು ಒಮ್ಮೆ ದರ್ಶನದಲ್ಲಿ ಯಾವುದು ಶ್ರೇಷ್ಠ ಎಂಬ ಪ್ರಶ್ನೆಯನ್ನೆತ್ತಿ ಒಂದು ಪಣವನ್ನೊಡ್ಡಿದನು. ಪಟ್ಟಣದ ನಡುವೆ ಒಂದು ಕಂಬ ನೆಟ್ಟು ಅದರ ತುದಿಗೆ ಸಾವಿರ ವರಹಗಳಿರುವ ಚೀಲವೊಂದನ್ನು ಸರಪಣಿಯ ಸಹಾಯದಿಂದ ಕಟ್ಟಿ ತೂಗುಬಿಟ್ಟನು. ತನ್ನ ಮತದ ಶ್ರೇಷ್ಠತೆಯನ್ನು ಸ್ಥಾಪಿಸುವ ವಿದ್ವಾಂಸನು ಸಭೆಯಲ್ಲಿ ತನ್ನ ವಾದ ಮಂಡಿಸಬೇಕು. ಹಾಗೆ ವಾದ ಮಂಡಿಸಿ ಮುಗಿದಾಕ್ಷಣ ಕಂಬಕ್ಕೆ ಕಟ್ಟಿ ನೇತಾಡುವ ಆ ಚೀಲವು ನೆಲಕ್ಕೆ ಬೀಳಬೇಕು. ಬಿದ್ದರೆ ಆ ಮತಜ್ಞನ ಮತವೇ ಶ್ರೇಷ್ಠವೆಂದು ನಿರ್ಣಯವಾದಂತೆ. ಇಲ್ಲದಿದ್ದರೆ ಇಲ್ಲ. ಈ ಪಣ ನಡೆಯುವ ಸಮಾಚಾರ ವಿಲ್ಲಿಪುತ್ತೂರಲ್ಲಿರುವ ಪೆರಿಯಾಳ್ವಾರರಿಗೆ ವಟಪತ್ರಶಾಯಿಯಾದ ವಿಷ್ಣು ಸ್ವಪ್ನದಲ್ಲಿ ತಿಳಿಸಿದ್ದರಿಂದ ಗೊತ್ತಾಯಿತು ಹಾಗೂ ಪಾಂಡ್ಯ ಸಭೆಗೆ ಹೋಗಲು ಅಜ್ಞೆಯಾಯಿತು. ಅದೇ ರೀತಿ ಪೆರಿಯಾಳ್ವಾರರು ಪಾಂಡ್ಯಸಭೆಗೆ

ಹೋಗಿ ವಿಷ್ಣುವೇ ಸರ್ವೋತ್ತಮನೆಂದು ಸಾರಿದರು. ಹಣದ ಚೀಲವು ಕಂಬದಿಂದ ಹರಿದು ಅವರಿದ್ದಲ್ಲಿಗೆ ಬಂದು ಬಿತ್ತು.

ಭಕ್ತಾಂಘ್ರಿರೇಣು ಅಥವಾ ತೊಂಡರಡಿಪ್ಪೊಡಿಯಾಳ್ವಾರ್ : ಕಾವೇರಿ ತಟದ ಮಂಡಂಗುಡಿಯೆಂಬ ಅಗ್ರಹಾರದಲ್ಲಿ ಪುರಶ್ಚೂಣ ವೈಷ್ಣವ ಕುಲದಲ್ಲಿ ಹುಟ್ಟಿದರು. ತಾಯಿ-ತಂದೆಗಳಿಗೆ ತಿಳಿಸದೇ ಶ್ರೀರಂಗಕ್ಕೆ ಬಂದು ನೆಲಸಿದರು. ಪ್ರತಿದಿನ ಶ್ರೀರಂಗನಾಥನಿಗೆ ಮಾಲೆ ಅರ್ಪಿಸುವ ಕೈಂಕರ್ಯ ಕೈಗೊಂಡಿದ್ದರು. ಕಾರಣಾಂತರಗಳಿಂದ ಈ ಕಾರ್ಯದಿಂದ ಚ್ಯುತರಾಗಿ ಕಷ್ಟಪಡುತ್ತಿದ್ದಾಗ ಶ್ರೀರಂಗನಾಥನು ವಟುರೂಪದಿಂದ ಬಂದು ಇವರ ಕಷ್ಟ ನಿವಾರಿಸಿದನು.

ಮುನಿವಾಹನರು ಅಥವಾ ತಿರುಪ್ಪಾಣಾಳ್ವಾರರು : ಅಂತ್ಯಜರಾದ ಇವರು ಸಂಗೀತದಿಂದ ಶ್ರೀರಂಗನಾಥನನ್ನು ಮೆಚ್ಚಿಸಿ ಸಾಕ್ಷಾತ್ಕರಿಸಿಕೊಂಡರು. ಇವರು ಶ್ರೀರಂಗಕ್ಕೆ ಹೋಗದೆ ಕಾವೇರಿಯ ದಕ್ಷಿಣತೀರದಲ್ಲಿ ಶ್ರೀರಂಗನಾಥನನ್ನು ಸ್ತುತಿಸುತ್ತಿದ್ದರು. ರಂಗನಾಥಸ್ವಾಮಿಯ ಅಜ್ಞೆಯಂತೆ ಇವರನ್ನು ಕರೆಯಲೆಂದು ದೇವಾಲಯದ ಅಧಿಕಾರಿಗಳು ಸಕಲ ಸಿದ್ಧತೆಗಳೊಂದಿಗೆ ಬಂದರು. ತಿರುಪ್ಪಾಣರು ಅದನ್ನೊಪ್ಪದೆ ಕಣ್ಣುಮುಚ್ಚಿ ಓಡಿಹೋದರು. ಆಮೇಲೆ ಶ್ರೀರಂಗನಾಥನು ತ್ರಿಲೋಕಸಾರಂಗರೆಂಬ ಮಹಾಮುನಿಗಳಿಗೆ ಅಜ್ಞಾಪಿಸಿದನು. ಅವರು ತಿರುಪ್ಪಾಣರಿದ್ದಲ್ಲಿಗೆ ಬಂದರು ತಿರುಪ್ಪಾಣರು ಆಗ ಭಗವಂತನ ಗುಣಾನುಭವದಲ್ಲಿ ಮೈಮರೆತಿದ್ದರು. ಅದೇ ಸಮಯವೆಂದು ತಿರುಪ್ಪಾಣರನ್ನು ತಮ್ಮ ತೋಳುಗಳ ಮೇಲೆ ಕೂಡಿಸಿಕೊಂಡು ಶ್ರೀರಂಗ ದೇವಾಲಯಕ್ಕೆ ಬಂದರು. ಎಚ್ಚರಗೊಂಡ ತಿರುಪ್ಪಾಣರು ಪರಿಸ್ಥಿತಿಯನ್ನರಿತು ದೇವರಿಚ್ಛೆಯಿದ್ದಂತಾಗಲಿ ಎಂದು ಸುಮ್ಮನಾದರು. ತ್ರಿಲೋಕಸಾರಂಗರು ತಿರುಪ್ಪಾಣರನ್ನು ದೇವಾಲಯದ ಒಳಗಿರುವ 'ಆಮೋದ'ವೆಂಬ ಕಂಬದ ಸಮೀಪ ಇಳಿಸಿದರು. ಇವರು ಮುಂದೆ ಹೋಗಿ ಶ್ರೀರಂಗನಾಥನನ್ನು ಪ್ರತ್ಯಕ್ಷ ಕಂಡು ಪ್ರಬಂಧಗಳನ್ನು ಹಾಡಿ ಆತನಲ್ಲಿಯೆ ಐಕ್ಯ ಹೊಂದಿದರು.

ಪರಕಾಲ ಅಥವಾ ತಿರುಮುಂಗೈಯಾಳ್ವಾರರು : ಶ್ರೀಕುರೈಯಲೂರಲ್ಲಿ ಶೂದ್ರಕುಲದ ಗುರಿಕಾರ ಮನೆತನದಲ್ಲಿ ಪರಕಾಲರು ಹುಟ್ಟಿದರು. ವೈದ್ಯನಾದ ವೈಷ್ಣವ ಬ್ರಾಹ್ಮಣನಿಗೆ ದೊರೆತ ಕುಮುದವಲ್ಲಿಯನ್ನು ಬಯಸಿ ಅವಳ ಇಚ್ಛೆಯಂತೆ ವೈಷ್ಣವ ಸಂಸ್ಕಾರಗಳನ್ನು ಪಡೆದು ಲಗ್ನವಾದರು. ಆದರೆ ಅವಳಿಂದ ಶಯ್ಯಾ ಸುಖ ದೊರೆಯದೇ ಇರಲು, ಅದನ್ನು ಪಡೆಯುವುದಕ್ಕಾಗಿ ಸಹಸ್ರ ವೈಷ್ಣವ ಭೋಜನ ವ್ಯವಸ್ಥೆ ಮಾಡಬೇಕೆಂದು ಹೇಳಲು ಅದಕ್ಕೆ

ಪ್ರಯತ್ನಪಡತೊಡಗಿದರು. ಲಕ್ಷ್ಮಿಯ ಅಜ್ಞೆಯಂತೆ ಅದು ಪೂರ್ಣಗೊಳ್ಳದಿರಲು ಪ್ರತಿ ದಿನವೂ ಸಹಸ್ರ ವೈಷ್ಣವ ಭೋಜನಕ್ಕೆ ವ್ಯವಸ್ಥೆ ಮಾಡುತ್ತ ಹೋದುದರಿಂದ ಹಣವೆಲ್ಲವೂ ತೀರಿತು. ಅಧಿರಾಜನಾದ ಚೋಳ ದೊರೆಗೆ ಸಂದಾಯವಾಗಬೇಕಾಗಿದ್ದ ಕಂದಾಯ-ಕಾಣಿಕೆಗಳು ಬಾಕಿ ನಿಂತವು. ಚೋಳರಾಜನು ಇವರನ್ನು ಹಿಡಿಯಲು ಸೈನ್ಯಸಮೇತ ಬಂದು ಯುದ್ಧ ಹೂಡಿದನು. ಪರಕಾಲರು ಯುದ್ಧದಲ್ಲಿ ಒಳ್ಳೆ ಪರಾಕ್ರಮದಿಂದ ಹೋರಾಡುವುದನ್ನು ಕಂಡು ಮೆಚ್ಚಿ ಚೋಳರಾಜನು ಪರಕಾಲರು ತನಗೆ ಕೊಡಬೇಕಾದ ಹಣವನ್ನು ಕೊಟ್ಟರೆ ಈಗಲೂ ಬಿಡುವುದಾಗಿ ಹೇಳಿ ಬಂಧನದಲ್ಲಿಟ್ಟನು. ಆಗ ಕನಸಿನಲ್ಲಿ ರಂಗನಾಥನು ಕಾಣಿಸಿಕೊಂಡು ಕಂಚೀಪಟ್ಟಣ ಸಮೀಪದ ವೇಗವತಿಯ ದಡದಮೇಲೆ ನಿಧಿಯಿರುವುದಾಗಿ ತಿಳಿಸಿದನು. ಪರಕಾಲರು ತನ್ನ ಕಾವಲಿಗಿದ್ದ ಮಂತ್ರಿಗೆ ಹೇಳಿ ಕಂಚಿಗೆ ಬಂದು ಕಂಚಿಯ ವಿಷ್ಣುವನ್ನು ಪೂಜಿಸಿ ಆ ನಿಧಿ ಪಡೆದರು ಹಾಗೂ ಚೋಳರಾಜನ ಋಣ ತೀರಿಸಿದರು. ಇಷ್ಟಾದರೂ ಸಹಸ್ರ ವೈಷ್ಣವ ಭೋಜನದ ವ್ರತ ಪೂರ್ಣಗೊಳ್ಳಲಿಲ್ಲ. ಆ ಪ್ರಯತ್ನದಲ್ಲಿ ಪರಕಾಲರು ಕಳವು, ಸುಲಿಗೆಗಳನ್ನು ನಡೆಸತೊಡಗಿದರು. ಈತ ಇನ್ನು ಕಷ್ಟಪಟ್ಟು ಪ್ರಯೋಜನವಿಲ್ಲವೆಂದು ಭಾವಿಸಿದ ಪರಮಾತ್ಮನು ಬ್ರಾಹ್ಮಣ ಮದುವಣಿಗನ ವೇಷದಿಂದ ಆ ಪ್ರದೇಶಕ್ಕೆ ಬಂದನು. ಅಲ್ಲಿ ಕಾಯುತ್ತಿದ್ದ ಪರಕಾಲರು ಆ ಬ್ರಾಹ್ಮಣನ ಪರಿವಾರದ ಎಲ್ಲವನ್ನೂ ಸುಲಿದು ಒಂದು ಗಂಟುಕಟ್ಟಿ ಎತ್ತಬೇಕೆಂದು ನೋಡಲು ಆ ಗಂಟು ಕದಲಲೇ ಇಲ್ಲ. ಇದು ಬ್ರಾಹ್ಮಣನ ಮಂತ್ರದ ಪ್ರಭಾವವೆಂದು ಬಗೆದು ಆ ಮಂತ್ರವನ್ನು ಹೇಳಬೇಕೆಂದು ಪೀಡಿಸಿದರು. ಆ ಬ್ರಾಹ್ಮಣರೂಪಿ ಪರಮಾತ್ಮನು ಆ ಮಂತ್ರವನ್ನು ಹೀಗೆ ಬಹಿರಂಗವಾಗಿ ಹೇಳಲಾಗುವುದಿಲ್ಲವೆಂದೂ ಗೌಪ್ಯದಲ್ಲಿ ಹೇಳಬೇಕಾದುದೆಂದೂ ಹೇಳಿ 'ಅಷ್ಟಾಕ್ಷರೀ ಮಂತ್ರ' ಮೊದಲಾದ ಮಂತ್ರಗಳನ್ನು ರಹಸ್ಯವಾಗಿ ಉಪದೇಶಿಸಿದನು. ಇದರಿಂದ ಪರಕಾಲರು ಪರಮವೈಷ್ಣವರಾದರು.

ಗೋದಾದೇವಿ ಅಥವಾ ಶೂಡಿಕ್ಕುಡುತ್ತನಾಚ್ಚಿಯಾರ್ : ವಿಷ್ಣುಚಿತ್ತರು ಅಥವಾ ಪೆರಿಯಾಳ್ವಾರಿಗೆ ನೆಲ ಅಗೆಯುವಾಗ ಪೆಟ್ಟಿಗೆಯೊಂದರಲ್ಲಿ ದೊರಕಿದವಳು. ತಂದೆ ವಿಷ್ಣುಚಿತ್ತರು ರಂಗನಾಥನಿಗೆ ಸಮರ್ಪಿಸುವುದಕ್ಕೆ ಸಿದ್ಧಗೊಳಿಸಿಟ್ಟ ಮಾಲೆಯನ್ನು ಭಕ್ತಿಭರದಲ್ಲಿ ತಾನೆ ಧರಿಸಿ ಆನಂದಪಡುತ್ತಿದ್ದಳು. ಇವಳು ಅಯೋನಿಜೆಯಾದುದರಿಂದ ಲಕ್ಷ್ಮಿಯ ಅವತಾರವೆಂದೇ ನಂಬಿಕೆ.

ಮಧುರ ಕವಿಗಳು : ಶ್ರೀಕೋಳೂರೆಂಬ ಗ್ರಾಮದವರು. ಶಠಕೋಪರು ಕೋಟರದ ಮರೆಯಲ್ಲಿರುತ್ತಿದ್ದಾಗ ಅವರನ್ನು ಹುಡುಕಿ ಅವರ ಮಹಿಮೆಯನ್ನು

ಕಂಡುಕೊಂಡರು. ಅವರಿಂದ ಮಂತ್ರ ರಹಸ್ಯಗಳನ್ನರಿತುಕೊಂಡು ಗುರುವೆಂದು ಭಾವಿಸಿ ಸೇವೆ ಸಲ್ಲಿಸುತ್ತಿದ್ದರು.

ಹಸ್ತಿಗಿರಿನಾಥ : ಕಾಂಚೀಪಟ್ಟಣದ ವಿಷ್ಣುದೇವತೆ, ವರದರಾಜಸ್ವಾಮಿ. (ನೋಡು. ಕಾಂಚೀಪೂರ್ಣ) ಕಾಂಚೀಪೂರ್ಣರ ಸಹಾಯದಿಂದ ಅರ್ಥಪಂಚಕಗಳನ್ನು ತಿಳಿದುಕೊಂಡುದು ಈ ದೇವಸ್ಥಾನದಲ್ಲಿಯೇ. ಕಾಂಚೀಪೂರ್ಣರು ವರದರಾಜ ನಿಂದ ಕೇಳಿ ತಿಳಿದು ಅವನ್ನು ರಾಮಾನುಜರಿಗೆ ಹೇಳಿದರೆಂದು ನಂಬಿಕೆ.

ಪದಕೋಶ

ಅಗರ	ಅಗ್ರಹಾರ, ಬ್ರಾಹ್ಮಣರು ವಾಸಿಸುವ ಭಾಗ
ಅಗರಂಗೆಯ್	(ಬೇರೆ ಊರನ್ನು) ಅಗ್ರಹಾರವಾಗಿ ಪರಿವರ್ತಿಸು
ಅಟ್ಟ ಅಗೞ	ಕೋಟೆಗೋಡೆಯ ಸುತ್ತ ಅಗಿದ ತಗ್ಗು
ಅಟ್ಟಣೆ ಅಟ್ಟಳೆ	ಮಂಚಿಕೆ
ಅಡಿಗೋಂಟೆ	ಮುಖ್ಯವಾದ ಕೋಟೆ
ಅಣುಗ	ಮಗ; ಪ್ರೀತಿಯ ವ್ಯಕ್ತಿ
ಅಣೆ	ಇರಿ, ಚುಚ್ಚು; ಪ್ರತಿಭಟಿಸು
ಅಂಟುಗಳೆ	ಒಂದು ಬಗೆಯ ಬಲೆ; ಪ್ರಾಣಿಗಳನ್ನು ಹಿಡಿಯುವ ಸಾಧನ
ಅನುರಾಗ	ಪ್ರೀತಿ; ಕೆಂಪು ಬಣ್ಣ
ಅನುವಾಕಗಳು	ವೇದಸೂಕ್ತ ಸಮುದಾಯಗಳು
ಅನುವೇಟ್	ಸಾಮೋಪಾಯದಿಂದ ಕೆಲಸ ಸಾಧಿಸು, ಮಾತುಕತೆಯಿಂದ ಕೆಲಸ ಸಾಧಿಸು
ಅನುಸಂಧಾನ	ಪಾರಾಯಣ, ವಿವೇಚನೆ, ಚರ್ಚೆ
ಅಂದಳ	ಅಂದಣ=ದಂಡಿಗೆ, ಪಲ್ಲಕ್ಕಿ, ಮೇಣೆ
ಅಂದುಗೆ	ನೂಪುರ, ಪೈಜಣ
ಅಪೂಪ	ಖಾದ್ಯ ವಿಶೇಷ, ಸಿಹಿವಡೆ
ಅಪ್ರಮೇಯ	ಅಳೆಯಲಾಗದ, ನಿರ್ಧರಿಸಲಾಗದ, ತಿಳಿಯಲಸಾಧ್ಯವಾದ, ಅಮಿತವಾದ

ಅಂಬರೀಶ	ಸೂರ್ಯವಂಶದ ಒಬ್ಬದೊರೆ, ವಿಷ್ಣುಭಕ್ತ
ಅರಿದಾಳ	ಹರಿದಾಳ=ಹರದಾಳ ; ಹಳದೀಬಣ್ಣದ ಒಂದು ಲೋಹ, ಶಂಖಪಾಷಾಣ–ಗಂಧಕಗಳ ಮಿಶ್ರಣದಿಂದಾದುದು
ಅ(ಆ)ರ್ಚಾರೂಪ	ಅರ್ಚಾವತಾರ ಗೃಹಾರ್ಚಾರೂಪ; ಮನೆ, ದೇವಾಲಯಗಳಲ್ಲಿ ಪೂಜಿಸಲ್ಪಡುವ ಮೂರ್ತಿ ರೂಪದ ವಿಷ್ಣು
ಅರ್ಥಪಂಚಕ	ಸ್ವಸ್ವರೂಪ, ಪರಸ್ವರೂಪ ಪುರುಷಾರ್ಥಗಳ ಸ್ವರೂಪ ಉಪಾಯಗಳ ಸ್ವರೂಪ ವಿರೋಧಿಸ್ವರೂಪ ಎಂಬವು
ಅರ್ಥಾಪಾದನ	ಅಡಕಗೊಳಿಸಿದ, ಸಮಗ್ರವಾದ ಅರ್ಥ
ಅಱಿಕೆಗಾಳಗ	ಪೂರ್ವಸೂಚನೆ ಕೊಟ್ಟು ಅಹ್ವಾನಿಸಿ ಮಾಡುವ ಯುದ್ಧ
ಅಲಂಕರ್ಮೀಣ	ಯೋಗ್ಯ, ಸಮರ್ಥ, ಹೊಂದಿಕೆಯಾಗುವ
ಅಲುಂಕು	ಉಳುಕು, ಬಲಗುಂದು
ಅಸ್ರಶ್ಚಂದನ	ಕೆಂಪು, ಚಂದನ, ರಕ್ತಚಂದನ
ಅಷ್ಟಾಕ್ಷರೀಮಂತ್ರ	'ಓಂ ನಮೋ ನಾರಾಯಣಾಯ' ಎಂಬ ಮಂತ್ರ
ಅಳ್ಳಿಗ	ಸಮಾಧಿಸ್ಥ, ಧ್ಯಾನಸ್ಥ, ತಪಸ್ವಿ
ಆಣಕ	ದೊಡ್ಡ ನಗಾರಿ, ಭೇರಿ
ಆಪಸ್ತಂಬ	ಕೃಷ್ಣಯಜುರ್ವೇದಕ್ಕೆ ಸಂಬಂಧಿಸಿದ ಧರ್ಮಸೂತ್ರ, ಗೃಹ್ಯಸೂತ್ರ, ಶ್ರೌತ ಸೂತ್ರಗಳ ಕರ್ತೃ, ಆ ಹೆಸರಿನ ಶಾಖೆಯ ಪ್ರವರ್ತಕ
ಆರುದರ್ಶನಗಳು	ನ್ಯಾಯ–ವೈಶೇಷಿಕ, ಸಾಂಖ್ಯ–ಯೋಗ, ಪೂರ್ವಮೀಮಾಂಸೆ ಉತ್ತರ ಮೀಮಾಂಸೆ ಅಥವಾ ವೇದಾಂತ ಎಂಬ ಆರು ತತ್ವಜ್ಞಾನ ಶಾಖೆಗಳು
ಆಟ್ವೈರಿ	ಕೋಟೆಯಗೋಡೆ
ಇಕ್ಷ್ವಾಕುಕುಲ	ಸೂರ್ಯವಂಶದಲ್ಲಿ ಆಗಿಹೋದ ಪ್ರಸಿದ್ಧ ಇಕ್ಷ್ವಾಕು ಎಂಬ ಅರಸನಿಂದ ಉಂಟಾದ ವಂಶ, ಸೂರ್ಯವಂಶ

ಇಂಗಡಲು ಕ್ಷೀರಸಾಗರ

ಇಜ್ಯಾ ಹೋಮಾಹುತಿ; ಯಜ್ಞದಲ್ಲಿ ಸಮರ್ಪಿಸಬೇಕಾದ ವಸ್ತು; ನೈವೇದ್ಯ

ಇಡಿಕಿರಿ ಒತ್ತೊತ್ತಾಗಿ ತುಂಬು

ಇತಿಹಾಸ ರಾಮಾಯಣ-ಮಹಾಭಾರತ ಕಾವ್ಯಗಳು

ಈಚಲುಪುಟು ರೆಕ್ಕೆಯುಳ್ಳ ಒಂದುಹುಳು, ಮಳೆಗಾಲದಲ್ಲಿ ದೀಪಕ್ಕೆ ಮುತ್ತುವ ಹುಳು

ಉಗಿದ ಸುಲಿದ

ಉಚಿತ ಕಾಣಿಕೆ, ಮರ್ಯಾದೆ; ಯೋಗ್ಯ

ಉತ್ತಮರ್ಣಾಯಿತ ಸಾಲಕೊಡುವಂತಿರುವ; ಹೆಚ್ಚಳವನ್ನುಂಟುಮಾಡುವ; ಶ್ರೇಷ್ಠ

ಉತ್ತಮಾಶ್ರಮ ಸನ್ಯಾಸಾಶ್ರಮ, ಅರಣ್ಯದಲ್ಲಿರುವ ಆಶ್ರಮ

ಉತ್ಕೋಚ ಲಂಚ

ಉಭಯವೇದಾಂತ ಸಂಸ್ಕೃತ ಮತ್ತು ತಮಿಳು ವೇದಾಂತ

ಉಭಯವಿಭೂತಿ ವೈಕುಂಠದಲ್ಲಿರುವ ನಿತ್ಯವಿಭೂತಿ ಮತ್ತು ಲೀಲೆಗಾಗಿ ಅವತರಿಸುವ ವಿಭೂತಿ, ದೇವರೂಪ

ಉಪರೋಧ ತೊಂದರೆ

ಉಯ್ ಹೊಟ್ಟು, ಜಳ್ಳು, ತವುಡು

ಉರಾಟ ಕುಸ್ತಿಯ ಒಂದು ಪಟ್ಟು

ಉಲುಪೆ ಆಹಾರ ಪದಾರ್ಥಗಳ ಕಚ್ಚಾಸಾಮಗ್ರಿ, ಹಿಟ್ಟು, ಅಕ್ಕಿ ಮುಂತಾದವು

ಉಷ್ಣೀಷ ಮುಂಡಾಸು

ಊಣೆಯ ಕುಂದು, ದೋಷ, ಕೊರತೆ

ಊರ್ಧ್ವಪುಂಡ್ರ	ಬಿಳಿಯನಾಮ, ಶ್ರೀವೈಷ್ಣವರ ನಾಮ
ಊರ್ಮಿ	ತೆರೆ
ಎಗ್ಗ	ಮೂರ್ಖ, ದಡ್ಡ, ಹೆಡ್ಡ
ಎಡೆದು	ಕೊಂದು, ಕಿತ್ತು
ಎಂಟು ಪ್ರಕೃತಿಗಳು	ಪ್ರಕೃತಿ, ಮಹತ್ತು, ಅಹಂಕಾರ, ಶಬ್ದ, ರೂಪ, ರಸ, ಗಂಧ, ಸ್ಪರ್ಶ (ತನ್ಮಾತ್ರಗಳು)
ಎರಡು ವಿಭೂತಿ	ಉಭಯವಿಭೂತಿ
ಎರಡು ವೇದಾಂತ	ಉಭಯವೇದಾಂತ
ಎರವು	ಅಡ್ಡಿ, ಬಾಧಕ, ದೂರೀಕೃತ ಸಂಬಂಧ
ಎಱಂಕೆ	ರೆಕ್ಕೆ, ಪಕ್ಕೆ.
ಏಕಾದಶ	ಇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತು ಮನಸ್ಸು
ಏಱು	ಗಾಯ, ನೋವು
ಐರೆಲ್ವಟ್ಟ	ಹಿಮಾಲಯ ಪರ್ವತ
ಐವರು ಮಹಾಭಾಗವತರು	ಪ್ರಹ್ಲಾದ, ಪರಾಶರ, ಅಂಬರೀಷ, ರುಕ್ಮಾಂಗದ, ವ್ಯಾಸ ಅಥವಾ ವಿಭೀಷಣ
ಒಡಲ್ವಡೆ-ಒಡಲ್ವಡೆ	ದೇಹಧರಿಸು, ಆಕಾರತಾಳು
ಒಳ್ಳೆ	ನೀರಹಾವು, ವಿಷವಿಲ್ಲದ ಸಾಮಾನ್ಯ ಹಾವು
ಒಟಿಸಲ್ಲದು	ಉಳಿಯಲಾಗದು, ಉಳಿಗಾಲವಿಲ್ಲದ್ದು, ರಕ್ಷಣೆಗೆ ಬಾರದ್ದು
ಒಟ್ಟಿಗ	ಒಂದುಗೂಡಿದ್ದು, ಸಮೂಹ
ಒಟ್ಟಿಗೆಯ್	ಒಂದುಗೊಳಿಸು, ಒಟ್ಟುಗೂಡಿಸು, ಸಂಗ್ರಹಿಸು
ಓಜೆ	ಹೆಚ್ಚಳ, ಕಾಂತಿ, ತೇಜಸ್ಸು, ಗೌರವ

ಔರಸಪುತ್ರ	ಹೊಟ್ಟೆಯ ಮಗ, ಧರ್ಮಪತ್ನಿಯಲ್ಲಿ ಹುಟ್ಟಿದವ
ಔರ್ಧ್ವದೈಹಿಕ	ಮರಣೋತ್ತರದ, ಅಗ್ನಿಸಂಸ್ಕಾರಾದಿ ಕಾರ್ಯಗಳು
ಕಟ್ಟುಬ್ಬಿ	ಅತಿರಭಸ; ಅತ್ಯಾವೇಶ
ಕಜ್ಜ	ಕಾರ್ಯ
ಕಡೆಗಾಣಿಸು	ಮುಗಿಸು, ತೀರಿಸು
ಕಣಾದ	ವೈಶೇಷಿಕ ದರ್ಶನ, ಪ್ರವರ್ತಕ ಋಷಿ
ಕತ್ತಿಯ ಪರಜು	ಕತ್ತಿಯ ಹಿಡಿ, ಅಲಗು–ಮೊನೆ
ಕದಂಬ	ಕಡಹದ ಮರ
ಕದುಬು	ಕದುಂಬು, ವ್ಯಾಪನೆ, ರೋಮಾಂಚನ, ಆತುರ ಆನಂದ
ಕದುಬುಗೊಳ್	ವ್ಯಾಪಿಸು, ಆವರಿಸು, ಆನಂದಿಸು, ರೋಮಾಂಚನಗೊಳ್ಳು
ಕನಕಾಚಲ	ಮೇರು ಪರ್ವತ
ಕನಲ್ಕೆ	ರೋಷ, ಕೋಪ
ಕಪ್ಪು	ಕುಳಿ, ತಗ್ಗು, ಖೆಡ್ಡಾ
ಕರಣತ್ರಯ	ಮಾತು, ಮನಸ್ಸು ಮತ್ತು ದೇಹ
ಕರಬದರ	ಅತ್ಯಂತ ಸ್ಫುಟವಾದುದು
ಕರುವಿಡು	ಎರೆಹೊಯ್ಯು
ಕರೆಗಣ್ಣು	ಪೂರ್ಣತುಂಬು, ಅಂಚಿನವರೆಗೆ ತುಂಬು
ಕರ್ಮಡಿದೀವಿ	ನೀಲದ್ವೀಪ, ನೀಲಮಣಿಯ ದ್ವೀಪ
ಕಜು	ಕಪ್ಪು; ಪಾಪ, ದೋಷ
ಕಲೋದಧಿ	ಮಹಾಸಾಗರ

ಕವಲ್ನಂಬುಗೆ	ಬೇರೆ ಆಸರೆ, ಜಾಗ
ಕಾಂಚೀಕಲಾಪ	ಕಾಂಚೀಬಂಧ, ಒಡ್ಯಾಣ, ನಡುವಿನ ಆಭರಣ
ಕಾಯಸ್ಥ	ಕರಣಿಕ ವೃತ್ತಿಯ ಒಂದು ಜಾತಿಯವನು; ಕರಣಿಕ, ಶಾನುಭೋಗ

ಕಾಯ್ಥಸ್ಥಪ್ರಾಡ್ವಿವಾಕಾದಿ ಕರಣಿಕರು, ನ್ಯಾಯಾಧೀಶರು ಮುಂತಾದವರು

ಕಾಲಕರ್ಬಟ್ಟೆ	ಮುಂಡಾಸದ ಜತೆಗೆ ಸುತ್ತುವ ಕಪ್ಪುಬಟ್ಟೆ
ಕಾಲ್ಗಣ್ಣಿ	ಹಗ್ಗದಿಂದ ಮಾಡಿದ ಕಣ್ಣಿ, ಬಲೆ; ಕಾಲಿಗೆ ತೊಡಕಿಕೊಳ್ಳುವ ಏಕಣ್ಣಿ
ಕಾಳಾಂಜಿ	ಪೀಕದಾನಿ, ತಾಂಬೂಲ ಉಗುಳುವ ಪಾತ್ರೆ
ಕಿಱುದೊಡೆ	ಮೀನಗಂಡ, ಮೊಳಕಾಲ ಕೆಳಭಾಗ, ಜಂಘೆ
ಕುಂದ	ಒಂದು ಜಾತಿಯ ಮಲ್ಲಿಗೆ
ಕುಲಾಚಲ	ಭೂಮಂಡಲದ (ಭಾರತ) ಮೇಲಿರುವ ಏಳು ಪರ್ವತಗಳಲ್ಲಿ ಒಂದು. ಮಹೇಂದ್ರ, ಮಲಯ, ಸಹ್ಯ, ಶಕ್ತಿಮಾನನ್ ಋಕ್ಷ, ವಿಂಧ್ಯ, ಪಾರಿಯಾತ್ರ ಎಂಬ ಏಳು ಪರ್ವತಗಳಲ್ಲಿ ಒಂದು. ಇವು ಭೂಮಿಗೆ ಆಧಾರವಾಗಿವೆಯೆಂಬುದು ನಮ್ಮ ಪುರಾಣಗಳ ಕಲ್ಪನೆ
ಕೂರ್ಮೆ	ಪ್ರೇಮ; ಪರಾಕ್ರಮ; ತೀಕ್ಷ್ಣತೆ
ಕೆಟಿವಿಗೆಳದಿ	ಮುದಿದಾಸಿ
ಕೇಣ	ಮತ್ಸರ; ಸ್ಪರ್ಧೆ
ಕೈಜೀತ	ಕೈಯುಂಬಳಿ
ಕೈಪಱ	ಚಪ್ಪಾಳೆ
ಕೈವಾರಿ	ಭಟ್ಟಂಗಿ, ಹೊಗಳುಭಟ್ಟ

ಕೈವಲ್ಯ	ಮೋಕ್ಷ; ಮೋಕ್ಷಕ್ಕಿಂತ ಕಡಿಮೆಯದಾದ ಒಂದು ಸ್ಥಿತಿ
ಕೊಟ್ಟಿಗೆ	ಹೇರೆತ್ತು, ಭಾರಸಾಗಿಸುವ ಎತ್ತು
ಕೊಳವಿ	ಕೋವಿ
ಕೊಳಗುಳ	ಯುದ್ಧ ಭೂಮಿ
ಕೋಟೀರಕೋಟಿ	ಕಿರೀಟಗಳ ಸಮೂಹ, ಶಿಲೆಗಳ ಸಮೂಹ
ಕೌಮೋದಕಿ	ವಿಷ್ಣುವಿನ ಗದೆಯ ಹೆಸರು
ಕೌಶಿಕ	ವಿಶ್ವಾಮಿತ್ರ, ಬ್ರಹ್ಮರ್ಷಿ
ಕೌಸ್ತುಭ	ವಿಷ್ಣುವಿನ ಎದೆಯ ಮೇಲಿರುವ ಕೆಂಪು ರತ್ನ
ಖಾನಖಾನ	ರಣದುಲ್ಲಾಖಾನನೆಂಬ ವಿಜಾಪುರದ ಸೇನಾಪತಿ
ಗಂಡೂಷೋದಕ	ಎಂಜಲು ನೀರು, ಬಾಯಿಮುಕ್ಕಳಿಸಿದ ನೀರು
ಗರ್ತ	ತಗ್ಗು
ಗಾಂಪ	ದಡ್ಡ, ಗ್ರಾಮೀಣ
ಗಾವಳಿ	ಗದ್ದಲ, ಗಲಾಟೆ
ಗಾವುದ	ನಾಲ್ಕು ಹರಿದಾರಿ, 10–12 ಮೈಲಿಗಳ ದೂರ
ಗುಡಿ	ಧ್ವಜ
ಗುಂಡುಗೋವಿ	ಕೋವಿ, ತುಪಾಕಿ
ಗುಜಿಖಾನಸ	ಸೇವಕರ ಮುಖ್ಯಸ್ಥ
ಗೃಹಾರ್ಚಾರೂಪ ಅವತಾರ	ಅ(ಆ)ರ್ಚಾವತಾರ
ಗೋತ್ರಾರಿ	ಇಂದ್ರ ; ಕುಲವೈರಿ
ಗೋಮುಖಿ	ಒಂದು ವಾದ್ಯ

ಗೌತಮ	ನ್ಯಾಯದರ್ಶನ ಪ್ರವರ್ತಕನಾದ ಋಷಿ; ಅಹಲ್ಯೆಯ ಪತಿ
ಗ್ರೈವೇಯಕ	ಕಂಠಹಾರ, ಕೊರಳುಸರ
ಚರಮಶ್ಲೋಕ	ಭಗವದ್ಗೀತೆಯ 18ನೆಯ ಅಧ್ಯಾಯದ 66ನೆಯ ಶ್ಲೋಕ
ಚತುರ್ವರ್ಗ	ಕುದುರೆ, ಆನೆ, ರಥ ಮತ್ತು ಕಾಲ್ಬಲ ಎಂಬ ನಾಲ್ಕು ಪ್ರಕಾರದ ಸೈನ್ಯ
ಚಿನ್ನಿಪಾಲು	ಚೆನ್ನಾಗಿ ಕಾಯಿಸಿದ ಹಾಲು, ಕೆನೆಹಾಲು
ಚುನ್ನ	ಕಟಕಿ, ವ್ಯಂಗ್ಯ
ಚೌವೀಧಿ	ಮುಖ್ಯ ಬೀದಿ, ಒಂದನ್ನೊಂದು ಲಂಬವಾಗಿ ಭೇದಿಸುವ ಬೀದಿ, ಚಚ್ಚೌಕು ಬೀದಿ
ಜಕ್ಕಂದೊಳಲಿ	ಕೋಣ
ಜಗತಿ	ಜಗಲಿ, ಮಣೆ, ಶಯ್ಯೆ
ಜಗುನೆ	ಯಮುನಾ ನದಿ, ಜಮುನೆ
-ಜಂಘೆ	ಕಿಱುದೊಡೆ
ಜಾಯಿಲ	ನಾಯಿ
ಜೈಮಿನಿ	ಮೀಮಾಂಸಾ ಅಥವಾ ಪೂರ್ವಮೀಮಾಂಸಾ ದರ್ಶನದ ಪ್ರವರ್ತಕ
ಜೊಂಪ	ಗೊಂಚಲು, ಗೊನೆ, ಸಮೂಹ
ಜೋಡುತನ	ವೇಶ್ಯಾಗಮನ, ವಿಷಯಲಂಪಟತ್ವ
ಢಕ್ಕೆ	ಒಂದು ಚರ್ಮವಾದ್ಯ
ತಕ್ಕು	ಯೋಗ್ಯತೆ, ಸಾಮರ್ಥ್ಯ, ಸೊಕ್ಕು
ತಕ್ಕುಮಿಗು	ಯೋಗ್ಯತೆ ಹೆಚ್ಚು, ಸೊಕ್ಕೇರು

ತಟ್ಟುಬರ್ಚು ನಟ್ಟುಪಾರಾಗು, ಆರುಪಾರಾಗು, ತುಂಡುಗಡಿ

ತಲೆವಳ್ಳಿ	ಮುಖ್ಯವಳ್ಳಿ, ಮೂಲಕೋಟೆ
ತಾರ್ಕ್ಷ್ಯ	ಗರುಡ
ತಿಜೆಕಲ್ಲು	ಒಂದು ಆಟ
ತಿರ್ಯಕ್	ಪ್ರಾಣಿ–ಪಕ್ಷಿಗಳು
ತುಂಡೀರದೇಶ	ಕರ್ನಾಟಕದ ಪೂರ್ವಕ್ಕಿರುವ ಆಂಧ್ರ ತಮಿಳುನಾಡುಗಳ ಪ್ರದೇಶ
ತುಂಬುರು	ಗಾನವಿಶಾರದನಾದ ಒಬ್ಬ ಗಂಧರ್ವ
ತುರುಷ್ಕ	ಯವನ, ಮುಸಲ್ಮಾನ
ತುಟೆಲಾಳ್	ಬಂಟ, ವೀರ
ತೆತ್ತಿಸು	ಕೊಡಹೆಚ್ಚು; ನಿರ್ಮಿಸು, ಮಾಡಿಸು
ತೆತ್ತೈಸು	ಒಟ್ಟುಗೂಡು
ತೆಲುಂಗರಾಯರು	ತೆಲಗುರಾಜರು, ತಾಳೀಕೋಟೆಯ ಯುದ್ಧಾನಂತರ ಅಧಿಕಾರಕ್ಕೆ ಬಂದ ವಿಜಯನಗರದ ಅರಸರು
ತೇಜಂಗೆಯ್	ಬಹುಮಾನಿಸು ಮರ್ಯಾದೆಮಾಡು
ತ್ರಿದಂಡ	ಮುಕ್ಕೋಲು, ಸನ್ಯಾಸಿಗಳು ಹಿಡಿಯುವ ಟಿಸಿಲಾದ ಕೋಲು
ತ್ರಿವರ್ಗ	ಸತ್ವ, ರಜಸ್ಸು, ತಮಸ್ಸೆಂಬ ಮೂರು ಗುಣಗಳು
ತ್ರೈವರ್ಗಿಕ ಫಲ	ಲೌಕಿಕ, ಸ್ವರ್ಗೀಯ, ಪರಮಪದ ಎಂಬ ಫಲಗಳು
ದಟ್ಟಿಗಟ್ಟಿಸು	ಟೊಂಕಕಟ್ಟಿಸು, ಹುರಿದುಂಬಿಸು
ದಡಿವಲೆ	ಒಂದು ಬಗೆಯ ಬಲೆ
ದಂಡಿಗೆ	ಪಲ್ಲಕ್ಕಿ

ದಾಮೋದರ ಬಂಧನ ಪೊಡೆಕಟ್ಟು ಹೊಟ್ಟೆಯ ಮೇಲಿರುವ ಹಗ್ಗದ ಕಟ್ಟು

ದಿಂಟೆ	ತಗ್ಗು, ನೀರು ಹರಿದ ಪ್ರದೇಶ
ದಿವ್ಯ ಪ್ರಬಂಧ	ದ್ರಾವಿಡ ದಿವ್ಯ ಪ್ರಬಂಧ=ದ್ರಾವಿಡ ಪ್ರಬಂಧ, ಅಳ್ವಾರರಿಂದ ರಚಿತವಾದ ಗೀತರೂಪದ ಸ್ತುತಿಗಳು. ಇವು ನಾಲ್ಕು ಸಾವಿರ ಇರುವುದರಿಂದ 'ನಾಲಾಯಿರ ದಿವ್ಯಪ್ರಬಂಧಮ್' ಎಂದು ಕರೆಯಲಾಗುತ್ತಿದೆ. ವಿಷ್ಣು ಭಕ್ತಿ ಮತ್ತು ತತ್ವ ವಿಚಾರಗಳು ಇವುಗಳಲ್ಲಿ ಪ್ರತಿಪಾದಿತವಾಗಿವೆ
ದುಂಧುಮಾರ	ಸೂರ್ಯವಂಶದ ಶತ್ರುಜಿತನ ಮಗ, ಋತಧ್ವಜನೆಂಬುದು ಮೊದಲಿನ ಹೆಸರು, ಗಾಲವ(ಉತ್ತಂಕ) ಮುನಿಯ ತಪಕ್ಕೆ ಭಂಗತಂದ ರಾಕ್ಷಸನನ್ನು ಕೊಂದವನು
ದುವ್ವಾಳಿಪುದು	ಮುನ್ನುಗ್ಗುವುದು
ದೌಹೃದ	ಬಯಕೆ, ಗರ್ಭಿಣಿಯ ಬಯಕೆ
ದ್ರವಿಡ	ತಮಿಳುಭಾಷೆ, ತಮಿಳುದೇಶ
ದ್ರಾವಿಡ ಪ್ರಬಂಧ	ದಿವ್ಯ ಪ್ರಬಂಧ
ದ್ರೇಕ್ಕಾಣ	ದ್ವಾದಶ ರಾಶಿಗಳಲ್ಲಿ ಪ್ರತಿಯೊಂದನ್ನು ವಿಭಾಗಿಸುವಲ್ಲಿ ಉಂಟಾಗುವ ಒಂದು ಭಾಗ, ಪ್ರತಿರಾಶಿಯ ಮೂರನೆಯ ಒಂದಂಶ
ಧರ್ಮಪಾದಗಳು	ಮೂಲತಃ ಇವು ನಾಲ್ಕು ಎಂಬ ಭಾವನೆಯಿತ್ತು, ವಿದ್ಯೆ, ದಾನ(ದಯೆ), ತಪಸ್ಸು, ಸತ್ಯವೆಂಬ ನಾಲ್ಕು ಪಾದಗಳು
ಧರ್ಮಶಾಸ್ತ್ರ=ಸ್ಮೃತಿ	ಸಾಮಾಜಿಕ ನಿಯಮಾವಳಿಗಳನ್ನು ವಿವರಿಸುವ ಗ್ರಂಥಗಳು ಪ್ರಾಚೀನ ಭಾರತೀಯರ ಕಾಯದೆ ಗ್ರಂಥಗಳು
ಧೌಮ್ಯ	ಪಾಂಡವರ ಪುರೋಹಿತ
ನಯನ	ಒಂದು ಕ್ಷೇತ್ರದ ಹೆಸರು
ನವಪ್ರಜೇಶರು	ಭೃಗು, ಪುಲಸ್ತ್ಯ, ಪುಲಹ, ಕೃತು, ಅಂಗೀರಸ, ಮರೀಚಿ, ದಕ್ಷ, ಅತ್ರಿ, ವಶಿಷ್ಠ, ಎಂಬ 9 ಜನ ಪ್ರಜಾಪತಿಗಳು

ನವನಿಧಿಗಳು ಕುಬೇರನ ಒಂಬತ್ತು ನಿಧಿಗಳು, ಪದ್ಮ, ಮಹಾಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ನಂದ ನೀಲ, ಖರ್ವ

ನವಸುಧಾಲೇಪ ಹೊಸಸುಣ್ಣ ಬಳಿಯುವುದು

ನಹುಷ ಚಂದ್ರವಂಶದ ಒಬ್ಬ ದೊರೆ. ನೂರು ಅಶ್ವಮೇಧಯಾಗಗಳನ್ನು ಮಾಡಿ ಇಂದ್ರ ಪದವಿ ಪಡೆದ. ಆದರೆ ಅಲ್ಲಿ ತನ್ನ ದುರ್ನಡತೆಯಿಂದ ಶಪಿಸಲ್ಪಟ್ಟವನಾಗಿ ಹಾವಾಗಿ ಭೂಮಿಗೆ ಬಿದ್ದ. ಧರ್ಮರಾಯನಿಂದ ಶಾಪಮುಕ್ತನಾದ

ನಳ ಚಂದ್ರವಂಶದ ದೊರೆ, ನಿಷಧ ದೇಶದ ರಾಜ, ಪಗಡೆಯಾಟದಲ್ಲಿ ಸೋತು ಅಪಾರ ಕಷ್ಟನಷ್ಟ ಅನುಭವಿಸಿ ಕೊನೆಗೆ ಸುಖಪಡೆದ.

ನಾಕ ಸ್ವರ್ಗ

ನಾಗಭುವನ ಪಾತಾಳಲೋಕ

ನಾಲ್ಕು ಉಪಾಯಗಳು ಸಾಮ, ದಾನ, ಭೇದ, ದಂಡ ಎಂಬ ಉಪಾಯಗಳು

ನಾಭಾಗ ವೈವಸ್ವತ ಮನುವಿನ ಮಗ, ಸೂರ್ಯವಂಶದ ಅರಸು, ಅಂಬರೀಷನ ತಂದೆ

ನಿಂಬಜೆ ಜಟ್ಟಿಗಳ ಅಧಿದೇವತೆ

ನಿಋತಿ ನಿರಋತಿ ನೈಋತ್ಯದಿಕ್ಕಿನ ಅಧಿದೇವತೆ

ನಿಗ್ಗವ ಆನೆಯದಂತ, ಆನೆಯಕೋರೆ

ನಿತ್ಯಮುಕ್ತರು ಯಾವತ್ತೂ ಮುಕ್ತಸ್ಥಿತಿಯಲ್ಲಿರುವವರು

ನಿಯೋಗಿ ರಾಜಕಾರ್ಯಕ್ಕಾಗಿ ನಿಯಮಿತನಾದ ವ್ಯಕ್ತಿ ಅಧಿಕಾರಿ

ನಿರವಿಸು ನಿರೂಪಿಸು

ನಿರುಪಾಧಿಕ ಉಪಾಧಿಯಿಲ್ಲದ, ಬಂಧನ–ಕಟ್ಟಳೆಗಳಿಲ್ಲದ

ನೀಟ್ಟಿರಿಸು ನಿಲುಕು, ಸಮೀಪಿಸು, ಮುಟ್ಟು, ಪಡೆ

ನೆಗಟ್ ಮಾಡು, ಕಾರ್ಯಸಾಧಿಸು, ಪ್ರಸಿದ್ಧನಾಗು

ನೆಗಟಿಸು ಮಾಡಿಸು, ಪ್ರಸಿದ್ಧಗೊಳಿಸು

ಪಂಚತನ್ಮಾತ್ರಗಳು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು, ಈ ರೂಪದ ಪಂಚೇಂದ್ರಿಯ ಧರ್ಮಗಳು; ಅನುಭವದ ಮೂಲ ಅಂಶಗಳು

ಪಂಚಾಯುಧ ಮುದ್ರೆ ವಿಷ್ಣುವಿನ ಆಯುಧಗಳಾದ, ಶಂಖ, ಚಕ್ರ, ಗದೆ, ನಂದಕ(–ಖಡ್ಗ), ಶಾರ್ಙ್ಗಗಳ ಮುದ್ರೆ

ಪಟ್ಟವಣೆ ಸಿಂಹಾಸನ, ಗದ್ದುಗೆ

ಪಟ್ಟಸ ಒಂದು ಬಗೆಯ ಆಯುಧ, ಈಟಿ

ಪಡಿ ಕ್ರಮ, ಪ್ರತಿನಿತ್ಯದ ವ್ಯವಸ್ಥೆ, ಕ್ರಮವಾದ ಆದಾಯ

ಪಣವ–ಆನಕ ಚಿಕ್ಕ–ದೊಡ್ಡ ನಗಾರಿಗಳು, ಭೇರಿಗಳು

ಪತಂಜಲಿ ಪಾಣಿನಿಯ, 'ಅಷ್ಟಾಧ್ಯಾಯಿ'ಯ ಮೇಲೆ 'ಮಹಾಭಾಷ್ಯ' ಎಂಬ ಟೀಕೆ ಬರೆದವನು; ಯೋಗದರ್ಶನಕಾರ

ಪದಿನಾಱು ವಿಕಾರಗಳು 5 ಜ್ಞಾನೇಂದ್ರಿಯಗಳು 5 ಕರ್ಮೇಂದ್ರಿಯಗಳು, 5 ತನ್ಮಾತ್ರಗಳು ಮತ್ತು ಮನಸ್ಸು

ಪನ್ನೆರಡ್ನಾಮ –ಹನ್ನೆರಡು ನಾಮಗಳು ಅಷ್ಟಾಕ್ಷರೀ ಮಂತ್ರವನ್ನು ಹೇಳುತ್ತ ಹಣೆ, ಹೊಟ್ಟೆ, ಹೃದಯ, ಕಂಠಮೂಲ, ಎರಡೂ ಮಗ್ಗುಲುಗಳು, ಎರಡೂ ಭುಜಗಳು, ಎರಡೂ ಕಿವಿಗಳು, ಬೆನ್ನು, ಬೆನ್ನುಹುರಿ ಈ ಎಡೆಗಳಲ್ಲಿ ಹಚ್ಚಿಕೊಳ್ಳುವ (ಅರಿಷಿಣದಿಂದ ಮಾಡಿದ) ಶ್ರೀಚೂರ್ಣ ಅಥವಾ ಗೋಪೀಚಂದನದ ನಾಮಗಳು

ಪರತತ್ವ ಪರಬ್ರಹ್ಮ, ವಿಷ್ಣು

ಪರಮಪಥನಾಥ ಪರಬ್ರಹ್ಮ, ವಿಷ್ಣು

ಪರಮೇಷ್ಠಿ ಬ್ರಹ್ಮ, ತ್ರಿಮೂರ್ತಿಗಳಲ್ಲಿ ಮೊದಲಿನವ

ಪರವಾಸುದೇವ ವೈಕುಂಠದಲ್ಲಿ ವಾಸಮಾಡುವ ವಿಷ್ಣು

ಪರಾಶರ ವೇದವ್ಯಾಸರ ತಂದೆ; ವಿಷ್ಣುಪುರಾಣದ ಕರ್ತೃ; ಒಬ್ಬ ಸ್ಮೃತಿಕಾರ

ಪರಿಕರ್ಮ ಸಜ್ಜುಗೊಳಿಸುವುದು, ಅಲಂಕರಣ ಕಾರ್ಯ

ಪಚಿವಚಿ ಒಂದು ಬಗೆಯ ಆಟ, ಮುಟ್ಟಾಟ

ಪಲಾಶದಂಡ ಮುತ್ತುಗದ ಮರದ ದಂಡಗಳು

ಪಲ್ವಲ ಹೊಂಡ

ಪಾಂಚರಾತ್ರಾಗಮಗಳು ಈ ಹೆಸರಿನ ವೈಷ್ಣವಾಗಮಗಳು, ಇವು 108 ಇವೆ ಎಂದು ನಂಬಿಕೆ

ಪಾಡುಪಂತ ಕಷ್ಟದ ಸ್ಪರ್ಧೆ; ದೊಡ್ಡ ಪಂಥ, ಅತಿಶಯವಾದ ಸ್ಪರ್ಧೆ

ಪಾಣಿನಿ 'ಅಷ್ಟಾಧ್ಯಾಯಿ' ಎಂಬ ಸಂಸ್ಕೃತ ವ್ಯಾಕರಣ ಗ್ರಂಥ ಬರೆದ ಪ್ರಖ್ಯಾತ ವೈಯಾಕರಣ

ಪಾಯಕ ಕಾಲುದಳ

ಪಾರುಗಟ್ಟಿಗೆಯವನು ಅಂಕುಶ ಹಿಡಿದವನು

ಪಾರ್ವಿತಿ ಬ್ರಾಹ್ಮಣ ಸ್ತ್ರೀ

ಪಾಂಚಕಾಲಿಕ ಐದು ಕಾಲಗಳಲ್ಲಿ ಮಾಡಬೇಕಾದ

ಪಾಂಚಜನ್ಯ ಕೃಷ್ಣನ ಕೈಯಲ್ಲಿಯ ಶಂಖದ ಹೆಸರು

ಪಾಲಸ ಮಾಲಿನ್ಯ, ಎಂಜಲು

ಪಾವುಡ =ಪಾಗುಡ ಉಡುಗೊರೆ, ಕಾಣಿಕೆ

ಪಾಱುಂಬಳೆ ಚಕ್ರ

ಪುಂಡರೀಕ ಬಿಳಿಯ ಕಮಲ

ಪುಂಡರೀಕಕರ್ಣಿಕಾಯಮಾನ ಬಿಳಿಯ ಕಮಲದ ಮಧ್ಯದ ಭಾಗದಂತಿರುವ

ಪುಯ್ಯುಡು ಸೆಳೆನಡು, ಚಿಕ್ಕದಾದ ನಡು

ಪುರುಷ ಸೂಕ್ತ	ಋಗ್ವೇದದ ಪ್ರಸಿದ್ಧವಾದ ಒಂದು ಸೂಕ್ತ
ಪುರುಳ್	ಹುರುಳು, ಧನ, ಸಂಪತ್ತು
ಪುರುಳಿ	ಗಿಳಿ, ಹೆಣ್ಣುಗಿಳಿ, ಸಾರಿಕೆ
ಪೂರ್ವಪಕ್ಷ	ವಾದದಲ್ಲಿ, ಖಂಡನೆಯ ಪೂರ್ವದಲ್ಲಿ ಹೇಳುವ ಪ್ರತಿವಾದಗಳ ವಾದ ಸಾರಾಂಶ, ಪ್ರತಿವಾದಿಗಳ ಪಕ್ಷ
ಪೆಱೆಗೆಱೆ	ಚಂದ್ರನಂತಿರುವ ಗೆರೆ, ನಾಮ
ಪೆಸರ್ಗೊಱು	ಹೆಸರುಹೇಳು, ಬೇರೆಯವನ ಒಡೆತನವನ್ನು ಒಪ್ಪಿ ಅವನ ಹೆಸರುಹೇಳು
ಪೇರಾವೆ	ದೊಡ್ಡ ಆಮೆ, ವಿಷ್ಣು ಈ ರೂಪದಲ್ಲಿ ಭೂಮಿಯನ್ನು ಹೊತ್ತು ನಿಂತಿರುವನೆಂಬುದು ಪುರಾಣಗಳ ಕಲ್ಪನೆ
ಪೊಂಜಳೆ	ಹೊನ್ನಸೆಳೆ, ಹೊನ್ನ ಸಲಾಕೆ
ಪೊಣರ್	ಹೋರಾಡು, ಯುದ್ಧಮಾಡು, ಪ್ರತಿಭಟಿಸು
ಪೊಸವೇರ್	ಹೊಸಬೇರು
ಪ್ರಚೇತಸ	ವರುಣ ; ಚೈತನ್ಯಶಾಲಿ, ಜಾಗೃತವ್ಯಕ್ತಿ
ಪ್ರಣಿಧಿ	ನಿರೀಕ್ಷಕ, ಗೂಢಚಾರ, ಪರೀಕ್ಷಕ
ಪ್ರಾಕಾರ ಗೋಪುರ	ಸುತ್ತುಗೋಡೆಯ ಮೇಲೆ ಕಟ್ಟಿದ ಗೋಪುರ
ಪ್ರಾಕೃತ	ಮೂಲದ; ನೈಸರ್ಗಿಕವಾದ, ಅಶುದ್ಧವಾದ
ಪ್ರಾಡ್ವಿವಾಕ	ಮುಖ್ಯನ್ಯಾಯಾಧೀಶ, ನ್ಯಾಯಾಧಿಕಾರಿ
ಪ್ರಾಸ	ಒಂದು ಬಗೆಯ ಆಯುಧ
ಬಟ್ಟಿತ್ತು	ದುಂಡುದುಂಡಾದ, ವೃತ್ತಾಕಾರದ
ಬಣ್ಣಗೊರಳು	ಇಂಪಾದ ದನಿಯುಳ್ಳ ಕೊರಳು
ಬಣ್ಣವಾಡು	ಇಂಪಾದ ಹಾಡು, ಬಣ್ಣನೆಯ ಹಾಡು

ಬರ್ದಿಲ	ಸ್ವರ್ಗ
ಬಲ್ಪೊಟಿ	ದೊಡ್ಡ ಹೊಳೆ
ಬವಣೆಗೊಳ್	ತೊಂದರೆಪಡು, ಕಷ್ಟಪಡು
ಬಸೆ	ನೆಣ, ಕೊಬ್ಬು
ಬಾಹತ್ತವಿನಿಯೋಗಿ	ಸಾಮಂತ, ಪುರೋಹಿತ, ಸೇನಾಪತಿ, ದಂಡನಾಯಕ ಇತ್ಯಾದಿ ಅಧಿಕಾರಿಗಳು
ಬಿಟ್ಟಿ	ಪ್ರತಿಫಲ ಕೊಡದೆ ಮಾಡಿಸಿಕೊಳ್ಳುವ ಕೆಲಸ
ಬಿನ್ನವತ್ತಳೆ	ಮನವಿಪತ್ರ
ಬಿಂದ	ಸಮೂಹ, ವೃಂದ
ಬಿರಾಡ	ಬಾಡಿಗೆಯ ಹಣ; ಒತ್ತಾಯದಿಂದ ಸಂಗ್ರಹಿಸಿದ ಹಣ; ತೆರಿಗೆ
ಬಿರ್ದು	ಔತಣ, ಆತಿಥ್ಯ
ಬೀಯ	ವ್ಯಯ, ಹಾನಿ, ನಿರರ್ಥಕತೆ, ವ್ಯರ್ಥತೆ
ಬುರುಗು	ಒಂದು ವಾದ್ಯ
ಬೆಳ್ದೀವಿ	ಶ್ವೇತದ್ವೀಪ, ವಿಷ್ಣುವಿನ ಅವಾಸಸ್ಥಾನ, ಅನಂತಾಸನ, ವೈಕುಂಠ ಮತ್ತು ಶ್ವೇತದ್ವೀಪಗಳು ವಿಷ್ಣುವಿನ ವಾಸಸ್ಥಾನಗಳೆಂದು ಪೌರಾಣಿಕ ನಂಬಿಕೆ
ಬೆಳ್ಪುಮಾಸ	ಶರದೃತು
ಬೇಡಿಗೆ	ಒತ್ತಾಯದ ಧಾನ್ಯ ಸಂಗ್ರಹ
ಬೇರ	ವೈರ
ಬೇಹಿಗ	ಗೂಢಚಾರ
ಬೋಧಾಯನ	ವೇದಾಂತದರ್ಶನಕಾರ; ಒಬ್ಬ ಸ್ಮೃತಿಕಾರ

ಬ್ರಹ್ಮವಿದ್ಯೆಗಳು	(ಬ್ರಾಹ್ಮಣರು ಅಭ್ಯಸಿಸಬೇಕಾದ) ಉಪನಿಷತ್ತುಗಳು, ಇವು ಮೂವತ್ತೆರಡು ಎನ್ನುವುದು ತಿರುಮಲಾರ್ಯನ ಹೇಳಿಕೆ
ಬ್ರಾಹ್ಮಮುಹೂರ್ತ	ಬ್ರಹ್ಮನೇ ಅಧಿದೇವತೆಯಾಗಿರುವ ಸಮಯ, ಬೆಳಗಿನ ಸಮಯ
ಭರದ್ವಾಜ	ವಾಲ್ಮೀಕಿಯ ಶಿಷ್ಯನಾದ ಒಬ್ಬ ಮುನಿ. ಅರಣ್ಯವಾಸಕ್ಕೆ ಹೋಗುವಾಗ ರಾಮನು ಇವನ ಆತಿಥ್ಯ ಪಡೆದನು
ಭಿಂಡಿವಾಳ	ದೊಣ್ಣೆ, ಉದ್ದ ಗುದಿಗೆ, ಒಂದು ಬಗೆಯ ಆಯುಧ
ಮಂಗಳವರ	ಅಶ್ವತ್ಥ ವೃಕ್ಷ, ದೇವಾಲಯದ ಒಂದು ಭಾಗದಲ್ಲಿರುವ ಅರಳಿಮರ
ಮಣಿಘೃಣಿ	ರತ್ನಕಾಂತಿ, ರತ್ನಪ್ರಕಾಶ
ಮಂಡನಾಯಿತ	ಶೋಭಿಸಿರುವ, ಮಂಡಿಸಿರುವ, ಒಪ್ಪಿರುವ
ಮಂತ್ರರತ್ನ	ಶ್ರೀವೈಷ್ಣವರು ಶ್ರೇಷ್ಠವೆಂದು ಭಾವಿಸುವ ಮಂತ್ರ
ಮಱೆ	ವಂದನೆ; ಮರವೆ, ಮೋಸ, ವಂಚಿಸು, ಕಣ್ಣುತಪ್ಪಿಸು, ಮರೆಸು
ಮಱೆವಳ್ಳಿ	ಮರೆಯಲ್ಲಿಯ ಹಳ್ಳಿ, ಚಿಕ್ಕಹಳ್ಳಿ
ಮಱೆವುಯಿಲು	=ಮಱೆಹುಯಿಲು, ಮೋಸದಯುದ್ಧ, ಪ್ರಚ್ಛನ್ನಯುದ್ಧ
ಮಹಾದಾನಗಳು	ಇವು ಹದಿನಾರು ಎಂದು ಹೇಳಲಾಗುತ್ತದೆ. ಗೋ, ಭೂ, ಹಿರಣ್ಯ, ವಸ್ತ್ರ, ಆಭರಣ, ಛತ್ರ, ಚಾಮರ, ಶಯ್ಯೆ, ವ್ಯಜನ, ಸಾಲಗ್ರಾಮ, ಧನ, ಧಾನ್ಯ, ದೀಪ, ಪಾದುಕ, ಆಜ್ಯ, ಕನ್ಯೆ
ಮಹಾವರ್ತ	ದೊಡ್ಡಸುಳಿ, ತಿರುಗುಣಿ
ಮಹಾಹ್ರದ	ದೊಡ್ಡಮಡು
ಮುಕ್ಕೋಲು	ತ್ರಿದಂಡ
ಮುದ್ರೆವಹಿಸು	ಅಧಿಕಾರ ಮುದ್ರೆ ಧರಿಸು, ಅಧಿಕಾರವನ್ನು ಒಪ್ಪಿಕೋ
ಮುಂಜಿ	ಮುಂಜ(ಮದೆ)ವೆಂಬ ಹುಲ್ಲಿನಿಂದ ಮಾಡಿದ ಉಡುದಾರ

ಮುನ್ನೀರು	ಸಮುದ್ರ
ಮುಪ್ಪುರಿಗೊಳ್ಳು	ಮೂರು ಹುರಿ ಕೂಡಿಸು, ಬಲಗೊಳಿಸು, ಸಮರ್ಥವಾಗು
ಮೂಗುಬ್ಬಸ	ಅತಿಯಾದ ಆಯಾಸ
ಮೂಲಮಂತ್ರ	'ಓಂ ನಮೋ ನಾರಾಯಣಾಯ' ಎಂಬ ಮಂತ್ರ
ಮೊಗವೀಣೆ	ಮುಖವೀಣೆ, ಒಂದು ವಾದ್ಯ
ಮೊರಸುಸೈನ್ಯ	ಬೆಂಗಳೂರು, ಕೋಲಾರ, ಮಾಗಡಿ ಪ್ರದೇಶದ ಸೈನ್ಯ
ಮೋಡಿ	ಬಿಗುವು, ಬಿಗುಮಾನ
ಮೋಸ	ತಪ್ಪು, ಮರವೆ, ಅಜ್ಞಾನ; ವಂಚನೆ
ಯದುರಾಜ	ಚಂದ್ರವಂಶದ ಪ್ರಸಿದ್ಧ ದೊರೆ ಯಯಾತಿಯ ಹಿರಿಯಮಗ
ಯವನ	ತುರುಷ್ಕ
ಯಾಜ್ಞವಲ್ಕ್ಯ	ಒಬ್ಬ ಸ್ಮೃತಿಕಾರ; ಪ್ರಸಿದ್ಧನಾದ ಒಬ್ಬ ಋಷಿ
ಯೋಗ	ಪತಂಜಲಿಯಿಂದ ಪ್ರವರ್ತನೆಗೊಂಡ ಪ್ರಖ್ಯಾತದರ್ಶನ, ಅಷ್ಟಾಂಗ ಯೋಗ
ರತ್ನಗಳು	ರಾಜನಲ್ಲಿರುವ ಶ್ರೇಷ್ಠವಾದ ವಸ್ತುಗಳು, ಚಕ್ರ ಅಥವಾ ಆಯುಧ ಅಥವಾ ಸೈನ್ಯ, ರಥ, ರತ್ನಗಳು, ಸ್ತ್ರೀ, ನಿಧಿಗಳು, ಅಶ್ವ, ಗಜ, ಮುಂತಾದ ವಸ್ತು ವಾಹನಾದಿಗಳು
ರಾಜಾವರ್ತ	ನೀಲಿರತ್ನ, ನೀಲಮಣಿಯಲ್ಲಿಯ ಒಂದು ಪ್ರಕಾರ
ರಾಯಸ	ರಾಜನಿಂದ ಹೊರಟ ಪರಿಪತ್ರ, ಆಜ್ಞೆ ಮುಂತಾದವು
ರಾಯಸಿಗ	ರಾಯಸದವ, ರಾಯಸದ ಅಧಿಕಾರಿ
ರಾಯಸದ	–ಅಕ್ಷರಚಣರು ರಾಯಸದ ಲೇಖನ ಮತ್ತು ಲಿಪಿಗಳಲ್ಲಿ ತಜ್ಞರಾದವರು

ರುಕ್ಮಾಂಗದ	ಏಕಾದಶೀ ವ್ರತಮಾಡಿ ಹೆಸರಾದ ಒಬ್ಬ ರಾಜ, ವಿಷ್ಣು ಭಕ್ತ
ರೈವತಕ	ಒಂದು ಮನ್ವಂತರದ ಒಡೆಯ, ಬ್ರಹ್ಮಸಭೆಗೆ ಹೋದವನು.
ಲಗ್ನ	ಸಮಯ, ಗಳಿಗೆ, ಜ್ಯೋತಿಷದಲ್ಲಿ ನಿಶ್ಚಿತವಾದ ಕ್ಷಣ
ಲಂಬಣ	ಮಾಲೆ; ಮಾಲೆಗಳ ಸಮೂಹ; ತೂಗುಬಿಟ್ಟ ಮಾಲೆಗಳು
ಲಾವಣಿಗೆ	ಸಂಗ್ರಹಣೆ; ದರ್ಶನ: ನೋಟ; ನೋಡಿ ಅಂದಾಜು ಮಾಡುವುದು, ಪರಾಂಬರಿಕೆ
ಲಾವಣಿಗೆಗೊಳ್	ಸಂಗ್ರಹಿಸು; ನಿರೀಕ್ಷಿಸು, ಭೆಟ್ಟಿಯಾಗು
ಲಾವುಗೆ	ಒಂದು ಹಕ್ಕಿ, ಲಾವಕ್ಕಿ
ವಂಕಿ	ಒಂದು ಬಗೆಯ ಕತ್ತಿ, ಹರವಾದ ಕತ್ತಿ
ವಜೀರ	ಮಂತ್ರಿ
ವಾರಾಹ	ಪಶ್ಚಿಮ ಕರಾವಳಿಯ ಒಂದು ಕ್ಷೇತ್ರ
ವಿದ್ಯಾನಗರಿ	ವಿದ್ಯಾನಗರ, ವಿಜಯನಗರ, ಹಂಪೆ ವಿಶ್ವವಿಖ್ಯಾತ ಸಾಮ್ರಾಜ್ಯದ ರಾಜಧಾನಿ
ವಿಪಶ್ಚಿತ್	ಪಂಡಿತ, ವಿದ್ವಾಂಸ
ವಿವಾಕ	ನ್ಯಾಯಾಧೀಶ, ನ್ಯಾಯಾಧಿಕಾರಿ
ವಿಷ್ವಕ್ಸೇನ	ವಿಷ್ಣುವಿನ ಸೇನಾಪತಿ; ವಿಷ್ಣು
ವಿಷುಕರ್ಕಾಟಕ	ಕರ್ಕಾಟಕದ ಮಧ್ಯಸ್ಥಾನ; ಕರ್ಕಾಟಕರಾಶಿಯ ಮಧ್ಯರೇಖೆ
ವೃಷ್ಯ	ಕಾಮೋದ್ದೀಪಕ
ವೇದತ್ರಯ	ಋಗ್ವೇದ, ಸಾಮವೇದ, ಯಜುರ್ವೇದ
ವೇಲೆ	ಅಂಚು, ದಂಡೆ, ತರಂಗ

[illegible] — [illegible]

[illegible] — [illegible]

ವೃತ್ತಾನುವೃತ್ತಿ — ಭ್ರಷ್ಟ

ವ್ಯಾಸ — ಮಹಾಭಾರತಾದಿ ಕೃತಿಗಳ ಕರ್ತೃ; ವೇದಗಳನ್ನು ವಿಂಗಡಿಸಿದ ಋಷಿ

ಷಾಡ್ಗುಣ್ಯ — ಸಂಧಿ. ವಿಗ್ರಹ–ಯುದ್ಧ. ಯಾನ–ದಾಳಿ. ಆಸನ. ಆಸನ–ದಿಗ್ಬಂಧನ? ಸುಮ್ಮನಿರುವುದು. ಶತ್ರುವಿನಲ್ಲಿಯೇ ಇರುವುದು. ಸಂಶ್ರಯ–ಆಶ್ರಯ ಪಡೆಯುವುದು. ದ್ವೈಧೀಭಾವ–ಒಡೆದಾಳುವಿಕೆ

ಷೋಡಶೋಪಚಾರಗಳು — ಹದಿನಾರು ಬಗೆಯ ಉಪಚಾರಗಳು. ಆಸನ. ಸ್ವಾಗತ. ಪಾದ್ಯ. ಅರ್ಘ್ಯ. ಆಚಮನೀಯ. ಮಧುಪರ್ಕ. ಆಚಮನ. ಸ್ನಾನ. ವಸನ. ಆಭರಣ. ಗಂಧ. ಪುಷ್ಪ. ಧೂಪ. ದೀಪ. ನೈವೇದ್ಯ, ವಂದನೆ ಎಂಬ ಸೇವೆಗಳು

ಶಕ್ತಿತ್ರಯ — ರಾಜನಾಗಿರುವವನ ಪ್ರಭು, ಮಂತ್ರ, ಉತ್ಸಾಹಗಳೆಂಬ ಮೂರು ಶಕ್ತಿಗಳು

ಶಂಖಲಿಖಿತ [illegible] — ಸ್ಮೃತಿಕಾರರಲ್ಲಿ ಒಬ್ಬ : ಈ ಹೆಸರಿನ ಋಷಿಗಳು

ಶಷ್ಪ — ಹುಲ್ಲು

ಶಬರ — [illegible]: ಮೀಮಾಂಸಾದರ್ಶನದ ಸೂತ್ರಗಳಿಗೆ ಭಾಷ್ಯ ಬರೆದವನು

ಶಿಬಿರಾಯ — ಪ್ರಖ್ಯಾತನಾದ ರಾಜರ್ಷಿ. ಇವನ ನ್ಯಾಯ–ನೀತಿಗಳನ್ನನುಸರಿಸಿ ಅನೇಕ ರಾಜರು ರಾಜರ್ಷಿಗಳೆನಿಸಿದರು

ಶಾಕ — ಕಾಯಿಪಲ್ಲೆ, ತರಕಾರಿ

ಶಾರ್ಙ್ಗ — ವಿಷ್ಣುವಿನ ಬಿಲ್ಲು

ಶಾರ್ಙ್ಗಧರ, ಶಾರ್ಙ್ಗಿ ವಿಷ್ಣು

ಶೂಡಿಕ್ಕುಡುತ್ತನಾಚ್ಚಿಯಾರ್ ಅಂಡಾಳ್ ಅಥವಾ ಗೋದಾದೇವಿ

ಶೂರ ಯಾದವ ದೊರೆ, ವಸುದೇವನ ತಂದೆ

ಶೇಷತಲ್ಪ ವಿಷ್ಣು ಮಲಗುವ ಆದಿಶೇಷನ ಹಾಸಿಗೆ

ಶೇಷತ್ವ ಪಾರತಂತ್ರಗಳು ಪರಮಾತ್ಮನ ಅಂಶ (=ಶೇಷ) ವೇ ತಾನು ಎಂಬ ಮತ್ತು ಆ ಅಂಶಕ್ಕೆ ಪರಮಾತ್ಮನನ್ನು ಮೀರಿದ ಸ್ವಾತಂತ್ರ್ಯವಿಲ್ಲವೆಂಬ ಭಾವನೆ

ಶೌನಕ ಒಬ್ಬ ಋಷಿ ಋಗ್ವೇದ ಪ್ರಾತಿಶಾಖ್ಯದ ಕರ್ತೃ

ಶ್ರೀಚೂರ್ಣ (ಹಣೆಯ)ನಾಮದ ನಡುವಿನ ಗೆರೆ, ಅರಿಶಿನದಿಂದ ಮಾಡಿದ ಲೇಪನದ ಗೆರೆ

ಶ್ರೀಮೃತ್ತಿಕೆ ಸಿರಿವಣ್ ನಾಮಕ್ಕಾಗಿ ಬಳಸುವ ಬಿಳಿಮಣ್ಣು

ಶ್ರುತಪ್ರಕಾಶಿಕೆ ಶ್ರೀಭಾಷ್ಯದ ಮೇಲಿನ ವ್ಯಾಖ್ಯಾನ, ಸುದರ್ಶನ ಇದರ ಕರ್ತೃ

ಶ್ರುತಿನಿಶ್ಚಯ ವೇದಗಳ ನಿಶ್ಚಿತಾರ್ಥ

ಶ್ರೌತಸ್ಮಾರ್ತಕರ್ಮ ಶುತ್ರಿ ಮತ್ತು ಸ್ಮೃತಿಗಳಿಗನುಸಾರವಾಗಿ ಮಾಡಬೇಕಾದ ವಿಧಿಗಳು

ಶ್ವೇತದ್ವೀಪ ಬೆಳ್ದೀವಿ

ಸಂಗರಣ ವ್ಯಾಯಾಮದ ಒಂದು ಸಾಧನ

ಸನತ್ಕುಮಾರ ಸೃಷ್ಟಿಯ ಆದಿಯಲ್ಲಿದ್ದರೆಂದು ಹೇಳಲಾದ ನಾಲ್ಕು ಜನ ಬ್ರಹ್ಮಪುತ್ರರಲ್ಲಿ ಒಬ್ಬ ಮುನಿ

ಸಪ್ತಾಂಗ ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ಸೈನ್ಯ, ಮಿತ್ರರೆಂಬ ಏಳು ಅಂಗಗಳು, ರಾಜ್ಯದ ಅಂಗಗಳು

ಸಬಳ ದೊಣ್ಣೆ, ಕೊಂತ, ಒಂದು ಆಯುಧ

ಸಮಾಶ್ರಯಣ ಆಚಾರ್ಯರನ್ನು ಆಶ್ರಯಿಸುವುದು; ದೀಕ್ಷೆ ಹೊಂದುವುದು, ಸಂಸ್ಕಾರ ಪಡೆಯುವುದು

ಸರಗೋವಿ	ಒಂದು ಪ್ರಕಾರದ ಕೋವಿ, ಬೇಟೆಯ ಕೋವಿ
ಸರಿಗೆ	ಸಲಾಕೆ, ತ್ರಿಶೂಲ (?)
ಸಲಗೆ	ಬಂಗಾರದ ಎಳೆ, ಬಂಗಾರದ ತಂತಿ
ಸವಣ	ಅಕ್ಕಸಾಲಿಗರ ಲೋಹ ಫಲಕ : ಒಂದು ಸಾಧನ ; ಕಂಬಚ್ಚು
ಸಂವರಣೆಸಜ್ಜು	ಸನ್ನಾಹ

ಸಂಹಾರನ್ಯಾಸ-ಸೃಷ್ಟಿನ್ಯಾಸ ವಿಧಿಪೂರ್ವಕವಾದ ಸ್ಪರ್ಶಕ್ರಿಯೆ, ಶುದ್ಧೀಕರಣ ಕ್ರಿಯೆ

ಸಾಂಖ್ಯ	ಕಪಿಲಋಷಿಯಿಂದ ಪ್ರಣೀತವಾದ ದರ್ಶನ
ಸಾಂದೀಪನಿ	ಕೃಷ್ಣ-ಬಲರಾಮರ ಗುರು. ಪಂಚಜನನೆಂಬ ರಾಕ್ಷಸನು ಇವನ ಮಗನನ್ನು ಅಪಹರಿಸಿಕೊಂಡು ಹೋಗಿರಲು ಕೃಷ್ಣನು ಸಮುದ್ರ ಪ್ರವೇಶಿಸಿ ಅವನನ್ನು ತಂದನು
ಸಾಳುವ	ಬೇಟೆಗಾಗಿ ಪಳಗಿಸುವ ಒಂದು ಜಾತಿಯ ಹಕ್ಕಿ
ಸಿಲೌನ್ನತ್ಯ	ಸೌಧಗಳ ಎತ್ತರ
ಸಿಡಿದಲೆ	(ಸಿಡಿವಲೆ?) ಒಂದು ಪ್ರಕಾರದ ಬಲೆ
ಸಿರಿವಣ್	ಶ್ರೀಮೃತ್ತಿಕೆ, ತಿರುಮಣ್ಣು
ಸೀತಾರಣ್ಯ	ಒಂದು ಕ್ಷೇತ್ರ
ಸೀಮೀರ್ನು	ಹಾರುವ ಜಾತಿಯ ಒಂದು ಮೀನು, ಸಿಡಿಯುವ ಮೀನು
ಸುಂಟಿಗೆ	ಗುಂಡಿಗೆ, ಹೃದಯ
ಸುಂಟಿಗೆಗಳೆ	ಗುಂಡಿಗೆಯನ್ನು ತೆಗೆ, ಗುಂಡಿಗೆಯನ್ನು ಕೀಳು
ಸುದರ್ಶನ	ಶ್ರೀಭಾಷ್ಯದ ಮೇಲಿನ ಟೀಕೆಯಾದ 'ಶ್ರುತಪ್ರಕಾಶಿಕೆ'ಯ ಕರ್ತೃ
ಸೂಪ	ರಸ ಅಥವಾ ಸಾರು
ಪರಿಪೂರ್ಕಾಣಿಸು	ಗೊತ್ತಿಗೆಹಚ್ಚು, ಮುಗಿಸು

ಹಾಹಾ	ಹೂಹೂ ಇಬ್ಬರು ಗಂಧರ್ವರು
ಹುಯಿಲ	ಯುದ್ಧ
ಹೋರಾ	ಕುಂಡಲಿಯಲ್ಲಿ ಒಂದು ಗಂಟೆಯ ಸಮಯ : ಒಂದು ನಿಶ್ಚಿತ ಅವಧಿ

ಪದಸೂಚಿ

ಈ ಪದಸೂಚಿಯಲ್ಲಿ ಕೆಳಗಿನ ಸಂಕೇತಾಕ್ಷರಗಳನ್ನು ಉಪಯೋಗಿಸಲಾಗಿದೆ: ಅ=ಅರಸು,ಅರಸಿ; ಅಧಿ=ಅಧಿಕಾರಿ; ಊ=ಊರು; ಋಷಿ=ಋಷಿ; ಗಂ=ಗಂಡಸು; ದ=ದರ್ಶನ, ದಾರ್ಶನಿಕ; ದೇ=ದೇವತೆ; ಪಾ=ಪಾಳೆಯಗಾರ; ಪೌ=ಪೌರಾಣಿಕ; ಪಂ=ಪಂಡಿತ; ಬಿ=ಬಿರುದು; ಬೆ=ಬೆಟ್ಟ; ಭ=ಭಕ್ತ, ಭಕ್ತೆ; ಮೈ=ಮೈಸೂರು; ವಂ=ವಂಶ; ವಿ=ವಿಜಯನಗರ; ಸ್ಥ=ಸ್ಥಳ; ಹೆಂ=ಹೆಂಗಸು. ಸಂಕೇತಾಕ್ಷರಗಳಿಲ್ಲದ ಕಡೆ ಹಿಂದಿನ ಸಂಕೇತಾಕ್ಷರವೇ ಅನ್ವಯಿಸುತ್ತದೆ.

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ